ಗುರುವಾರ, ಜೂನ್ 27, 2024 | ಬೆಂಗಳೂರು | ₹ 7.00 | ಸಂಪುಟ 77| ಸಂಚಿಕೆ 178 | ಪುಟ 16

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾ ವಾಣಿ
ಪರೀಕ್ಷೆಗಳಿಗೆ ಗಮನಿಸಿ ಮೊಂಗ್ಲಾ ಬಂದರು, ರೈನ್ ನದಿಯ ಮಾಹಿತಿ.



ಆಳ–ಅಗಲ
ವಿಶ್ವಕಪ್ ಅಂಗಳದ ಪ್ರೇರಣೆಯ ಕತೆಗಳು

ಮೂರನೇ ದಿನವೂ ಗೂಳಿ ಓಟ 10

ಕ್ಷಯ ಪತ್ತೆಗೆ '3ಡಿ ಹೈಡ್ರೋಜೆಲ್' ಅಭಿವೃದ್ಧಿ 6

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
78,674	23,868	₹73,700 (ಬೆಂಗಳೂರು)	₹89,200 (ಬೆಂಗಳೂರು)	83.57

ಮದ್ಯದ ದರ ಏರಿಕೆಗೆ ಹೊಸ ಪ್ರಸ್ತಾವನೆ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮದ್ಯದ ದರ ಅಲ್ಪ ಪ್ರಮಾಣದಲ್ಲಿ ಏರಿಕೆ ಮಾಡಲು ಮುಖ್ಯ-ಮಂತ್ರಿಯವರಿಗೆ ಪ್ರಸ್ತಾವನೆ ಸಲ್ಲಿಸಲು ಅಬಕಾರಿ ಇಲಾಖೆ ಸಿದ್ಧತೆ ನಡೆಸಿದೆ.

ಯಾವ ವರ್ಗದ ಮದ್ಯದ ದರ ಎಷ್ಟು ಪ್ರಮಾಣದಲ್ಲಿ ಪರಿಷ್ಕರಣೆ ಮಾಡಬೇಕು ಎಂಬುದು ಮುಂಬರುವ ದಿನಗಳಲ್ಲಿ ಗೊತ್ತಾಗಲಿದೆ ಎಂದು ಅಬಕಾರಿ ಇಲಾಖೆ ಮೂಲಗಳು ತಿಳಿಸಿವೆ.

ಈ ಕುರಿತು ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅಬಕಾರಿ ಸಚಿವ ಆರ್.ಬಿ.ತಿಮ್ಮಾಪುರ, 'ಮದ್ಯದ ದರ ಏರಿಸುವ ಸಂಬಂಧ ಸದ್ಯಕ್ಕೆ ಯಾವುದೇ ತೀರ್ಮಾನ ತೆಗೆದುಕೊಂಡಿಲ್ಲ. ಇಲಾಖೆಗೆ ₹38 ಸಾವಿರ ಕೋಟಿ ಆದಾಯ ಸಂಗ್ರಹದ ಗುರಿ ನಿಗದಿ ಮಾಡಲಾಗಿದೆ. ಆದರೆ, ದರ ಹೆಚ್ಚಿಸುವ ಉದ್ದೇಶವಿಲ್ಲ' ಎಂದರು.

'ಗ್ಯಾರಂಟಿ ಯೋಜನೆ ಮುನ್ನಡೆಸುವ ಉದ್ದೇಶಕ್ಕಾಗಿ ಮದ್ಯದ ದರ ಏರಿಸಬೇಕೆಂದೇನೂ ಇಲ್ಲ. ನೆರೆಯ ರಾಜ್ಯಗಳಲ್ಲಿ ಮದ್ಯದ ದರಗಳ ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದೆ' ಎಂದೂ ಅವರು ಹೇಳಿದರು.

ಭಾರಿ ಮಳೆ: ತುಂಬಿದ ಹೊಳೆ

ಹಾರಂಗಿ: ಒಳಹರಿವು 810 ಕ್ಯುಸೆಕ್‌ಗೆ ಏರಿಕೆ ● ಕರಾವಳಿಯಲ್ಲೂ ಭಾರಿ ಮಳೆ

ಪ್ರಜಾವಾಣಿ ವಾರ್ತೆ

ಮಡಿಕೇರಿ/ಮಂಗಳೂರು/ಬೆಂಗಳೂರು: ರಾಜ್ಯದ ವಿವಿಧ ಭಾಗಗಳಲ್ಲಿ ಬುಧವಾರ ಧಾರಾಕಾರ ಮಳೆ ಸುರಿದು ಜನರಲ್ಲಿ ನಿರಾಳ ಭಾವ ಮೂಡಿಸಿದೆ.

ಬುಧವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡಂತೆ ಹಿಂದಿನ 24 ಗಂಟೆಗಳಲ್ಲಿ ಕರಾವಳಿಯ ಬಹುತೇಕ ಕಡೆ ಹಾಗೂ ಒಳನಾಡಿನ ಕೆಲವೆಡೆ ಮಳೆಯಾಗಿದೆ.

ನೈರುತ್ಯ ಮುಂಗಾರು ಕರಾವಳಿಯಲ್ಲಿ ಚುರುಕಾಗಿದೆ. ದಕ್ಷಿಣ ಒಳನಾಡಿನಲ್ಲಿ ಸಾಧಾರಣವಾಗಿದ್ದು, ಉತ್ತರ ಒಳನಾಡಿನಲ್ಲಿ ದುರ್ಬಲವಾಗಿದೆ.

ಕೊಡಗು ಜಿಲ್ಲೆಯ ಮಡಿಕೇರಿ, ಭಾಗಮಂಡಲ ಸೇರಿದಂತೆ ಹಲವೆಡೆ ಮಂಗಳವಾರ ರಾತ್ರಿಯಿಂದಲೂ ನಿರಂತರವಾಗಿ ಒಂದೇ ಸಮನೆ ಮಳೆ ಸುರಿಯುತ್ತಿದ್ದು, ನದಿ ತೊರೆಗಳು ಮೈದುಂಬತೊಡಗಿವೆ. ಭಾಗಮಂಡಲದ ತ್ರಿವೇಣಿ ಸಂಗಮವೂ ತುಂಬಿ ಹರಿದಿದೆ.

ಇದರಿಂದ, ಇಲ್ಲಿನ ಕಾವೇರಿ ಮತ್ತು ಕನ್ನಿಕಾ ನದಿಗಳಲ್ಲಿ ನೀರಿನ ಮಟ್ಟ ಗಣನೀಯ ಪ್ರಮಾಣದಲ್ಲಿ ಹೆಚ್ಚಾಗಿದೆ. ಹಾರಂಗಿ ಜಲಾಶಯದ ಒಳಹರಿವಿನ ಪ್ರಮಾಣ 514 ಕ್ಯುಸೆಕ್‌ನಿಂದ 810 ಕ್ಯುಸೆಕ್‌ಗೆ ಏರಿಕೆಯಾಗಿದೆ.

5ನೇ ಪುಟ ನೋಡಿ



ಧಾರಾಕಾರ ಮಳೆಯಿಂದ ಕೊಡಗು ಜಿಲ್ಲೆಯ ಭಾಗಮಂಡಲದ ತ್ರಿವೇಣಿ ಸಂಗಮ ತುಂಬಿ ಹರಿಯಿತು

ಕಬಿನಿ ಒಳಹರಿವು ಹೆಚ್ಚಳ

ಮೈಸೂರು: ಜಿಲ್ಲೆಯ ಹಲವೆಡೆ ಮಂಗಳವಾರ ರಾತ್ರಿಯಿಂದ ನಿರಂತರವಾಗಿ ಮಳೆ ಸುರಿಯುತ್ತಿದ್ದು, ಕಬಿನಿ ಜಲಾಶಯದಲ್ಲಿ ನೀರಿನ ಒಳಹರಿವು 6 ಸಾವಿರ ಕ್ಯುಸೆಕ್‌ಗೆ ಏರಿಕೆಯಾಗಿದೆ. ಜೂನ್ 21ರಂದು ಸಾವಿರ ಕ್ಯುಸೆಕ್ ಒಳಹರಿವಿದ್ದು, ವಾರದ ಅಂತರದಲ್ಲಿ ಐದು ಸಾವಿರ ಕ್ಯುಸೆಕ್ ಹೆಚ್ಚಾಗಿದೆ.

ಇಬ್ಬರು ಮಕ್ಕಳು, ಅಪ್ಪ–ಅಮ್ಮ ಸಾವು

ಉಳ್ಳಾಲ (ದಕ್ಷಿಣ ಕನ್ನಡ): ಭಾರಿ ಮಳೆಗೆ ತಾಲ್ಲೂಕಿನ ಮುನ್ನೂರು ಗ್ರಾಮದ ಕುತ್ತಾರು ಮದನಿ ನಗರದಲ್ಲಿ ಪಕ್ಕದ ಮನೆಯ ಗೋಡೆ, ಹೆಂಚಿನ ಮನೆಯ ಚಾವಣಿಯ ಮೇಲೆ ಕುಸಿದು ಇಬ್ಬರು ಮಕ್ಕಳು ಸೇರಿದಂತೆ ಒಂದೇ ಕುಟುಂಬದ ನಾಲ್ವರು ಮೃತಪಟ್ಟಿದ್ದಾರೆ.

ಮನೆಯಲ್ಲಿ ಮಲಗಿದ್ದ ಯಾಸಿರ್ (45), ಅವರ ಪತ್ನಿ ಮರಿಯಮ್ಮ(40) ಪುತ್ರಿಯರಾದ ರಿಯಾನ (14) ಮತ್ತು ರಿಫಾನ (16) ಮೃತರು. ಅಬೂಬಕರ್ ಎಂಬವರಿಗೆ ಸೇರಿದ ಮನೆಯ ಆವರಣ ಗೋಡೆ ಹಾಗೂ ಎರಡು ಅಡಿಕೆ ಮರಗಳು ತಗ್ಗು ಪ್ರದೇಶದಲ್ಲಿರುವ ಯಾಸಿರ್ ಅವರ ಮನೆ ಮೇಲೆ ಉರುಳಿ ಬಿದ್ದವು.

5ನೇ ಪುಟ ನೋಡಿ

ಸತತ ಎರಡನೇ ಅವಧಿಗೆ ಧ್ವನಿ ಮತದಿಂದ ಆಯ್ಕೆ

ಓಂ ಬಿರ್ಲಾ ಮತ್ತೆ ಸ್ಪೀಕರ್

ನವದೆಹಲಿ (ಪಿಟಿಐ): ಎನ್‌ಡಿಎ ಮೈತ್ರಿಕೂಟದ ಅಭ್ಯರ್ಥಿ ಓಂ ಬಿರ್ಲಾ ಅವರು 18ನೇ ಲೋಕಸಭೆಯ ಸ್ಪೀಕರ್ ಆಗಿ ಬುಧವಾರ ಆಯ್ಕೆಯಾದರು.

ಪ್ರಧಾನಿ ನರೇಂದ್ರ ಮೋದಿ ಅವರು ಮಂಡಿಸಿದ ನಿಲುವಳಿ ಸೂಚನೆಯನ್ನು ಧ್ವನಿ ಮತಕ್ಕೆ ಹಾಕಲಾಯಿತು. ಕಾಂಗ್ರೆಸ್‌ನ ಹಿರಿಯ ಸಂಸದ ಕೋಡಿಕುನ್ನಿಲ್ ಸುರೇಶ್ ಅವರನ್ನು ಅಭ್ಯರ್ಥಿಯಾಗಿ ಕಣಕ್ಕಿಳಿಸಿದ್ದ ವಿರೋಧ ಪಕ್ಷಗಳು ನಿಲುವಳಿ ಸೂಚನೆಯನ್ನು ಬೆಂಬಲಿಸಲಿಲ್ಲ.

ಹಂಗಾಮಿ ಸ್ಪೀಕರ್ ಭರ್ತೃಹರಿ ಮಹತಾಬ್ ಅವರು ಓಂ ಬಿರ್ಲಾ ಆಯ್ಕೆಯನ್ನು ಘೋಷಿಸಿದರು.

ರಾಜಸ್ಥಾನದ ಕೋಟಾ ಲೋಕಸಭಾ ಕ್ಷೇತ್ರದ ಸದಸ್ಯರಾಗಿರುವ ಬಿರ್ಲಾ, ಸತತ ಎರಡನೇ ಬಾರಿಗೆ ಸ್ಪೀಕರ್ ಆಗಿ ಆಯ್ಕೆಯಾಗಿದ್ದಾರೆ. ಸ್ಪೀಕರ್ ಒಬ್ಬರು ಒಂದು ಲೋಕಸಭಾ ಅವಧಿಗಿಂತಲೂ ಹೆಚ್ಚು ಕಾಲ ಆ ಹುದ್ದೆಯಲ್ಲಿ ಕಾರ್ಯ-ನಿರ್ವಹಿಸುತ್ತಿರುವುದು ಇದು ಐದನೇ ಬಾರಿ.

ಸಾಮಾನ್ಯವಾಗಿ ಒಮ್ಮತದಿಂದ ನಡೆಯುತ್ತಿದ್ದ ಸ್ಪೀಕರ್ ಆಯ್ಕೆ ಪ್ರಕ್ರಿಯೆಯು, ಚುನಾವಣೆ ಅನಿವಾರ್ಯವಾದ ಸಂದರ್ಭಕ್ಕೂ 18ನೇ ಲೋಕಸಭೆ ಸಾಕ್ಷಿಯಾಯಿತು.

7ನೇ ಪುಟ ನೋಡಿ



ಓಂ ಬಿರ್ಲಾ ಅವರನ್ನು ಪ್ರಧಾನಿ ನರೇಂದ್ರ ಮೋದಿ ಅವರು ಬುಧವಾರ ಅಭಿನಂದಿಸಿದರು. ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಜೊತೆಗಿದ್ದರು —ಪಿಟಿಐ ಚಿತ್ರ

'ವಿರೋಧ ಪಕ್ಷಗಳಿಗೂ ಅವಕಾಶದ ನಂಬಿಕೆ'

ವಿರೋಧ ಪಕ್ಷಗಳ ಸಂಸದರಿಗೆ ಸದನದಲ್ಲಿ 'ಜನರ ಧ್ವನಿ'ಯನ್ನು ಪ್ರತಿಧ್ವನಿಸುವ ಅವಕಾಶ ದೊರೆಯಲಿದೆ ಮತ್ತು ಇನ್ನು ಮುಂದೆ ಸಂಸದರ ಅಮಾನತು ನಡೆಯದು ಎಂಬ ವಿಶ್ವಾಸವನ್ನು ವಿರೋಧ ಪಕ್ಷದ ನಾಯಕನಾಗಿ ಮಾನ್ಯತೆ ಪಡೆದ ರಾಹುಲ್ ಗಾಂಧಿ ಮತ್ತು ವಿರೋಧ ಪಕ್ಷಗಳ ಸಂಸದರು ವ್ಯಕ್ತಪಡಿಸಿದರು.

ಓಂ ಬಿರ್ಲಾ ಅವರನ್ನು ಅಭಿನಂದಿಸಿ ಮಾತನಾಡಿದ ರಾಹುಲ್ ಗಾಂಧಿ, 'ಸದನವು ಆಗಾಗ ಮತ್ತು ಅತ್ಯಂತ ಉತ್ತಮವಾಗಿ ಕಾರ್ಯನಿರ್ವಹಿಸುವುದನ್ನು ವಿರೋಧ ಪಕ್ಷ ಬಯಸುತ್ತದೆ. ಪರಸ್ಪರ ಸಹಕಾರ ನೀಡುವುದಕ್ಕೆ ನಂಬಿಕೆ ಮುಖ್ಯ. ನಿಮ್ಮ ಕೆಲಸಕ್ಕೆ ವಿರೋಧ ಪಕ್ಷಗಳು ಸಹಾಯ ಮಾಡಲಿವೆ. ಸದನದಲ್ಲಿ ನಮಗೂ ಮಾತನಾಡುವುದಕ್ಕೆ ನೀವು ಅವಕಾಶ ನೀಡುತ್ತೀರಿ ಎಂಬ ನಂಬಿಕೆ ನನಗಿದೆ' ಎಂದು ಹೇಳಿದರು.

ಕಳೆದ ಲೋಕಸಭೆಯು ಅತ್ಯಂತ ದಕ್ಷವಾಗಿ ಕಾರ್ಯನಿರ್ವಹಿಸಿದೆ ಎಂಬ ಸರ್ಕಾರದ ವಾದವನ್ನು ರಾಹುಲ್ ಪ್ರಶ್ನಿಸಿದರು.

7ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಭಾರಿ ಖರ್ಚು: ಹೈಕೋರ್ಟ್ ಅತೃಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ರಾಜ್ಯ ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ನಿಧಿಯಲ್ಲಿ ಸಂಗ್ರಹವಾಗುವ ಸೆಸ್ ಹಣವನ್ನು ಕಾರ್ಮಿಕರ ಕಲ್ಯಾಣ ಮತ್ತು ವಿದ್ಯಾರ್ಥಿಗಳ ವಿದ್ಯಾಭ್ಯಾಸ ಕ್ಕಾಗಿ ಖರ್ಚು ಮಾಡಬೇಕೇ ವಿನಃ ಮಂಡಳಿಯ ಅಧಿಕಾರಿಗಳ ಐಷಾರಾಮಿ ಓಡಾಟಕ್ಕಲ್ಲ' ಎಂದು ಹೈಕೋರ್ಟ್ ಅತೃಪ್ತಿ ವ್ಯಕ್ತಪಡಿಸಿದೆ.

'ಕಟ್ಟಡ ಕಾರ್ಮಿಕರ ಮಕ್ಕಳಿಗೆ ಮೀಸಲಾದ ವರ್ಗದಲ್ಲಿ ಶೈಕ್ಷಣಿಕ ಧನಸಹಾಯ ಮಾಡಲು ನಿರ್ದೇಶಿಸಬೇಕು' ಎಂದು ಕೋರಿ, 'ಕರ್ನಾಟಕ ರಾಜ್ಯ ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರ ಫೆಡರೇಶನ್' ಪ್ರಧಾನ ಕಾರ್ಯದರ್ಶಿ ಕೆ.ಮಹಾಂತೇಶ್ ಹಾಗೂ ಇತರ ಮೂವರು ಸಲ್ಲಿಸಿರುವ ರಿಟ್ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ನಡೆಸಿತು.

ಮುಖ್ಯಾಂಶಗಳು

- ವಿದ್ಯಾರ್ಥಿನಿಯರಿಗೆ ಹಣ ಪಾವತಿ
- ವಿಚಾರಣೆ ಜುಲೈ 26ಕ್ಕೆ ಮುಂದೂಡಿಕೆ

> **ಕರ್ನಾಟಕ ರಾಜ್ಯ ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ಇದುವರೆಗೂ ಮಾಡಿರುವ ಖರ್ಚಿನ ಲೆಕ್ಕವನ್ನು ಕೋರ್ಟ್‌ಗೆ ಹಾಜರುಪಡಿಸಬೇಕು**
> **ಎಂ.ನಾಗಪ್ರಸನ್ನ** ನ್ಯಾಯಮೂರ್ತಿ

6ನೇ ಪುಟ ನೋಡಿ

ನಿರೀಕ್ಷೆ ₹96,238 ಕೋಟಿ, ಸಂಗ್ರಹ ₹11 ಸಾವಿರ ಕೋಟಿ

ನವದೆಹಲಿ (ಪಿಟಿಐ): 5ಜಿ ತರಂಗಾಂತರ ಹರಾಜು ಪ್ರಕ್ರಿಯೆಯಲ್ಲಿ ಒಟ್ಟು ₹11,340 ಕೋಟಿ ಸಂಗ್ರಹವಾಗಿದ್ದು, ಕೇಂದ್ರ ಸರ್ಕಾರ ನಿರೀಕ್ಷೆ ಮಾಡಿದ್ದ ಕ್ಕಿಂತಲೂ ಇದು ಕಡಿಮೆ ಮೊತ್ತವಾಗಿದೆ.

'800 ಮೆಗಾ ಹರ್ಟ್ಜ್‌ನಿಂದ 26 ಗಿಗಾ ಹರ್ಟ್ಜ್ ತರಂಗಾಂತರ ಬ್ಯಾಂಡ್‌ಗಳ ಹರಾಜು ಪ್ರಕ್ರಿಯೆ ನಡೆಸಲಾಗಿತ್ತು. ಒಟ್ಟು ₹96,238 ಕೋಟಿ ಸಂಗ್ರಹಿಸುವ ಗುರಿ ಹೊಂದಲಾಗಿತ್ತು. ಈ ಪೈಕಿ ಶೇ 12ರಷ್ಟು ಮೊತ್ತವಷ್ಟೇ ಸಂಗ್ರಹವಾಗಿದೆ' ಎಂದು ಸರ್ಕಾರ ತಿಳಿಸಿದೆ.



ಮೊದಲ ದಿನವಾದ ಮಂಗಳವಾರ ಐದು ಸುತ್ತಿನಲ್ಲಿ ಹರಾಜು ಪ್ರಕ್ರಿಯೆ ನಡೆದಿತ್ತು. ಎರಡನೇ ದಿನವಾದ ಬುಧವಾರ ಕಂಪನಿಗಳಿಂದ ಹೆಚ್ಚಿನ ಪ್ರತಿಕ್ರಿಯೆ ವ್ಯಕ್ತವಾಗಲಿಲ್ಲ. ಹಾಗಾಗಿ, ಅಧಿಕಾರಿಗಳು ಮಧ್ಯಾಹ್ನದ ವೇಳೆಗೆ ಹರಾಜು ಪ್ರಕ್ರಿಯೆಯನ್ನು ಮುಕ್ತಾಯಗೊಳಿಸಿದರು.

ಭಾರ್ತಿ ಏರ್‌ಟೆಲ್ ಮುಂಚೂಣಿ: ಭಾರ್ತಿ ಏರ್‌ಟೆಲ್ ಕಂಪನಿಯು ಒಟ್ಟು ₹6,857 ಕೋಟಿ ಮೌಲ್ಯದ ತರಂಗಾಂತರಗಳನ್ನು ಖರೀದಿಸಿದೆ. ಒಟ್ಟು ಮಾರಾಟವಾಗಿರುವ ತರಂಗಾಂತರಗಳಲ್ಲಿ ಈ ಕಂಪನಿಯ ಪಾಲು ಶೇ 60ರಷ್ಟಿದೆ.

10ನೇ ಪುಟ ನೋಡಿ

2022ರಲ್ಲಿ ಸಂಗ್ರಹವಾದ ಮೊತ್ತ

- **₹1.5 ಲಕ್ಷ ಕೋಟಿ** 2022ರಲ್ಲಿ ತರಂಗಾಂತರ ಹರಾಜಿನಿಂದ ಸಂಗ್ರಹವಾದ ಮೊತ್ತ
- **₹88,078 ಕೋಟಿ** ಜಿಯೊ ಕಂಪನಿಯು ಅತಿ ಹೆಚ್ಚಿನ ಮೊತ್ತ ವ್ಯಯ ಮಾಡಿತ್ತು
- **₹43,084 ಕೋಟಿ** ಭಾರ್ತಿ ಏರ್‌ಟೆಲ್ ಖರೀದಿಸಿದ ತರಂಗಾಂತರಗಳ ಮೌಲ್ಯ
- **₹18,799 ಕೋಟಿ** ವೊಡಾಫೋನ್ ಐಡಿಯಾ ಕಂಪನಿ ವ್ಯಯ ಮಾಡಿದ್ದ ಮೊತ್ತ

ಪಠ್ಯದಲ್ಲಿ ಬಾಲಿವುಡ್ ನಟಿ ತಮನ್ನಾ: ಪೋಷಕರ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಲಿವುಡ್ ನಟಿ ತಮನ್ನಾ ಭಾಟಿಯಾ ಕುರಿತ ಪಠ್ಯ ಅಳವಡಿಸಿಕೊಂಡಿರುವ ಹೆಬ್ಬಾಳದ ಸಿಂಧಿ ಪ್ರೌಢಶಾಲೆ ವಿರುದ್ಧ ಪೋಷಕರು ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗಕ್ಕೆ ದೂರು ಸಲ್ಲಿಸಿದ್ದಾರೆ.

ಶಾಲೆಯ 7ನೇ ತರಗತಿಯ ಮಕ್ಕಳಿಗೆ ಪರಿಚಯಿಸಿರುವ ಪಾಠವು ತಮನ್ನಾ, ನಟ ರಣವೀರ್ ಸಿಂಗ್ ಸೇರಿದಂತೆ ಪ್ರಮುಖ ಸಿಂಧಿಗಳ ಕುರಿತು ಮಾಹಿತಿಯನ್ನು ಒಳಗೊಂಡಿದೆ. ಆದರೆ, ತಮನ್ನಾ ಅವರ ವಿಷಯಕ್ಕೆ ಮಾತ್ರ ಪೋಷಕರಿಂದ ವಿರೋಧ ವ್ಯಕ್ತವಾಗಿದೆ.


ತಮನ್ನಾ

‘ಮಕ್ಕಳು ಈ ನಟಿಯ ಪಾಠ ಕೇಳಿದ ನಂತರ ಅಂತರ್ಜಾಲ ತಾಣದಲ್ಲಿ ಹೆಚ್ಚಿನ ಮಾಹಿತಿ ಹುಡುಕುತ್ತಾರೆ. ಅವರು ವಯಸ್ಸಿಗೆ ಸೂಕ್ತವಲ್ಲದ ವಿಷಯಗಳ ಕುರಿತು ಆಕರ್ಷಿತರಾಗುವ ಅಪಾಯ ವಿದೆ. ಹಾಗಾಗಿ, ತಮನ್ನಾ ಕುರಿತ ಪಾಠವನ್ನು ಕೈಬಿಡಲು ಒತ್ತಾಯಿಸಿದ್ದೇವೆ’ ಎಂದು ಪೋಷಕರು ನೀಡಿದ ದೂರಿನಲ್ಲಿ ವಿವರಿಸಿದ್ದಾರೆ.

‘7ನೇ ತರಗತಿಯ ಪಠ್ಯವು 1947ರಿಂದ 1962 ಅವಧಿಯ ಅಧ್ಯಾಯ, ಸಿಂಧ್ ವಿಭಜನೆಯ ನಂತರದ ಜೀವನ. ವಲಸೆ, ಸಮುದಾಯ ಮತ್ತು ಕಲಹ ವಿಷಯಗಳನ್ನು ಒಳಗೊಂಡಿದೆ. ಸಿಂಧ್ ಭಾಷಾ ಅಲ್ಪಸಂಖ್ಯಾತ ಸಮುದಾಯದ ಸಂಸ್ಕೃತಿಯನ್ನು ವಿದ್ಯಾರ್ಥಿಗಳಿಗೆ ಪರಿಚಯಿಸಲು ಇಂತಹ ಪಾಠಗಳನ್ನು ಬಳಸಿಕೊಳ್ಳಲಾಗಿದೆ. ಯಾವುದೇ ಲೋಪವಾಗಿಲ್ಲ’ ಎಂದು ಶಾಲೆಯ ಆಡಳಿತ ಮಂಡಳಿ ಪ್ರತಿಕ್ರಿಯಿಸಿದೆ.

‘ತುಂಗಾ ನದಿ ಸ್ವಚ್ಛಗೊಳಿಸಿ’

ಬೆಂಗಳೂರು: ತುಂಗಾ ನದಿ ಮಲಿನ ಗೊಳ್ಳುತ್ತಿರುವುದನ್ನು ತಡೆಯಬೇಕು ಮತ್ತು ಸ್ವಚ್ಛಗೊಳಿಸಲು ಕ್ರಮ ತೆಗೆದು ಕೊಳ್ಳಬೇಕು ಎಂದು ಚಿತ್ರನಟ ಅನಿರುದ್ಧ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದರು.

ಇದೇ ವೇಳೆ ಮುಖ್ಯಮಂತ್ರಿಯವರು ನೀರಾವರಿ ನಿಗಮದ ಎಂ.ಡಿ ರಾಜೇಶ್ ಅವರಿಗೆ ದೂರವಾಣಿ ಮೂಲಕ ಸಂಪರ್ಕಿಸಿ ಕೂಡಲೇ ತುಂಗಾ ನದಿ ಸ್ವಚ್ಛತೆಗೆ ಗಮನಹರಿಸಲು ಸೂಚಿಸಿದರು.

‘ಕೆಂಪೇಗೌಡರು ಕನ್ನಡಿಗರ ಅಸ್ಮಿತೆ’

ಪ್ರಜಾವಾಣಿ ವಾರ್ತೆ

ನವದೆಹಲಿ: ನಾಡಪ್ರಭು ಕೆಂಪೇಗೌಡರು ಯಾರ ಸ್ವತ್ತೂ ಅಲ್ಲ, ಅವರು ಕನ್ನಡದ ಸ್ವತ್ತು. ಕನ್ನಡಿಗರ ಅಸ್ಮಿತೆ’ ಎಂದು ಕೇಂದ್ರ ಭಾರೀ ಕೈಗಾರಿಕೆ ಮತ್ತು ಉಕ್ಕು ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದರು.


ಕುಮಾರಸ್ವಾಮಿ

ಆ ಮಹಾಪುರುಷರ ಬಗ್ಗೆ ಕಾಂಗ್ರೆಸ್ ಸರ್ಕಾರಕ್ಕೆ ಹೃದಯದಲ್ಲಿ ಗೌರವ ಇದ್ದರೆ ಮೊದಲು ಅವರು ಕಟ್ಟಿಸಿರುವ ಕೆರೆಗಳನ್ನು ರಕ್ಷಣೆ ಮಾಡಲಿ ಎಂದು ಅವರು ಒತ್ತಾಯಿಸಿದರು.

ಬುಧವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, ‘ನಾಡಪ್ರಭು ಕೆಂಪೇಗೌಡರ ಜಯಂತಿ ಕಾರ್ಯಕ್ರಮದ ಆಹ್ವಾನ ಪತ್ರಿಕೆಯಲ್ಲಿ ಮಾಜಿ ಪ್ರಧಾನಿ ದೇವೇಗೌಡರು ಹಾಗೂ ನನ್ನ ಹೆಸರು ಹಾಕಿಲ್ಲ ಎನ್ನುವ ಬಗ್ಗೆ ಬೇಸರ ಇಲ್ಲ. ನಾನು ಇದ್ದಲ್ಲಿಯೇ ನಾಡಪ್ರಭುಗಳನ್ನು ಸ್ಮರಿಸಿ ಗೌರವಿಸುತ್ತೇನೆ’ ಎಂದರು.

‘ಬೆಂಗಳೂರು ನಗರದ ಬಗ್ಗೆ ಇವತ್ತು ವಿಶ್ವದಲ್ಲೇ ಚರ್ಚೆ ಆಗುತ್ತಿದೆ. ಅದಕ್ಕೆ ಕಾರಣ ಕೆಂಪೇಗೌಡರು. ಅವರು ಕಟ್ಟಿರುವ ಕೆರೆಗಳನ್ನು ಈಗಿನ ದಿನಗಳಲ್ಲಿ ಸ್ವಾರ್ಥಕ್ಕೆ ಕೆಲವರು ನುಂಗಿದ್ದಾರೆ. ಈಗಲಾದರೂ ಆ ಕೆರೆಗಳನ್ನು ಕಾಪಾಡುವ ಕೆಲಸವನ್ನು ಸರ್ಕಾರ ಮಾಡಬೇಕಿದೆ. ಮೇಕೆದಾಟು ಕಟ್ಟಬೇಕು, ಕುಡಿಯುವ ನೀರು ತರುತ್ತೇವೆ ಎಂದೆಲ್ಲಾ ಹೇಳುತ್ತಾರೆ. ಆದರೆ, ನಗರದ ಜಲಮೂಲ ಗಳಾಗಿದ್ದ ಕೆರೆಗಳನ್ನು ನುಂಗಿ ನೀರು ಕುಡಿದಿದ್ದಾರೆ’ ಎಂದು ಸಚಿವರು ಬೇಸರ ವ್ಯಕ್ತಪಡಿಸಿದರು.

‘ಚನ್ನಪಟ್ಟಣ ಕ್ಷೇತ್ರದ ಉಪ ಚುನಾವಣೆಗೆ ಒಮ್ಮತದಿಂದ ಎನ್‌ಡಿಎ ಅಭ್ಯರ್ಥಿಯನ್ನು ಕಣಕ್ಕೆ ಇಳಿಸಲಾಗು ತ್ತದೆ. ಇನ್ನೂ ಸಾಕಷ್ಟು ಸಮಯ ಇದೆ. ನಾವು ನಿರ್ಧಾರ ಮಾಡುತ್ತೇವೆ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ದೇವೇಗೌಡರ ಕಡೆಗಣನೆ: ಖಂಡನೆ

ಬೆಂಗಳೂರು: ರಾಜ್ಯ ಸರ್ಕಾರ ಜೂನ್ 27ರಂದು ಆಯೋಜಿಸಿರುವ ನಾಡಪ್ರಭು ಕೆಂಪೇಗೌಡರ 515ನೇ ಜಯಂತಿ ಕಾರ್ಯಕ್ರಮಕ್ಕೆ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ ಹಾಗೂ ಕೇಂದ್ರ ಕೈಗಾರಿಕಾ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರನ್ನು ಆಹ್ವಾನಿಸದೇ ಇರುವುದನ್ನು ರಾಜ್ಯ ಒಕ್ಕಲಿಗರ ಸಂಘ ಖಂಡಿಸಿದೆ.


ದೇವೇಗೌಡರು ಸಮು ದಾಯದ ಹಿರಿಯ ನಾಯಕ. ಅವರ ಪುತ್ರ ಕುಮಾರಸ್ವಾಮಿ ಕೇಂದ್ರ ಸಚಿವ. ಇಬ್ಬರನ್ನೂ ಕಾರ್ಯಕ್ರಮಕ್ಕೆ ಆಹ್ವಾನಿಸದೇ ಇರುವುದು ಒಕ್ಕಲಿಗ ಸಮಾಜಕ್ಕೆ ಮಾಡಿದ ಅಪಮಾನ ಎಂದು ಸಂಘದ ಗೌರವಾಧ್ಯಕ್ಷ ಕೆಂಚಪ್ಪ ಗೌಡ, ಪ್ರಧಾನ ಕಾರ್ಯದರ್ಶಿ ಜಯಮುತ್ತು ಮತ್ತಿತರರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

‘ನಿಖಿಲ್ ಸ್ಪರ್ಧಿಸಿದರೆ ಸಹಕಾರ’

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಚನ್ನಪಟ್ಟಣ ವಿಧಾನ ಸಭಾ ಉಪಚುನಾವಣೆಯಲ್ಲಿ ಮೈತ್ರಿ ಅಭ್ಯರ್ಥಿಯಾಗಿ ನಿಖಿಲ್ ಕುಮಾರಸ್ವಾಮಿ ಸ್ಪರ್ಧೆ ಮಾಡಿದರೆ ನನ್ನ ಸಂಪೂರ್ಣ ಬೆಂಬಲ ಇದೆ. ಯಾವುದೇ ಒಳಸಂಚು ಮಾಡುವುದಿಲ್ಲ’ ಎಂದು ವಿಧಾನ ಪರಿಷತ್‌ನ ಬಿಜೆಪಿ ಸದಸ್ಯ ಸಿ.ಪಿ.ಯೋಗೇಶ್ವರ ಸ್ಪಷ್ಟಪಡಿಸಿದರು.

ನವದೆಹಲಿಯಲ್ಲಿ ಬಿಜೆಪಿ ವರಿಷ್ಠರು ಹಾಗೂ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರನ್ನು ಭೇಟಿ ಮಾಡಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಅಭ್ಯರ್ಥಿ ಆಯ್ಕೆ ಬಗ್ಗೆ ಕುಮಾರಸ್ವಾಮಿ ಅವರೇ ಬಹುಪಾಲು ನಿರ್ಣಯ ಮಾಡುತ್ತಾರೆ. ಅವರ ಆಶೀರ್ವಾದ ಬೇಕೇಬೇಕು’ ಎಂದರು.


ಯೋಗೇಶ್ವರ್

ಕಾಂಗ್ರೆಸ್ ಪಕ್ಷದಿಂದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕುಟುಂಬದವರೇ ನಿಲ್ಲುತ್ತಾರೆ ಎಂಬುದು ನಮ್ಮ ಅಭಿಪ್ರಾಯ. ಡಿಕೆಶಿ ಕುಟುಂಬದವರು ನಿಂತರೆ ದೊಡ್ಡ ಹೋರಾಟ ನಡೆಯಲಿದೆ ಎಂದು ಹೇಳಿದರು.

ಗುರುವಾರ, ಜೂನ್ 27, 2024 | ₹ 7.00

• www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಾಲೀಮು
ಭಾರತ ಕ್ರಿಕೆಟ್ ತಂಡದ ಆಟಗಾರ್ತಿ ರೇಣುಕಾ ಸಿಂಗ್ ಅವರು ಚೆನ್ನೈನಲ್ಲಿ ಬುಧವಾರ ಅಭ್ಯಾಸದ ವೇಳೆ ಕಾಣಿಸಿಕೊಂಡಿದ್ದು ಹೀಗೆ...



ಲಾಕ್‌ಡೌನ್ ವೇಳೆ ಲೈಂಗಿಕ ದೌರ್ಜನ್ಯ; ಸೂರಜ್ ಆಪ್ತ 6

ಜೆಇಎಂನ ಮೂವರು ಶಂಕಿತ ಉಗ್ರರು ಹತ 7

ಪಿತ್ರೋಡಾ ಮರುನೇಮಕ 11

ಉಪಗ್ರಹ ಆಧಾರಿತ ಟೋಲ್ ಸಂಗ್ರಹ ಜಾರಿ 10

ವೇತನ ಆಯೋಗದ ವರದಿ ಶೀಘ್ರ ಅನುಷ್ಠಾನ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಏಳನೇ ವೇತನ ಆಯೋಗದ ವರದಿ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಈಗಾಗಲೇ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿದ್ದು, ಸಚಿವರು ಅನೌಪಚಾರಿಕವಾಗಿ ಒಪ್ಪಿಗೆ ಸೂಚಿಸಿದ್ದಾರೆ. ಆಯೋಗದ ವರದಿಯನ್ನು ಆದಷ್ಟು ಶೀಘ್ರ ಅನುಷ್ಠಾನಗೊಳಿಸಲಾಗುವುದು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ಮತ್ತು ನಿವೃತ್ತ ನೌಕರರ ಸಂಘದ ಅಧ್ಯಕ್ಷ ಎಲ್. ಭೈರಪ್ಪ ಅವರು ಮುಖ್ಯಮಂತ್ರಿಯವರನ್ನು ಗೃಹ ಕಚೇರಿ ‘ಕೃಷ್ಣಾ’ದಲ್ಲಿ ಭೇಟಿ ಮಾಡಿ, ಏಳನೇ ವೇತನ ಆಯೋಗ ವರದಿಯ ಶಿಫಾರಸುಗಳನ್ನು ಜಾರಿಗೊಳಿಸುವಂತೆ ಆಗ್ರಹಿಸಿದರು.

ಅಲ್ಲದೆ, ಸರ್ಕಾರಿ ನೌಕರರಿಗೆ ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆ ಅನುಷ್ಠಾನಗೊಳಿಸುವಂತೆ ಮನವಿ ಮಾಡಿದರು.

ಅದಕ್ಕೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, ‘ಸರ್ಕಾರವು ರಾಜ್ಯ ಸರ್ಕಾರಿ ನೌಕರರ ಮತ್ತು ನಿವೃತ್ತ ನೌಕರರ ಪರವಾಗಿದೆ. ಎಲ್ಲ ಬೇಡಿಕೆಗಳನ್ನು ಈಡೇರಿಸುತ್ತೇವೆ. ಯಾರೂ ಆತಂಕಪಡುವ ಅವಶ್ಯಕತೆ ಇಲ್ಲ’ ಎಂದರು.

ಸರ್ಕಾರದ ಬಾಕಿ ₹3,773 ಕೋಟಿ

‘ಶಕ್ತಿ’ಯಿಂದ ಸಾರಿಗೆ ನಿಗಮ ನಗದು ಹರಿವಿನ ಮೇಲೆ ವ್ಯತಿರಿಕ್ತ ಪರಿಣಾಮ • ಆರ್ಥಿಕ ನೆರವಿಗೆ ಮನವಿ

• ರಾಜೇಶ್ ರೈ ಚಟ್ಲ

ಪ್ರಜಾವಾಣಿ ವಿಶೇಷ

ಬೆಂಗಳೂರು: ಮಹಿಳೆಯರಿಗೆ ಉಚಿತ ಪ್ರಯಾಣದ ‘ಶಕ್ತಿ’ ಯೋಜನೆಯ 2023–24ನೇ ಸಾಲಿನ ಬಾಕಿ ₹1,180.61 ಕೋಟಿಯೂ ಸೇರಿ ಒಟ್ಟು ₹3,773.79 ಕೋಟಿಯನ್ನು ಸಾರಿಗೆ ನಿಗಮಗಳಿಗೆ ರಾಜ್ಯ ಸರ್ಕಾರ ಮರುಪಾವತಿ ಮಾಡಬೇಕಿದೆ.

ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್ ಅವರಿಗೆ ಇದೇ 18ರಂದು ನಾಲ್ಕು ಪುಟಗಳ ಟಿಪ್ಪಣಿ ಬರೆದು ಸಾರಿಗೆ ನಿಗಮಗಳ ಸದ್ಯದ ಆರ್ಥಿಕ ಪರಿಸ್ಥಿತಿಯ ಸಂಪೂರ್ಣ ವಿವರಗಳನ್ನು ನೀಡಿದ್ದಾರೆ. ‘ಶಕ್ತಿ’ ಯೋಜನೆಯ ಅನುಷ್ಠಾನದ ನಂತರ ನಿಗಮಗಳ ಆದಾಯದಲ್ಲಿ ಹೆಚ್ಚಳ ಉಂಟಾಗಿದ್ದರೂ, ನಗದು ಹರಿವಿನ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿದೆ ಎಂದು ವಿವರಿಸಿದ್ದಾರೆ.

ಈ ಯೋಜನೆಯಲ್ಲಿ ನಿಗಮಗಳಿಗೆ ಆಗಿರುವ ವೆಚ್ಚವನ್ನು ಸಂಪೂರ್ಣ ಮರು ಪಾವತಿಸಿ, ಸಾರಿಗೆ ಸೇವೆಯನ್ನು ಸಮರ್ಪಕವಾಗಿ ನಿಭಾಯಿಸಲು ಆರ್ಥಿಕ ನೆರವು ನೀಡುವಂತೆ ಸಂಬಂಧಪಟ್ಟ ಇಲಾಖೆಗೆ ನಿರ್ದೇಶನ ನೀಡಬೇಕು ಎಂದೂ ಸಚಿವರು ಮನವಿ ಮಾಡಿದ್ದಾರೆ. ಈ ಟಿಪ್ಪಣಿಯನ್ನು ಆರ್ಥಿಕ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರಿಗೆ ಮುಖ್ಯ ಕಾರ್ಯದರ್ಶಿ ರವಾನಿಸಿದ್ದಾರೆ.

6ನೇ ಪುಟ ನೋಡಿ

ಸಚಿವರ ಬೇಡಿಕೆಗಳೇನು?

- ‘ಶಕ್ತಿ’ ಯೋಜನೆಯ 2023–24ನೇ ಸಾಲಿನ ಬಾಕಿ ₹1,180.61 ಕೋಟಿ ಬಿಡುಗಡೆ ಮಾಡಬೇಕು
- ಪ್ರಸಕ್ತ ಸಾಲಿನಡಿ ‘ಶಕ್ತಿ’ ಯೋಜನೆಯಡಿ ನಿಗಮಗಳಿಗೆ ಆಗಿರುವ ವೆಚ್ಚವನ್ನು ಸಂಪೂರ್ಣ ಮರುಪಾವತಿಸಬೇಕು
- ವೇತನ ಪರಿಷ್ಕರಣೆಯ ಮೊತ್ತ (ನಿವೃತ್ತ ನೌಕರರಿಗೆ ಹಿಂಬಾಕಿ) ಪಾವತಿಗೆ ₹220 ಕೋಟಿ ನೀಡಬೇಕು
- ಪ್ರಸಕ್ತ ಸಾಲಿನಲ್ಲಿ ನಿಗಮಗಳು 2,068 ಹೊಸ ವಾಹನಗಳನ್ನು ಖರೀದಿಸಲು ಯೋಚಿಸಿದ್ದು, ಬಂಡವಾಳ ವೆಚ್ಚ ನಿಭಾಯಿಸಲು ₹800 ಕೋಟಿ ವಿಶೇಷ ಅನುದಾನ ನೀಡಬೇಕು
- ಸರ್ಕಾರಕ್ಕೆ ಸಾರಿಗೆ ನಿಗಮಗಳು 2024–25ನೇ ಸಾಲಿನಲ್ಲಿ ಪಾವತಿಸಬೇಕಾದ ಮೋಟಾರು ವಾಹನ ತೆರಿಗೆ ₹637.76 ಕೋಟಿಗೆ ಪಾವತಿಯಿಂದ ವಿನಾಯಿತಿ ನೀಡಬೇಕು

ಸಾರಿಗೆ ನಿಗಮಗಳಿಗೆ ಸರ್ಕಾರದ ಬಾಕಿ (ಕೋಟಿಗಳಲ್ಲಿ)

- ಭವಿಷ್ಯ ನಿಧಿ ₹2,291
- ನಿವೃತ್ತ ನೌಕರರ ಉಪಧನ, ರಜೆ ನಗದೀಕರಣ ₹175
- ಸಿಬ್ಬಂದಿಯ ಬಾಕಿ (ತುಟ್ಟಿ ಭತ್ಯೆ, ರಜೆ ನಗದೀಕರಣ) ₹310.42
- ಇಂಧನ ₹450
- ಸರಬರಾಜುದಾರರು ಮತ್ತು ಇತರ ಬಾಕಿ ₹547.37

₹3,773.79 ಒಟ್ಟು ಬಾಕಿ

‘ಶಕ್ತಿ’ ಯೋಜನೆ– ಆರ್ಥಿಕ ಸ್ಥಿತಿ (ಕೋಟಿಗಳಲ್ಲಿ)

ವರ್ಷ	ವೆಚ್ಚ	ಸರ್ಕಾರದಿಂದ ಮರುಪಾವತಿ	ಮರುಪಾವತಿಗೆ ಬಾಕಿ
2023-24	₹4,380.35	₹3,199.75	₹1,180.61 (ಶೇ 27)
2024-25 (ಏಪ್ರಿಲ್, ಮೇ)	₹1,000.67	₹835.83	₹164.84 (ಶೇ 16.50)

‘ಶಕ್ತಿ ಅನುಕರಣೀಯ ಯೋಜನೆ’



‘ರಾಜ್ಯದ ಮಹಿಳಾ ಪ್ರಯಾಣಿಕರಿಗೆ ಸಾರಿಗೆ ನಿಗಮಗಳ ವೇಗದೂತ ಸೇರಿದಂತೆ ಎಲ್ಲ ಸಾಮಾನ್ಯ ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣಿಸುವ ‘ಶಕ್ತಿ’ ಯೋಜನೆಗೆ ಅಭೂತಪೂರ್ವ ಪ್ರತಿಕ್ರಿಯೆ ಬಂದಿದ್ದು, ಅತ್ಯಂತ ಯಶಸ್ವಿ ಯೋಜನೆಯಾಗಿ ಹೊರಹೊಮ್ಮಿದೆ. ನಿರೀಕ್ಷೆಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಈ ಯೋಜನೆಯ ಪ್ರಯೋಜನ ಪಡೆಯುತ್ತಿದ್ದಾರೆ. ಅಲ್ಲದೆ, ಇದು ರಾಷ್ಟ್ರದಾದ್ಯಂತ ಅತ್ಯಂತ ಜನಪ್ರಿಯ, ಅನುಕರಣೀಯ ಯೋಜನೆಯಾಗಿ ಹೊರಹೊಮ್ಮಿದೆ. ಮಹಿಳೆಯರ ಸಬಲೀಕರಣ ಹಾಗೂ ರಾಜ್ಯದ ಆರ್ಥಿಕ ಚಟುವಟಿಕೆಗಳ ಅಭಿವೃದ್ಧಿಗೂ ನೆರವಾಗಿದೆ’ ಎಂದು ರಾಮಲಿಂಗಾರೆಡ್ಡಿ ಅವರು ‘ಶಕ್ತಿ’ ಯೋಜನೆಯನ್ನು ಟಿಪ್ಪಣಿಯಲ್ಲಿ ಬಣ್ಣಿಸಿದ್ದಾರೆ.

ಅಜೇಯ ಭಾರತಕ್ಕೆ ಇಂಗ್ಲೆಂಡ್ ಸವಾಲು

ವೆಸ್ಟ್ ಇಂಡೀಸ್ ಮತ್ತು ಅಮೆರಿಕ ಜಂಟಿ ಆತಿಥ್ಯದಲ್ಲಿ ನಡೆಯುತ್ತಿರುವ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಎರಡು ಸೆಮಿಫೈನಲ್‌ಗಳು ಗುರುವಾರ ನಡೆಯಲಿವೆ. ಭಾರತ, ಇಂಗ್ಲೆಂಡ್, ದಕ್ಷಿಣ ಆಫ್ರಿಕಾ ಮತ್ತು ಅಫ್ಗಾನಿಸ್ತಾನ ತಂಡಗಳು ನಾಲ್ಕರ ಘಟ್ಟದಲ್ಲಿ ಸೆಣಸುತ್ತಿವೆ.



ಏಡನ್ ಮರ್ಕರಂ ರಶೀದ್ ಖಾನ್

- ಒಂದು ಸಲದ ಚಾಂಪಿಯನ್ ಭಾರತ ಮತ್ತು ಎರಡು ಬಾರಿಯ ಪ್ರಶಸ್ತಿ ವಿಜೇತ ಇಂಗ್ಲೆಂಡ್ ಮುಖಾಮುಖಿಯಾಗಲಿವೆ
- 2022ರ ಟಿ20 ವಿಶ್ವಕಪ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಇಂಗ್ಲೆಂಡ್ ಎದುರು ಸೋತಿದ್ದ ಭಾರತಕ್ಕೆ ಮುಯ್ಯಿ ತೀರಿಸಿಕೊಳ್ಳುವ ತವಕ
- ಪಂದ್ಯ ನಡೆಯಲಿರುವ ಗಯಾನಾದಲ್ಲಿ ಮಳೆ ಬರುವ ಸಾಧ್ಯತೆ
- ಟಿ20 ವಿಶ್ವಕಪ್ ಟೂರ್ನಿಯಲ್ಲಿ ಚೊಚ್ಚಲ ಫೈನಲ್ ಪ್ರವೇಶದ ಮೇಲೆ ಕಣ್ಣಿಟ್ಟಿರುವ ದಕ್ಷಿಣ ಆಫ್ರಿಕಾ
- ಇದೇ ಮೊದಲ ಸಲ ನಾಲ್ಕರ ಘಟ್ಟಕ್ಕೆ ಪ್ರವೇಶಿಸಿರುವ ಅಫ್ಗಾನಿಸ್ತಾನ



ಸೆಮಿಫೈನಲ್‌ಗಳು

- ದಕ್ಷಿಣ ಆಫ್ರಿಕಾ Vs ಅಫ್ಗಾನಿಸ್ತಾನ (ಬೆಳಿಗ್ಗೆ 6) ಸ್ಥಳ: ಟ್ರಿನಿಡಾಡ್
- ಭಾರತ Vs ಇಂಗ್ಲೆಂಡ್ (ರಾತ್ರಿ 8) ಸ್ಥಳ: ಗಯಾನಾ

ಲೈವ್ ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಡಿಡಿ ಸ್ಪೋರ್ಟ್ಸ್, ಹಾಟ್ ಸ್ಟಾರ್ ಆ್ಯಪ್

ಕೇಜ್ರಿವಾಲ್: 3 ದಿನ ಸಿಬಿಐ ಕಸ್ಟಡಿಗೆ

ನವದೆಹಲಿ: ತಿಹಾರ್ ಜೈಲಿನಲ್ಲಿ ನ್ಯಾಯಾಂಗ ಬಂಧನದಲ್ಲಿದ್ದ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರನ್ನು ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದ ಭ್ರಷ್ಟಾಚಾರ ಪ್ರಕರಣದಲ್ಲಿ ಸಿಬಿಐ ಬುಧವಾರ ಬಂಧಿಸಿದ್ದು, ದೆಹಲಿ ನ್ಯಾಯಾಲಯವು ಅವರನ್ನು ಮೂರು ದಿನಗಳವರೆಗೆ ಸಿಬಿಐ ಕಸ್ಟಡಿಗೆ ನೀಡಿದೆ.

ವಿಶೇಷ ನ್ಯಾಯಾಧೀಶರಿಂದ ಅನುಮತಿ ಪಡೆದ ಬಳಿಕ ಸಿಬಿಐ ಅಧಿಕಾರಿಗಳು ಕೇಜ್ರಿವಾಲ್ ಅವರನ್ನು ಬಂಧಿಸಿದರು. 11

ಪಿಡಿಒ ವರ್ಗಾವಣೆಗೆ ಕೌನ್ಸೆಲಿಂಗ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಸಕ್ತ ಸಾಲಿನಿಂದ (2024–25) ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಪಿಡಿಒ), ಹಿರಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಸಹಾಯಕ ಗ್ರೇಡ್–1 ಮತ್ತು ಗ್ರೇಡ್–2, ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ವರ್ಗಾವಣೆಯನ್ನು ಕೌನ್ಸೆಲಿಂಗ್ ಮೂಲಕ ಮಾಡಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ನಿರ್ಧರಿಸಿದೆ.

ಈ ಕುರಿತು ಆದೇಶ ಹೊರಡಿಸಿರುವ ಇಲಾಖೆ, ‘ಭ್ರಷ್ಟಾಚಾರ ತಡೆಯಲು ಮತ್ತು ದಕ್ಷತೆಯನ್ನು ಹೆಚ್ಚಿಸಲು ಈ ಕ್ರಮ ತೆಗೆದುಕೊಳ್ಳಲಾಗುತ್ತಿದೆ’ ಎಂದು ಹೇಳಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ‘ಸ್ಥಳೀಯಾಡಳಿತ ಸಂಸ್ಥೆಗಳಲ್ಲಿ ತ್ವರಿತ ಸೇವಾ ಪೂರೈಕೆ ಮತ್ತು ಭ್ರಷ್ಟಾಚಾರ ತಡೆಯಲು ಸಿಬ್ಬಂದಿ ವರ್ಗಾವಣೆಯನ್ನು ಕೌನ್ಸೆಲಿಂಗ್ ಮಾಡಲು ಮಾಡಲಾಗುವುದು’ ಎಂದು ಪ್ರಸಕ್ತ ಸಾಲಿನ ಬಜೆಟ್ ಭಾಷಣದಲ್ಲಿ ಘೋಷಿಸಿದ್ದರು. ಅದರಂತೆ, ಈ ಆದೇಶ ಹೊರಡಿಸಲಾಗಿದೆ.

‘ಡಿಕೆಶಿ ಸಿಎಂ, ಡಜನ್ ಡಿಸಿಎಂ ಮಾಡಲಿ’

ಬೆಂಗಳೂರು: ‘ಡಿ.ಕೆ. ಶಿವಕುಮಾರ್ ಅವರನ್ನು ಮುಖ್ಯಮಂತ್ರಿ ಮಾಡಿ, ನಂತರ ಒಂದು ಡಜನ್ ಉಪ ಮುಖ್ಯಮಂತ್ರಿ ಮಾಡಲಿ’ ಎಂದು ಚನ್ನಗಿರಿ ಕಾಂಗ್ರೆಸ್ ಶಾಸಕ ಬಸವರಾಜ್ ಶಿವಗಂಗಾ ಹೇಳಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರನ್ನು ಸದಾಶಿವನಗರದಲ್ಲಿರುವ ಮನೆಯಲ್ಲಿ ಬುಧವಾರ ಭೇಟಿ ಮಾಡಿದ ಬಳಿಕ ಸುದ್ದಿಗಾರ ಜೊತೆ ಮಾತನಾಡಿದ ಅವರು, ‘ಕೆಪಿಸಿಸಿ ಅಧ್ಯಕ್ಷರನ್ನು ಮುಖ್ಯಮಂತ್ರಿ ಮಾಡುವುದು ಪದ್ಧತಿ’ಎಂದರು. 6

ವಿಳಂಬ ಧೋರಣೆ: ಮುಖ್ಯಮಂತ್ರಿ ಗರಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಳ್ಳಾರಿ, ವಿಜಯನಗರ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳ ಗಣಿಬಾಧಿತ ಪ್ರದೇಶಗಳ ಸಮಗ್ರ ಪರಿಸರ ಯೋಜನೆ (ಸೆಪ್‌ಮಿಜ್) ಅಡಿಯಲ್ಲಿ ಕರ್ನಾಟಕ ಗಣಿ ಪರಿಸರ ಪುನಶ್ಚೇತನ ನಿಗಮದ (ಕೆಎಂಇಆರ್‌ಸಿ) ಬಳಿ ಲಭ್ಯವಿರುವ ಅನುದಾನ ಬಳಕೆಯಲ್ಲಿ ವಿಳಂಬ ಮಾಡುತ್ತಿರುವ ವಿವಿಧ ಇಲಾಖೆಗಳ ಕಾರ್ಯದರ್ಶಿಗಳ ಮೇಲೆ ಮುಖ್ಯಮಂತ್ರಿ ಸಿದ್ದರಾಮಯ್ಯ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಕೆಎಂಇಆರ್‌ಸಿ ಅಧಿಕಾರಿಗಳು ಮತ್ತು ವಿವಿಧ ಇಲಾಖಾ ಮುಖ್ಯಸ್ಥರ ಜತೆ ಬುಧವಾರ ಸಭೆ ನಡೆಸಿದ ಮುಖ್ಯಮಂತ್ರಿ, ಸೆಪ್‌ಮಿಜ್ ಅನುದಾನ ಬಳಕೆಯ ಪ್ರಗತಿ ಪರಿಶೀಲಿಸಿದರು. ವರ್ಷ ಕಳೆದರೂ ವಿಸ್ತೃತ ಯೋಜನಾ ವರದಿ (ಡಿಪಿಆರ್) ಅನುಮೋದಿಸದ ವಿವಿಧ ಇಲಾಖೆಗಳ ಕಾರ್ಯದರ್ಶಿಗಳನ್ನು ತರಾಟೆಗೆ ತೆಗೆದುಕೊಂಡರು.

5ನೇ ಪುಟ ನೋಡಿ

ಸೆಪ್‌ಮಿಜ್ ಅನುದಾನ ನಿಗದಿ

- ₹5,271.96 ಕೋಟಿ ರೈಲ್ವೆ ಯೋಜನೆಗಳು
- ₹4,929.84 ಕೋಟಿ ಕುಡಿಯುವ ನೀರಿನ ಯೋಜನೆಗಳು
- ₹1,915.78 ಕೋಟಿ ಪರಿಸರ ಪುನರುಜ್ಜೀವನ
- ₹2,559.17 ಕೋಟಿ ರಸ್ತೆಗಳು ಮತ್ತು ಸಂಪರ್ಕ ಯೋಜನೆಗಳು
- ₹1,193.98 ಕೋಟಿ ವಸತಿ ಯೋಜನೆಗಳು

ಸ್ಥಾಪನೆ : 1966 | ಯಶಸ್ವಿ 57 ವರ್ಷಗಳ ಸಾರ್ಥಕ ಸಹಕಾರ ಬ್ಯಾಂಕಿಂಗ್ ಸೇವೆಯಲ್ಲಿ | ನೋಂದಣಿ ಸಂಖ್ಯೆ : ಡಿ.ವೈ.ಆರ್.443

ದಿ ರಾಜಾಜಿನಗರ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ನಂ-741, 3ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – 560010

ಪ್ರಧಾನ ಕಛೇರಿ : 080-23151204, 23152073, ಬಸವೇಶ್ವರನಗರ ಶಾಖೆ : 080-23231238, 23232587, ಅನ್ನಪೂರ್ಣೇಶ್ವರಿನಗರ ಶಾಖೆ : 080-23183734, E-mail : contact@rcbl.co

ದಿನಾಂಕ 31-03-2024 ರಲ್ಲಿದ್ದಂತೆ ಆಸ್ತಿ ಜವಾಬ್ದಾರಿಗಳ ಸಮತೋಲನ ಪಟ್ಟಿ

ದಿನಾಂಕ 31/03/2023ರಂತೆ	ಜವಾಬ್ದಾರಿಗಳು	ದಿನಾಂಕ 31/03/2024ರಂತೆ	ದಿನಾಂಕ 31/03/2023ರಂತೆ	ಆಸ್ತಿಗಳು	ದಿನಾಂಕ 31/03/2024ರಂತೆ
200000000.00	ಅಧಿಕೃತ ಷೇರು ಬಂಡವಾಳ	200000000.00	9501983.00	ನಗದು ಶಿಲ್ಕು	11960364.00
124102400.00	ಪಾವತಿಯಾದ ಷೇರು ಬಂಡವಾಳ	129433300.00	208567138.56	ಅಂತರ್ ಬ್ಯಾಂಕು ಚಾಲ್ತಿ ಖಾತೆಗಳಲ್ಲಿರುವ ಶಿಲ್ಕು	216897591.52
565983480.56	ಮೀಸಲು ನಿಧಿ ಮತ್ತು ಇತರೆ ನಿಧಿಗಳು	608377882.84	2248235709.19	ಹೂಡಿಕೆಗಳು	1990368403.19
3424797481.64	ಠೇವಣಿಗಳು ಮತ್ತು ಇತರೆ ಖಾತೆಗಳು	3397387021.07	1778639400.49	ಸಾಲಗಳು ಮತ್ತು ಮುಂಗಡಗಳು	1986745718.49
19998699.00	ನೀರಿಕ್ಷೀತ ಬಡ್ಡಿಯ ಕಾಂಟ್ರಾ	20283749.00	19998699.00	ನೀರಿಕ್ಷೀತ ಬಡ್ಡಿಯ ಕಾಂಟ್ರಾ	20283749.00
614060560.20	ಶಾಖೆಗಳ ಹೊಂದಣಿಕೆ	550756925.88	614060560.20	ಶಾಖೆಗಳ ಹೊಂದಣಿಕೆ	550756925.88
92821439.86	ಠೇವಣಿಗಳ ಮೇಲೆ ಪಾವತಿಸಬೇಕಾದ ಬಡ್ಡಿ	57034244.80	14760750.00	ಸ್ಥಿರಾಸ್ತಿ & ಚರಾಸ್ತಿಗಳು	15826742.05
33137935.69	ಇತರೆ ಜವಾಬ್ದಾರಿಗಳು	24550238.52	43393750.36	ಇತರೆ ಆಸ್ತಿಗಳು	40093553.89
62255993.85	ನಿವ್ವಳ ಲಾಭ	45109685.91			
4937157990.80	ಒಟ್ಟು ಮೊತ್ತ	4832933048.02	4937157990.80	ಒಟ್ಟು ಮೊತ್ತ	4832933048.02
6791901.06	ಅನಿಶ್ಚಿತ ಜವಾಬ್ದಾರಿಗಳು ಡಿ.ಇ.ಎ ಫಂಡ್ ಖಾತೆಯ ಮೊತ್ತ	6794962.06			

ದಿನಾಂಕ 31-03-2024 ರಲ್ಲಿದ್ದಂತೆ ಲಾಭ-ನಷ್ಟ ತ:ಖ್ತೆ

ದಿನಾಂಕ 31/03/2023ರಂತೆ	ನಷ್ಟ	ದಿನಾಂಕ 31/03/2024ರಂತೆ	ದಿನಾಂಕ 31/03/2023ರಂತೆ	ಲಾಭ	ದಿನಾಂಕ 31/03/2024ರಂತೆ
259959855.00	ಠೇವಣಿಗಳ ಮೇಲಿನ ಬಡ್ಡಿ	253775717.85	229109181.00	ಸಾಲಗಳು ಮತ್ತು ಇತರೆಗಳ ಮೇಲಿನ ಬಡ್ಡಿ	205547457.08
35067667.00	ಸಿಬ್ಬಂದಿ ವೇತನ ಹಾಗೂ ಭತ್ಯೆಗಳು	36216540.00	178316774.57	ಹೂಡಿಕೆಗಳ ಮೇಲೆ ಬಡ್ಡಿ ಹಾಗೂ ಆದಾಯ	162215529.32
1196520.00	ನಿರ್ದೇಶಕರುಗಳ ಸಭೆಯ ಸಂಭಾವನೆ	1127490.00	228265.86	ಕಮೀಷನ್, ಎಕ್ಸ್ಚೇಂಜ್ ಮತ್ತು ಬ್ರೋಕರೇಜ್	226398.36
2323175.20	ಬಾಡಿಗೆ, ತೆರಿಗೆ, ವಿಮೆ, ವಿದ್ಯುತ್, ಇತರೆ ವೆಚ್ಚಗಳು	3001978.85	3572901.02	ಇತರೆ ಜಮಾಗಳ ಆದಾಯ	5240024.27
1266708.00	ಕಾನೂನು ಸಲಹಾ ವೆಚ್ಚಗಳು	848423.52			
166997.84	ಅಂಚೆ, ತಂತಿ, ದೂರವಾಣಿ ವೆಚ್ಚಗಳು	275527.39			
662400.00	ಲೆಕ್ಕಪರಿಶೋಧನಾ ವೆಚ್ಚಗಳು	495424.00			
363439.48	ಮುದ್ರಣ, ಲೇಖನ ಸಾಮಾಗ್ರಿ ಮತ್ತು ಜಾಹೀರಾತು ವೆಚ್ಚಗಳು	725300.41			
2267221.30	ಸವಕಳ ಮತ್ತು ರಿಪೇರಿ ವೆಚ್ಚಗಳು	3020635.96			
10034817.78	ಇತರೆ ವೆಚ್ಚಗಳು	14892485.14			
12500000.00	ಅವಕಾಶಗಳು ಮತ್ತು ಅನಿಶ್ಚಿತಗಳು				
23162327.00	ಆದಾಯ ತೆರಿಗೆ	13740200.00			
62255993.85	ನಿವ್ವಳ ಲಾಭ	45109685.91			
411227122.45	ಒಟ್ಟು	373229409.03	411227122.45	ಒಟ್ಟು	373229409.03

Disclosure in financial statements – 'Notes to Account's- UCBs

The Reserve Bank of India vide circular DOR.ACC.REC.No.45l 21.04.0181 2021-22 dated 30/08/2021

1. Regulatory Capital (Amount in ₹ crore)

Sr No.	Particulars	31/03/2024	31/03/2023
i)	Paid up share capital (net of deductions, if any)	12.94	12.41
ii)	Other Tier 1 capital	31.45	29.83
iii)	Tier 1 capital (I + ii)	44.39	42.24
iv)	Tier 2 capital	7.48	7.19
v)	Total capital (Tier 1+Tier 2)	51.87	49.43
vi)	Total Risk Weighted Assets (RWAs)	192.42	206.05
vii)	Paid-up share capital as percentage of RWAs	6.72%	6.02%
viii)	Tier 1 Ratio (Tier 1 capital as a percentage of RWAs)	23.06%	20.50%
ix)	Tier 2 Ratio (Tier 2 capital as a percentage of RWAs)	3.89%	3.49%
x)	Capital to Risk Weighted Assets Ratio (CRAR) (Total Capital as a percentage of RWAs)	26.96	23.99

2. Asset liability management: a) Maturity pattern of certain items of assets and liabilities (Amount in ₹ crore)

	1 to 14 Days	15 to 28 Days	29 Days to 3 Months	Over 3 Months and up to 6 Months	Over 6 Months and up to 1 Months	Over 1Year and up to 3 Year	Over 3 Year and up to 5 Year	Over 5 Year	Total
Deposits	29.68	4.72	26.19	74.34	46.35	67.89	19.31	71.25	339.73
Advances	0.21	1.76	3.67	1.53	11.27	21.35	35.15	123.73	198.67
Investments	50.02	3.24	22.00	1.20	2.45	33.54	10.00	76.59	199.04
Borrowings									

Note: The Investments are matched with the deficit in advances over deposits

3. Investments: a) Composition of Investment Portfolio (Amount in ₹ crore)

	Government Securities/State Development Loans	Government Securities/State Development Loans
	As on 31/03/2024	**As on 31/03/2023**
Held to Maturity	62.59	62.59
Available for Sale	72.02	91.41
Less: Provision for NPI & IDR	2.85	2.85
Net	69.17	88.56
Total Investments	131.76	151.15

b) Movement of Provisions for Depreciation and Investment Fluctuation Reserve (Amount in ₹ crore)

Particulars	31/03/2024	31/03/2023
i) Movement of provisions held towards depreciation on investments		
a) Opening balance	2.85	2.75
b) Add: Provisions made during the year	0.00	0.10
c) Less: Write off / write back of excess provisions during the year	0.00	0.00
d) Closing balance	2.85	2.85
ii) Movement of Investment Fluctuation Reserve		
a) Opening balance	4.62	4.27
b) Add: Amount transferred during the year	0.45	0.35
c) Less: Drawdown	0.00	0.00
d) Closing balance	5.07	4.62
iii) Closing balance in IFR as a percentage of closing balance of investments in AFS and HFT/Current category	7.04%	5.05%

c) **Sale and transfers to/from HTM category:** Where the value of sales and transfers of securities to/from HTM category exceeds 5 per cent of the book value of investments held in HTM category at the beginning of the year, banks shall disclose the market value of the investments held in the HTM category. The excess of book value over market value for which provision is not made shall also be disclosed. The 5 per cent threshold referred to above shall exclude:

i) The one-time transfer of securities to/from HTM category with the approval of Board of Directors undertaken by banks at the beginning of the accounting year - NIL

d) **Non-SLR investment portfolio**

i) Non-performing non-SLR investments: ***NIL***

ii) Issuer composition of non-SLR investments

Sr No	Issuer	Amount		Extent of Private Placement		Extent of 'Below Investment Grade' Securities		Extent of 'Unrated' Securities		Extent of 'Unlisted' Securities	
(1)	(2)	(3)		(4)		(5)		(6)		(7)	
		Current year	Previous Year	Current year	Previous Year	Current year	Previous Year	Current year	Previous Year	Current year	Previous Year
a)	PSUs										
b)	FIs										
c)	Banks										
d)	Private Corporate										
e)	Subsidiaries/ Joint Ventures										
f)	Others			00.002	00.002						
g)	Provision held towards depreciation										
	Total *			00.002	00.002						

4. Asset Quality: a) Classification of advances and provisions held

	Standard	Non-Performing				Total
	Total Standard Advances	Sub- standard	Doubtful	Loss	Total Non-Performing Advances	
Gross Standard Advances and NPAs						
Opening Balance	172.66	3.10	1.55	0.55	5.20	177.86
Add: Additions during the year	96.00					
Less: Reductions during the year*	74.76					
Closing balance	193.90	2.82	1.40	0.55	4.77	198.67
*Reductions in Gross NPAs due to:						
Upgradation						
Recoveries (excluding recoveries from upgraded accounts)						
Write-offs						
Provisions (excluding Floating Provisions)						
Opening balance of provisions held	0.82				14.72	15.54
Add: Fresh provisions made during the year					0.46	0.46
Less: Excess provision reversed/ Write-off loans					0.00	0.00
Closing balance of provisions held	0.82				15.18	16.00
Net NPAs						
Opening Balance					NIL	
Add: Fresh additions during the year					NIL	
Less: Reductions during the year					NIL	
Closing Balance					NIL	

Ratios (in per cent)	31/03/2024	31/03/2023
Gross NPA to Gross Advances	2.40%	2.93%
Net NPA to Net Advances	0.00%	0.00%
Provision coverage ratio	318%	283%

b) Sector-wise Advances and Gross NPAs (Amounts in ₹ crore)

Sr. No.	Sector*	31/03/2024			31/03/2023		
		Outstanding Total Advances	Gross NPAs	Percentage of Gross NPAs to Total Advances in that sector	Outstanding Total Advances	Gross NPAs	Percentage of Gross NPAs to Total Advances in that sector
i)	**Priority Sector**						
a)	Agriculture and allied activities	1.24	0.00	0.00%			
b)	Advances to industries sector eligible as priority sector lending	19.97	0.99	4.96%	17.57	0.37	2.11%
c)	Services						
d)	Other Loans Including Personal loans	52.45	1.44	2.74%	101.73	1.71	1.68%
	Subtotal (i)	73.67	2.43		119.30	2.08	
ii)	**Non-priority Sector**						
a)	Agriculture and allied activities						
b)	Industry						
c)	Services						
d)	Other Loans Including Personal loans	125.01	2.34	1.87%	128.56	3.12	2.43%
	Sub-total (ii)	125.01	2.34	1.87%	128.56	3.12	2.43%
	Total (I + ii)	198.68	4.77		177.86	5.20	
PSLC Purchased		**140.00**			**70.00**		

c) Overseas assests, NPA and revenue : No Exposure/ transactions during the current/ previous Years.

d) Particulars of resolutions plan and restructing: ii) Details of accounts subjected to restructing- NIL

e) Divergence in assest clarification and provisioning

Sr.	Particulars	Amount (In crores)
1.	Gross NPAs as on March 31 2023* as reported by the bank	5.20
2.	Gross NPAs as on March 31 2023 as assessed by Reserve Bank of India	7.56
3.	Divergence in Gross NPAS(2-1)	2.36
4.	Net NPAs as on March 31,2023 as reported by the bank	0.00
5.	Net NPAs as on March 31,2023 as assessed by Reserve Bank of India	0.00
6.	Divergence in Net NPAs (5-4)	0.00
7.	Provisions for NPAs as on March 31,2023 reported by the bank	14.72
8.	Provisions for NPAs as on March 31,2023 as assessed by Reserve Bak of India	14.72
9.	Divergence in Provisiong (8-7)	0.00
10.	Reported Profit before Provisions and Contigencies for the year ended March31,2023	9.89
11.	Reported Net Profit after Tax (PAT) for the year ended March 31,2023	6.22
12.	Adjusted (notional) Net Profit after Tax (PAT) for the year ended March 31, 2023 after considering the divergence in provisioning	0.00

March 31,2023 is the close of the reference period in respect of which divergences were assessed

c) Fraud accounts: Banks shall make disclose details on the number and amount of frauds as well as the provisioning thereon as per template given below.

(Amounts in ₹ crore)

	31/03/2024	31/03/2023
Number of frauds reported	0	0
Amount involved in fraud (₹ crore)	0.00	0.00
Amount of provision made for such frauds (₹ crore)	0.00	0.00
Amount of Un-amortised provision debited from 'other reserves' as at the end of the year. (₹ crore)	0.00	0.00

i) Disclosure under Resolution Framework for COVID-19-related Stress Format for disclosures to be made starting March 31, 2024 NA

Exposures

a) **Exposure to real estate sector: Bank has not Provided any Loans to Real estate Sector NIL**

b) **Unsecured advances** (Amounts in ₹ crore)

Particulars	31/03/2024	31/03/2023
Total unsecured advances of the bank	0.43	0.49

5. Concentration of deposits, advances and NPAs: a) Concentration of deposits (Amounts in ₹ crore)

Particulars	31/03/2024	31/03/2023
Total deposits of the twenty largest depositors	26.16	21.54
Percentage of deposits of twenty largest depositors to total deposits of the bank	7.70%	6.29%

b) Concentration of advances* (Amounts in ₹ crore)

Particulars	31/03/2024	31/03/2023
Total advance of the twenty largest borrowers	17.88	16.49
Percentage of deposits of twenty largest borrowers to total advance of the bank	9.00%	9.27%

c) Concentration of NPAs (Amounts in ₹ crore)

Particulars	31/03/2024	31/03/2023
Total Exposure of the twenty largest NPA accounts	4.47	7.51
Percentage of deposits of twenty largest NPA accounts to total Exposure of the bank	2.25%	4.22%

6. Transfers to Depositor Education and Awareness Fund (DEA Fund) (Amounts in ₹ crore)

Sr. No.	Particulars	31/03/2024	31/03/2023
i)	Opening balance of amounts transferred to DEA Fund	0.68	0.69
ii)	Add: Amounts transferred to DEA Fund during the year	0.01	0.01
iii)	Less: Amounts reimbursed by DEA Fund towards claims	0.01	0.02
iv)	Closing balance of amounts transferred to DEA Fund	0.68	0.68

7. Disclosure of complaints

a) **Summary information on complaints received by the bank from customers and from the Offices of Banking Ombudsman (OBOs)**

Sr No		Particulars	31/03/2024	31/03/2023
	Complaints received by the bank from its customers			
1		Number of complaints pending at beginning of the year	-	-
2		Number of complaints received during the year	-	1
3		Number of complaints disposed during the year	-	1
	3.1	Of which, number of complaints rejected by the bank	-	-
4		Number of complaints pending at the end of the year	-	-
	Maintainable complaints received by the bank from OBOs			
5		Number of maintainable complaints received by the bank from OBOs	-	-
	5.1.	Of 5, number of complaints resolved in favour of the bank by BOs	-	-
	5.2	Of 5, number of complaints resolved through conciliation/ mediation/ advisories issued by BOs	-	-
	5.3	Of 5, number of complaints resolved after passing of Awards by BOs against the bank	-	-
6		Number of Awards unimplemented within the stipulated time (other than those appealed)	-	-

Note: Maintainable complaints refer to complaints on the grounds specifically mentioned in BO Scheme 2006 and covered within the ambit of the Scheme.

8. Disclosure of penalties imposed by the Reserve Bank of India: Penalties imposed by the Reserve Bank of India under the provisions of the (i) Banking Regulation Act, 1949 and (ii) Payment and Settlement Systems Act, 2007 shall be disclosed in the 'Notes to Accounts' to the balance sheet in the concerned bank's next Annual Report. Banks shall make appropriate disclosures on the nature of the breach, number of instances of default and the quantum of penalty imposed - ***NIL***

9. Other Disclosures: a) Business ratios

Particular	31/03/2024	31/03/2023
i) Interest Income as a percentage to Working Funds	8.77%	9.47%
ii) Non-interest income as a percentage to Working Funds	0.13%	0.09%
iii) Cost of Deposits	7.47%	7.59%
iv) Net Interest Margin	1.78%	2.99%
v) Operating Profit as a percentage to Working Funds	1.40%	1.98%
vi) Return on Assets	1.22%	1.45%
vii) Business (deposits plus advances) per employee (in ₹ crore)	13.13	18.58
viii) Profit per employee (in ₹ crore)	0.14	0.31

b) Bancassurance business: Bank has not taken any Bancassurance business

c) Disclosures regarding Priority Sector Lending Certificates(PSLCs): The Bank has Purchased PSLCs (General) of Rs.100 Crores and (Weaker Section Sub Target) of Rs.40 Crores at a premium of Rs.43,45,600/- inclusing GST under RCM

d) Provisions and contingencies:

Provision debited to Profit and Loss Account	31/03/2024	31/03/2023
i) Provisions for NPI	0.00	0.00
ii) Provision towards NPA	0.00	1.00
iii) Provision made towards Income tax	1.38	2.32
iv) Provisions for Investment Fluctuation Reserve	0.00	0.00
v) General Provision	0.00	0.00

e) Payment of DICGC Insurance Premium:

Sr No.	Particulars	31/03/2024	31/03/2023
i)	Payment of DICGC Insurance Premium	0.41	0.45
ii)	Arrears in payment of DICGC premium	0.00	0.00

f) Disclosure of facilities granted to directors and their relative:

Sr No.	Director Name and their Relative Details	Loan Balance
i)	Sri. S.M.Muniraju Director, Loan Account No: 1001073021742	9.40 Lakhs

Bank has not provided any fund or non-fund (guarantees, letters of credit, etc.) facilities extended to director's relatives, companies or firms in which they are interested during this Financial Year.

ಸಹಿ/–
(ಅನುಷ ಎಂ.ಎನ್)
ಮುಖ್ಯ ಕಾರ್ಯನಿರ್ವಹಣಾಧಿಕಾರಿ (ಪ್ರಭಾರ)

ಸಹಿ/–
(ಅಶ್ವಿನಿ ಮಂಜುನಾಥ್.ಇ)
ವ್ಯವಸ್ಥಾಪಕರು

ಸಹಿ/–
(ಡಿ.ಜಟ್ಟೆಯಾಂಡಿ)
ಉಪಾಧ್ಯಕ್ಷರು

ಸಹಿ/–
(ಕೆ.ಎಲ್.ತಿಮ್ಮಪ್ಪ)
ಅಧ್ಯಕ್ಷರು

ಸಹಿ/–
(ಡಾ.ಸಿ.ವೆಂಕಟಾಚಲಪತಿ)
ನಿರ್ದೇಶಕರು

ಸಹಿ/–
(ಸಿ.ಆರ್.ಬಿರಾದರ್)
ನಿರ್ದೇಶಕರು

ಸಹಿ/–
(ಎಚ್.ಹುಚ್ಚೇಗೌಡ)
ನಿರ್ದೇಶಕರು

ದೃಡೀಕರಣ ಪತ್ರ

ನಾನು ಮೇಲ್ಕಂಡ "ದಿ ರಾಜಾಜಿನಗರ ಕೋ-ಆಪರೇಟಿವ್ ಬ್ಯಾಂಕ್ ಲಿ.," ಇದರ 2023-24 ನೇ ಸಾಲಿನ ಲೆಕ್ಕಪರಿಶೋಧನೆಯನ್ನು ನಡೆಸಿರುತ್ತೇನೆ. ನನ್ನ ಅತ್ಯುತ್ತಮ ಜ್ಞಾನ ಹಾಗೂ ನಂಬಿಕೆಯಂತೆ ಲೆಕ್ಕಪರಿಶೋಧನೆಗೆ ಅಗತ್ಯವಾದ ಮಾಹಿತಿ ಹಾಗೂ ವಿವರಣೆಯನ್ನು ಪಡೆದಿರುತ್ತೇನೆ ಹಾಗೂ ಅವು ಸತ್ಯವಾದವುಗಳೆಂದು ಕಂಡುಬಂದಿರುತ್ತದೆ. ನನ್ನ ಅಭಿಪ್ರಾಯದಂತೆ ಹಾಗೂ ನನಗೆ ದೊರೆತ ಮಾಹಿತಿ ವಿವರಣೆಯಂತೆ ಹಾಗೂ ಲಗತ್ತಿಸಿರುವ ಲೆಕ್ಕಪರಿಶೋಧನಾ ವರದಿಯಲ್ಲಿ ತಿಳಿಸಿರುವುದಕ್ಕೆ ಒಳಪಟ್ಟು ಬ್ಯಾಂಕಿನ ಲಾಭ-ನಷ್ಟ ಮತ್ತು ಆಸ್ತಿ-ಜವಾಬ್ದಾರಿ ತ:ಖ್ತೆಯು ಬ್ಯಾಂಕಿನ ಆರ್ಥಿಕ ಸ್ಥಿತಿಯ ನಿಜ ಸಮಂಜಸ ಸ್ಥಿತಿಯನ್ನು ದಿನಾಂಕ 31-03-2024 ರಲ್ಲಿದ್ದಂತೆ ತಿಳಿಯಪಡಿಸುತ್ತದೆ.

ಬಿ.ಆರ್.ಆರ್. ಅಂಡ್ ಕಂ.
ಲೆಕ್ಕ ಪರಿಶೋಧಕರು
ಫರ್ಮ್ ನೊಂದಣಿ ಸಂಖ್ಯೆ: 012266S
ಸಹಿ/–
(ವೆಂಕಟಾಪುರ್ ಬಸಪ್ಪ ಮಹದೇವ್)
ಪಾಲುದಾರರು
ಸ.ಸಂ 218296
ಯು.ಡಿ.ಐ.ಎನ್: 24218296BKCNBM3972

ಸ್ಥಳ: ಬೆಂಗಳೂರು
ದಿನಾಂಕ: 20/06/2024

ಮೊದಲ 2 ಕಿ.ಮೀಗೆ ಕನಿಷ್ಠ ದರ ₹40 ನಿಗದಿಪಡಿಸಲು ಮನವಿ • ಸಂಘಟನೆಗಳಲ್ಲಿ ಮೂಡದ ಒಮ್ಮತ

ಆಟೊ ಪ್ರಯಾಣ ದರ ಏರಿಕೆ: ಹಗ್ಗಜಗ್ಗಾಟ

• ಬಾಲಕೃಷ್ಣ ಪಿ.ಎಚ್.



ಬೆಂಗಳೂರು: ಸರ್ಕಾರ ಪೆಟ್ರೋಲ್, ಡೀಸೆಲ್ ಮೇಲಿನ ತೆರಿಗೆ ಏರಿಸಿರುವ ಹಿನ್ನೆಲೆಯಲ್ಲಿ ಕೆಲವು ಆಟೊ ಸಂಘಗಳು ಸರ್ಕಾರಕ್ಕೆ ದರ ಏರಿಕೆ ಮಾಡುವಂತೆ ಮನವಿ ಮಾಡಿದ್ದರೆ, ಇನ್ನೂ ಕೆಲವು ಸಂಘಗಳು ದರ ಏರಿಕೆ ಬೇಡ, ಈಗಿರುವ ದರವೇ ಇರಲಿ' ಎಂದು ಸಲಹೆ ನೀಡಿವೆ.

ಈಗ ಮೊದಲ ಎರಡು ಕಿಲೋಮೀಟರ್‌ಗೆ ಕನಿಷ್ಠ ದರ ₹30 ಹಾಗೂ ಆ ನಂತರದ ಪ್ರತಿ ಕಿಲೋಮೀಟರ್‌ಗೆ ₹15 ದರವಿದೆ. ಕಳೆದ ಮೂರು ವರ್ಷಗಳಿಂದ ಈ ದರ ಚಾಲ್ತಿಯಲ್ಲಿದೆ. ಅದನ್ನು ಮೊದಲ 2 ಕಿಲೋಮೀಟರ್‌ಗೆ ಕನಿಷ್ಠ ದರ ₹40 ಹಾಗೂ ಆ ನಂತರದ ಪ್ರತಿ ಕಿಲೋಮೀಟರ್‌ಗೆ ₹20ಕ್ಕೆ ಏರಿಸಬೇಕು ಎಂದು ಆಟೊ ರಿಕ್ಷಾ ಡ್ರೈವರ್ಸ್ ಯೂನಿಯನ್, ಆದರ್ಶ ಆಟೊ ಯೂನಿಯನ್‌ಗಳು ಪ್ರಾದೇಶಿಕ ಸಾರಿಗೆ ಪ್ರಾಧಿಕಾರಕ್ಕೆ ಮನವಿ ಮಾಡಿಕೊಂಡಿವೆ.

ತೈಲ ಬೆಲೆ ಏರಿಕೆಯಲ್ಲದೇ, ಆಟೊ ಬಿಡಿಭಾಗಗಳ ದರವೂ ಹೆಚ್ಚಾಗಿದೆ. ಜೀವನ ನಿರ್ವಹಣಾ ವೆಚ್ಚ ಅಧಿಕಗೊಂಡಿದೆ. ಆದರೆ, 2021ರ ಡಿಸೆಂಬರ್‌ನಲ್ಲಿ ನಿಗದಿಯಾದ ಆಟೊ ದರವೇ ಈಗಲೂ ಇದೆ. ಆಗ ಆಟೊ ಚಾಸಿಗೆ ₹1.5 ಲಕ್ಷ ಇದ್ದಿದ್ದು, ಈಗ ₹2.70 ಲಕ್ಷ ಆಗಿದೆ. ಒಂದು ಕೊಠಡಿಯ ಮನೆ ಬಾಡಿಗೆ ಆಗ ₹4,500ಕ್ಕೆ ಸಿಗುತ್ತಿತ್ತು. ಈಗ ಎರಡು ಪಟ್ಟು ಹೆಚ್ಚಾಗಿದೆ. ಓಲಾ, ಉಬರ್, ರ್‍ಯಾಪಿಡೊಗಳಲ್ಲಿ ಅಧಿಕ ದರ ಪಡೆಯುತ್ತಿದ್ದಾರೆ. ಜೀವನ ಸಾಗಿಸುವುದು ಕಷ್ಟವಾಗಿರುವುದರಿಂದ ಆಟೊ ಚಾಲಕರು ಕೂಡಾ ಅನಧಿಕೃತವಾಗಿ ಹೆಚ್ಚುವರಿ ದರ ಪಡೆಯುತ್ತಿದ್ದಾರೆ. ಯಾರೂ ನಿಗದಿತ ದರದಲ್ಲಿ ಪ್ರಯಾಣಿಕರನ್ನು ಕರೆದೊಯ್ಯುತ್ತಿಲ್ಲ. ಅನಧಿಕೃತ ದರವನ್ನೇ ಅಧಿಕೃತವನ್ನಾಗಿ ಮಾಡಲಿ ಎಂದು ಆದರ್ಶ ಆಟೊ ಮತ್ತು ಟ್ಯಾಕ್ಸಿ ಯೂನಿಯನ್ ಅಧ್ಯಕ್ಷ ಮಂಜುನಾಥ್ ವಿವರ ನೀಡಿದರು.

ಮುಖ್ಯಾಂಶಗಳು

- ಇಂಧನ ಸಹಿತ ವಿವಿಧ ಬೆಲೆ ಏರಿಕೆ
- ಆಟೊ ದರ ಏರಿಸದೇ ಇದ್ದರೆ ಚಾಲಕರ ಜೀವನಕ್ಕೆ ತೊಂದರೆ
- ಏರಿಸಿದರೆ ಪ್ರಯಾಣಿಕರಿಗೆ ಹೊರೆ

ಆಟೊ ದರ ಏರಿಸಬೇಕು ಎಂದು ಕೆಲವು ಸಂಘಟನೆಗಳು ಮನವಿ ಸಲ್ಲಿಸಿವೆ. ಕೆಲವರು ಬೇಡ ಎಂದು ಹೇಳಿದ್ದಾರೆ. ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು.
ರಾಮಲಿಂಗಾರೆಡ್ಡಿ, ಸಾರಿಗೆ ಸಚಿವ

'ಈಗಿರುವ ದರವೇ ಸಾಕು. ಆದರೆ, ಆ್ಯಪ್ ಆಧಾರಿತ ಬೈಕ್, ಆಟೊ, ಟ್ಯಾಕ್ಸಿಗಳಿಗೆ ಕಡಿವಾಣ ಹಾಕುವ ಮೂಲಕ ನಮಗೆ ದುಡಿಮೆ ಹೆಚ್ಚು ಸಿಗುವಂತೆ ಮಾಡಿ. ದರ ಹೆಚ್ಚಳ ಮಾಡಿದರೆ ಈಗಿರುವ ಗ್ರಾಹಕರು ಕೂಡ ನಮ್ಮ ಕೈ ತಪ್ಪಲಿದ್ದಾರೆ' ಎಂದು ಬೆಂಗಳೂರು ಸಾರಥಿ ಸೇನೆ, ಸ್ನೇಹಜೀವಿ ಆಟೊ ಚಾಲಕರ ಟ್ರೇಡ್ ಯೂನಿಯನ್, ಕರುನಾಡ ಸಾರಥಿ ಸೇನೆ ಟ್ರೇಡ್ ಯೂನಿಯನ್, ಬೆಂಗಳೂರು ಆಟೊ ಸೇನೆ ಸೇರಿದಂತೆ ವಿವಿಧ ಸಂಘಟನೆಗಳ ಪದಾಧಿಕಾರಿಗಳು ಆತಂಕ ವ್ಯಕ್ತ ಪಡಿಸಿದ್ದಾರೆ.

'ಆಟೊ ದರ ಸರಿಯಾಗಿದೆ. ಅದನ್ನು ಹೆಚ್ಚಿಸಿದರೆ ಸಮಸ್ಯೆಯನ್ನು ಎದುರು ಹಾಕಿಕೊಂಡಂತಾಗುತ್ತದೆ. ಈಗಲೇ ರ್‍ಯಾಪಿಡೊ ಬೈಕ್‌ಗಳಲ್ಲಿ ಸಂಚರಿಸುವವರ ಸಂಖ್ಯೆ ಹೆಚ್ಚಿದೆ. ಆಟೊ ದರ ಹೆಚ್ಚಿಸಿದರೆ ನಾವು ಪ್ರಯಾಣಿಕರನ್ನು ಕಳೆದುಕೊಳ್ಳಲಿದ್ದೇವೆ. ಅದರ ಬದಲು ರ್‍ಯಾಪಿಡೊ ಬೈಕ್‌ಗಳನ್ನು ಹೆಸರಿಗಷ್ಟೇ ನಿಷೇಧ ಮಾಡುವ ಬದಲು ಕಾನೂನು ಕ್ರಮಕೈಗೊಂಡು ನಿಯಂತ್ರಿಸಿದರೆ ಆಟೊಗಳನ್ನು ಬಳಸುವ ಗ್ರಾಹಕರ ಪ್ರಮಾಣ ಹೆಚ್ಚಲಿದೆ' ಎಂದು ಬೆಂಗಳೂರು ಸಾರಥಿ ಸೇನೆ ಅಧ್ಯಕ್ಷ ಬಿ. ರಾಮೇಗೌಡ ತಿಳಿಸಿದರು.

'ಬೆಲೆ ಏರಿಕೆಯಿಂದ ಜನರು ಈಗಾಗಲೇ ಸಂಕಷ್ಟದಲ್ಲಿದ್ದಾರೆ. ಆಟೊ ದರ ಏರಿಸಿದರೆ ಮತ್ತಷ್ಟು ಸಂಕಷ್ಟಕ್ಕೆ ಸಿಲುಕಲಿದ್ದಾರೆ. ಮಾನವೀಯ ದೃಷ್ಟಿಯಿಂದ ಆಟೊ ದರ ಹೆಚ್ಚಿಸದೇ ಇರುವುದು ಒಳ್ಳೆಯದು. ಆ್ಯಪ್ ಆಧಾರಿತ ಟ್ಯಾಕ್ಸಿ, ಆಟೊ, ಬೈಕ್‌ಗಳಿಗೆ ಕಡಿವಾಣ ಹಾಕಿದರೆ ಸಾಕು. ಸಾರಿಗೆ ಸಚಿವರಿಗೆ ಇದನ್ನೇ ನಾವು ತಿಳಿಸಿದ್ದೇವೆ' ಎಂದು ಸ್ನೇಹಜೀವಿ ಚಾಲಕರ ಟ್ರೇಡ್ ಯೂನಿಯನ್ ಅಧ್ಯಕ್ಷ ಸಂತೋಷ್ ಕುಮಾರ್ ವಿವರಿಸಿದರು.

'ನಿಮ್ಮ ಅರ್ಥಶಾಸ್ತ್ರದ ಪರಿಣತಿಯೇ?'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹಾಲಿನ ಪ್ಯಾಕೆಟ್‌ಗೆ 50 ಎಂಎಲ್ ಹೆಚ್ಚು ಹಾಲು ಹಾಕಿ, ಅದರ ಹೊರೆಯನ್ನು ಗ್ರಾಹಕರಿಗೆ ಹೊರಿಸುವುದು ನಿಮ್ಮ ಅರ್ಥ ಶಾಸ್ತ್ರದ ಪರಿಣತಿಯೇ' ಎಂದು ವಿಧಾನಸಭೆ ವಿರೋಧಪಕ್ಷ ನಾಯಕ ಆರ್.ಅಶೋಕ ಅವರು ಮುಖ್ಯಮಂತ್ರಿಯವರನ್ನು ಪ್ರಶ್ನಿಸಿದ್ದಾರೆ.

ಹಾಲಿನ ಉತ್ಪಾದನೆ ಹೆಚ್ಚಾಗಿದ್ದರೆ ನಂದಿನಿ ಬ್ರ್ಯಾಂಡ್‌ನ ಉತ್ಪನ್ನಗಳ ಮಾರುಕಟ್ಟೆ ವಿಸ್ತರಿಸುವ ಕೆಲಸ ಮಾಡಬೇಕಿತ್ತು ಎಂದು ಅವರು ಹೇಳಿದ್ದಾರೆ.

ಹಾಲಿನ ಪುಡಿ, ಐಸ್ ಕ್ರೀಂ, ಬೆಣ್ಣೆ, ತುಪ್ಪ, ಚೀಸ್, ಪನೀರ್, ಸಿಹಿತಿಂಡಿಗಳು ಮುಂತಾದ ಮೌಲ್ಯವರ್ಧಿತ ಉತ್ಪನ್ನಗಳ ತಯಾರಿಕೆ ಹೆಚ್ಚಿಸಿ ಅದಕ್ಕೆ ಹೊರ ರಾಜ್ಯಗಳಲ್ಲಿ ಮಾರುಕಟ್ಟೆ ಕಲ್ಪಿಸುವ ವ್ಯವಸ್ಥೆ ಮಾಡಬೇಕು. ಹೊರ ದೇಶಗಳಿಗೆ ರಫ್ತು ಮಾಡುವ ರೀತಿ ಅಭಿವೃದ್ಧಿ ಮಾಡಿ. ಇದರಿಂದ ಹಾಲಿಗೆ ಮಾರುಕಟ್ಟೆಯೂ ಸಿಗುತ್ತದೆ. ಮೌಲ್ಯವರ್ಧಿತ ಉತ್ಪನ್ನಗಳಿಂದ ರೈತರಿಗೆ, ಡೇರಿಗಳಿಗೆ ಹೆಚ್ಚಿನ ಲಾಭವೂ ಸಿಗುತ್ತದೆ ಎಂದರು.

ಹೆಚ್ಚು ಹಾಲುಕೊಡುವಂತೆ ಕೇಳಿದ್ಯಾರು: ಹಾಲಿನ ಪ್ಯಾಕೆಟ್‌ನಲ್ಲಿ 50 ಎಂಎಲ್ ಹೆಚ್ಚು ಹಾಲು ಹಾಕಿ ಕೊಡಿ ಎಂದು ನಿಮಗೆ ಯಾರಾದರೂ ಮನವಿ ಪತ್ರ ಕೊಟ್ಟಿದ್ದರೆ ಎಂದು ಬಿಜೆಪಿ ವಿಧಾನಪರಿಷತ್ ಸದಸ್ಯ ಎನ್.ರವಿಕುಮಾರ್ ಪ್ರಶ್ನಿಸಿದ್ದಾರೆ.

ಹಾಲಿನ ಬೆಲೆ ಏರಿಕೆ ಬಗ್ಗೆ ಆಕ್ರೋಶ ವ್ಯಕ್ತವಾಗುತ್ತಿರುವ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಯವರು ಸಬೂಬು ನೀಡಲಾರಂಭಿಸಿದ್ದಾರೆ ಎಂದು ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸರ್ಕಾರದ ಈ ನಿರ್ಧಾರ ಮನೆ ಮುರುಕತನದ್ದು. ಜನಕ್ಕೆ ಬೇಡವಾದ ಜನವಿರೋಧಿ ನಿರ್ಧಾರವಿದು. ರಾಜ್ಯದಲ್ಲಿ 20 ಲಕ್ಷ ಮೇವಿನ ಅವಶ್ಯವಿದೆ. ಎಂಟು ಲಕ್ಷ ಟನ್ ಮೇವನ್ನು ಮಾತ್ರ ಕೊಡುತ್ತಿದ್ದಾರೆ. ಈ ಸರ್ಕಾರಕ್ಕೆ ಮೇವು ಕೊಡುವ ಯೋಗ್ಯತೆಯೂ ಇಲ್ಲ ಎಂದು ರವಿಕುಮಾರ್ ಟೀಕಿಸಿದರು.

ಹಾಲು ಹೆಚ್ಚು ಕೊಡುವ ನೆಪದಲ್ಲಿ ಹೆಚ್ಚು ಹಣ ಕೇಳುವುದು ಜನದ್ರೋಹಿ ನಿರ್ಧಾರ. ಈ ನಿರ್ಧಾರವನ್ನು ಕೂಡಲೇ ವಾಪಸ್ ಪಡೆಯಬೇಕು. ಹಾಲಿನ ದರ ಏರಿಕೆ ಪರಿಣಾಮ ಚಹಾ, ಕಾಫಿ, ಹೋಟೆಲ್ ತಿಂಡಿ ದರ ಹೆಚ್ಚಳದ ವಿಷಯ ಕೇಳಿ ಬರುತ್ತಿದೆ. ಮದ್ಯದ ಬೆಲೆ ಈಗಾಗಲೇ ಹೆಚ್ಚಿಸಿದ್ದೀರಿ. ಬೊಕ್ಕಸ ತುಂಬಿಸುವ ಕುಕೃತ್ಯವಿದು ರವಿಕುಮಾರ್ ಆರೋಪಿಸಿದರು.



ಬೆಂಗಳೂರಿನಲ್ಲಿ ಏಪ್ರಿಲ್ 28ರಂದು ನಡೆದ ಟಿಸಿಎಸ್ ವಿಶ್ವ 10ಕೆ ಓಟದ ಪ್ರಕಟಿತ ಛಾಯಾಚಿತ್ರಗಳ ಸ್ಪರ್ಧೆಯಲ್ಲಿ 'ಪ್ರಜಾವಾಣಿ'ಯ ಛಾಯಾಗ್ರಾಹಕ ರಂಜು ಪಿ. ತೆಗೆದ ಚಿತ್ರಕ್ಕೆ ಪ್ರಥಮ ಬಹುಮಾನ ಲಭಿಸಿದೆ. ಬುಧವಾರ ನಡೆದ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪತ್ರ ಮತ್ತು 25 ಸಾವಿರ ನಗದು ಬಹುಮಾನವನ್ನು ಟಿಸಿಎಸ್‌ನ ಪ್ರಾದೇಶಿಕ ಮುಖ್ಯಸ್ಥ ಸುನಿಲ್ ದೇಶಪಾಂಡೆ ವಿತರಿಸಿದರು. ಪ್ರೋಕ್ಯಾಮ್ ಇಂಟರ್ ನ್ಯಾಷನಲ್‌ನ ಜಂಟಿ ವ್ಯವಸ್ಥಾಪಕ ನಿರ್ದೇಶಕ ವಿವೇಕ್ ಸಿಂಗ್ ಉಪಸ್ಥಿತರಿದ್ದರು

'ಸಲಾನ್' ಪ್ರದರ್ಶನ ಇದೇ 29ರಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯೂತ್ ಫೋಟೊಗ್ರಫಿಕ್ ಸೊಸೈಟಿ(ವೈಪಿಎಸ್) ಈಚೆಗೆ ನಡೆಸಿದ್ದ 42ನೇ ವಾರ್ಷಿಕ ಅಖಿಲ ಭಾರತ ಕಲಾತ್ಮಕ ಛಾಯಾಚಿತ್ರ ಸ್ಪರ್ಧೆ–2024ರ (ಸಲಾನ್) ವಿಜೇತ ಛಾಯಾಚಿತ್ರಗಳ ಪ್ರದರ್ಶನವನ್ನು ಕುಮಾರ ಕೃಪಾ ರಸ್ತೆಯ ಚಿತ್ರಕಲಾ ಪರಿಷತ್‌ನಲ್ಲಿ ಜೂನ್ 29ರಿಂದ 30ರವರೆಗೆ ನಡೆಯಲಿದೆ.

ಪ್ರದರ್ಶನ 2 ದಿನ ಇರುತ್ತದೆ. ಪ್ರತಿದಿನ ಬೆಳಿಗ್ಗೆ 10.30ರಿಂದ ಸಂಜೆ 6ರವರೆಗೆ ಸಾರ್ವಜನಿಕರು ವೀಕ್ಷಿಸಬಹುದು. ಈ ಸ್ಪರ್ಧೆಯಲ್ಲಿ ದೇಶದ ವಿವಿಧ ಭಾಗಗಳ 206 ಛಾಯಾಗ್ರಾಹಕರು ಭಾಗವಹಿಸಿದ್ದರು. 2,753 ಚಿತ್ರಗಳನ್ನು ಪರಿಶೀಲನೆ ಮಾಡಿದ ಅನುಭವಿ ನಿರ್ಣಾಯಕ ಮಂಡಳಿ 563 ಚಿತ್ರಗಳನ್ನು ಆಯ್ಕೆ ಮಾಡಿದ್ದು, ಅವುಗಳಲ್ಲಿ 60 ಚಿತ್ರಗಳನ್ನು ವಿವಿಧ ಪ್ರಶಸ್ತಿ, ನಗದು ಬಹುಮಾನಗಳಿಗೆ ಪರಿಗಣಿಸಿದೆ.

ಜೂನ್ 30ರಂದು ವಿಜೇತರಿಗೆ ಪ್ರಶಸ್ತಿ, ನಗದು ಪುರಸ್ಕಾರ ನೀಡಲಾಗುವುದು. ಕಲಾವಿದೆ ಸುಧಾ ಬೆಳವಾಡಿ, ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಆಯುಕ್ತ ಎನ್. ಶಶಿ ಕುಮಾರ್ ಅವರು ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಜಲಮಂಡಳಿ ಅಧ್ಯಕ್ಷರ ಫೋನ್-ಇನ್ ನಾಳೆ

ಬೆಂಗಳೂರು: ಜಲಮಂಡಳಿಯ ಅಧ್ಯಕ್ಷ ವಿ.ರಾಮ್‌ಪ್ರಸಾತ್ ಮನೋಹರ್ ಅವರು ಜೂನ್ 28ರಂದು ಬೆಳಿಗ್ಗೆ 9.30ರಿಂದ 10.30ರವರೆಗೆ ನೇರ ಫೋನ್-ಇನ್ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ.

ವಲಯ / ಪ್ರದೇಶಗಳಲ್ಲಿನ ಕುಡಿಯುವ ನೀರಿನ ಸಮಸ್ಯೆ ಮತ್ತು ಒಳಚರಂಡಿ ಕೊಳವೆ/ ಇಳಿ ಗುಂಡಿಯಿಂದ ತ್ಯಾಜ್ಯ ನೀರು ಹೊರಬರುತ್ತಿರುವ ಬಗ್ಗೆ, ಜಲಮಾಪನ ಹಾಗೂ ನೀರಿನ ಬಿಲ್‌ನ ಸಮಸ್ಯೆಯ ಬಗ್ಗೆ ನೇರವಾಗಿ ಮಾತನಾಡಿ ಬಗೆಹರಿಸಿಕೊಳ್ಳಬಹುದು ಎಂದು ಪ್ರಕಟಣೆ ತಿಳಿಸಿದೆ. ದೂರವಾಣಿ 080-22945119 ಮತ್ತು 080-22229639.

ಕನ್ನಡ ಭಾಷಾ ಬೋಧನೆಗೆ 4 ಗಂಟೆ: ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿನ ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳಲ್ಲಿ ಕನ್ನಡ ಭಾಷೆ ಬೋಧನೆಯ ಅವಧಿಯನ್ನು ನಾಲ್ಕು ಗಂಟೆಗೆ ನಿಗದಿಗೊಳಿಸಿ ಆದೇಶ ಹೊರಡಿಸಬೇಕು ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಇಲಾಖೆಗೆ ಮನವಿ ಮಾಡಿದೆ.

ಈ ಬಗ್ಗೆ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅವರು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಅವರನ್ನು ಬುಧವಾರ ಭೇಟಿ ಮಾಡಿ, ಚರ್ಚಿಸಿದರು.

ಪದವಿ ಕಾರ್ಯಕ್ರಮಗಳ ಅವಧಿ ಮತ್ತು ಪಠ್ಯಕ್ರಮವನ್ನು ಪರಿಷ್ಕರಿಸಿ ಇಲಾಖೆ ಹೊರಡಿಸಿರುವ ಆದೇಶದಲ್ಲಿ ಕನ್ನಡ ಭಾಷಾ ಕಲಿಕೆಗೆ ಪ್ರತಿ ಸೆಮಿಸ್ಟರ್‌ಗೆ ಮೂರು ಗುಣಾಂಕಗಳನ್ನು (ಕ್ರೆಡಿಟ್) ನೀಡಲಾಗಿದೆ. ಆದರೆ, ಕನ್ನಡ ಭಾಷಾ ಪಠ್ಯ ಬೋಧನಾ ಅವಧಿಯ ಸ್ಪಷ್ಟತೆ ನೀಡಿಲ್ಲ. ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಕನ್ನಡಕ್ಕೆ ಪ್ರತಿ ಸೆಮಿಸ್ಟರ್‌ಗೆ ನಾಲ್ಕು ಗಂಟೆಗಳ ಬೋಧನಾ ಅವಧಿಯನ್ನು ನಿಗದಿ ಮಾಡಲಾಗಿದೆ. ಆದರೆ, ರಾಜ್ಯ ಶಿಕ್ಷಣ ನೀತಿಯಡಿ ಕೆಲವು ವಿಶ್ವವಿದ್ಯಾಲಯಗಳು ಬೋಧನಾ ಅವಧಿಯನ್ನು ಮೂರು ಗಂಟೆಗೆ ಇಳಿಸುವ ಮೂಲಕ ಕನ್ನಡಕ್ಕೆ ಅನ್ಯಾಯ ಮಾಡುತ್ತಿವೆ ಎಂದು ಬಿಳಿಮಲೆ ತಿಳಿಸಿದರು.

ರಾಜ್ಯದೊಳಗಿರುವ ಕೆಲವು ವಿಶ್ವವಿದ್ಯಾಲಯಗಳು ಮೊದಲ ಎರಡು ಸೆಮಿಸ್ಟರ್‌ಗಳಿಗೆ, ಅಂದರೆ ಒಂದು ವರ್ಷಕ್ಕೆ ಪಠ್ಯಕ್ರಮ ವಿನ್ಯಾಸಗೊಳಿಸಿ ಬೋಧನಾ ಅವಧಿ ನಿಗದಿಪಡಿಸಿವೆ. ಈ ಪ್ರಕಾರ ಕನ್ನಡ ಭಾಷಾ ಬೋಧನೆಯನ್ನು ಕೇವಲ ಮೂರು ಗಂಟೆಗಳನ್ನು ನಿಗದಿ ಮಾಡಿರುವುದು ಸರಿಯಾದ ಕ್ರಮವಲ್ಲ. ಇದು ನಾಲ್ಕು ಗಂಟೆಗಳ ಬೋಧನಾ ತರಗತಿಗಳಾಗಿ ಬದಲಾಗಬೇಕು ಎಂದು ಮನವಿ ಮಾಡಿದರು.

ಪಂಪ, ಬಸವ, ಕುವೆಂಪು ಮೊದಲಾದ ಲೇಖಕರು, ಕನ್ನಡ ನಾಡಿನ ಸಂಸ್ಕೃತಿ, ಭಾಷಾ ಸಂಸ್ಕೃತಿಯನ್ನು ವಿವರವಾಗಿ ಪರಿಚಯಿಸಲು ನಾಲ್ಕು ಗಂಟೆಗಳ ಬೋಧನೆ ಅಗತ್ಯ. ಆದ್ದರಿಂದ ನಾಲ್ಕು ಗಂಟೆಗಳ ಬೋಧನಾ ಅವಧಿಯನ್ನು ನಿಗದಿಗೊಳಿಸುವ ಸ್ಪಷ್ಟ ಆದೇಶವನ್ನು ಹೊರಡಿಸಬೇಕು ಎಂದು ಹೇಳಿದರು.

ಪ್ರಾಧಿಕಾರದ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿದ ಎಂ.ಸಿ.ಸುಧಾಕರ್, 'ಮೂರು ಗುಣಾಂಕಗಳಿಗೆ (ಕ್ರೆಡಿಟ್) ಮೂರು ಗಂಟೆಯ ತರಗತಿ ಮತ್ತು ಒಂದು ಗಂಟೆಯ ಮನೆ ಪಾಠ (ಟ್ಯೂಷನ್) ಸೇರಿ ಒಟ್ಟು ನಾಲ್ಕು ಗಂಟೆಗಳ ಅವಧಿಯನ್ನು ನಿಗದಿಪಡಿಸಿ ಕೂಡಲೇ ಆದೇಶ ಹೊರಡಿಸಲಾಗುವುದು' ಎಂದು ಭರವಸೆ ನೀಡಿದರು.



ಪುರುಷೋತ್ತಮ ಬಿಳಿಮಲೆ ಅವರು ಸಚಿವ ಎಂ.ಸಿ.ಸುಧಾಕರ್ ಅವರ ಜತೆಗೆ ಚರ್ಚಿಸಿದರು. ಪ್ರಾಧಿಕಾರದ ಕಾರ್ಯದರ್ಶಿ ಸಂತೋಷ ಹಾನಗಲ್ ಉಪಸ್ಥಿತರಿದ್ದರು

ಕನ್ನಡಿಗರಿಗೆ ಉದ್ಯೋಗ: ಕರವೇ ಧರಣಿ ಸತ್ಯಾಗ್ರಹ 1ಕ್ಕೆ

ಬೆಂಗಳೂರು: ಕರ್ನಾಟಕ ರಕ್ಷಣಾ ವೇದಿಕೆಯು (ಕರವೇ) 'ಕರ್ನಾಟಕದ ನೆಲದಲ್ಲಿ ಕನ್ನಡಿಗರಿಗೇ ಉದ್ಯೋಗ' ಎಂಬ ಘೋಷಣೆಯೊಂದಿಗೆ ಜುಲೈ 1ರಂದು ರಾಜ್ಯದಾದ್ಯಂತ ಬೃಹತ್ ಧರಣಿ ಸತ್ಯಾಗ್ರಹ ಹಮ್ಮಿಕೊಂಡಿದೆ.

ಕರ್ನಾಟಕದ ಎಲ್ಲ ಬಗೆಯ ಉದ್ಯೋಗದಲ್ಲಿ ಕನ್ನಡಿಗರಿಗೇ ಸಿಂಹಪಾಲು ಇರಬೇಕೆಂಬುದು ನ್ಯಾಯಯುತವಾದ ಬೇಡಿಕೆ. ಇದಕ್ಕಾಗಿಯೇ ಸರೋಜಿನಿ ಮಹಿಷಿ ವರದಿಯನ್ನು ಜಾರಿಗೊಳಿಸಲಾಗಿತ್ತು. ಆದರೆ, ಖಾಸಗಿ ವಲಯ ಬೆಳೆದಿದ್ದರಿಂದ ಈ ವರದಿ ಸಮರ್ಪಕವಾಗಿ ಜಾರಿಯಾಗಿಲ್ಲ. ಇದರಿಂದಾಗಿ ಕನ್ನಡದ ಯುವ ಸಮುದಾಯ ಉದ್ಯೋಗವಿಲ್ಲದೆ ಬಳಲುವಂತಾಗಿದೆ. ಆದ್ದರಿಂದ ರಾಜ್ಯದ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ಕರವೇ ಬೃಹತ್ ಧರಣಿ ಸತ್ಯಾಗ್ರಹ ಹಮ್ಮಿಕೊಂಡು, ಕನ್ನಡಿಗರಿಗೆ ಉದ್ಯೋಗದಲ್ಲಿ ಮೀಸಲಾತಿ ಒದಗಿಸಲು ಸಮಗ್ರ ಕಾಯ್ದೆ ರೂಪಿಸುವಂತೆ ಆಗ್ರಹಿಸಲಿದೆ ಎಂದು ವೇದಿಕೆಯ ಅಧ್ಯಕ್ಷ ಟಿ.ಎ. ನಾರಾಯಣಗೌಡ ತಿಳಿಸಿದ್ದಾರೆ.

ಕೈಗಾರಿಕಾ ಉದ್ಯೋಗ ಸ್ಥಾಯಿ ಆದೇಶ ಕಾಯ್ದೆ 1946 ಅನ್ವಯ ರಾಜ್ಯ ಸರ್ಕಾರ ಬಲಿಷ್ಠವಾದ ಕಾನೂನು ರೂಪಿಸಿ, ಕನ್ನಡಿಗರಿಗೆ ಉದ್ಯೋಗದಲ್ಲಿ ಮೀಸಲಾತಿ ಒದಗಿಸಬೇಕು. ಎಲ್ಲ ಖಾಸಗಿ ಸಂಸ್ಥೆಗಳಲ್ಲಿ ಸಿ ಮತ್ತು ಡಿ ದರ್ಜೆಯ ಶೇ 100 ರಷ್ಟು ಹುದ್ದೆಗಳನ್ನು, ಇತರ ಹುದ್ದೆಗಳಲ್ಲಿ ಶೇ 80 ರಷ್ಟು ಹುದ್ದೆಗಳನ್ನು ಕನ್ನಡಿಗರಿಗೆ ಮೀಸಲಿಡಬೇಕು. 15 ವರ್ಷಗಳ ಕಾಲ ಕರ್ನಾಟಕದಲ್ಲಿ ನೆಲೆಸಿದವರನ್ನು ಕನ್ನಡಿಗರೆಂದು ಪರಿಗಣಿಸುವ ನಿಯಮವಿದೆ. ಇವರಿಗೆ ಕಡ್ಡಾಯವಾಗಿ ಕನ್ನಡ ಬರವಣಿಗೆಯ ಪರೀಕ್ಷೆಯನ್ನು ನೀಡಿ, ಅದರಲ್ಲಿ ಉತ್ತೀರ್ಣರಾದವರನ್ನು ಮಾತ್ರ ಕನ್ನಡಿಗರೆಂದು ಪರಿಗಣಿಸಬೇಕು ಎಂಬುದು ಸೇರಿ ವಿವಿಧ 10 ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಗಮ, ಮಂಡಳಿ ಪ್ರಾತಿನಿಧ್ಯಕ್ಕೆ ಮುಸ್ಲಿಂ ಶಾಸಕರ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಕಿ ಉಳಿದಿರುವ ನಿಗಮ–ಮಂಡಳಿಗಳ ಅಧ್ಯಕ್ಷರ ನೇಮಕಾತಿಯಲ್ಲಿ ಅಲ್ಪ ಸಂಖ್ಯಾತ ಸಮುದಾಯದ ಶಾಸಕರು, ಮುಖಂಡರಿಗೆ ಅವಕಾಶ ನೀಡಬೇಕು ಎಂದು ಮುಸ್ಲಿಂ ಸಮುದಾಯದ ಶಾಸಕರ ನಿಯೋಗ ಮುಖ್ಯಮಂತ್ರಿಗೆ ಮನವಿ ಮಾಡಿತು.

ವಸತಿ ಸಚಿವ ಬಿ.ಜೆಡ್. ಜಮೀರ್ ಅಹಮದ್ ಖಾನ್ ನೇತೃತ್ವದಲ್ಲಿ ಬುಧವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದ ಶಾಸಕರು, ನಿಗಮ–ಮಂಡಳಿ ಅಧ್ಯಕ್ಷ ಸ್ಥಾನದ ಜೊತೆಗೆ, ಸದಸ್ಯರು, ನಿರ್ದೇಶಕರ ನೇಮಕದಲ್ಲೂ ಹೆಚ್ಚಿನ ಅವಕಾಶ ನೀಡಬೇಕು. ಈಗಾಗಲೇ ನೇಮಕವಾಗಿರುವ ಕೆಲ ನಿಗಮಗಳು ತೃಪ್ತಿಕರವಾಗಿಲ್ಲ. ಅಲ್ಲಿ ಬದಲಾವಣೆ ಮಾಡಬೇಕು ಎಂದರು.

ಮುಸ್ಲಿಂ ಹೆಣ್ಣು ಮಕ್ಕಳ ಶಿಕ್ಷಣ ಕುರಿತು ಪ್ರಮುಖವಾಗಿ ಚರ್ಚಿಸಿದ ನಿಯೋಗ, ಗ್ರಾಮೀಣ ಪ್ರದೇಶ ಮುಸ್ಲಿಂ ಬಾಲಕಿಯರು ಎಸ್ಎಸ್ಎಲ್‌ಸಿಗೇ ಶಾಲೆ ತೊರೆಯುತ್ತಿದ್ದಾರೆ. ಪ್ರೌಢಶಾಲೆಗಳಲ್ಲೇ ಪಿಯು ಕಾಲೇಜುಗಳನ್ನು ಆರಂಭಿಸಬೇಕು. ಕಾಲೇಜು ಶಿಕ್ಷಣ ಪಡೆಯಲು ಅವಕಾಶ ಮಾಡಿಕೊಡಬೇಕು ಎಂದು ಕೋರಿದರು.

ಸರ್ಕಾರದ ಆದೇಶ ರದ್ದುಪಡಿಸುವಂತೆ ಕೋರಿದ್ದ ಅರ್ಜಿ

ಜಮೀರ್ ಅಹ್ಮದ್‌ಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚಾಮರಾಜಪೇಟೆಯ ಛಲವಾದಿ ಪಾಳ್ಯದಲ್ಲಿರುವ ಪಶು ಚಿಕಿತ್ಸಾಲಯದ ಎರಡು ಎಕರೆ ಜಾಗವನ್ನು ಶೈಕ್ಷಣಿಕ ಉದ್ದೇಶಕ್ಕಾಗಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ ಹಸ್ತಾಂತರಿಸಿದ ಸರ್ಕಾರದ ಆದೇಶ ರದ್ದುಪಡಿಸಬೇಕು' ಎಂದು ಕೋರಿರುವ ಅರ್ಜಿಗೆ ಸಂಬಂಧಿಸಿದಂತೆ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಇಲಾಖೆ ಸಚಿವ ಬಿ.ಝಡ್.ಜಮೀರ್ ಅಹ್ಮದ್ ಖಾನ್ ಅವರಿಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಸರ್ಕಾರದ ಆದೇಶ ರದ್ದು ಪಡಿಸುವಂತೆ ಕೋರಿ ಹೈಕೋರ್ಟ್ ವಕೀಲ ಗಿರೀಶ್ ಭಾರದ್ವಾಜ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ವಕೀಲ ವೆಂಕಟೇಶ ಪಿ.ದಳವಾಯಿ ಅವರ ವಾದ ಆಲಿಸಿದ ನ್ಯಾಯಪೀಠ ಪ್ರತಿವಾದಿಗಳಾದ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ಪಶುಸಂಗೋಪನಾ ಇಲಾಖೆ ಕಾರ್ಯದರ್ಶಿ ಹಾಗೂ ಸಚಿವ ಜಮೀರ್ ಅಹ್ಮದ್ ಖಾನ್ ಅವರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು.



ಇದೇ ವಿಚಾರಕ್ಕೆ ಸಂಬಂಧಿಸಿದಂತೆ 'ಚಾಮರಾಜಪೇಟೆ ನಾಗರಿಕರ ಒಕ್ಕೂಟ' ಸಲ್ಲಿಸಿರುವ ಮತ್ತೊಂದು ಪ್ರತ್ಯೇಕ ಅರ್ಜಿಯನ್ನೂ ಇದೇ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ಜೊತೆ ವಿಚಾರಣೆಗೆ ಪರಿಗಣಿಸಬೇಕು ಎಂಬ ವಕೀಲ ವೆಂಕಟೇಶ ದಳವಾಯಿ ಅವರ ಮನವಿಯನ್ನು ಮಾನ್ಯ ಮಾಡಿದ ನ್ಯಾಯಪೀಠ ವಿಚಾರಣೆಯನ್ನು ಜುಲೈ 23ಕ್ಕೆ ಮುಂದೂಡಿತು.

ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯ ಐದು ತಾಲ್ಲೂಕುಗಳಲ್ಲಿನ 28 ಪಶುವೈದ್ಯ ಕೇಂದ್ರಗಳನ್ನು ಸ್ಥಳಾಂತರ ಮಾಡುವ ಸರ್ಕಾರದ ಕ್ರಮವನ್ನು ಪ್ರಶ್ನಿಸಿ ಯಲಹಂಕ ಶಾಸಕ ಎಸ್.ಆರ್.ವಿಶ್ವನಾಥ್ ಕೂಡಾ ಪ್ರತ್ಯೇಕ ಸಾರ್ವಜನಿಕ ಹಿತಾಸಕ್ತಿ ಅರ್ಜಿಯೊಂದನ್ನು ಸಲ್ಲಿಸಿದ್ದಾರೆ. ಇದೇ ವಿಚಾರಕ್ಕೆ ಸಂಬಂಧಿಸಿದಂತೆ 'ಅನಿಮಲ್ ರೈಟ್ಸ್ ಫಂಡ್ ಸಂಸ್ಥೆ'ಯೂ ಅರ್ಜಿ ದಾಖಲಿಸಿದೆ. ಈ ಎಲ್ಲಾ ಅರ್ಜಿಗಳನ್ನು ನ್ಯಾಯಪೀಠ ಒಟ್ಟಾಗಿಸಿ ವಿಚಾರಣೆ ನಡೆಸಲಿದೆ.

ಮನವಿ ಏನು?: 'ಮೈಸೂರು ಒಡೆಯರ್ ಕಾಲದಲ್ಲಿ 200 ವರ್ಷಗಳ ಹಿಂದೆ ಚಾಮರಾಜಪೇಟೆಯನ್ನು ಅಭಿವೃದ್ಧಿಪಡಿಸಲಾಯಿತು. ಆಗ 1860ರಲ್ಲಿ ಎಂ.ಮುತ್ತೋಜಿ ರಾವ್ ಶಿಂಧೆ ಎಂಬುವರು ಪಶು ವೈದ್ಯಕೀಯ ಮತ್ತು ಚಿಕಿತ್ಸಾಲಯ ನಿರ್ಮಾಣಕ್ಕಾಗಿ ಈ ಜಾಗವನ್ನುದಾನವಾಗಿ ನೀಡಿದ್ದರು. ಇಂತಹ ಜಾಗವು ಅನೂಚಾನವಾಗಿ ಪಶು ಸಂಗೋಪನೆ ಇಲಾಖೆಯ ಸುಪರ್ದಿಯಲ್ಲಿತ್ತು. ಈಗ ಈ ಜಾಗವನ್ನು ಚಾಮರಾಜಪೇಟೆಯ ಶಾಸಕರೂ ಆಗಿರುವ ಸಚಿವ ಜಮೀರ್ ಅಹ್ಮದ್ ಖಾನ್ ತಮ್ಮ ಪ್ರಭಾವ ಬಳಸಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ ಹಸ್ತಾಂತರ ಆಗುವಂತೆ ಮಾಡಿದ್ದಾರೆ. ಈ ಜಾಗದಲ್ಲಿ ಮೌಲಾನಾ ಆಜಾದ್ ಮಾದರಿ ಶಾಲೆ, ಮೊರಾರ್ಜಿ ದೇಸಾಯಿ ವಸತಿ ಶಾಲೆ, ಹಾಸ್ಟೆಲ್ ನಿರ್ಮಾಣ ಮಾಡುವ ಉದ್ದೇಶ ಹೊಂದಲಾಗಿದೆ. ಇಲ್ಲಿನ ಆಸ್ಪತ್ರೆ ಹಾಗೂ ಸಿಬ್ಬಂದಿಯನ್ನು ಜಯನಗರದ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ. ಸರ್ಕಾರದ ಈ ಆದೇಶ ರದ್ದುಪಡಿಸಬೇಕು' ಎಂಬುದು ಅರ್ಜಿದಾರರ ಮನವಿ.

ಬಸವನಗೌಡ ಬಾದರ್ಲಿ ನಾಮಪತ್ರ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆಯಿಂದ ವಿಧಾನಪರಿಷತ್ತಿನ ಒಂದು ಸ್ಥಾನಕ್ಕೆ ನಡೆಯಲಿರುವ ಉಪ ಚುನಾವಣೆಗೆ ಕಾಂಗ್ರೆಸ್ ಅಭ್ಯರ್ಥಿಯಾಗಿ ಬಸವನಗೌಡ ಬಾದರ್ಲಿ ಬುಧವಾರ ನಾಮಪತ್ರ ಸಲ್ಲಿಸಿದರು.

ಚುನಾವಣಾಧಿಕಾರಿ ಹಾಗೂ ವಿಧಾನಸಭೆಯ ಕಾರ್ಯದರ್ಶಿಯೂ ಆಗಿರುವ ಎಂ.ಕೆ.ವಿಶಾಲಾಕ್ಷಿ ಅವರಿಗೆ ನಾಮಪತ್ರ ಸಲ್ಲಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕಾನೂನು ಸಚಿವ ಎಚ್.ಕೆ.ಪಾಟೀಲ, ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ಎಸ್.ತಂಗಡಗಿ, ಸಣ್ಣ ನೀರಾವರಿ ಸಚಿವ ಎನ್.ಎಸ್.ಭೋಸರಾಜು ಅವರು ಬಸವನಗೌಡ ಬಾದರ್ಲಿ ನಾಮಪತ್ರ ಸಲ್ಲಿಕೆ ವೇಳೆ ಹಾಜರಿದ್ದರು.



ಯುಪಿಎಸ್‌ಸಿ ಪರೀಕ್ಷೆ ಉತ್ತೀರ್ಣರಾದ ಅಭ್ಯರ್ಥಿಗಳನ್ನು ಐಎಎಸ್ ಬಾಬಾ ಸಂಸ್ಥೆಯ ವತಿಯಿಂದ ಸನ್ಮಾನಿಸಲಾಯಿತು

'ಸಮಾಜದ ಏಳಿಗೆಗಾಗಿ ಶ್ರಮಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಯುಪಿಎಸ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾದವರು ಉನ್ನತ ಸ್ಥಾನಗಳಿಗೆ ಆಯ್ಕೆಯಾಗುತ್ತೀರಿ. ಅಲ್ಲಿ ಅಧಿಕಾರವನ್ನು ದುರುಪಯೋಗ ಮಾಡಿಕೊಳ್ಳಬೇಡಿ' ಎಂದು ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಸಲಹೆ ನೀಡಿದರು.

ಯುಪಿಎಸ್‌ಸಿ ಪರೀಕ್ಷೆ ಉತ್ತೀರ್ಣರಾದವರಿಗೆ ಐಎಎಸ್ ಬಾಬಾ ಸಂಸ್ಥೆ ಹಮ್ಮಿಕೊಂಡಿದ್ದ ಅಭಿನಂದನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಸಾರ್ವಜನಿಕ ಜೀವನದಲ್ಲಿ ಒಳ್ಳೆಯ ಹೆಸರು ಪಡೆಯಬೇಕು. ಅಧಿಕಾರವನ್ನು ಸಮಾಜದ ಏಳಿಗೆಗೆ ಉಪಯೋಗಿಸಬೇಕು ಎಂದು ಹೇಳಿದರು.

ಐಎಎಸ್ ಬಾಬಾ ಸಂಸ್ಥೆಯ 211 ಅಭ್ಯರ್ಥಿಗಳು ಯುಪಿಎಸ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೆ. ಅದರಲ್ಲಿ ಕರ್ನಾಟಕದ 30 ಅಭ್ಯರ್ಥಿಗಳಿದ್ದು, ಅವರನ್ನು ಬುಧವಾರ ಸನ್ಮಾನಿಸಲಾಯಿತು.

ಸಂಸ್ಥೆಯ ಸಂಸ್ಥಾಪಕ ನಿರ್ದೇಶಕ ಎಸ್. ಮೋಹನ್ ಕುಮಾರ್ ಮಾತನಾಡಿ, 'ಯುಪಿಎಸ್‌ಸಿ ಉತ್ತೀರ್ಣರಾದವರು ಯಾರಿಗೂ ಅಡಿಯಾಳಾಗದೆ ಸಂವಿಧಾನದ ಚೌಕಟ್ಟಿನಲ್ಲಿ ಕಾರ್ಯನಿರ್ವಹಿಸಬೇಕು. ದೇಶವು ನಿಮ್ಮಿಂದ ಬಹಳಷ್ಟು ನಿರೀಕ್ಷೆ ಮಾಡುತ್ತದೆ. ಸಾರ್ವಜನಿಕ ಸೇವೆಯಲ್ಲಿ ಆಡಳಿತಾತ್ಮಕ ಹುದ್ದೆಗಳು ಆಕರ್ಷಕ ಮತ್ತು ತೃಪ್ತಿಕರ ವೃತ್ತಿಗಳಾಗಿವೆ' ಎಂದು ಹೇಳಿದರು.

ಹಸಿರು ಹಬ್ಬ ಕಾರ್ಯಕ್ರಮದಲ್ಲಿ ಒಕ್ಕೊರಲ ಮನವಿ

ಪೌರ ಕಾರ್ಮಿಕರಿಗೆ ಸೌಲಭ್ಯ ನೀಡಿ

ಪ್ರಜಾವಾಣಿ ವಾರ್ತೆ


ಬೆಂಗಳೂರು: ತ್ಯಾಜ್ಯ ಆಯುವವರಿಗೆ ಗುರುತಿನ ಚೀಟಿ ನೀಡಿ, ಸೌಲಭ್ಯಗಳನ್ನು ಒದಗಿಸುವಂತೆ ನಗರದಲ್ಲಿ ಬುಧವಾರ ನಡೆದ ಹಸಿರು ಹಬ್ಬ ಕಾರ್ಯಕ್ರಮದಲ್ಲಿ ಒಕ್ಕೊರಲಿನಿಂದ ಆಗ್ರಹಿಸಲಾಯಿತು.

ಪರಿಸರ ಮತ್ತು ಆವರ್ತ ಆರ್ಥಿಕತೆಗೆ ಕೊಡುಗೆಗಳನ್ನು ನೀಡುತ್ತಾ ಬಂದಿರುವ 'ತ್ಯಾಜ್ಯ ಶ್ರಮಿಕರು' ರಾಜ್ಯದಲ್ಲಿ 4,23,606 ಮಂದಿ ಇದ್ದಾರೆ. ಅವರಿಗೆ ಸರ್ಕಾರದ ಯಾವುದೇ ಸವಲತ್ತುಗಳು ತಲುಪುತ್ತಿಲ್ಲ. ಕಾರ್ಮಿಕ ಇಲಾಖೆಯಿಂದ ಸಮೀಕ್ಷೆ ನಡೆಸಿ. ತ್ಯಾಜ್ಯ ಕಾರ್ಮಿಕರನ್ನು ಗುರುತಿಸಿ ಗುರುತಿನ ಚೀಟಿ ನೀಡಬೇಕು. ಸಾಮರ್ಥ್ಯ ಅಭಿವೃದ್ಧಿ ಮತ್ತು ಕೌಶಲ ತರಬೇತಿ ಒದಗಿಸಬೇಕು. ಉದ್ಯಮ ಸ್ಥಾಪಿಸಲು ಮತ್ತು ವಿಸ್ತರಿಸಲು ಹಣಕಾಸಿನ ನೆರವು ನೀಡಬೇಕು ಎಂದು ತ್ಯಾಜ್ಯ ಶ್ರಮಿಕರು ಒತ್ತಾಯಿಸಿದರು.

ತ್ಯಾಜ್ಯ ವಿಲೇವಾರಿ ಮಾಡುವ ಮತ್ತು ಆರೋಗ್ಯದ ಅಪಾಯಗಳಿಗೆ ಗುರಿಯಾಗುವ ಶ್ರಮಿಕರ ಮಕ್ಕಳಿಗೆ ಕೇಂದ್ರ ಸರ್ಕಾರ ₹3,000, ರಾಜ್ಯ ಸರ್ಕಾರ ₹2,000 ವಿದ್ಯಾರ್ಥಿವೇತನ ನೀಡಬೇಕು. ಜೀವವಿಮೆಯನ್ನು ತ್ಯಾಜ್ಯ ಶ್ರಮಿಕರಿಗೆ ವಿಸ್ತರಿಸಬೇಕು. ತಾಯಿಯ ಜಾತಿ ಆಧಾರದಲ್ಲಿ ಮಗುವಿಗೆ ಜಾತಿ ಪ್ರಮಾಣ ಪತ್ರ ನೀಡಬೇಕು. ಪಡಿತರ ಚೀಟಿ ನೀಡಬೇಕು ಎಂದು ಬೇಡಿಕೆ ಮುಂದಿಟ್ಟರು.

ಕೊಳೆಗೇರಿ ಮಂಡಳಿ ಗುರುತಿಸಿದ ಕೊಳೆಗೇರಿಗಳನ್ನು ಕೊಳಚೆ ಪ್ರದೇಶಗಳೆಂದು ಘೋಷಿಸಬೇಕು. ಹಿಡುವಳಿ ಭದ್ರತೆ ಖಚಿತಪಡಿಸಿ ಹಕ್ಕುಪತ್ರ ನೀಡಬೇಕು. ವಸತಿ ಘಟಕಗಳನ್ನು ಒದಗಿಸಬೇಕು. ನೀರು, ವಿದ್ಯುತ್, ನೈರ್ಮಲ್ಯಗಳಂಥ ಮೂಲ ಸೌಲಭ್ಯ ಒದಗಿಸಬೇಕು. ಪುನರ್ವಸತಿ ಕಲ್ಪಿಸಿದ ಬಳಿಕವಷ್ಟೇ ಕೊಳೆಗೇರಿಗಳನ್ನು ತೆರವು ಮಾಡಲು ಕ್ರಮ ವಹಿಸಬೇಕು ಎಂದು ಆಗ್ರಹಿಸಿದರು.

ಕಾರ್ಯಕ್ರಮದಲ್ಲಿ ಕೊಳೆಗೇರಿ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಪ್ರಸಾದ್ ಅಬ್ಬಯ್ಯ, ಮಾಜಿ ಶಾಸಕಿ ಸೌಮ್ಯಾ ರೆಡ್ಡಿ, ಸಹಾಯಕ ಕಾರ್ಮಿಕ ಆಯುಕ್ತ ಸಂತೋಷ್ ಹಿಪ್ಪರಗಿ, ಸೆಂಟರ್ ಫಾರ್ ಲೇಬರ್ ಸ್ಟಡೀಸ್ ಸಹನಿರ್ದೇಶಕ ಬಾಬು ಮ್ಯಾಥ್ಯೂ, ಹಸಿರು ದಳ ಕಾರ್ಯನಿರ್ವಾಹಕ ನಿರ್ದೇಶಕಿ ನಳಿನಿ ಶೇಖರ್, ವಕೀಲ ಹಸನ್, ತ್ಯಾಜ್ಯ ಶ್ರಮಿಕರು ಭಾಗವಹಿಸಿದ್ದರು.



'ಮಾದಕ ದ್ರವ್ಯ ವ್ಯಸನದ ವಿರುದ್ಧ ನಾನು ಒಬ್ಬ' ಫಲಕವನ್ನು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ನಡೆದ 'ಹಸಿರು ಹಬ್ಬ' ಕಾರ್ಯಕ್ರಮದಲ್ಲಿ ಬಿಡುಗಡೆ ಮಾಡಲಾಯಿತು. ಕಾರ್ಮಿಕ ಇಲಾಖೆಯ ಸಹಾಯಕ ಕಾರ್ಮಿಕ ಆಯುಕ್ತ ಸಂತೋಷ್ ಹಿಪ್ಪರಗಿ, ಕೊಳೆಗೇರಿ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಪ್ರಸಾದ್ ಅಬ್ಬಯ್ಯ, ಸೆಂಟರ್ ಫಾರ್ ಲೇಬರ್ ಸ್ಟಡೀಸ್ ಸಹ ನಿರ್ದೇಶಕ ಬಾಬು ಮ್ಯಾಥ್ಯೂ, ಮಾಜಿ ಶಾಸಕಿ ಸೌಮ್ಯಾ ರಾಮಲಿಂಗಾರೆಡ್ಡಿ, ಹಸಿರು ದಳ ವ್ಯವಸ್ಥಾಪಕ ನಿರ್ದೇಶಕಿ ನಳಿನಿ ಶೇಖರ್ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

ಮೂವರಿಗೆ 'ಫ.ಗು. ಹಳಕಟ್ಟಿ ಪ್ರಶಸ್ತಿ'


ಬೆಂಗಳೂರು: ಡಾ.ಫ.ಗು. ಹಳಕಟ್ಟಿ ಫೌಂಡೇಷನ್ ನೀಡುವ 'ವಚನ ಪಿತಾಮಹ ಫ.ಗು.ಹಳಕಟ್ಟಿ ರಾಷ್ಟ್ರೀಯ ಪ್ರಶಸ್ತಿ'ಗೆ ಸಾಹಿತ್ಯ ಕ್ಷೇತ್ರದಿಂದ ಸಾಣೇಹಳ್ಳಿಯ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಶಿಕ್ಷಣ ಕ್ಷೇತ್ರದಿಂದ ಪ್ರಭಾಕರ ಕೋರೆ ಹಾಗೂ ಸಮಾಜ ಸೇವೆ ಕ್ಷೇತ್ರದಿಂದ ತೇಜಸ್ವಿನಿ ಅನಂತಕುಮಾರ್ ಆಯ್ಕೆಯಾಗಿದ್ದಾರೆ.

ಈ ಪ್ರಶಸ್ತಿ ತಲಾ ₹ 1 ಲಕ್ಷ ನಗದು ಒಳಗೊಂಡಿದೆ. ವಚನ ಪಿತಾಮಹ ಫ.ಗು. ಹಳಕಟ್ಟಿ ಅವರ ಸ್ಮರಣಾರ್ಥ ಈ ಪ್ರಶಸ್ತಿ ಸ್ಥಾಪಿಸಲಾಗಿದೆ. ಸಾಹಿತ್ಯ, ಶೈಕ್ಷಣಿಕ ಮತ್ತು ಸಮಾಜಸೇವೆ ಕ್ಷೇತ್ರದಲ್ಲಿ ಸಾಧನೆ ಮಾಡಿದವರಿಗೆ ಈ ಪ್ರಶಸ್ತಿ ನೀಡಲಾಗುತ್ತಿದೆ.

ಪ್ರಶಸ್ತಿ ಪ್ರದಾನ ಸಮಾರಂಭವನ್ನು ಜುಲೈ 2ರಂದು ಕುಮಾರಕೃಪಾ ರಸ್ತೆಯಲ್ಲಿರುವ ಗಾಂಧಿ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ.



ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ



ಪ್ರಭಾಕರ ಕೋರೆ



ತೇಜಸ್ವಿನಿ ಅನಂತ ಕುಮಾರ್

'ಸಕ್ಕರೆ ನಾಡು' ಮಂಡ್ಯಕ್ಕೆ 3ನೇ ಬಾರಿ ನುಡಿಜಾತ್ರೆಯ ಆತಿಥ್ಯ

ಸಮ್ಮೇಳನಾಧ್ಯಕ್ಷರ ಆಯ್ಕೆ: ಚರ್ಚೆ ಶುರು

• ಸಿದ್ದು ಆರ್.ಜಿ.ಹಳ್ಳಿ

ಮಂಡ್ಯ: 'ಸಕ್ಕರೆ ನಾಡು' ಮಂಡ್ಯದಲ್ಲಿ ಡಿ.20ರಿಂದ ಮೂರು ದಿನ ನಡೆಯಲಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರ ಪಟ್ಟಕ್ಕೆ ನಾಡಿನ ಎಲ್ಲೆಡೆಯಿಂದ ಅರ್ಜಿಗಳ ಮಹಾಪೂರವೇ ಹರಿದು ಬರುತ್ತಿದೆ.

'ಕತೆ, ಕಾವ್ಯ, ನಾಟಕ, ಕಾದಂಬರಿ ಕ್ಷೇತ್ರದಲ್ಲಿ ಕೃಷಿ ಮಾಡಿರುವ ಕವಿ ಮತ್ತು ಸಾಹಿತಿಗಳ ಜತೆಗೆ ವೈದ್ಯಕೀಯ, ವಿಜ್ಞಾನ, ಕ್ರೀಡೆ, ಮಾಧ್ಯಮ, ಸಂಗೀತ ಮತ್ತು ಸಿನಿಮಾ ಸಾಹಿತ್ಯದಲ್ಲಿ ಕೃಷಿ ಮಾಡಿರುವವರನ್ನೂ ಸಮ್ಮೇಳನಾಧ್ಯಕ್ಷರನ್ನಾಗಿ ನೇಮಿಸಲು ಪರಿಗಣಿಸಬೇಕು' ಎಂದು ಕೇಂದ್ರ ಕಸಾಪ ಅಧ್ಯಕ್ಷರಿಗೆ ಅರ್ಜಿ ಮತ್ತು ಚೀಟಿಗಳು ವಿವಿಧ ಜಿಲ್ಲೆಗಳಿಂದ ಬಂದಿವೆ.

ವಿಶೇಷವೆಂದರೆ, 'ಸಾಹಿತ್ಯ ರಚನೆ ಮತ್ತು ಪ್ರಕಟಣೆಯಲ್ಲಿ ತೊಡಗಿರುವ ಸ್ವಾಮೀಜಿ, ಕನ್ನಡದಲ್ಲಿ ತೀರ್ಪು ಕೊಟ್ಟ ನ್ಯಾಯಮೂರ್ತಿ, ಕೃತಿಗಳನ್ನು ರಚಿಸಿರುವ ರಾಜಕಾರಣಿಗಳನ್ನು ಸಮ್ಮೇಳನಾಧ್ಯಕ್ಷರನ್ನಾಗಿ ಮಾಡಬೇಕು' ಎಂದು ಹಲವರು ದುಂಬಾಲು ಬಿದ್ದಿದ್ದಾರೆ.

'ಸಮ್ಮೇಳನಾಧ್ಯಕ್ಷರ ಆಯ್ಕೆ ಸಂದರ್ಭದಲ್ಲಿ ಲೇಖಕಿಯರನ್ನು ನಿರಂತರವಾಗಿ ಕಡೆಗಣಿಸುತ್ತಿರುವುದರಿಂದ, ಈ ಬಾರಿ ಲೇಖಕಿ ಅಥವಾ ಕವಯತ್ರಿಗೆ ಆದ್ಯತೆ ನೀಡಿ' ಎಂಬ ಸಲಹೆಗಳೂ ಬಂದಿವೆ.

87 ಪುಸ್ತಕಗಳು: ಮಂಡ್ಯದಲ್ಲಿ ನಡೆಯುವ 87ನೇ ನುಡಿಜಾತ್ರೆಗೆ 87 ಪುಸ್ತಕಗಳನ್ನು ಹೊರತರಲು ಕಸಾಪ ಪದಾಧಿಕಾರಿಗಳು ನಿರ್ಧರಿಸಿದ್ದಾರೆ. ಮಂಡ್ಯ ಜಿಲ್ಲೆಯ ಪ್ರಾತಿನಿಧಿಕ ಪುಸ್ತಕಗಳು 40 ಮತ್ತು ಕನ್ನಡ ಸಾಹಿತ್ಯ ಪರಿಷತ್‌ನಲ್ಲಿ ಪ್ರಕಟಗೊಂಡಿರುವ 47 ಮೌಲ್ಯಯುತ ಪುಸ್ತಕಗಳನ್ನು ಮರುಮುದ್ರಿಸುವ ಚಿಂತನೆ ನಡೆದಿದೆ.

'ಜಿಲ್ಲೆಯ ಕಲೆ, ಸಾಹಿತ್ಯ, ಸಂಸ್ಕೃತಿ, ರಾಜಕೀಯ ಕ್ಷೇತ್ರಗಳ ಮೇಲೆ ಬೆಳಕು ಚೆಲ್ಲುವ ಕೃತಿಗಳು ಮತ್ತು ತಾಲ್ಲೂಕು ದರ್ಶನ ಪುಸ್ತಕಗಳನ್ನು ಹೊರತರಬೇಕು' ಎಂಬ ಅಭಿಲಾಷೆ ಜಿಲ್ಲಾ ಕಸಾಪ ಪದಾಧಿಕಾರಿಗಳದ್ದು. ಮಂಡ್ಯದಲ್ಲಿ 1974ರಲ್ಲಿ ನಡೆದ 48ನೇ ಸಾಹಿತ್ಯ ಸಮ್ಮೇಳನ ಮತ್ತು 1994ರಲ್ಲಿ ನಡೆದ 63ನೇ ಸಮ್ಮೇಳನದ 'ಸ್ಮರಣ ಸಂಚಿಕೆ'ಗಳನ್ನು ಮರು ಮುದ್ರಿಸುವ ಬಗ್ಗೆ ಚರ್ಚೆ ನಡೆದಿದೆ.

ಗರಿಗೆದರಿದ ಚಟುವಟಿಕೆ: ಸಮ್ಮೇಳನದ ದಿನಾಂಕವನ್ನು ಮುಖ್ಯಮಂತ್ರಿ ಘೋಷಿಸಿದ ಬೆನ್ನಲ್ಲೇ ಜಿಲ್ಲೆಯಲ್ಲಿ ಸಿದ್ಧತೆಗಳು ಗರಿಗೆದರಿವೆ. ಸಮ್ಮೇಳನ ನಡೆಸಲು 'ಚಿಕ್ಕಮಂಡ್ಯ ಕೆರೆ ಬಯಲು ಮತ್ತು ಮೈಸೂರು– ಬೆಂಗಳೂರು ರಸ್ತೆಯ ಅಮರಾವತಿ ಹೋಟೆಲ್ ಹಿಂಭಾಗದ 75 ಎಕರೆ ಜಾಗ ಗುರುತಿಸಿದ್ದು, ಸ್ಥಳವನ್ನು ಅಂತಿಮಗೊಳಿಸುವ ಪ್ರಕ್ರಿಯೆ ಆರಂಭವಾಗಿದೆ.

ಸಮಿತಿಗಳ ರಚನೆ, ಸ್ವಾಗತ ಸಮಿತಿ, ಸಮ್ಮೇಳನಾಧ್ಯಕ್ಷರ ಆಯ್ಕೆ, ಲಾಂಛನ ಬಿಡುಗಡೆ, ಪುಸ್ತಕಗಳ ಆಯ್ಕೆ, ಕಲಾತಂಡಗಳ ಆಯ್ಕೆ ಕುರಿತು ಚರ್ಚೆ ಆರಂಭವಾಗಿದೆ. ಬೆಂಗಳೂರಿನ ಕಸಾಪ ಭವನದಲ್ಲಿ ಬುಧವಾರ ಕಸಾಪ ಅಧ್ಯಕ್ಷ ಮಹೇಶ ಜೋಶಿ ಅವರು ಕಾರ್ಯಕಾರಿ ಸಮಿತಿ, ಜಿಲ್ಲಾ ಕಸಾಪ ಪದಾಧಿಕಾರಿಗಳು ಮತ್ತು ಮಂಡ್ಯ ಹೆಚ್ಚುವರಿ ಜಿಲ್ಲಾಧಿಕಾರಿಗಳೊಂದಿಗೆ ಸಭೆ ನಡೆಸಿ ಹಲವಾರು ವಿಷಯಗಳ ಬಗ್ಗೆ ಚರ್ಚೆ ನಡೆಸಿದ್ದಾರೆ.

ಅಧ್ಯಕ್ಷರ ನಾಮನಿರ್ದೇಶನ: 'ಪರಿಷತ್ತಿನ ಜಿಲ್ಲಾ ಘಟಕದ ಅಧ್ಯಕ್ಷರಾಗಿದ್ದ ರವಿಕುಮಾರ್ ಚಾಮಲಾಪುರ ಅವರು ಇದೇ ಮಾರ್ಚ್‌ನಲ್ಲಿ ಮೃತಪಟ್ಟಿದ್ದರಿಂದ, ಕಸಾಪ ಪದಾಧಿಕಾರಿಗಳೊಂದಿಗೆ ಸಭೆ ನಡೆಸಿ, ಎಲ್ಲರ ಒಪ್ಪಿಗೆ ಮೇರೆಗೆ ಸಮ್ಮೇಳನದ ಜವಾಬ್ದಾರಿ ನಿರ್ವಹಿಸಲು ಅರ್ಹ ವ್ಯಕ್ತಿಯನ್ನು ಅಧ್ಯಕ್ಷರನ್ನಾಗಿ ನಾಮನಿರ್ದೇಶನ ಮಾಡುತ್ತೇವೆ. ಜನರ ಸಹಕಾರ ಮತ್ತು ಸರ್ಕಾರದ ಸಹಭಾಗಿತ್ವದಲ್ಲಿ ಸಮ್ಮೇಳನವನ್ನು ಯಶಸ್ವಿಯಾಗಿ ನಡೆಸುತ್ತೇವೆ' ಎಂದು ಕಸಾಪ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದರು.

ಸಾಹಿತ್ಯಾಸಕ್ತರಿಗೆ ಮುದ್ದೆ, ಬೆಣ್ಣೆಯ ಆತಿಥ್ಯ!

'ಮಂಡ್ಯ ಸಮ್ಮೇಳನಕ್ಕೆ ನಿತ್ಯ ಸುಮಾರು 3 ಲಕ್ಷ ಜನ ಬರುವ ನಿರೀಕ್ಷೆಯಿದೆ. ಎಲ್ಲ ಸಾಹಿತ್ಯಾಸಕ್ತರಿಗೆ ಮುದ್ದೆ ಮತ್ತು ಸೊಪ್ಪಿನ ಸಾರು, ನಾಟಿ ಬೆಣ್ಣೆ, ಸಾವಯವ ಬೆಲ್ಲದ ಪಾಯಸ ಬಡಿಸಲು ಉತ್ಸುಕರಾಗಿದ್ದೇವೆ. ಮಂಡ್ಯದ ದೇಸಿ ಕಲೆಗಳಾದ ಕೋಲಾಟ, ಗಾರುಡಿಗೊಂಬೆ, ಪೂಜಾ ಕುಣಿತಗಳು ಮೇಳೈಸಲಿವೆ' ಎಂದು ಮಂಡ್ಯ ಜಿಲ್ಲಾ ಕಸಾಪದ ಗೌರಾವಾಧ್ಯಕ್ಷ ಕೃಷ್ಣೇಗೌಡ ಹುಸ್ಕೂರು ತಿಳಿಸಿದರು.

ಕಸಾಪ ಕಾರ್ಯಕಾರಿ ಸಮಿತಿ ಸಭೆಯ ನಿರ್ಣಯ ಮತ್ತು ಸರ್ಕಾರದ ಜತೆ ಸಮಾಲೋಚನೆ ಬಳಿಕ ಸಮ್ಮೇಳನಾಧ್ಯಕ್ಷರನ್ನು ಆಯ್ಕೆ ಮಾಡಲಾಗುವುದು. ₹30 ಕೋಟಿ ಅನುದಾನಕ್ಕೆ ಪ್ರಸ್ತಾವ ಸಲ್ಲಿಸಿದ್ದೇವೆ
ಮಹೇಶ ಜೋಶಿ, ಕಸಾಪ ಅಧ್ಯಕ್ಷ

ಸಿನಿಮೀಯ ಶೈಲಿಯಲ್ಲಿ ಚಿನ್ನಾಭರಣ ದರೋಡೆ

ಪ್ರಜಾವಾಣಿ ವಾರ್ತೆ

ನೆಲಮಂಗಲ: ಮಾದನಾಯಕನಹಳ್ಳಿ ಠಾಣಾ ವ್ಯಾಪ್ತಿಯ ಬೆಂಗಳೂರು ಉತ್ತರ ತಾಲ್ಲೂಕಿನ ದೊಂಬರಹಳ್ಳಿಯಲ್ಲಿ ಮಂಗಳವಾರ ರಾತ್ರಿ ಪಿಸ್ತೂಲ್ ತೋರಿಸಿ ಆಭರಣ ಮಳಿಗೆಯಲ್ಲಿ ಚಿನ್ನಾಭರಣ ದೋಚಲಾಗಿದೆ.

ಬೈಕ್‌ನಲ್ಲಿ ಬಂದ ಇಬ್ಬರು ಪದಮ್ ಜ್ಯುವೆಲರ್ಸ್ ಅಂಡ್ ಬ್ಯಾಂಕರ್ಸ್ ಸಿಬ್ಬಂದಿಗೆ ಪಿಸ್ತೂಲ್ ತೋರಿಸಿ ಸಿನಿಮೀಯ ಶೈಲಿಯಲ್ಲಿ ಚಿನ್ನಾಭರಣ ದೋಚಿ ಪರಾರಿಯಾಗಿದ್ದಾರೆ.

ಮಾರುವೇಷದಲ್ಲಿ ಬಂದ ಆರೋಪಿಗಳು ಕೇವಲ 30 ಸೆಕೆಂಡ್‌ಗಳಲ್ಲಿ ಅಂದಾಜು ₹50 ಲಕ್ಷ ಮೌಲ್ಯದ ಚಿನ್ನಾಭರಣ ದೋಚಿದ್ದಾರೆ ಎಂದು ದೂರು ನೀಡಲಾಗಿದೆ. ಆರೋಪಿಗಳ ಪತ್ತೆಗೆ ವಿಶೇಷ ತಂಡ ರಚಿಸಲಾಗಿದೆ.

ಮಾದನಾಯಕನಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಹಾಗೂ ಸಿಬ್ಬಂದಿ ಪರಿಶೀಲನೆ ನಡೆಸಿದ್ದಾರೆ. 'ಮಳಿಗೆಯಲ್ಲಿ ಅಳವಡಿಸಿದ್ದ ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿಯನ್ನು ಪರಿಶೀಲಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ಚಾಮರಾಜ ಕ್ಷೇತ್ರದ ಶಾಸಕರ ಆಪ್ತರಿಂದ ಹಣ ಸುಲಿಗೆಗೆ ಪ್ರಯತ್ನ

ಹನಿಟ್ರ್ಯಾಪ್ ದಂಧೆ: ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ



ಪುಟ್ಟರಾಜ್



ಸಂತೋಷ್

ಬೆಂಗಳೂರು: ಮೈಸೂರಿನ ಚಾಮರಾಜ ಕ್ಷೇತ್ರದ ಕಾಂಗ್ರೆಸ್ ಶಾಸಕ ಹರೀಶ್‌ಗೌಡ ಅವರ ಆಪ್ತರ ಸೆರಿ ಹಲವು ರಾಜಕಾರಣಿಗಳು ಹಾಗೂ ಉದ್ಯಮಿಗಳಿಗೆ ಹನಿಟ್ರ್ಯಾಪ್ ಮಾಡಿ ಹಣ ಸುಲಿಗೆ ಮಾಡಿದ್ದ ಇಬ್ಬರು ಆರೋಪಿಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ. ಮೈಸೂರಿನ ಸಂತೋಷ್ ಹಾಗೂ ಪುಟ್ಟರಾಜು ಬಂಧಿತ ಆರೋಪಿಗಳು.

'ನವೀನ್ ಹಾಗೂ ಈ ತಂಡದಲ್ಲಿ ಗುರುತಿಸಿಕೊಂಡಿದ್ದ ಯುವತಿ ತಲೆಮರೆಸಿಕೊಂಡಿದ್ದು, ಶೋಧ ನಡೆಸಲಾಗುತ್ತಿದೆ. ಬಂಧಿತರಿಂದ ಪೆನ್‌ಡ್ರೈವ್ ಹಾಗೂ ಮೊಬೈಲ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

ಸಿಸಿಬಿ ಪೊಲೀಸರಿಗೆ ಶಾಸಕರು ಜೂನ್ 10ರಂದು ದೂರು ನೀಡಿದ್ದರು. ಆ ದೂರು ಆಧರಿಸಿ ತನಿಖೆ ನಡೆಸಿ ಇಬ್ಬರನ್ನು ಬೆಂಗಳೂರಿನಲ್ಲಿ ಬಂಧಿಸಲಾಗಿದೆ ಎಂದು ಮೂಲಗಳು ಹೇಳಿವೆ.

'ಆರೋಪಿಗಳು ನಕಲಿ ವಿಡಿಯೊ ತುಣುಕುಗಳನ್ನು ಇಟ್ಟುಕೊಂಡು ಉದ್ಯಮಿಗಳು ಹಾಗೂ ರಾಜಕಾರಣಿಗಳನ್ನು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದರು. ನಿಮಗೆ ಸಂಬಂಧಿಸಿದ ವಿಡಿಯೊಗಳಿದ್ದು, ಹಣ ನೀಡದಿದ್ದರೆ ಸಾಮಾಜಿಕ ಮಾಧ್ಯಮಗಳಲ್ಲಿ ಆ ವಿಡಿಯೊಗಳನ್ನು ಬಹಿರಂಗಪಡಿಸುತ್ತೇವೆ ಎಂಬುದಾಗಿ ಬೆದರಿಸಿ ಹಣಕ್ಕೆ ಬೇಡಿಕೆ ಇಡುತ್ತಿದ್ದರು. ಕೆಲವರಿಂದ ಹಣ ಸುಲಿಗೆ ಮಾಡಿದ್ದಾರೆ' ಎಂದು ಪೊಲೀಸರು ಹೇಳಿದರು.

'ಆರೋಪಿಗಳಾದ ಸಂತೋಷ್ ಹಾಗೂ ನವೀನ್ ಎಂಬುವವರು 2019ರಲ್ಲಿ ಹರೀಶ್‌ಗೌಡ ಅವರನ್ನು ಪರಿಚಯಿಸಿಕೊಂಡಿದ್ದರು. ರಿಯಲ್ ಎಸ್ಟೇಟ್ ವ್ಯವಹಾರ ನಡೆಸುತ್ತಿರುವುದಾಗಿ ಸಂತೋಷ್, ಪಕ್ಷದ ಕೆಲಸ ಮಾಡುತ್ತಿದ್ದೇನೆ ಎಂದು ನವೀನ್ ಹೇಳಿಕೊಂಡಿದ್ದರು. ಹರೀಶ್‌ಗೌಡ ಅವರ ಯಾವುದೇ ಕಾರ್ಯಕ್ರಮಕ್ಕೆ ತೆರಳಿದರೂ ಅಲ್ಲಿಗೆ ಆರೋಪಿಗಳು ಯುವತಿಯ ಜತೆಗೆ ಬರುತ್ತಿದ್ದರು. ಕಾರ್ಯಕ್ರಮದ ವೇಳೆ ಕೆಲವು ಫೋಟೊ ಹಾಗೂ ವಿಡಿಯೊ ಚಿತ್ರೀಕರಿಸುತ್ತಿದ್ದರು. ಆಹ್ವಾನವಿಲ್ಲದ ಕಾರ್ಯಕ್ರಮಕ್ಕೂ ಆರೋಪಿಗಳು ಬರುತ್ತಿದ್ದರು' ಎಂದು ಪೊಲೀಸರು ಹೇಳಿದರು.

'ಯುವತಿಯರ ಮೂಲಕ ಮೊಬೈಲ್ ಸಂಖ್ಯೆ ಪಡೆದುಕೊಂಡು ಕಾರ್ಯಕ್ರಮ ಮುಕ್ತಾಯವಾದ ಮೇಲೆ ನನ್ನ ಸ್ನೇಹಿತರಿಗೆ ಕರೆ ಮಾಡಿಸುತ್ತಿದ್ದರು. ಆ ಕರೆಯನ್ನು ರೆಕಾರ್ಡ್ ಮಾಡಿಕೊಂಡು ಬೆದರಿಕೆ ಹಾಕುತ್ತಿದ್ದರು' ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಆರೋಪಿಗಳು ಈ ಹಿಂದೆ ಮೈಸೂರಿನಲ್ಲಿ ವೇಶ್ಯಾವಾಟಿಕೆ ದಂಧೆ ನಡೆಸುತ್ತಿದ್ದರು. ಆ ಸಮಯದಲ್ಲಿ ಈ ದಂಧೆಯಲ್ಲಿ ತೊಡಗಿಸಿಕೊಂಡಿದ್ದ ಮಹಿಳೆಯರನ್ನು ಬಳಸಿಕೊಂಡು ಗ್ರಾಹಕರ ಗುರುತು ಸಿಗದಂತೆ ಒಂದು ವಿಡಿಯೊ ಚಿತ್ರೀಕರಣ ಮಾಡಿಕೊಂಡು ಇಟ್ಟುಕೊಂಡಿದ್ದರು. ಆ ವಿಡಿಯೊವನ್ನು ಬಳಸಿಕೊಂಡು ಉದ್ಯಮಿಗಳಿಂದ ಹಣ ಸುಲಿಗೆ ಮಾಡುತ್ತಿದ್ದರು ಎಂದು ತನಿಖಾಧಿಕಾರಿಗಳು ತಿಳಿಸಿದ್ದಾರೆ.

ಗಣ್ಯರು ತಂಗಿದ್ದ ಕೊಠಡಿ ಬಳಕೆ: 'ಮೂವರು ಆರೋಪಿಗಳು ಯುವತಿಯರ ಜೊತೆಗೆ ಸೇರಿಕೊಂಡು ರಾಜಕಾರಣಿಗಳು ಹಾಗೂ ಪ್ರಭಾವಿ ವ್ಯಕ್ತಿಗಳ ದಿನಚರಿ ಗಮನಿಸುತ್ತಿದ್ದರು. ನಂತರ, ಗಣ್ಯರ ಸಂಪರ್ಕ ಸಂಖ್ಯೆ ಪಡೆದುಕೊಳ್ಳುತ್ತಿದ್ದರು. ಅತಿ ಗಣ್ಯ ವ್ಯಕ್ತಿಗಳು ಉಳಿದುಕೊಳ್ಳುತ್ತಿದ್ದ ಐಷಾರಾಮಿ ಹೋಟೆಲ್ ರೂಮ್ ಬುಕ್ಕಿಂಗ್, ಚೆಕ್ ಇನ್ ಹಾಗೂ ಚೆಕ್ ಔಟ್ ಗಮನಿಸುತ್ತಿದ್ದರು.

'ಗಣ್ಯರು ಹೋಟೆಲ್ ಖಾಲಿ ಮಾಡಿಕೊಂಡು ಹೋದ ನಂತರ ಅವರು ಉಳಿದುಕೊಂಡಿದ್ದ ಕೊಠಡಿಯನ್ನು ಬಾಡಿಗೆ ಪಡೆದು ಅಲ್ಲಿಯೇ ವಾಸ್ತವ್ಯ ಮಾಡುತ್ತಿದ್ದರು. ಆ ಕೊಠಡಿಯಲ್ಲಿ ಕ್ಯಾಮೆರಾ ಇಟ್ಟು ಯುವತಿಯನ್ನು ಬಳಸಿಕೊಂಡು ವಿಡಿಯೊ ಚಿತ್ರೀಕರಿಸುತ್ತಿದ್ದರು. ಬಳಿಕ ಅತಿಗಣ್ಯ ವ್ಯಕ್ತಿಗಳು ಆ ಯುವತಿಯನ್ನು ದೈಹಿಕವಾಗಿ ಬಳಸಿಕೊಂಡಿದ್ದ ರೀತಿಯಲ್ಲಿ ನಕಲಿ ವಿಡಿಯೊ ತಯಾರಿಸಿ ಗಣ್ಯರ ಬಳಿ ಹಣಕ್ಕಾಗಿ ಬೇಡಿಕೆ ಇಡುತ್ತಿದ್ದರು' ಎಂದು ಪೊಲೀಸರು ಹೇಳಿದರು.

'ಆರೋಪಿಗಳು ವಿಧಾನ ಪರಿಷತ್ ಸದಸ್ಯರೊಬ್ಬರು ಹಾಗೂ ಶಾಸಕರ ಸ್ನೇಹಿತರಿಗೂ ಇದೇ ರೀತಿ ವಂಚಿಸಿ ಹಣ ವಸೂಲಿ ಮಾಡಿದ್ದರು' ಎಂದು ಪೊಲೀಸರು ತಿಳಿಸಿದರು.

ಈ ತಂಡದಲ್ಲಿ ಮೂವರಿದ್ದು, ಇಬ್ಬರ ಬಂಧನವಾಗಿದೆ. ಆರೋಪಿಗಳು ಬೇರೆಯವರಿಗೂ ಇದೇ ರೀತಿ ಮಾಡಿರುವುದು ಗೊತ್ತಾಗಿದ್ದು, ತನಿಖೆ ನಡೆದಿದೆ.
ಚಂದ್ರಗುಪ್ತ, ಸಿಸಿಬಿ ಜಂಟಿ ಪೊಲೀಸ್ ಕಮಿಷನರ್

ನನ್ನ ವಿರುದ್ಧ ಯಾವುದೇ ರಾಜಕೀಯ ಷಡ್ಯಂತ್ರ ನಡೆದಿಲ್ಲ. ಹನಿಟ್ರ್ಯಾಪ್ ಆಗಿಲ್ಲ. ಆದರೆ, ನನ್ನ ಕ್ಷೇತ್ರದಲ್ಲಿ ಎಂಟರಿಂದ ಹತ್ತು ಜನರನ್ನು ಗುರಿಯಾಗಿಸಿ ಹನಿಟ್ರ್ಯಾಪ್ ಮಾಡಲಾಗಿದೆ.
ಹರೀಶ್‌ಗೌಡ, ಶಾಸಕ

ಇಸ್ರೊ ಬೇಹುಗಾರಿಕೆ ಪ್ರಕರಣ: ಸಿಬಿಐ ಆರೋಪಪಟ್ಟಿ

ತಿರುವನಂತಪುರ (ಪಿಟಿಐ): 1984ರ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೊ) ಬೇಹುಗಾರಿಕೆ ಪ್ರಕರಣಕ್ಕೆ ಸಂಬಂಧಿಸಿ ಐವರ ವಿರುದ್ಧ ಸಿಬಿಐ ಆರೋಪ ಪಟ್ಟಿ ಸಲ್ಲಿಸಿದೆ ಎಂದು ಮೂಲಗಳು ಬುಧವಾರ ತಿಳಿಸಿವೆ.

ಸುಪ್ರೀಂ ಕೋರ್ಟ್‌ನ ನಿರ್ದೇಶನದಂತೆ ದಾಖಲಿಸಿದ್ದ ಈ ಪ್ರಕರಣಕ್ಕೆ ಸಂಬಂಧಿಸಿ ಸಿಬಿಐ, ಯಾರ ವಿರುದ್ಧ ಆರೋಪಪಟ್ಟಿ ಸಲ್ಲಿಸಿದೆ ಎಂಬ ವಿವರಗಳು ತಕ್ಷಣಕ್ಕೆ ಗೊತ್ತಾಗಿಲ್ಲ ಎಂದೂ ಮೂಲಗಳು ಹೇಳಿವೆ.

ಈ ಪ್ರಕರಣದಲ್ಲಿ ಬಾಹ್ಯಾಕಾಶ ವಿಜ್ಞಾನಿ ನಂಬಿ ನಾರಾಯಣನ್ ಅವರನ್ನು ಆರೋಪಿಯನ್ನಾಗಿ ಮಾಡಲಾಗಿತ್ತು.

ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸುವಂತೆ ಸುಪ್ರೀಂ ಕೋರ್ಟ್ 2021ರ ಏಪ್ರಿಲ್ 15ರಂದು ಆದೇಶಿಸಿತ್ತು.

ನಂಬಿ ನಾರಾಯಣನ್ ವಿರುದ್ಧದ ಆರೋಪಗಳು ಸುಳ್ಳು ಎಂಬುದು ಸಿಬಿಐ ತನಿಖೆಯಿಂದ ತಿಳಿದುಬಂದಿತ್ತು.

ಕದ್ದ ಒಡವೆ ಖರೀದಿ: ಅಟ್ಟಿಕಾ ಬಾಬು ಬಂಧನ

ಪ್ರಜಾವಾಣಿ ವಾರ್ತೆ

ತುಮಕೂರು: ಕದ್ದ ಚಿನ್ನಾಭರಣ ಖರೀದಿಸಿದ ಆರೋಪದ ಮೇಲೆ ಅಟ್ಟಿಕಾ ಗೋಲ್ಡ್ ಕಂಪನಿಯ ನಿರ್ದೇಶಕ ಅಟ್ಟಿಕಾ ಬಾಬು ಅಲಿಯಾಸ್ ಪಿ.ಎಸ್. ಅಯ್ಯೂಬ್ (44) ಅವರನ್ನು ಜಿಲ್ಲೆಯ ಪೊಲೀಸರು ಬೆಂಗಳೂರಿನಲ್ಲಿ ಬುಧವಾರ ಸಂಜೆ ಬಂಧಿಸಿದ್ದಾರೆ.

ತುರುವೇಕೆರೆ ಠಾಣೆಯಲ್ಲಿ ದಾಖಲಾದ ಕಳ್ಳತನ ಪ್ರಕರಣದಲ್ಲಿ ಆನೇಕಲ್ ತಾಲ್ಲೂಕಿನ ಜಿಗಣಿಯ ನಿವಾಸಿ ಉದಯ್ ಅಲಿಯಾಸ್ ಅಶೋಕ್ (30) ಎಂಬಾತನನ್ನು ತಿಂಗಳ ಹಿಂದೆ ಬಂಧಿಸಲಾಗಿತ್ತು.

ವಿವಿಧ ಕಡೆ ಕದ್ದ ಆಭರಣಗಳನ್ನು ಉದಯ್ ತನ್ನ ಹೆಂಡತಿ ಮೂಲಕ ಅಟ್ಟಿಕಾ ಗೋಲ್ಡ್ ಕಂಪನಿ ಮಳಿಗೆಗೆ ಮಾರಾಟ ಮಾಡಿಸುತ್ತಿದ್ದ.

ತುರುವೇಕೆರೆ ಪೊಲೀಸರು ಉದಯ್‌ನನ್ನು ಬಂಧಿಸಿ ವಿಚಾರಣೆ ನಡೆಸಿದಾಗ ಅಟ್ಟಿಕಾ ಗೋಲ್ಡ್ ಕಂಪನಿ ವ್ಯವಸ್ಥಾಪಕ ಹರೀಶ್ ಹೆಸರು ಹೊರ ಬಂದಿತ್ತು. ಹರೀಶ್ ವಿಚಾರಣೆ ನಡೆಸಿದಾಗ ಅಟ್ಟಿಕಾ ಬಾಬು ಹೆಸರು ಹೊರಬಂತು.

ಬೆಂಗಳೂರಿಗೆ ತೆರಳಿದ ತುರುವೇಕೆರೆ ಠಾಣೆಯ ಸಿಪಿಐ ಬಿ.ಎನ್.ಲೋಹಿತ್ ನೇತೃತ್ವದ ತಂಡ ಫ್ರೇಜರ್ ಟೌನ್‌ನ ಮರಿಯಮ್ಮ ಅಪಾರ್ಟ್‌ಮೆಂಟ್‌ನಲ್ಲಿರುವ ಮನೆ ಬಳಿಯೇ ಬಾಬು ಬಂಧಿಸಿ ಕರೆ ತಂದಿದೆ.



ಅಟ್ಟಿಕಾ ಬಾಬು

ಉದಯ್ ವಿರುದ್ಧ ತುಮಕೂರು, ಮಂಡ್ಯ, ರಾಮನಗರ ಜಿಲ್ಲೆ ವ್ಯಾಪ್ತಿಯ ವಿವಿಧ ಠಾಣೆಗಳಲ್ಲಿ 13 ಕಳ್ಳತನ ಪ್ರಕರಣ ದಾಖಲಾಗಿವೆ. ಎಲ್ಲ ಕಡೆ ಕಳವು ಮಾಡಿದ ಆಭರಣಗಳನ್ನು ಅಟ್ಟಿಕಾ ಗೋಲ್ಡ್ ಕಂಪನಿಗೆ ಮಾರಾಟ ಮಾಡಿರಬಹುದು ಎಂದು ಪೊಲೀಸರು ಅನುಮಾನ ವ್ಯಕ್ತಪಡಿಸಿದ್ದಾರೆ.

'ಆರೋಪಿಯನ್ನು ಗುರುವಾರ ನ್ಯಾಯಾಲಯದ ಮುಂದೆ ಹಾಜರು ಪಡಿಸಲಾಗುವುದು' ಎಂದು ಪೊಲೀಸರು ತಿಳಿಸಿದ್ದಾರೆ.

ಅಟ್ಟಿಕಾ ಬಾಬು ಕಳೆದ ವಿಧಾನಸಭೆ ಚುನಾವಣೆಯಲ್ಲಿ ತುಮಕೂರು ವಿಧಾನಸಭಾ ಕ್ಷೇತ್ರದಿಂದ ಜೆಡಿಎಸ್, ಕಾಂಗ್ರೆಸ್‌ನಿಂದ ಸ್ಪರ್ಧಿಸಲು ಪ್ರಯತ್ನಿಸಿದ್ದರು. ಟಿಕೆಟ್ ಸಿಗದೆ ಸ್ಪರ್ಧೆಯಿಂದ ಹಿಂದೆ ಸರಿದಿದ್ದರು.



ಪಿಇಎಸ್ ವಿಶ್ವವಿದ್ಯಾಲಯವು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ (ವಿಟಿಯು) ಸಹಭಾಗಿತ್ವದಲ್ಲಿ ಡಿಪ್ಲೊಮಾ ಮತ್ತು ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಬಜಾಜ್ ಎಂಜಿನಿಯರಿಂಗ್ ಕೌಶಲ ತರಬೇತಿ (ಬಿಇಎಸ್‌ಟಿ) ಕಾರ್ಯಕ್ರಮದ ಅಡಿಯಲ್ಲಿ ಕೌಶಲ ತರಬೇತಿ ನೀಡುವ ಒಪ್ಪಂದಕ್ಕೆ ಇತ್ತೀಚೆಗೆ ಸಹಿ ಹಾಕಿದೆ. ವಿಟಿಯು ಕುಲಸಚಿವ ಬಿ.ಇ. ರಂಗಸ್ವಾಮಿ, ಕುಲಪತಿ ಎಸ್. ವಿದ್ಯಾಶಂಕರ್, ವಿಟಿಯು ಕೌಶಲ ಅಭಿವೃದ್ಧಿ ಕೇಂದ್ರದ ನಿರ್ದೇಶಕಿ ಸಂಧ್ಯಾ ಆರ್. ಅನ್ವೇಕರ್, ಪಿಇಎಸ್ ವಿಶ್ವವಿದ್ಯಾಲಯದ ಸಮಕುಲಪತಿ ನಾಗಾರ್ಜುನ ಸಾದಿನೇನಿ, ಕುಲಸಚಿವ ಕೆ.ಎಸ್. ಶ್ರೀಧರ್ ಭಾಗವಹಿಸಿದ್ದರು.

ವೈಸಿಸಿಪಿ, ಬಿಡದಿ ಘಟಕ ಉದ್ಘಾಟನೆಗೆ ಸಿದ್ಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಲಹಂಕ ಸಮೀಪ ಸ್ಥಾಪನೆಯಾಗಿರುವ ರಾಜ್ಯದ ಪ್ರಥಮ ಅನಿಲ ಆಧಾರಿತ 370 ಮೆಗಾವಾಟ್ ಸಾಮರ್ಥ್ಯದ 'ಯಲಹಂಕ ಸಂಯೋಜಿತ ಆವರ್ತ ವಿದ್ಯುತ್ ಘಟಕ'ವನ್ನು (ವೈಸಿಸಿಪಿ) ಜುಲೈ ಎರಡನೇ ವಾರದಲ್ಲಿ ಉದ್ಘಾಟಿಸಲು ಅಗತ್ಯ ಸಿದ್ಧತೆ ಮಾಡಿಕೊಳ್ಳುವಂತೆ ಇಂಧನ ಸಚಿವ ಕೆ.ಜೆ.ಜಾರ್ಜ್ ಸೂಚಿಸಿದರು.

ಬುಧವಾರ ನಡೆದ ವೈಸಿಸಿಪಿ ಯೋಜನೆ ಕುರಿತ ಪ್ರಗತಿ ಪರಿಶೀಲನೆ ಸಭೆಯಲ್ಲಿ, ಯೋಜನೆ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದ ಸಚಿವರು, '2016ರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಯಲಹಂಕ ಸಂಯುಕ್ತ ಆವರ್ತಕ ವಿದ್ಯುತ್ ಸ್ಥಾವರಕ್ಕೆ ಶಂಕುಸ್ಥಾಪನೆ ನೆರವೇರಿಸಿದ್ದರು. ಈಗ ಅವರೇ ಉದ್ಘಾಟಿಸಲಿದ್ದಾರೆ' ಎಂದರು.

ಬಿಡದಿ ಯೋಜನೆಯೂ ಉದ್ಘಾಟನೆ: ಇದೇ ವೇಳೆ ಬಿಡದಿಯಲ್ಲಿ ಸ್ಥಾಪಿಸಿರುವ ತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕದ ಪ್ರಗತಿ ಪರಿಶೀಲನೆ ನಡೆಸಿದ ಸಚಿವರು, 'ಜುಲೈ ಕೊನೆಯ ವಾರದಲ್ಲಿ ಈ ಘಟಕವನ್ನು ಲೋಕಾರ್ಪಣೆ ಮಾಡಲಾಗುವುದು' ಎಂದು ತಿಳಿಸಿದರು.

ಕೆಪಿಸಿಎಲ್ ಮತ್ತು ಬಿಬಿಎಂಪಿ ಸಹಯೋಗದಲ್ಲಿ ಆರಂಭವಾಗಿರುವ ₹250 ಕೋಟಿ ವೆಚ್ಚದ 600 ಟನ್ ತ್ಯಾಜ್ಯ ಸಂಸ್ಕರಿಸಿ 11.5 ಮೆಗಾವಾಟ್ ವಿದ್ಯುತ್ ಉತ್ಪಾದಿಸುವ ಘಟಕದ ಎಲ್ಲ ಕಾಮಗಾರಿಗಳು ಬಹುತೇಕ ಪೂರ್ಣಗೊಂಡಿವೆ. ಪ್ರಾಯೋಗಿಕವಾಗಿ ವಿದ್ಯುತ್ ಉತ್ಪಾದನೆ ಆರಂಭಿಸಿ, ಜುಲೈ ಕೊನೆ ವಾರದಲ್ಲಿ ಉದ್ಘಾಟನೆಗೆ ಸಜ್ಜುಗೊಳಿಸುವಂತೆ ಸಚಿವರು ಅಧಿಕಾರಿಗಳಿಗೆ ಸೂಚಿಸಿದರು.

ಇಂಧನ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತಾ, ಕೆಪಿಸಿಎಲ್‌ನ ಹಣಕಾಸು ನಿರ್ದೇಶಕ ಆರ್.ನಾಗರಾಜ್, ತಾಂತ್ರಿಕ ನಿರ್ದೇಶಕ ಸಿ.ಎಂ.ದಿವಾಕರ್ ಪಾಲ್ಗೊಂಡಿದ್ದರು.

'ಎಂಎಸ್‌ಪಿಗೆ ಕಾನೂನು ರೂಪಿಸಲು ಆಗ್ರಹ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಳೆಗಳಿಗೆ ನೀಡುವ ಕನಿಷ್ಠ ಬೆಂಬಲ ಬೆಲೆಗೆ (ಎಂಎಸ್‌ಪಿ) ಶಾಸನಬದ್ಧ ಕಾನೂನು ರೂಪಿಸಿ ಜಾರಿಗೊಳಿಸಬೇಕು' ಎಂದು ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ಆಗ್ರಹಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಒಡಿಶಾ ಮತ್ತು ಛತ್ತೀಸಗಡ ರಾಜ್ಯಗಳಲ್ಲಿ ಭತ್ತಕ್ಕೆ ₹3,100 ಬೆಂಬಲ ಬೆಲೆ ಘೋಷಣೆ ಮಾಡಲಾಗಿದೆ. ಆದರೆ ಕೇಂದ್ರ ಸರ್ಕಾರ ₹2,300 ಬೆಂಬಲ ಬೆಲೆ ನಿಗದಿಪಡಿಸಿದೆ. ಆದ್ದರಿಂದ ಎಂಎಸ್‌ಪಿಗೆ ಕಾನೂನು ರೂಪಿಸುವಂತೆ ದೇಶದಾದ್ಯಂತ ರೈತರು ಹೋರಾಟ ಮಾಡುತ್ತಿದ್ದಾರೆ' ಎಂದು ಹೇಳಿದರು.

'ತೆಲಂಗಾಣದಲ್ಲಿ ₹2 ಲಕ್ಷದವರೆಗಿನ ರೈತರ ಸಾಲ ಮನ್ನಾ ಮಾಡಲಾಗುತ್ತಿದೆ. ಜೊತೆಗೆ ವಾರ್ಷಿಕ ಒಂದು ಎಕರೆ ಭೂಮಿ ಹೊಂದಿರುವ ರೈತರಿಗೆ ₹15 ಸಾವಿರ ಪ್ರೋತ್ಸಾಹಧನ ನೀಡಲಾಗುತ್ತಿದೆ. ಆದರೆ, ನಮ್ಮ ರಾಜ್ಯದಲ್ಲಿ ತೀವ್ರ ಬರಗಾಲ ವಿದ್ದಾಗಲೂ ರೈತರಿಗೆ ಸೂಕ್ತ ಪರಿಹಾರ ನೀಡಿಲ್ಲ. ಕಿಸಾನ್ ಸಮ್ಮಾನ್ ಯೋಜನೆಯ ಮೂಲಕ ರೈತರಿಗೆ ನೀಡುತ್ತಿದ್ದ ₹4 ಸಾವಿರ ಸ್ಥಗಿತಗೊಳಿಸುವ ಮೂಲಕ ರಾಜ್ಯ ಸರ್ಕಾರ ರೈತರಿಗೆ ದ್ರೋಹ ಮಾಡಿದೆ' ಎಂದು ದೂರಿದರು.

'ಸರ್ಕಾರ ರೈತರ ಹೆಸರಿನಲ್ಲಿ ಹಾಲಿನ ದರ ಹೆಚ್ಚಳ ಮಾಡಿದೆ. ಆದರೆ, ಹಾಲು ಉತ್ಪಾದಕರಿಗೆ ರಾಜ್ಯ ಸರ್ಕಾರ ನೀಡುತ್ತಿದ್ದ ₹5 ಪ್ರೋತ್ಸಾಹ ಧನ ಬಿಡುಗಡೆ ಮಾಡುತ್ತಿಲ್ಲ' ಎಂದು ಹೇಳಿದರು.

ತಯಾರಿಕಾ ಘಟಕ ಸ್ಥಾಪನೆಗೆ ಒಪ್ಪಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತುಮಕೂರಿನ ಬಳಿ ಇರುವ ಜಪಾನ್ ಕೈಗಾರಿಕಾ ಟೌನ್‌ಶಿಪ್‌ನಲ್ಲಿ ₹210 ಕೋಟಿ ವೆಚ್ಚದಲ್ಲಿ ವಾಹನಗಳ ಬಿಡಿ ಭಾಗಗಳ ತಯಾರಿಕಾ ಘಟಕ ಸ್ಥಾಪನೆಗೆ ಅವೊಯಮಾ ಸೈಸಕುಷೊ ಕಂಪನಿ ಮತ್ತು ರಾಜ್ಯದ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಜಪಾನ್‌ನ ನಗೋಯಾ ನಗರದಲ್ಲಿ ಬುಧವಾರ ಸಹಿ ಹಾಕಿವೆ.

ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ನೇತೃತ್ವದ ನಿಯೋಗವು ಜಪಾನ್ ಪ್ರವಾಸ ಕೈಗೊಂಡಿದೆ. ಈ ಸಂದರ್ಭದಲ್ಲಿ ಕೈಗಾರಿಕಾ ಇಲಾಖೆ ಪ್ರಧಾನ ಕಾರ್ಯದರ್ಶಿ ಎಸ್. ಸೆಲ್ವಕುಮಾರ್ ಮತ್ತು ಅವೊಯಮಾ ಸೈಸಕುಷೊ ಕಂಪನಿಯ ಅಧ್ಯಕ್ಷ ಯುಕಿಯೋಷಿ ಅವೊಯಮಾ ಅವರು ಒಪ್ಪಂದಕ್ಕೆ ಸಹಿ ಹಾಕಿದರು.

ಟೊಯೊಟಾ ಕಂಪನಿಯ ವಾಹನಗಳ ಬಿಡಿ ಭಾಗಗಳನ್ನು ತಯಾರಿಸುವ ಅವೊಯಮಾ, ತುಮಕೂರಿನ ಜಪಾನ್ ಕೈಗಾರಿಕಾ ಟೌನ್‌ಶಿಪ್‌ನಲ್ಲಿ 20 ಎಕರೆಯಲ್ಲಿ ಘಟಕ ಸ್ಥಾಪಿಸಲಿದೆ ಎಂದು ಕೈಗಾರಿಕಾ ಸಚಿವರ ಕಚೇರಿಯ ಪ್ರಕಟಣೆ ತಿಳಿಸಿದೆ.

ಟೊಯೊಟಾ ಕಂಪನಿ ಕೇಂದ್ರ ಕಚೇರಿಗೂ ಭೇಟಿ ನೀಡಿದ ನಿಯೋಗವು, ಕಂಪನಿಯ ಯೋಜನಾ ಪ್ರಧಾನ ವ್ಯವಸ್ಥಾಪಕ ಟಕಾವೊ ಐಬಾ, ಟೊಯೊಟಾ ಕಿರ್ಲೋಸ್ಕರ್ ಮೋಟರ್‌ನ ಹಿರಿಯ ಉಪಾಧ್ಯಕ್ಷ ಸುದೀಪ್ ಎಸ್. ದಳವಿ ಅವರನ್ನು ಭೇಟಿ ಮಾಡಿ ಚರ್ಚಿಸಿದೆ.

ಧಾರವಾಡ ಮತ್ತು ಗೌರಿಬಿದನೂರಿನಲ್ಲಿ ವಾಹನ ಉತ್ಪಾದನಾ ಘಟಕಗಳ ಆರಂಭಕ್ಕೆ ಅವಕಾಶ ಕಲ್ಪಿಸುವ ಕುರಿತು ಮಾಹಿತಿ ವಿನಿಮಯ ಮಾಡಿಕೊಂಡಿದೆ ಎಂದು ತಿಳಿಸಿದೆ.

ವಿಧಾನ ಪರಿಷತ್ ಸದಸ್ಯ ಮಂಜುನಾಥ ಭಂಡಾರಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಆಯುಕ್ತರಾದ ಗುಂಜನ್ ಕೃಷ್ಣ ಅವರು ಈ ನಿಯೋಗದಲ್ಲಿ ಇದ್ದರು.

ಮಾದಕ ವ್ಯಸನಿಗಳು 5 ಕೋಟಿ: ಜಿ.ಪರಮೇಶ್ವರ ಮಾಹಿತಿ

₹40 ಕೋಟಿ ಮೌಲ್ಯದ ಡ್ರಗ್ಸ್ ನಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಕಾರ್ಯಾಚರಣೆ ನಡೆಸಿ ಆರೋಪಿಗಳಿಂದ ಜಪ್ತಿ ಮಾಡಿಕೊಂಡಿದ್ದ ₹40 ಕೋಟಿ ಮೌಲ್ಯದ ಡ್ರಗ್ಸ್ ಅನ್ನು ನಾಶ ಪಡಿಸಲಾಗಿದ್ದು, 10 ಟನ್ ಗಾಂಜಾ ಸುಟ್ಟು ಹಾಕಲಾಗಿದೆ ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

ರಾಜ್ಯ ಪೊಲೀಸ್ ಇಲಾಖೆ ಹಾಗೂ ವಿವಿಧ ಶಿಕ್ಷಣ ಸಂಸ್ಥೆಗಳ ಆಶ್ರಯದಲ್ಲಿ ಬುಧವಾರ ನಡೆದ ಅಂತರ ರಾಷ್ಟ್ರೀಯ ಮಾದಕ ವಸ್ತು ವ್ಯಸನ ಮತ್ತು ಮಾನವ ಕಳ್ಳ ಸಾಗಾಣಿಕೆ ವಿರೋಧಿ ದಿನದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ರಾಜ್ಯ ಸರ್ಕಾರ ಡ್ರಗ್ಸ್ ಮುಕ್ತ ಕರ್ನಾಟಕ ನಿರ್ಮಾಣದ ಘೋಷಣೆ ಮಾಡಿದೆ. ಸಂಪೂರ್ಣವಾಗಿ ಡ್ರಗ್ಸ್ ಮಟ್ಟ ಹಾಕುವ ನಿಟ್ಟಿನಲ್ಲಿ ಇಲಾಖೆಯು ಯುದ್ಧವನ್ನೇ ಸಾರಿದೆ ಎಂದು ಹೇಳಿದರು.

ವಿಶ್ವದೆಲ್ಲೆಡೆ ಮಾದಕ ದ್ರವ್ಯ ಆಧುನಿಕ ಪಿಡುಗು ಆಗಿದ್ದು, ಯುವ ಸಮುದಾಯವನ್ನೇ ಹಾಳು ಮಾಡುತ್ತಿದೆ ಎಂದು ಹೇಳಿದರು.

ದೇಶದಲ್ಲಿ 5 ಕೋಟಿ ಜನರು ಮಾದಕ ವ್ಯಸನಕ್ಕೆ ಅಂಟಿಕೊಂಡಿದ್ದಾರೆ ಎಂದು ಅಂದಾಜಿಸಲಾಗಿದೆ. ಯುವಕರು ಹಾಳಾದರೆ, ದೇಶ ಸಂಕಷ್ಟಕ್ಕೆ ಸಿಲುಕಲಿದೆ ಎಂದು ಹೇಳಿದರು.



ಬೆಂಗಳೂರಿನಲ್ಲಿ ಬುಧವಾರ ನಡೆದ ಅಂತರರಾಷ್ಟ್ರೀಯ ಮಾದಕ ವಸ್ತು ವ್ಯಸನ ಮತ್ತು ಮಾನವ ಕಳ್ಳ ಸಾಗಾಣಿಕೆ ವಿರೋಧಿ ದಿನದ ಕಾರ್ಯಕ್ರಮದಲ್ಲಿ ಗೃಹ ಸಚಿವ ಜಿ.ಪರಮೇಶ್ವರ ಅವರು ಪ್ರತಿಜ್ಞಾ ವಿಧಿ ಬೋಧಿಸಿದರು.

ಕೊಲೆ ಪ್ರಕರಣಗಳನ್ನು ಪತ್ತೆ ಹಚ್ಚುವಾಗ 17ರಿಂದ 20 ವರ್ಷದ ಒಳಗಿನವರೇ ಭಾಗಿ ಆಗುತ್ತಿರುವುದು ಪೊಲೀಸ್ ತನಿಖೆಯಿಂದ ಗೊತ್ತಾಗುತ್ತಿದೆ. ತಪ್ಪಿತಸ್ಥರನ್ನು ತಪಾಸಣೆಗೆ ಒಳಪಡಿಸಿದಾಗ ಮಾದಕ ವ್ಯಸನಿಯಾಗಿದ್ದರು ಎಂಬುದು ತಿಳಿಯುತ್ತಿದೆ. ಮಾದಕ ವ್ಯಸನದಿಂದ ಸಮಾಜಕ್ಕೆ ಅಪಾಯವಿದ್ದು, ಪಾಲಕರು ತಮ್ಮ ಮಕ್ಕಳ ಚಟುವಟಿಕೆಗಳ ಮೇಲೆ ನಿಗಾವಹಿಸಬೇಕು. ಮಾದಕ ವ್ಯಸನದ ದುಷ್ಪರಿಣಾಮಗಳ ಕುರಿತು ಹೆಚ್ಚು ಜಾಗೃತಿ ಮೂಡಿಸುವಂತೆ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ತಿಳಿಸಿದರು.

ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಕೆ.ಗೋವಿಂದರಾಜ್, ಶಾಸಕ ರಿಜ್ವಾನ್ ಅರ್ಷದ್, ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್, ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ, ಸಿಐಡಿ ವಿಭಾಗದ ಡಿಜಿಪಿ ಎಂ.ಎ.ಸಲೀಂ, ಎಡಿಜಿಪಿ ಪ್ರಣಬ್ ಮೋಹಂತಿ, ಆದರ್ಶ ಡೆವಲಪರ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಜಯಶಂಕರ್ ಇದ್ದರು.

'ತಾಳ್ಮೆ ಕಳೆದುಕೊಳ್ಳುವುದು ಬೇಡ'

ಬೆಂಗಳೂರು: 'ನನಗೆ, ನಿಮಗೆ, ನಮ್ಮೆಲ್ಲರಿಗೆ ಇದು ಅಗ್ನಿಪರೀಕ್ಷೆಯ ಸಮಯ. ತಾಳ್ಮೆ ಕಳೆದುಕೊಂಡು ಮಾತನಾಡುವುದರಿಂದ ಹಾನಿಯಾಗುವುದು ನಮಗೇ. ಆದ್ದರಿಂದ ತಾಳ್ಮೆ, ಶಾಂತಿಯಿಂದ ಇರೋಣ'.

-ಹೀಗೆ ಮನವಿ ಮಾಡಿರುವುದು ನಟ ದರ್ಶನ್ ಅವರ ಪತ್ನಿ ವಿಜಯಲಕ್ಷ್ಮಿ. ಕೊಲೆ ಪ್ರಕರಣದಲ್ಲಿ ದರ್ಶನ್ ಅವರು ನ್ಯಾಯಾಂಗ ಬಂಧನದಲ್ಲಿದ್ದು ಅವರನ್ನು ನೋಡಲು ಅಭಿಮಾನಿಗಳು ಪರಪ್ಪನ ಅಗ್ರಹಾರ ಜೈಲಿನತ್ತ ಬರುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ವಿಜಯಲಕ್ಷ್ಮಿ ಅವರು ಇನ್‌ಸ್ಟಾಗ್ರಾಂ ಮೂಲಕ ಮನವಿ ಮಾಡಿದ್ದಾರೆ.



ವಿಜಯಲಕ್ಷ್ಮಿ

'ನನ್ನ ಪ್ರೀತಿಯ ಸಹೋದರರೇ... ದರ್ಶನ್ ಅವರಿಗೆ ಅಭಿಮಾನಿಗಳು ಎಂದರೆ ಅಪಾರ ಪ್ರೀತಿ. ನೀವು ಅವರನ್ನು ಪ್ರೀತಿಸುವಷ್ಟೇ ಅವರು ಅಭಿಮಾನಿಗಳನ್ನು ತಮ್ಮ ಹೃದಯದಲ್ಲೇ ಹೊತ್ತಿರುವುದು ನಿಮಗೇ ಗೊತ್ತಿದೆ. ನಿಮ್ಮ ಆತಂಕವನ್ನು ದರ್ಶನ್ ಅವರಿಗೆ ತಲುಪಿಸಿದ್ದೇನೆ. ಅವರೂ ನಿಮ್ಮ ಬಗ್ಗೆ ಕಾಳಜಿ ವ್ಯಕ್ತಪಡಿಸಿದ್ದಾರೆ. ನ್ಯಾಯಾಲಯಗಳ ಮೇಲೆ ವಿಶ್ವಾಸ ಇಡೋಣ. ನ್ಯಾಯ ಸಿಗುವ ಸಂಪೂರ್ಣ ವಿಶ್ವಾಸ ನನಗಿದೆ. ಇಂತಹ ಕಷ್ಟದ ಸಮಯದಲ್ಲಿ ದರ್ಶನ್ ಅವರ ಅನುಪಸ್ಥಿತಿಯನ್ನು ದುರುಪಯೋಗ ಪಡಿಸಿಕೊಂಡು ಅವರಿಗೆ ಕೇಡು ಬಯಸುವವರನ್ನು ತಾಯಿ ಚಾಮುಂಡೇಶ್ವರಿ ನೋಡಿಕೊಳ್ಳುತ್ತಾಳೆ. ಮತ್ತೆ ಒಳ್ಳೆಯ ಸಮಯ ಮರಳಿ ಬರಲಿದೆ. ಸತ್ಯ ಮೇವ ಜಯತೆ' ಎಂದು ಅವರು ಪೋಸ್ಟ್ ಮಾಡಿದ್ದಾರೆ.

ನಗರದಲ್ಲಿ ಇಂದು

ನಾಡಪ್ರಭು ಕೆಂಪೇಗೌಡರ ಜಯಂತಿ: ಸಾನ್ನಿಧ್ಯ: ನಂಜಾವಧೂತ ಸ್ವಾಮೀಜಿ, ಉದ್ಘಾಟನೆ: ಶೋಭಾ ಕರಂದ್ಲಾಜೆ, ಅಧ್ಯಕ್ಷತೆ: ಎಸ್.ಟಿ. ಸೋಮಶೇಖರ್, ಅತಿಥಿಗಳು: ಟಿ.ಎನ್. ಜವರಾಯಿಗೌಡ, 'ನಾಡಪ್ರಭು ಕೆಂಪೇಗೌಡರ ಬಗ್ಗೆ ಉಪನ್ಯಾಸ': ಎನ್. ಶೇಖ್ ಮಸ್ತಾನ್, ಆಯೋಜನೆ: ಉಲ್ಲಾಳು ವಾರ್ಡ್ ನಾಗರಿಕರ ವೇದಿಕೆ, ಸ್ಥಳ: ನಗೆಮನೆ ಆವರಣ, ಬೆಳಿಗ್ಗೆ 9ರಿಂದ



ನಿರ್ಮಲಾನಂದ ನಾಥ ಸ್ವಾಮೀಜಿ

ನಾಡಪ್ರಭು ಕೆಂಪೇಗೌಡರ ಜಯಂತಿ: ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ನಂಜಾವಧೂತ ಸ್ವಾಮೀಜಿ, ಚಂದ್ರಶೇಖರ ಸ್ವಾಮೀಜಿ, ಉದ್ಘಾಟನೆ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಶೋಭಾ ಕರಂದ್ಲಾಜೆ, ವಿ. ಸೋಮಣ್ಣ, ಬಸವರಾಜ ಹೊರಟ್ಟಿ, ಯು.ಟಿ. ಖಾದರ್, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಆಯೋಜನೆ: ನಾಡಪ್ರಭು ಕೆಂಪೇಗೌಡ ಪಾರಂಪರಿಕ ತಾಣದ ಅಭಿವೃದ್ಧಿ ಪ್ರಾಧಿಕಾರ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ಕಂಠೀರವ ಒಳಾಂಗಣ ಕ್ರೀಡಾಂಗಣ, ಕಸ್ತೂರಬಾ ರಸ್ತೆ, ಬೆಳಿಗ್ಗೆ 10

ಅಂತರರಾಷ್ಟ್ರೀಯ ಜಲ ಉತ್ಸವ ಮೇಳ–2024: ಆಯೋಜನೆ: ವಾಟರ್ ಇಂಡಿಯಾ, ಸ್ಥಳ: ಮ್ಯಾನ್‌ಫೊ ಕನ್ವೆನ್ಷನ್ ಸೆಂಟರ್, ಮಾನ್ಯತಾ ಟೆಕ್ ಪಾರ್ಕ್, ಬೆಳಿಗ್ಗೆ 11.30

ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿಯ ಪದ್ಮನಾಭನಗರ ವಿಧಾನಸಭಾ ಘಟಕದ ಉದ್ಘಾಟನೆ: ಮಹೇಶ ಜೋಶಿ, ಅಧ್ಯಕ್ಷತೆ: ಎ.ಎಚ್. ಬಸವರಾಜು, ಅತಿಥಿಗಳು: ಡಾ.ಸಿ.ಆರ್. ಚಂದ್ರಶೇಖರ್, ನಾ. ಶ್ರೀಧರ್, ಎಂ. ಲಕ್ಷ್ಮಿನರಸಿಂಹ, ಟಿ. ವಿಜಯ್, ಅಂಶು ಶರ್ಮ, ಶಿವನಂಜಪ್ಪ, ಅನಿತಾ ಭಾರದ್ವಾಜ್, ಎಂ. ಪುಟ್ಟರಾಜು, ಆಯೋಜನೆ: ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ, ಸ್ಥಳ: ಸುಚಿತ್ರಾ ಪೂರ್ವಂಕರ ಸಿನಿಮಾ ಕಲ್ಚರಲ್ ಫೌಂಡೇಷನ್, ನಾಣಿ ಅಂಗಳ, ಬಿ.ವಿ. ಕಾರಂತ ರಸ್ತೆ, ಬನಶಂಕರಿ 2ನೇ ಹಂತ, ಬೆಳಿಗ್ಗೆ 11

'ಸಿಜಿಕೆ ಎಂಬ ಸೂಜಿಗಲ್ಲು', 'ಪಂಚನ' ನಾಟಕ ಪ್ರದರ್ಶನ: ರಚನೆ: ಸಿದ್ಧಲಿಂಗಯ್ಯ, ನಿರ್ದೇಶನ: ಸಿಜಿಕೆ, ಪ್ರಸ್ತುತಿ: ಸಮುದಾಯ, ಮರುನಿರ್ದೇಶನ: ರವಿ ಸಿರಿವರ, ಸಂಗೀತ: ಜನ್ನಿ, ನಿರ್ವಹಣೆ: ಜೆ.ಸಿ. ಶಶಿಧರ್, ಪ್ರಸಾಧನ: ರಾಮಕೃಷ್ಣ ಬೆಳ್ತೂರು, ಸಹಾಯ: ಫೈರೋಜ್, ಅಧ್ಯಕ್ಷತೆ: ಎಸ್. ಜಿ. ಸಿದ್ಧರಾಮಯ್ಯ, ಅತಿಥಿಗಳು: ಎಲ್.ಎನ್. ಮುಕುಂದರಾಜ್, ಕೆ.ವಿ. ನಾಗರಾಜಮೂರ್ತಿ, ಎಂ. ಪ್ರಕಾಶಮೂರ್ತಿ, ಎ.ಆರ್. ಗೋವಿಂದಸ್ವಾಮಿ, ಮಾವಳ್ಳಿ ಶಂಕರ್, ಮಂಜುನಾಥ ಅದ್ದೆ, ಜಯಲಕ್ಷ್ಮಿ ಸಿಜಿಕೆ, ಆಯೋಜನೆ: ರಂಗಚಂದಿರ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 5.30

'ಡಾ.ಬಿ.ಆರ್. ಮಮತಾ–60' ಅಭಿನಂದನಾ ಕಾರ್ಯಕ್ರಮ: ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ಅತಿಥಿಗಳು: ಸುಧಾಕರ ರಾವ್, ಎಂ.ಆರ್. ಶ್ರೀನಿವಾಸಮೂರ್ತಿ, ಎಂ.ಕೆ. ಶಂಕರಲಿಂಗೇಗೌಡ, ಶಾಲಿನಿ ರಜನೀಶ್, ಪಿ. ರಾಮಯ್ಯ, ನಾಹಿದ್ ಅತಾವುಲ್ಲಾ, ಆಯೋಜನೆ ಮಮತಾ ಸ್ನೇಹ ಬಳಗ, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಸಂಜೆ 4.30

'ಸಿಜಿಕೆ ಒಂದು ಮಾಂತ್ರಿಕ ಮಾಯೆ'

'ಸಿಜಿಕೆ ರಂಗ ಪುರಸ್ಕಾರ': ಎಂ.ಎಸ್. ಮೂರ್ತಿ, ಅಧ್ಯಕ್ಷತೆ: ಆರ್.ಪಿ. ಮೋಹನ್, ಅತಿಥಿಗಳು: ಶಂಕರಪ್ಪ ಕೆ.ಜೆ., ಕೆ. ರಾಮಕೃಷ್ಣಯ್ಯ, ಎಂ. ಚನ್ನಕೇಶಮೂರ್ತಿ, ಪ್ರಶಸ್ತಿ ಪುರಸ್ಕೃತರು: ಮೈಕೊ ಶಿವಶಂಕರ್, ಆಯೋಜನೆ: ಕರ್ನಾಟಕ ಬೀದಿನಾಟಕ ಅಕಾಡೆಮಿ, ಸ್ಥಳ: ಕುವೆಂಪು ಕಲಾಕ್ಷೇತ್ರ, ಬಿಇಎಲ್ ಕಾರ್ಖಾನೆ ಆವರಣ, ಜಾಲಹಳ್ಳಿ, ಸಂಜೆ 6

'ನಾಗರಿಕ ಸಮಾಜದಲ್ಲಿ ಬ್ಯಾಂಕುಗಳ ಪಾತ್ರ' ಕುರಿತು ಉಪನ್ಯಾಸ: ಶಂಕರ್ ಭಟ್, ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30

ಹರಿನಾಮ ಘೋಷ: ಐಶ್ವರ್ಯ ಶ್ರೀನಿಧಿ ಕುಲಕರ್ಣಿ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಪವಮಾನಪುರ, ಸಂಜೆ 7

ವೀಣಾ ವಾದನ: ಆರ್.ಎ. ದಕ್ಷಿಣಾಮೂರ್ತಿ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಜಯನಗರದ 5ನೇ ಬಡಾವಣೆ, ಸಂಜೆ 7.30

ಈ ವರ್ಷ 1,230 ಪ್ರಕರಣ ಪತ್ತೆ; ಎಲ್ಲೆಡೆ ಜಾಗೃತಿ ಮೂಡಿಸಲು ಕ್ರಮ –ತುಷಾರ್ ಗಿರಿನಾಥ್

ಡೆಂಗಿ ನಿಯಂತ್ರಣಕ್ಕೆ ಮನೆಮನೆ ಸಮೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಡೆಂಗಿ ಹರಡುವುದನ್ನು ನಿಯಂತ್ರಿಸಲು ಮನೆ-ಮನೆ ಸಮೀಕ್ಷೆ ನಡೆಸಿ, ಜಾಗೃತಿ ಮೂಡಿಸಲಾಗುತ್ತಿದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

ವಲಯ ವ್ಯಾಪ್ತಿಯಲ್ಲಿ ಆರೋಗ್ಯ ಪರಿವೀಕ್ಷಕರು, ಆಶಾ ಕಾರ್ಯಕರ್ತೆಯರು, ಎಎನ್‌ಎಂ ಹಾಗೂ ಲಿಂಕ್ ವರ್ಕರ್‌ಗಳು ಒಂದು ಸಾವಿರ ಮನೆಗಳಿಗೆ ಒಂದು ಬ್ಲಾಕ್ ರಚಿಸಿಕೊಳ್ಳಲಿದ್ದಾರೆ. ಅವರು, ಲಾರ್ವಾ ಇರುವ ತಾಣಗಳನ್ನು ಗುರುತಿಸುವ ಜೊತೆಗೆ, ನಾಗರಿಕರಲ್ಲಿ ಅರಿವು ಮೂಡಿಸಲಿದ್ದಾರೆ. ಯಾರಿಗಾದರೂ ಜ್ವರ ಬಂದಿದ್ದಲ್ಲಿ ಅಂತಹವರಿಗೆ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ತೆರಳಿ ಪರೀಕ್ಷೆ ಮಾಡಿಸಿಕೊಳ್ಳಲು ತಿಳಿಸುತ್ತಾರೆ. ಸಮಗ್ರವಾಗಿ ಮನೆ-ಮನೆ ಸಮೀಕ್ಷೆ ನಡೆಸಿದ ವರದಿಯನ್ನು ನೀಡಲು ವಲಯ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಬುಧವಾರ ಸುದ್ದಿಗಾರರಿಗೆ ಮಾಹಿತಿ ನೀಡಿದರು.

ಈಡಿಸ್, ಈಜಿಪ್ಟೈ ಎಂಬ ಸೊಳ್ಳೆಗಳಿಂದ ಡೆಂಗಿ ಹರಡುತ್ತದೆ. ಈ ನಿಟ್ಟಿನಲ್ಲಿ ಸೊಳ್ಳೆ ನಿಯಂತ್ರಣ ಮಾಡಲು ಲಾರ್ವಾ ಉತ್ಪತ್ತಿಯಾಗುವ ತಾಣಗಳನ್ನು ಗುರುತಿಸಿ ನಾಶಪಡಿಸಲು ಸೂಚಿಸಲಾಗಿದೆ. ನಗರದಲ್ಲಿ 2024ರ ಜನವರಿಯಿಂದ ಜೂನ್‌ವರೆಗೆ 1,230 ಪ್ರಕರಣಗಳು ಕಂಡುಬಂದಿದ್ದು, ಕಳೆದ ವರ್ಷದಲ್ಲಿ ಜೂನ್‌ವರೆಗೆ 732 ಪ್ರಕರಣ ದಾಖಲಾಗಿದ್ದವು. ವಲಯವಾರು ಮೈಕ್ರೊ ಪ್ಲಾನ್ ಮಾಡಿಕೊಂಡು ಡೆಂಗಿ ಹರಡುವಿಕೆಯನ್ನು ನಿಯಂತ್ರಿಸಲು ಆದೇಶಿಸಲಾಗಿದೆ ಎಂದರು.



ಡೆಂಗಿ ಹರಡುವ ಈಡಿಸ್ ಸೊಳ್ಳೆ

ಹೆಚ್ಚು ಪ್ರಕರಣಗಳಿರುವ ಕಡೆ ತೀವ್ರ ನಿಗಾ

ಮಹದೇವಪುರ, ದಕ್ಷಿಣ ವಲಯ ಹಾಗೂ ಪೂರ್ವ ವಲಯಗಳಲ್ಲಿ ಡೆಂಗಿ ಪ್ರಕರಣಗಳು ಹೆಚ್ಚು ಕಂಡುಬಂದಿದ್ದು, ಆ ಪ್ರದೇಶಗಳಲ್ಲಿ ತೀವ್ರ ನಿಗಾವಹಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

ತೋಟಗಾರಿಕಾ, ಅರಣ್ಯ, ಘನತ್ಯಾಜ್ಯ, ಬೃಹತ್ ನೀರುಗಾಲುವೆ, ರಸ್ತೆ ಮೂಲಸೌಕರ್ಯ ವಿಭಾಗ ಸೇರಿದಂತೆ ಇನ್ನಿತರ ವಿಭಾಗಗಳ ಜೊತೆ ವಲಯವಾರು ಸಮನ್ವಯ ಸಾಧಿಸಿ, ನೀರು ನಿಲ್ಲುವ ಪ್ರದೇಶಗಳನ್ನು ಗುರುತಿಸಿ ನೀರು ನಿಲ್ಲದಂತೆ ಕ್ರಮವಹಿಸಲಾಗುವುದು ಎಂದು ಹೇಳಿದರು.

ನಗರದಲ್ಲಿ ಮಳೆ ಬಿಟ್ಟು ಬಿಟ್ಟು ಬರುತ್ತಿರುವ ಹಿನ್ನೆಲೆಯಲ್ಲಿ ಸೊಳ್ಳೆಗಳ ಉತ್ಪತ್ತಿ ಹೆಚ್ಚಾಗುತ್ತಿದೆ. ಈ ನಿಟ್ಟಿನಲ್ಲಿ ಜಾಗೃತಿ ಚಟುವಟಿಕೆಗಳನ್ನು ಹೆಚ್ಚಾಗಿ ನಡೆಸಲಾಗುತ್ತಿದೆ ಎಂದು ಹೇಳಿದರು.

ಡೆಂಗಿ ಪರೀಕ್ಷೆ: ನಗರದಲ್ಲಿ ಡೆಂಗಿ ಪ್ರಕರಣಗಳು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ, ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಎನ್.ಎಸ್ 1 ಟೆಸ್ಟ್ ಕಿಟ್ ಮೂಲಕ ಪರೀಕ್ಷೆ ಮಾಡಲು ಸೂಚಿಸಲಾಗಿದೆ. ರೋಗದ ಲಕ್ಷಣ ಕಂಡುಬಂದರೆ ರಕ್ತದ ಮಾದರಿ ಸಂಗ್ರಹಿಸಿ ಪ್ರಯೋಗಾಲಯಗಳಿಗೆ ಕಳುಹಿಸಿ ಕೊಡಲಾಗುವುದು ಎಂದು ತುಷಾರ್ ಗಿರಿನಾಥ್ ತಿಳಿಸಿದರು.


15 ದಿನಕ್ಕೊಮ್ಮೆ ಮನೆ-ಮನೆ ಭೇಟಿ: ಪಾಲಿಕೆ ವ್ಯಾಪ್ತಿಯಲ್ಲಿರುವ 28 ಲಕ್ಷ ಮನೆಗಳಲ್ಲಿ 14 ಲಕ್ಷ ಮನೆಗಳು ಬಡ ವರ್ಗವಿರುವ ಪ್ರದೇಶ, ಜನ ಸಂಖ್ಯೆ ಹೆಚ್ಚಿರುವ ಪ್ರದೇಶ ಹಾಗೂ ತಗ್ಗು ಪ್ರದೇಶಗಳಲ್ಲಿವೆ. ಈ ಪ್ರದೇಶಗಳ ಮನೆಗಳಿಗೆ 15 ದಿನಕ್ಕೊಮ್ಮೆ ಭೇಟಿ ನೀಡಿ, ಲಾರ್ವಾ ಉತ್ಪತ್ತಿ ಪರಿಶೀಲಿಸಲಾಗುತ್ತದೆ. ಮನೆ-ಮನೆ ಸಮೀಕ್ಷೆಯಲ್ಲಿ ನರ್ಸಿಂಗ್ ಕಾಲೇಜು ವಿದ್ಯಾರ್ಥಿಗಳು ಹಾಗೂ ಎನ್.ಎಸ್.ಎಸ್ ಸ್ವಯಂ ಸೇವಕರನ್ನು ನಿಯೋಜಿಸಿಕೊಳ್ಳಲು ಕ್ರಮವಹಿಸಲಾಗುತ್ತಿದೆ ಎಂದು ಹೇಳಿದರು.

ಎಲ್ಲೆಲ್ಲಿ ಹೆಚ್ಚು ಡೆಂಗಿ?

(2024 ಜನವರಿಯಿಂದ ಜೂನ್ 26ರವರೆಗೆ)

ವಲಯ	ಪ್ರಕರಣ
ಮಹದೇವಪುರ	386
ಪೂರ್ವ	218
ದಕ್ಷಿಣ	190
ಪಶ್ಚಿಮ	141
ಬೊಮ್ಮನಹಳ್ಳಿ	122
ಆರ್.ಆರ್ ನಗರ	75
ಯಲಹಂಕ	90
ದಾಸರಹಳ್ಳಿ	8

ವರ್ಷವಾರು ಡೆಂಗಿ ಪ್ರಕರಣ



‘ಅಪರಾಧಕ್ಕೆ ತಕ್ಕ ಶಿಕ್ಷೆಯಾಗಲಿ’

ಬ್ಯಾಂಕ್ ಅಧಿಕಾರಿ ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿಷ್ಕರಲ್ಲದ ಸಾಲಗಾರರಿಗೆ ಮನಬಂದಂತೆ ಸಾಲ ಮಂಜೂರು ಮಾಡಿದ ಮತ್ತು ಮರುಪಾವತಿಗೆ ಪಡೆಯಬೇಕಿದ್ದ ಭದ್ರತೆಗಳಲ್ಲಿ ರಾಜಿ ಮಾಡಿಕೊಂಡಿರುವ ಆರೋಪಕ್ಕೆ ಸಂಬಂಧಿಸಿದಂತೆ ಸೇವೆಯಿಂದ ವಜಾಗೊಂಡ ಬ್ಯಾಂಕ್ ಅಧಿಕಾರಿಯ ಮೇಲ್ಮನವಿಯನ್ನು ಭಾಗಶಃ ಪುರಸ್ಕರಿಸಿರುವ ಹೈಕೋರ್ಟ್, ‘ಯಾವುದೇ ತಪ್ಪಿತಸ್ಥ ನೌಕರನಿಗೆ ನೀಡುವ ಶಿಕ್ಷೆಯು ಆತ ಎಸಗಿದ ಅಪರಾಧಕ್ಕೆ ಅನುಗುಣವಾಗಿರಬೇಕು’ ಎಂದು ಸ್ಪಷ್ಟಪಡಿಸಿದೆ.

ಸಿಂಡಿಕೇಟ್ ಬ್ಯಾಂಕ್‌ನ ನಿವೃತ್ತ ಮ್ಯಾನೇಜರ್ ಆದ ನಾಗರಬಾವಿಯ ಎಂ.ಆರ್.ನಾಗರಾಜನ್ ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಮತ್ತು ನ್ಯಾಯಮೂರ್ತಿ ರಾಮಚಂದ್ರ ಡಿ.ಹುದ್ದಾರ ಅವರಿದ್ದ ವಿಭಾಗೀಯ ನ್ಯಾಯಪೀಠವು, ‘ಶಿಕ್ಷೆ ನೀಡುವಾಗ ಆ ನೌಕರ ಸುದೀರ್ಘವಾಗಿ ಕಳಂಕ ರಹಿತರಾಗಿ ಸೇವೆ ಸಲ್ಲಿಸಿದ ಅವಧಿ, ಪಡೆದಿರುವ ಬಡ್ತಿ, ನಿವೃತ್ತಿಗೆ ಇರುವ ಅವಧಿಯೂ ಸೇರಿದಂತೆ ಅಗತ್ಯ ಅಂಶಗಳನ್ನು ಪರಿಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ’ ಎಂಬ ಅಭಿಪ್ರಾಯ ವ್ಯಕ್ತಪಡಿಸಿದೆ.



‘ನಾಗರಾಜನ್ 1979ರಲ್ಲಿ ಬ್ಯಾಂಕ್‌ನಲ್ಲಿ ಕ್ಲರ್ಕ್ ಆಗಿ ಸೇವೆಗೆ ಸೇರ್ಪಡೆಯಾಗಿದ್ದಾರೆ. 1996ರಲ್ಲಿ ಮೊದಲ ಬಡ್ತಿ ಪಡೆದು ಅಧಿಕಾರಿಯಾದ ಮರು ವರ್ಷವೇ ಮ್ಯಾನೇಜರ್ ಆಗಿ ಬಡ್ತಿ ಹೊಂದಿದ್ದರಲ್ಲದೆ, ‘ಸ್ಟಾರ್ ಪರ್ಫಾರ್ಮರ್’ ಪ್ರಶಸ್ತಿಯನ್ನೂ ಪಡೆದಿರುವುದು ದಾಖಲೆಗಳಲ್ಲಿದೆ. ₹400 ಕೋಟಿ ಸಾಲ ವಸೂಲು ಮಾಡಿ ಉತ್ತಮ ಉದ್ಯೋಗಿ ಎಂಬ ಪ್ರಮಾಣ ಪತ್ರ ಪಡೆದಿದ್ದರು ಎಂದೂ ಈ ದಾಖಲೆಗಳಲ್ಲಿ ತಿಳಿಸಲಾಗಿದೆ. ಹೀಗಿರುವಾಗ, ಈ ಎಲ್ಲಾ ಅಂಶಗಳನ್ನು ವಿಚಾರಣೆ ವೇಳೆ ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ’ ಎಂದು ನ್ಯಾಯಪೀಠ ವಿವರಿಸಿದೆ.

‘ಈ ಪ್ರಕರಣದಲ್ಲಿ ಅರ್ಜಿದಾರರಿಗೆ ಕ್ಲೀನ್ ಚಿಟ್ ನೀಡಲಾಗದು. ಈಗಾಗಲೇ ಅವರು ತಮ್ಮ ಸೇವಾವಧಿ ಪೂರೈಸಿ ನಿವೃತ್ತರಾಗಿರುವ ಕಾರಣ, ಈ ಹಂತದಲ್ಲಿ ವಜಾ ಆದೇಶ ರದ್ದುಗೊಳಿಸುವುದು ಮತ್ತು ಪುನಃ ಕೆಲಸಕ್ಕೆ ತೆಗೆದುಕೊಳ್ಳುವಂತೆ ಆದೇಶಿಸುವುದು ಕಾರ್ಯಸಾಧುವಲ್ಲ’ ಎಂದು ಸ್ಪಷ್ಟಪಡಿಸಿದೆ.

‘ನನ್ನ ವಿರುದ್ಧದ ಆರೋಪಗಳನ್ನು ಪರಿಗಣಿಸುವಾಗ ಶಿಸ್ತು ಮತ್ತು ಮೇಲ್ಮನವಿ ಪ್ರಾಧಿಕಾರಗಳು ಯಾವುದೇ ಸಾಕ್ಷ್ಯಾಧಾರ ಪರಿಗಣಿಸಿಲ್ಲ. ಹಾಗಾಗಿ, ನನ್ನ ವಜಾ ಆದೇಶವನ್ನು ರದ್ದುಗೊಳಿಸಬೇಕು’ ಎಂದು ನಾಗರಾಜನ್ ಅವರು ಕೋರ್ಟ್ ಮೆಟ್ಟಿಲೇರಿದ್ದರು.

‘ಪ್ರಾಣಹಾನಿ ತಡೆಗೆ ಜಾಗೃತಿ ಅಗತ್ಯ’

ರಾಷ್ಟ್ರೀಯ ವಿದ್ಯುತ್ ಸುರಕ್ಷತಾ ಸಪ್ತಾಹ ಜಾಥಾಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿದ್ಯುತ್ ಅವಘಡದಿಂದ ಸಂಭವಿಸುವ ಪ್ರಾಣ ಹಾನಿ ತಪ್ಪಿಸಲು, ವಿದ್ಯುತ್ ಶಾರ್ಟ್ ಸರ್ಕೀಟ್‌ನಿಂದ ಉಂಟಾಗುವ ಅನಾಹುತ, ಆಸ್ತಿ ನಷ್ಟ ತಪ್ಪಿಸಲು ಜನರು ಜಾಗೃತರಾಗುವುದು ಅಗತ್ಯ’ ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ತಿಳಿಸಿದರು.

ನಗರದಲ್ಲಿ ಬುಧವಾರ ಹಮ್ಮಿಕೊಂಡಿದ್ದ ರಾಷ್ಟ್ರೀಯ ವಿದ್ಯುತ್ ಸುರಕ್ಷತಾ ಸಪ್ತಾಹ ಜಾಥಾಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಕೈಗಾರಿಕೆಯಲ್ಲಿ ಕೆಲಸ ಮಾಡುವವರು, ಶಾಲಾ ಕಾಲೇಜಿನ ವಿದ್ಯಾರ್ಥಿಗಳು, ವಿದ್ಯುತ್ ಸರಬರಾಜು ಕಂಪನಿ ಸಿಬ್ಬಂದಿ, ವಿದ್ಯುತ್ ಗುತ್ತಿಗೆದಾರರು, ರೈತರು ಹಾಗೂ ಜನರನ್ನು ಈ ಅಭಿಯಾನದ ಮೂಲಕ ತಲುಪಬೇಕು ಎಂದರು.

ರಾಜ್ಯದಲ್ಲಿ ಅಳವಡಿಸಿರುವ, ಮುಂದೆ ಅಳವಡಿಸಲಾಗುವ ವಿದ್ಯುತ್ ಮಾರ್ಗಗಳು, ವಿದ್ಯುತ್ ಪರಿವರ್ತಕಗಳು, ವಿದ್ಯುತ್ ಉಪಸ್ಥಾವರಗಳು, ಬಹುಮಹಡಿ ಕಟ್ಟಡಗಳು ಸೇರಿದಂತೆ ಎಲ್ಲ ವಿದ್ಯುತ್ ಸ್ಥಾವರಗಳಲ್ಲೂ ಸುರಕ್ಷತೆಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತಾ, ಮುಖ್ಯ ವಿದ್ಯುತ್ ಪರಿವೀಕ್ಷಕ ರಾಡ್ಸನ್ ಅಪ್ಪಚ್ಚು, ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕ ಪಂಕಜ್ ಕುಮಾರ್ ಪಾಂಡೆ, ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.



ನಗರದಲ್ಲಿ ಬುಧವಾರ ಇಂಧನ ಇಲಾಖೆ ಆಯೋಜಿಸಿದ್ದ ರಾಷ್ಟ್ರೀಯ ವಿದ್ಯುತ್ ಸುರಕ್ಷತಾ ಸಪ್ತಾಹ –2024ರ ಕಾಲ್ನಡಿಗೆ ಜಾಥಾದಲ್ಲಿ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿ ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ

ತ್ಯಾಜ್ಯ ನಿರ್ವಹಣೆಗೆ ನೋಡಲ್ ಅಧಿಕಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈದ್ಯಕೀಯ ತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ ಆರೋಗ್ಯ ಇಲಾಖೆಯು ನೋಡಲ್ ಅಧಿಕಾರಿಗಳನ್ನು ನಾಮನಿರ್ದೇಶನ ಮಾಡಿ ಆದೇಶ ಹೊರಡಿಸಿದೆ.

ಜಿಲ್ಲಾ ಕೇಂದ್ರಗಳಲ್ಲಿ ಉಸ್ತುವಾರಿಯಾಗಿರುವ ಕುಟುಂಬ ಕಲ್ಯಾಣ ಅಧಿಕಾರಿಗಳು ಮತ್ತು ತಾಲ್ಲೂಕು ಆರೋಗ್ಯ ಅಧಿಕಾರಿಗಳನ್ನು ನೋಡಲ್ ಅಧಿಕಾರಿಗಳನ್ನಾಗಿ ನೇಮಿಸಲಾಗಿದೆ. ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ವೈದ್ಯಕೀಯ ತ್ಯಾಜ್ಯ ಘಟಕಗಳ ನಿರ್ವಹಣೆಯ ಮೇಲ್ವಿಚಾರಣೆ ಮಾಡಿ, ಕಾಲ ಕಾಲಕ್ಕೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವುದು ಈ ನೋಡಲ್ ಅಧಿಕಾರಿಗಳ ಪ್ರಮುಖ ಜವಾಬ್ದಾರಿಯಾಗಿರುತ್ತದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ವೈದ್ಯಕೀಯ ತ್ಯಾಜ್ಯವು ಮಾನವರ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರದಂತೆ ವೈಜ್ಞಾನಿಕವಾಗಿ ವಿಲೇವಾರಿಯಾಗುತ್ತಿದೆ ಎಂಬುದನ್ನು ಅಧಿಕಾರಿಗಳು ಪರಿಶೀಲಿಸಬೇಕು. ಈ ತ್ಯಾಜ್ಯಕ್ಕೆ ಸಂಬಂಧಿಸಿದಂತೆ ವಾರ್ಷಿಕ ವರದಿಗಳನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಸಕಾಲಿಕವಾಗಿ ಸಲ್ಲಿಕೆಯಾಗುವಂತೆ ನೋಡಿಕೊಳ್ಳಬೇಕು. ಬೇರ್ಪಡಿಸಿದ ವೈದ್ಯಕೀಯ ತ್ಯಾಜ್ಯವನ್ನು ಸಂಗ್ರಹಿಸಲು ಸುರಕ್ಷಿತ ಸ್ಥಳ ಇದೆಯೇ ಎನ್ನುವುದನ್ನು ಖಚಿತಪಡಿಸಿಕೊಳ್ಳಬೇಕು. ಸೂಕ್ತ ಸ್ಥಳ ನಿಗದಿಗೆ ಆಸ್ಪತ್ರೆಗಳಿಗೆ ಸೂಚಿಸಬೇಕು ಎಂದು ಹೇಳಲಾಗಿದೆ.

ನಾಗೇಂದ್ರ ಆಪ್ತರಿಂದ ಜೀವ ಬೆದರಿಕೆ: ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಾಜಿ ಸಚಿವ ಬಿ.ನಾಗೇಂದ್ರ ಅವರ ಆಪ್ತರ ಕಡೆಯಿಂದ ನನಗೆ ಮತ್ತು ನನ್ನ ಕುಟುಂಬದ ಸದಸ್ಯರಿಗೆ ಜೀವ ಬೆದರಿಕೆ ಇದೆ’ ಎಂದು ‘ಕರ್ನಾಟಕ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮ’ದಲ್ಲಿನ ಬಹುಕೋಟಿ ಹಗರಣದ ಆರೋಪಿ ಸತ್ಯನಾರಾಯಣ ವರ್ಮಾ ಕೋರ್ಟ್‌ನಲ್ಲಿ ನ್ಯಾಯಾಧೀಶರ ಮುಂದೆ ಆರೋಪಿಸಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಸತ್ಯನಾರಾಯಣ ವರ್ಮಾ ಅವರನ್ನು ಎಸ್‌ಐಟಿ ಪೊಲೀಸರು ನಗರದ 3ನೇ ಹೆಚ್ಚುವರಿ ಮುಖ್ಯ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ (ಎಸಿಎಂಎಂ) ನ್ಯಾಯಾಲಯದ ನ್ಯಾಯಾಧೀಶ ಶ್ರೇಯಾಂಶ್ ದೊಡ್ಡಮನಿ ಅವರ ಮುಂದೆ ಬುಧವಾರ ಹಾಜರುಪಡಿಸಿದ್ದರು.

ವಿಚಾರಣೆ ವೇಳೆ ಆರೋಪಿ ಸತ್ಯನಾರಾಯಣ ವರ್ಮಾ, ‘ಎಸ್‌ಐಟಿ ಪೊಲೀಸರು ನನ್ನನ್ನು ಬಂಧಿಸುವುದಕ್ಕೂ ಮುನ್ನ ಬಿ.ನಾಗೇಂದ್ರ ಅವರ ಸಹಚರರು ನನ್ನ ಕುಟುಂಬಕ್ಕೆ ಜೀವ ಬೆದರಿಕೆ ಹಾಕಿದ್ದರು. ಅಂತೆಯೇ, ಕೋರ್ಟ್‌ನಿಂದ ಹೊರಗೆ ಕರೆದೊಯ್ಯುತ್ತಿದ್ದ ವೇಳೆ ನಾಗೇಂದ್ರ ಅವರ ಆಪ್ತ ನೆಕ್ಕಂಟಿ ನಾಗರಾಜ್ ನನ್ನ ಮೇಲೆ ಹಲ್ಲೆ ನಡೆಸುವ ಪ್ರಯತ್ನ ಮಾಡಿದ್ದರು’ ಎಂದು ಆರೋಪಿಸಿದರು.

‘ವರ್ಮಾ ಅವರ ಆರೋಪಗಳಿಗೆ ಸಂಬಂಧಿಸಿದಂತೆ ತನಿಖೆ ನಡೆಸಿ ವರದಿ ಸಲ್ಲಿಸಿ’ ಎಂದು ನ್ಯಾಯಾಧೀಶರು ಹಲಸೂರು ಗೇಟ್ ಠಾಣೆಯ ಪೊಲೀಸರಿಗೆ ಆದೇಶಿಸಿದ್ದಾರೆ. ಸತ್ಯನಾರಾಯಣ ವರ್ಮಾ ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

13ನೇ ಆರೋಪಿ: ಹಗರಣದ 13ನೇ ಆರೋಪಿಯಾಗಿರುವ ಸತ್ಯನಾರಾಯಣ ವರ್ಮಾ ಅವರನ್ನು ಹೈದರಾಬಾದ್‌ನಲ್ಲಿ ಬಂಧಿಸಿ ಅವರಿಂದ ₹8.21 ಕೋಟಿ ನಗದು ಜಪ್ತಿ ಮಾಡಲಾಗಿದೆ.

ಸತ್ಯನಾರಾಯಣ ಅವರು ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣವನ್ನು ನಕಲಿ ಕಂಪನಿಗಳ ಹೆಸರಿನಲ್ಲಿನ ಖಾತೆಗಳಿಗೆ ಹಾಕಿಸಿಕೊಂಡು, ಲಾಭ ಮಾಡಿಕೊಳ್ಳುವ ಕೃತ್ಯದಲ್ಲಿ ತೊಡಗಿದ್ದರು ಎಂಬ ಆರೋಪ ಎದುರಿಸುತ್ತಿದ್ದಾರೆ.

‘ಬಿಜೆಪಿ, ಮೋದಿ ಎದುರಿಸಲು ರಾಹುಲ್ ಸೂಕ್ತ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಜೆಪಿ ಮತ್ತು ಪ್ರಧಾನಿ ನರೇಂದ್ರಮೋದಿ ಅವರನ್ನು ಎದುರಿಸಲು ರಾಹುಲ್ ಗಾಂಧಿ ಸೂಕ್ತ ವ್ಯಕ್ತಿ. ವಿರೋಧ ಪಕ್ಷದ ನಾಯಕನ ಸ್ಥಾನದ ಜವಾಬ್ದಾರಿಯನ್ನು ಅವರು ವಹಿಸಿಕೊಂಡಿರುವುದು ದೇಶದ ಹಿತದೃಷ್ಟಿಯಿಂದ ಒಳ್ಳೆಯದು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ವಿಧಾನಸೌಧದಲ್ಲಿ ಸುದ್ದಿಗಾರರ ಜತೆ ಬುಧವಾರ ಮಾತನಾಡಿದ ಅವರು, ‘ರಾಹುಲ್‌ಗಾಂಧಿ ವಿರೋಧ ಪಕ್ಷದ ನಾಯಕ ಸ್ಥಾನವನ್ನು ವಹಿಸಿಕೊಳ್ಳಬೇಕು ಎಂದು ನಾನು ಕೂಡ ಸಲಹೆ ನೀಡಿದ್ದೆ’ ಎಂದರು.

‘ಬಿಜೆಪಿ ಮತ್ತು ಮೋದಿಯನ್ನು ಎದುರಿಸಲು ನೀವೇ(ರಾಹುಲ್‌ಗಾಂಧಿ) ವಿರೋಧ ಪಕ್ಷದ ನಾಯಕರಾಗಬೇಕು ಎಂದು ಕಾರ್ಯಕಾರಿಣಿ ಸಮಿತಿಯಲ್ಲಿ ನಾನೂ ಒತ್ತಾಯ ಮಾಡಿದ್ದೆ. ಇದೀಗ ಅವರು ಆ ಜವಾಬ್ದಾರಿಯನ್ನು ವಹಿಸಿಕೊಂಡಿರುವುದರಿಂದ ನನಗೆ ಸಂತಸವಾಗಿದೆ’ ಎಂದರು.

ಕಾಮಗಾರಿ: ರೈಲು ಸಂಚಾರ ಬದಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಗೇರಿ- ಹೆಜ್ಜಾಲ ನಿಲ್ದಾಣಗಳ ಮಧ್ಯದ ರೈಲ್ವೆ ಲೆವೆಲ್ ಕ್ರಾಸಿಂಗ್ ಮತ್ತು ಕೆಎಸ್‌ಆರ್ ಬೆಂಗಳೂರು-ಕಂಟೋನ್ಮೆಂಟ್ ನಿಲ್ದಾಣಗಳ ಮಧ್ಯದ ಸೇತುವೆಯಲ್ಲಿ ಗರ್ಡರ್ ಅಳವಡಿಕೆ, ತೆರವುಗೊಳಿಸುವ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಜುಲೈ 1ರಿಂದ 10ರವರೆಗೆ ರೈಲು ಸಂಚಾರ ವ್ಯತ್ಯಯವಾಗಲಿದೆ.

ಎಂಜಿಆರ್ ಚೆನ್ನೈ ಸೆಂಟ್ರಲ್-ಮೈಸೂರು ದೈನಂದಿನ ಎಕ್ಸ್‌ಪ್ರೆಸ್ ರೈಲು, ಮೈಸೂರು–ಕೆಎಸ್‌ಆರ್ ಬೆಂಗಳೂರು–ಮೈಸೂರು ಮಾಲ್ಗುಡಿ ಎಕ್ಸ್‌ಪ್ರೆಸ್, ಚಾಮರಾಜನಗರ-ತಿರುಪತಿ ಎಕ್ಸ್‌ಪ್ರೆಸ್, ಎಂಜಿಆರ್ ಚೆನ್ನೈ ಸೆಂಟ್ರಲ್-ತಿರುಪತಿ-ಎಂಜಿಆರ್ ಚೆನ್ನೈ ಸೆಂಟ್ರಲ್ ಎಕ್ಸ್‌ಪ್ರೆಸ್, ತಿರುಪತಿ-ಚಾಮರಾಜನಗರ ಎಕ್ಸ್‌ಪ್ರೆಸ್, ಅರಸೀಕೆರೆ-ಮೈಸೂರು ಪ್ಯಾಸೆಂಜರ್ ಸ್ಪೆಷಲ್, ಮೈಸೂರು-ಎಸ್‌ಎಂವಿಟಿ ಬೆಂಗಳೂರು ಪ್ಯಾಸೆಂಜರ್ ಸ್ಪೆಷಲ್, ಮೈಸೂರು-ಕೆಎಸ್‌ಆರ್ ಬೆಂಗಳೂರು ಮೆಮು ಸ್ಪೆಷಲ್, ಎಸ್‌ಎಂವಿಟಿ ಬೆಂಗಳೂರು-ಮೈಸೂರು ಪ್ಯಾಸೆಂಜರ್ ಸ್ಪೆಷಲ್, ಕೆಎಸ್‌ಆರ್ ಬೆಂಗಳೂರು-ಎಂಜಿಆರ್ ಚೆನ್ನೈ ಸೆಂಟ್ರಲ್ ಸೂಪರ್‌ಫಾಸ್ಟ್ ಎಕ್ಸ್‌ಪ್ರೆಸ್, ಮೈಸೂರು-ಅರಸೀಕೆರೆ ಪ್ಯಾಸೆಂಜರ್ ಸ್ಪೆಷಲ್, ಕೆಎಸ್‌ಆರ್ ಬೆಂಗಳೂರು- ಮೈಸೂರು ಮೆಮು ಸ್ಪೆಷಲ್, ರೈಲು, ಕೆಎಸ್‌ಆರ್ ಬೆಂಗಳೂರು-ಚನ್ನಪಟ್ಟಣ ಮೆಮು ಸ್ಪೆಷಲ್ ರೈಲುಗಳ ಸಂಚಾರ ರದ್ದಾಗಲಿದೆ.

ಜುಲೈ 2 ಮತ್ತು 9 ರಂದು ಹೊರಡುವ ಮೈಸೂರು-ಕೆಎಸ್‌ಆರ್ ಬೆಂಗಳೂರು ಮೆಮು ವಿಶೇಷ ರೈಲು ಚನ್ನಪಟ್ಟಣ - ಕೆಎಸ್‌ಆರ್ ಬೆಂಗಳೂರು ನಿಲ್ದಾಣಗಳ ನಡುವೆ, ಎಂಜಿಆರ್ ಚೆನ್ನೈ ಸೆಂಟ್ರಲ್-ಕೆಎಸ್‌ಆರ್ ಬೆಂಗಳೂರು ಸೂಪರ್‌ಫಾಸ್ಟ್ ಎಕ್ಸ್‌ಪ್ರೆಸ್ ರೈಲು ವೈಟ್‌ಫೀಲ್ಡ್ - ಕೆಎಸ್‌ಆರ್ ಬೆಂಗಳೂರು ನಿಲ್ದಾಣಗಳ ನಡುವೆ, ಹಜೂರ್ ಸಾಹಿಬ್ ನಾಂದೇಡ್-ಕೆಎಸ್‌ಆರ್ ಬೆಂಗಳೂರು ಎಕ್ಸ್‌ಪ್ರೆಸ್ ರೈಲು ಯಲಹಂಕ-ಕೆಎಸ್‌ಆರ್ ಬೆಂಗಳೂರುನಿಲ್ದಾಣಗಳ ನಡುವಿನ ಸಂಚಾರ ಭಾಗಶಃ ರದ್ದುಗೊಳ್ಳಲಿದೆ.

ಹೊಸಪೇಟೆ- ಕೆಎಸ್‌ಆರ್ ಬೆಂಗಳೂರು ಪ್ಯಾಸೆಂಜರ್ ಸ್ಪೆಷಲ್ ರೈಲು ಯಶವಂತಪುರ- ಕೆಎಸ್‌ಆರ್ ಬೆಂಗಳೂರು ನಡುವೆ, ಎಸ್‌ಎಸ್‌ಎಸ್ ಹುಬ್ಬಳ್ಳಿ-ಕೆಎಸ್‌ಆರ್ ಬೆಂಗಳೂರು ಎಕ್ಸ್‌ಪ್ರೆಸ್ ರೈಲು ಯಶವಂತಪುರ-ಕೆಎಸ್‌ಆರ್ ಬೆಂಗಳೂರು ನಡುವೆ, ಬಂಗಾರಪೇಟೆ- ಕೆಎಸ್‌ಆರ್ ಬೆಂಗಳೂರು ಎಕ್ಸ್‌ಪ್ರೆಸ್ ರೈಲು ಬಯ್ಯಪ್ಪನಹಳ್ಳಿ ಮತ್ತು ಕೆಎಸ್‌ಆರ್ ಬೆಂಗಳೂರು ನಡುವೆ, ಕೆಎಸ್‌ಆರ್ ಬೆಂಗಳೂರು- ಎಸ್‌ಎಸ್‌ಎಸ್ ಹುಬ್ಬಳ್ಳಿ ದೈನಂದಿನ ಎಕ್ಸ್‌ಪ್ರೆಸ್ ರೈಲು ಕೆಎಸ್‌ಆರ್ ಬೆಂಗಳೂರು- ಯಶವಂತಪುರ ನಡುವೆ, ಕೆಎಸ್‌ಆರ್ ಬೆಂಗಳೂರು-ಹೊಸಪೇಟೆ ಪ್ಯಾಸೆಂಜರ್ ಸ್ಪೆಷಲ್ ರೈಲು ಕೆಎಸ್‌ಆರ್ ಬೆಂಗಳೂರು - ಯಶವಂತಪುರ ನಡುವೆ ಭಾಗಶಃ ರದ್ದುಗೊಳ್ಳಲಿದೆ.

ಸಿಎಸ್‌ಎಂಟಿ ಮುಂಬೈ- ಕೆಎಸ್‌ಆರ್ ಬೆಂಗಳೂರು ಉದ್ಯಾನ್ ಎಕ್ಸ್‌ಪ್ರೆಸ್ ರೈಲು, ಮೈಲಾಡುತುರೈ- ಮೈಸೂರು ಎಕ್ಸ್‌ಪ್ರೆಸ್, ಮುರುಡೇಶ್ವರ-ಎಸ್‌ಎಂವಿಟಿ ಬೆಂಗಳೂರು ಎಕ್ಸ್‌ಪ್ರೆಸ್ ರೈಲು, ತಾಳಗುಪ್ಪ- ಮೈಸೂರು ಎಕ್ಸ್‌ಪ್ರೆಸ್ ರೈಲು ಮಾರ್ಗಮಧ್ಯೆಯೆ 15ರಿಂದ 30 ನಿಮಿಷವರೆಗೆ ನಿಯಂತ್ರಿಸಲಾಗುತ್ತದೆ.

ಕೆಎಸ್‌ಆರ್ ಬೆಂಗಳೂರು- ಹಜೂರ್ ಸಾಹಿಬ್ ನಾಂದೇಡ್ ಎಕ್ಸ್‌ಪ್ರೆಸ್, ಲೋಕಮಾನ್ಯ ತಿಲಕ್ ಟರ್ಮಿನಸ್-ಕೊಯಮತ್ತೂರು ಎಕ್ಸ್‌ಪ್ರೆಸ್ ರೈಲು ಮಾರ್ಗ ಬದಲಾಯಿಸಿ ಸಂಚರಿಸಲಿದೆ ಎಂದು ನೈರುತ್ಯ ರೈಲ್ವೆ ಸಾರ್ವಜನಿಕ ಸಂಪರ್ಕ ಅಧಿಕಾರಿ ತಿಳಿಸಿದ್ದಾರೆ.

ರೈಲುಗಳ ನಿಲುಗಡೆ ಮುಂದುವರಿಕೆ

ಯಶವಂತಪುರ-ಬಿಕಾನೇರ್- ಯಶವಂತಪುರ ದ್ವಿ-ಸಾಪ್ತಾಹಿಕ ಎಕ್ಸ್‌ಪ್ರೆಸ್ ರೈಲು ಬೀರೂರು ನಿಲ್ದಾಣದಲ್ಲಿ ಒಂದು ನಿಮಿಷದ ತಾತ್ಕಾಲಿಕ ನಿಲುಗಡೆಯನ್ನು ಜೂನ್ 30ರವರೆಗೆ ಹೊಂದಿತ್ತು. ಅದನ್ನು ಸೆಪ್ಟೆಂಬರ್ 30ರವರೆಗೆ ಮುಂದುವರಿಸಲಿದೆ ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಜಾವಾಣಿ ಗುರುವಾರ, 27 ಜೂನ್ 2024

ಸ್ಪರ್ಧಾ ವಾಣಿ

ಕೆಎಎಸ್ ಪ್ರಿಲಿಮ್ಸ್ ಬೂಸ್ಟರ್

ಯು.ಟಿ.ಆಯಿಷಾ ಫರ್ಝಾನ



1.ಸಾಟಲೈಟ್ ಆಧಾರಿತ ಟೋಲ್ ಸಂಗ್ರಹ ವ್ಯವಸ್ಥೆ

ಜಿಎನ್‌ಎಸ್‌ಎಸ್-ಆಧಾರಿತ (ಉಪಗ್ರಹ ಆಧಾರಿತ) ಎಲೆಕ್ಟ್ರಾನಿಕ್ ಟೋಲ್ ಸಂಗ್ರಹ ವ್ಯವಸ್ಥೆಯ ಅನುಷ್ಠಾನಕ್ಕಾಗಿ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು (ಎನ್‌ಎಚ್‌ಎಐ) ಆಸಕ್ತ ಅಂತರರಾಷ್ಟ್ರೀಯ ಸಂಸ್ಥೆಗಳಿಂದ ಅರ್ಜಿಗಳನ್ನು (ಇಒಐಗಳು) ಆಹ್ವಾನಿಸಿದೆ. ಈ ಉಪಕ್ರಮವು ರಾಷ್ಟ್ರೀಯ ಹೆದ್ದಾರಿಗಳ ಬಳಕೆದಾರರಿಗೆ ತಡೆರಹಿತಪ್ರಯಾಣ ಮತ್ತು ತಡೆ-ಮುಕ್ತ ಟೋಲಿಂಗ್ ಅನುಭವವನ್ನು ನೀಡುವ ಗುರಿಯನ್ನು ಹೊಂದಿದೆ.

ಎಲೆಕ್ಟ್ರಾನಿಕ್ ಟೋಲ್ ಕಲೆಕ್ಷನ್ (ETC) ಬಗ್ಗೆ

GNSS-ಆಧಾರಿತ ಎಲೆಕ್ಟ್ರಾನಿಕ್ ಟೋಲ್ ಕಲೆಕ್ಷನ್ ಸಿಸ್ಟಮ್ ವಾಹನಗಳನ್ನು ಮೇಲ್ವಿಚಾರಣೆ ಮಾಡಲು ಮತ್ತು ಸುಂಕದ ಹೆದ್ದಾರಿಗಳಲ್ಲಿ ಪ್ರಯಾಣದ ದೂರವನ್ನು ಆಧರಿಸಿ ಟೋಲ್‌ಗಳನ್ನು ಲೆಕ್ಕಹಾಕಲು ಗ್ಲೋಬಲ್ ನ್ಯಾವಿಗೇಷನ್ ಸ್ಯಾಟಲೈಟ್ ಸಿಸ್ಟಮ್ (GNSS) ತಂತ್ರಜ್ಞಾನವನ್ನು ಬಳಸುತ್ತದೆ.

ಇದು ಹೇಗೆ ಕೆಲಸ ಮಾಡುತ್ತದೆ ?

- ಈ ವ್ಯವಸ್ಥೆಯು ವಾಹನಗಳ ಚಲನೆಯನ್ನು ಟ್ರ್ಯಾಕ್ ಮಾಡಲು ಉಪಗ್ರಹಗಳನ್ನು ಬಳಸಿಕೊಳ್ಳುತ್ತದೆ.
- ಸುಂಕದ ಹೆದ್ದಾರಿಗಳಲ್ಲಿ ಪ್ರಯಾಣಿಸುವ ದೂರವನ್ನು ಆಧರಿಸಿ ಪಾವತಿಸಬೇಕಿರುವ ಟೋಲ್‌ಗಳನ್ನು ಲೆಕ್ಕ ಹಾಕಲಾಗುತ್ತದೆ.
- GNSS-ಸಕ್ರಿಯಗೊಳಿಸಿದ ಆನ್ ಬೋರ್ಡ್ ಯೂನಿಟ್‌ಗಳನ್ನು (OBUs) ಹೊಂದಿದ ವಾಹನಗಳಿಗೆ ಅವು ಪ್ರಯಾಣಿಸುವ ದೂರವನ್ನು ಆಧರಿಸಿ ಶುಲ್ಕ ವಿಧಿಸಲಾಗುತ್ತದೆ.
- NHAI ಪ್ರಸ್ತುತ FASTag ವ್ಯವಸ್ಥೆಯೊಳಗೆ GNSS-ಆಧಾರಿತ ಟೋಲ್ ವ್ಯವಸ್ಥೆಯನ್ನು ಸಂಯೋಜಿಸಲು ಯೋಜಿಸಿದೆ.

ಆರಂಭಿಕ ಹಂತದಲ್ಲಿ ಫಾಸ್ಟ್ ಟ್ಯಾಗ್ ಆಧಾರಿತ ಟೋಲ್ ಕಟ್ಟುವಿಕೆ ಮತ್ತು GNSS-ಆಧಾರಿತ ಟೋಲ್ ಕಟ್ಟುವಿಕೆ ಹೀಗೆ ಎರಡೂ ಏಕಕಾಲದಲ್ಲಿ ಕಾರ್ಯನಿರ್ವಹಿಸುವ ಹೈಬ್ರಿಡ್ ಮಾದರಿಯನ್ನು ಅಳವಡಿಸಿಕೊಳ್ಳಲಾಗುತ್ತದೆ.

ಮಹತ್ವ

- ರಾಷ್ಟ್ರೀಯ ಹೆದ್ದಾರಿಗಳಲ್ಲಿ ಸುಗಮ ವಾಹನ ಸಂಚಾರವನ್ನು ಖಚಿತಪಡಿಸುತ್ತದೆ.
- ಪ್ರಯಾಣಿಕರಿಗೆ ಅಡಚಣೆ ಮುಕ್ತ ಪ್ರಯಾಣದ ಟೋಲಿಂಗ್ ಅನುಭವವನ್ನು ಒದಗಿಸುತ್ತದೆ.
- ದೂರ-ಆಧಾರಿತ ಟೋಲಿಂಗ್ ಲೆಕ್ಕಾಚಾರದ ಪ್ರಕಾರ ಪ್ರಯಾಣಿಸಿದ ದೂರಕ್ಕೆ ಮಾತ್ರ ಬಳಕೆದಾರರಿಗೆ ಶುಲ್ಕ ವಿಧಿಸುತ್ತದೆ.
- ಸೋರಿಕೆಯನ್ನು ಕಡಿಮೆ ಮಾಡುವ ಮೂಲಕ ಮತ್ತು ಟೋಲ್ ವಂಚನೆಯನ್ನು ತಡೆಯುವ ಮೂಲಕ ಟೋಲ್ ಸಂಗ್ರಹದ ದಕ್ಷತೆಯನ್ನು ಹೆಚ್ಚಿಸುತ್ತದೆ.

2. ಮೊಂಗ್ಲಾ ಬಂದರು

- ಭಾರತವು ಬಾಂಗ್ಲಾದೇಶದಲ್ಲಿ ಮೊಂಗ್ಲಾ ಬಂದರಿನ ನಿರ್ವಹಣೆಯ ಜವಾಬ್ದಾರಿಯನ್ನು ವಹಿಸಿಕೊಳ್ಳಲು ಪ್ರಯತ್ನಿಸುತ್ತಿದ್ದು , ಈ ಪ್ರದೇಶದಲ್ಲಿ ಚೀನಾದ ಪ್ರಭಾವವನ್ನು ಎದುರಿಸಲು ಹೊಸ ಟರ್ಮಿನಲ್ ಅನ್ನು ನಿರ್ಮಿಸಲು ಪ್ರಯತ್ನಿಸುವುದು ಭಾರತದ ದೂರಾಲೋಚನೆಯಾಗಿದೆ.

ಬಂದರಿನ ಬಗ್ಗೆ

- ಬಾಂಗ್ಲಾದೇಶದ ಬಾಗರ್‌ಹಾಟ್ ಜಿಲ್ಲೆಯಲ್ಲಿದೆ. ಬಂಗಾಳ ಕೊಲ್ಲಿಯ ಕರಾವಳಿಯ ಉತ್ತರಕ್ಕೆ 62 ಕಿ.ಮೀ ದೂರದಲ್ಲಿ ಪಸುರ್ ಮತ್ತು ಮೊಂಗ್ಲಾ ನದಿಗಳ ಸಂಗಮ ಪ್ರದೇಶದಲ್ಲಿದೆ.
- ಸುಂದರಬನ್ಸ್ ಮ್ಯಾಂಗ್ರೋವ್ ಅರಣ್ಯದಿಂದ ಸುತ್ತುವರಿದಿದ್ದು, ಚಿತ್ತಗಾಂಗ್ ನಂತರ ಬಾಂಗ್ಲಾದೇಶದ ಎರಡನೇ ಅತಿ ದೊಡ್ಡ ಬಂದರಾಗಿದೆ.

ಭಾರತಕ್ಕೆ ಆಗುವ ಪ್ರಯೋಜನಗಳು

- ಭಾರತದ ಈಶಾನ್ಯ ರಾಜ್ಯಗಳಾದ ಅಸ್ಸಾಂ, ತ್ರಿಪುರಾ ಮತ್ತು ಮೇಘಾಲಯಗಳಂತಹಾ ಆಯಕಟ್ಟಿನ ಪ್ರದೇಶಗಳಿಗೆ ಸುಗಮ ಪ್ರವೇಶವನ್ನು ಒದಗಿಸುತ್ತದೆ.
- ಈ ಪ್ರದೇಶಗಳಿಗೆ ಸಾಗಲು ಮತ್ತು ಸರಕುಗಳ ಸಾಗಾಣಿಕೆಗೆ ದೂರ ಮತ್ತು ಸಾರಿಗೆ ವೆಚ್ಚವನ್ನು ಕಡಿಮೆ ಮಾಡುತ್ತದೆ.
- ಇಂಡಿಯಾ ಪೋರ್ಟ್ಸ್ ಗ್ಲೋಬಲ್ ಲಿಮಿಟೆಡ್ (IPGL) ಮೊಂಗ್ಲಾ ಬಂದರನ್ನು ನಿರ್ವಹಿಸಲು ಆಸಕ್ತಿಯನ್ನು ತೋರಿಸಿದ್ದು, ಇದು ಇರಾನ್‌ನ ಚಬಹಾರ್ ಮತ್ತು ಮ್ಯಾನ್ಮಾರ್‌ನ ಸಿಟ್ವೆ ನಂತರ IPGL ನ ಮೂರನೇ ಅಂತರರಾಷ್ಟ್ರೀಯ ಬಂದರು ಕಾರ್ಯಾಚರಣೆಯಾಗಿದೆ.
- **ವಿಸ್ತರಣಾ ಯೋಜನೆ:** 2015ರಲ್ಲಿ, ಭಾರತ ಮತ್ತು ಬಾಂಗ್ಲಾದೇಶವು ಚಟ್ಟೋಗ್ರಾಮ್ ಮತ್ತು ಮೊಂಗ್ಲಾ ಬಂದರುಗಳ ಬಳಕೆಯ ಕುರಿತು ಒಪ್ಪಂದಕ್ಕೆ ಸಹಿ ಹಾಕಿದವು.
- ಮೊಂಗ್ಲಾ ಬಂದರಿನಿಂದ ಭಾರತದ ಈಶಾನ್ಯ ರಾಜ್ಯಗಳಿಗೆ ಜಲಮಾರ್ಗಗಳು, ರಸ್ತೆಗಳು ಮತ್ತು ರೈಲುಮಾರ್ಗಗಳ ಮೂಲಕ ಸರಕುಗಳ ಸಾಗಣೆಯ ಮಹತ್ವದ ಅಂಶಗಳನ್ನು ಈ ಒಪ್ಪಂದವು ಒಳಗೊಂಡಿದೆ.

3. ರೈನ್ ನದಿ

ದಕ್ಷಿಣ ಜರ್ಮನಿಯ ರೈನ್ ನದಿಯಲ್ಲಿ ನೀರಿನ ಮಟ್ಟವು ಭಾರಿ ಮಳೆಯಿಂದಾಗಿ ಹೆಚ್ಚಿದ್ದು ಸರಕು ಸಾಗಣೆಗಳು ಸಾಧ್ಯವಾಗದೇ ಇತ್ತೀಚೆಗೆ ಮುಚ್ಚಲ್ಪಟ್ಟವು.

ರೈನ್ ನದಿಯ ಬಗ್ಗೆ

- ಇದು ಯುರೋಪ್ ನಲ್ಲಿ ಹರಿಯುತ್ತಿರುವ 12ನೇ ಅತಿ ಉದ್ದದ ನದಿಯಾಗಿದೆ ಮತ್ತು ಪಶ್ಚಿಮ ಮತ್ತು ಮಧ್ಯ ಯುರೋಪ್ ನಲ್ಲಿ ಹರಿಯುತ್ತಿರುವ ಅತ್ಯಂತ ಉದ್ದದ ನದಿಯಾಗಿದೆ.
- ಈ ನದಿಯು ಜರ್ಮನಿಯಲ್ಲಿ ರೈನ್, ಫ್ರಾನ್ಸ್‌ನಲ್ಲಿ ರೈನ್ ಮತ್ತು ನೆದರ್ಲೆಂಡ್ಸ್‌ನಲ್ಲಿ ರಿಜ್ನ್ ಮುಂತಾಗಿ ತಾನು ಹರಿಯುವ ದೇಶಗಳಲ್ಲಿ ಬೇರೆ ಬೇರೆ ಹೆಸರುಗಳಿಂದ ಕರೆಯಲ್ಪಡುತ್ತದೆ.
- ರೈನ್ ನದಿಯು ಸ್ವಿಟ್ಜರ್ಲೆಂಡ್‌ನ ಸ್ವಿಸ್ ಆಲ್ಪ್ಸ್‌ನಲ್ಲಿ ತನ್ನ ಮೂಲದಿಂದ 1,232 ಕಿಮೀ (766 ಮೈಲುಗಳು) ಗಿಂತ ಹೆಚ್ಚು ಹರಿಯುತ್ತದೆ.
- ಇದು ಸ್ವಿಟ್ಜರ್ಲೆಂಡ್, ಲಿಚ್ಟೆನ್‌ಸ್ಟೈನ್, ಆಸ್ಟ್ರಿಯಾ, ಜರ್ಮನಿ, ಫ್ರಾನ್ಸ್ ಮತ್ತು ನೆದರ್ಲೆಂಡ್ಸ್ ಮುಂತಾದ ಆರು ದೇಶಗಳ ಮೂಲಕ ಹರಿಯುತ್ತದೆ.
- ರೈನ್ ಜರ್ಮನಿ ಮತ್ತು ಫ್ರಾನ್ಸ್ ನಡುವೆ ಇರುವ ನೈಸರ್ಗಿಕ ಗಡಿಯಾಗಿದೆ.
- ಈ ನದಿಯು ಸುಮಾರು 185,000 ಚದರ ಕಿಲೋಮೀಟರ್ ಪ್ರದೇಶಗಳಷ್ಟು ಹರಿಯುತ್ತದೆ.
- ಉಪನದಿಗಳಲ್ಲಿ ಆರೆ, ತಮಿನಾ, ಮೊಸೆಲ್ಲೆ, ಎರ್ಫ್ಟ್, ರೀನ್ ಡ ತುಮಾ, ಪ್ಲೆಸುರ್, ರೋಟಾಚ್ ಮತ್ತು ವೈಸೆ ನದಿಗಳು ಸೇರಿವೆ.
- ಇದು ಯುರೋಪಿನ ಪ್ರಮುಖ ವಾಣಿಜ್ಯ ಜಲಮಾರ್ಗವಾಗಿದ್ದು, ಸ್ವಿಟ್ಜರ್ಲೆಂಡ್, ಫ್ರಾನ್ಸ್, ಜರ್ಮನಿ ಮತ್ತು ನೆದರ್ಲೆಂಡ್ಸ್ ನಡುವೆ ವ್ಯಾಪಾರ ಕಾರ್ಯಾಚರಣೆಗಳನ್ನು ಸುಗಮಗೊಳಿಸುತ್ತದೆ.
- ರೈನ್ ನದೀಪಾತ್ರದ ಉದ್ದಕ್ಕೂ ಇರುವ ಪ್ರಮುಖ ನಗರಗಳಲ್ಲಿ ಬಾಸೆಲ್ (ಸ್ವಿಟ್ಜರ್ಲೆಂಡ್), ಕಲೋನ್, ಬಾನ್, ಡ್ಯೂಸ್ಬರ್ಗ್, ಮೈಂಜ್, ಲೆವರ್ಕುಸೆನ್, ಮತ್ತು ನ್ಯೂಸ್ (ಜರ್ಮನಿ), ಸ್ಟ್ರಾಸ್ಬರ್ಗ್ (ಫ್ರಾನ್ಸ್), ಮತ್ತು ರೋಟರ್‌ಡ್ಯಾಮ್ ಮತ್ತು ಉಟ್ರೆಕ್ಟ್ (ನೆದರ್ಲ್ಯಾಂಡ್ಸ್) ನಗರಗಳು ಸೇರಿವೆ.
- ನದಿಯು ಕೈಗಾರಿಕಾ ಸಾರಿಗೆ ಮತ್ತು ಉತ್ಪಾದನೆಗೆ ಅನುಕೂಲಕರ ಪ್ರದೇಶವಾಗಿದ್ದು ಪ್ರಪಂಚದ ಸುಮಾರು ಶೇ 20 ರಾಸಾಯನಿಕ ಕೈಗಾರಿಕೆಗಳು ಅದರ ದಡದಲ್ಲಿ ನೆಲೆಗೊಂಡಿವೆ.

4.IATA

ಭಾರತವು 2025 ರಲ್ಲಿ ಇಂಟರ್ನ್ಯಾಷನಲ್ ಏರ್ ಟ್ರಾನ್ಸ್‌ಪೋರ್ಟ್ ಅಸೋಸಿಯೇಷನ್ (IATA) ನ ವಾರ್ಷಿಕ ಸಾಮಾನ್ಯ ಸಭೆಯನ್ನು (AGM) ಆಯೋಜಿಸಲು ಸಜ್ಜಾಗುತ್ತಿದೆ. ಭಾರತ 42 ವರ್ಷಗಳಲ್ಲಿ ಇದೇ ಮೊದಲ ಬಾರಿಗೆ ಈ ಕ್ರಮವನ್ನು ಕೈಗೊಳ್ಳುತ್ತಿದೆ.

ಇಂಟರ್ ನ್ಯಾಷನಲ್ ಏರ್ ಟ್ರಾನ್ಸ್‌ಪೋರ್ಟ್ ಅಸೋಸಿಯೇಷನ್ (IATA) ಬಗ್ಗೆ:

ಸ್ಥಾಪನೆ: 57 ಆರಂಭಿಕ ಸದಸ್ಯರೊಂದಿಗೆ 1945 ರಲ್ಲಿ ಕ್ಯೂಬಾದ ಹವಾನಾದಲ್ಲಿ ಸ್ಥಾಪನೆಯಾದ IATA ಜಗತ್ತಿನ ವಿಮಾನಯಾನ ಸಂಸ್ಥೆಗಳ ಜಾಗತಿಕ ವ್ಯಾಪಾರ ಸಂಘವಾಗಿದೆ.

ಮಿಷನ್: ಸಂಘದ ಧ್ಯೇಯವು 'ವಿಮಾನಯಾನ ಉದ್ಯಮವನ್ನು ಪ್ರತಿನಿಧಿಸುವುದು, ಮುನ್ನಡೆಸುವುದು ಮತ್ತು ಸೇವೆ ಸಲ್ಲಿಸುವುದು'

IATA ಜಾಗತಿಕವಾಗಿ ವಿಮಾನಯಾನ ಉದ್ದಿಮೆಯ ಹಿತಾಸಕ್ತಿಗಳಿಗಾಗಿ ಶ್ರಮಿಸುತ್ತದೆ ಮತ್ತು ಉದ್ಯಮದ ಗುಣಮಟ್ಟವನ್ನು ಅಭಿವೃದ್ಧಿಪಡಿಸುವತ್ತ ಗಮನಹರಿಸುತ್ತದೆ.

ಬಹುಆಯ್ಕೆಯ ಪ್ರಶ್ನೆಗಳು

ಯುಪಿಎಸ್‌ಸಿ ಮತ್ತು ಕೆಪಿಎಸ್‌ಸಿ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಂಬಂಧಿಸಿದ ಬಹುಆಯ್ಕೆಯ ಪ್ರಶ್ನೋತ್ತರಗಳು ಇಲ್ಲಿವೆ...

1. ಭಾರತದಲ್ಲಿ ಕಾರ್ಯನಿರ್ವಹಿಸುತ್ತಿರುವ ಕೆಳಗಿನ ಯಾವ ಶಾಖೋತ್ಪನ್ನ ಉತ್ಪಾದನಾ ಘಟಕವನ್ನು ಅತಿ ದೊಡ್ಡ ಉತ್ಪಾದನಾ ಘಟಕ ಎಂದು ಪರಿಗಣಿಸಬಹುದು?

ಎ. ವಿಂಧ್ಯಚಲ್ ಶಾಖೋತ್ಪನ್ನ ವಿದ್ಯುತ್ ಉತ್ಪಾದನಾ ಘಟಕ.
ಬಿ. ಚಂದ್ರಾಪುರ ಶಾಖೋತ್ಪನ್ನ ವಿದ್ಯುತ್ ಉತ್ಪಾದನಾ ಘಟಕ.
ಸಿ. ಮುಂದ್ರಾ ಶಾಖೋತ್ಪನ್ನ ವಿದ್ಯುತ್ ಉತ್ಪಾದನಾ ಘಟಕ.
ಡಿ. ದುರ್ಗಾಪುರ್ ಶಾಖೋತ್ಪನ್ನ ವಿದ್ಯುತ್ ಉತ್ಪಾದನಾ ಘಟಕ.

ಉತ್ತರ : ಎ

2. ಕೆಳಗಿನ ಯಾವ ಶಾಖೋತ್ಪನ್ನ ವಿದ್ಯುತ್ ಉತ್ಪಾದನಾ ಘಟಕಗಳನ್ನು ಮಹಾರಾಷ್ಟ್ರದಲ್ಲಿ ಕಾಣಬಹುದಾಗಿದೆ?

1. ಫರಕ್ಕಾ ಶಾಖೋತ್ಪನ್ನ ಉತ್ಪಾದನಾ ಘಟಕ.
2. ಸೋಲಾಪುರ್ ಶಾಖೋತ್ಪನ್ನ ವಿದ್ಯುತ್ ಉತ್ಪಾದನೆ ಘಟಕ.
3. ಸಿಕ್ಕ ಶಾಖೋತ್ಪನ್ನ ವಿದ್ಯುತ್ ಉತ್ಪಾದನೆ ಘಟಕ.
4. ಸತ್ಪುರ ಶಾಖೋತ್ಪನ್ನ ವಿದ್ಯುತ್ ಉತ್ಪಾದನಾ ಘಟಕ.

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.
ಎ. 1, 2 ಮತ್ತು 3 ಬಿ. 2 ಮಾತ್ರ
ಸಿ. 2 ಮತ್ತು 3 ಡಿ. 3 ಮತ್ತು 4

ಉತ್ತರ : ಬಿ

3. ಭಾರತಕ್ಕೆ ಹರಿದು ಬರುತ್ತಿರುವ ಖಾಸಗಿ ಪಾವತಿಗಳಿಗೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಗಳನ್ನು ಗುರುತಿಸಿ?

1. ಭಾರತಕ್ಕೆ ಹರಿದು ಬರುತ್ತಿರುವ ಒಟ್ಟು ಖಾಸಗಿ ಪಾವತಿಗಳಲ್ಲಿ ಕೊಲ್ಲಿ ರಾಷ್ಟ್ರಗಳ ಕೊಡುಗೆ ಶೇ 28.6ರಷ್ಟು.
2. ಹರಿದು ಬರುತ್ತಿರುವ ಒಟ್ಟು ಖಾಸಗಿ ಪಾವತಿಗಳಲ್ಲಿ ಕುವೈತ್‌ನ ಕೊಡುಗೆ ಶೇ 2.4 ರಷ್ಟು.

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.
ಎ. 1 ಮಾತ್ರ ಬಿ. 2 ಮಾತ್ರ
ಸಿ. 1 ಮತ್ತು 2 ಡಿ. ಮೇಲಿನ ಎರಡು ಹೇಳಿಕೆಗಳು ತಪ್ಪಾಗಿದೆ.

ಉತ್ತರ : ಸಿ

4. ಕೊಲ್ಲಿ ಸಹಕಾರ ಮಂಡಳಿಯಲ್ಲಿ ಕೆಳಗಿನ ಯಾವ ರಾಷ್ಟ್ರಗಳು ಸದಸ್ಯತ್ವವನ್ನು ಹೊಂದಿರುತ್ತವೆ?

1. ಯುನೈಟೆಡ್ ಅರಬ್ ಎಮಿರೇಟ್ಸ್.
2. ಸೌದಿ ಅರೇಬಿಯಾ.
3. ಕುವೈತ್.
4. ಒಮಾನ್.

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.
ಎ. 1 ಮಾತ್ರ ಬಿ. 1, 2, 3 ಮತ್ತು 4
ಸಿ. 2 ಮತ್ತು 4 ಡಿ. 3 ಮತ್ತು 4

ಉತ್ತರ : ಬಿ

5. ಭಾರತದಲ್ಲಿ ಕೆಳಗಿನ ಯಾವ ಸ್ವರೂಪದ ಬ್ಯಾಂಕೇತರ ಹಣಕಾಸು ಕಂಪನಿಗಳನ್ನು ಕಾಣಬಹುದು?

1. ಯಂತ್ರೋಪಕರಣಗಳ ಮೇಲೆ ಸಾಲ ನೀಡುವ ಕಂಪನಿ.
2. ಭದ್ರತಾ ಮಾರುಕಟ್ಟೆಯ ಸಾಧನೆಗಳ ಮೇಲೆ ಹೂಡಿಕೆ ಮಾಡುವ ಕಂಪನಿ.
3. ಸೂಕ್ಷ್ಮ ಹಣಕಾಸು ಸೇವೆಗಳನ್ನು ನೀಡುವ ಕಂಪನಿ.
4. ವಸತಿ ಸವಲತ್ತುಗಳಿಗಾಗಿ ಹಣಕಾಸು ನೀಡುವ ಕಂಪನಿ.

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.
ಎ. 1 ಮಾತ್ರ ಬಿ. 1, 2, 3 ಮತ್ತು 4
ಸಿ. 3 ಮತ್ತು 4 ಡಿ. 2 ಮತ್ತು 3

ಉತ್ತರ : ಬಿ

6. ಬ್ಯಾಂಕೇತರ ಹಣಕಾಸು ಕಂಪನಿಗಳ ಉಗಮ ಮತ್ತು ಪ್ರಗತಿಗೆ ಸಂಬಂಧಿಸಿದ ಸರಿಯಾದ ಹೇಳಿಕೆಗಳನ್ನು ಗುರುತಿಸಿ?

1. ಬ್ಯಾಂಕೇತರ ಹಣಕಾಸು ಕಂಪನಿಗಳು ಭಾರತದಲ್ಲಿ 1960 ರಿಂದಲೇ ಅಸ್ತಿತ್ವದಲ್ಲಿದೆ.
2. ಬ್ಯಾಂಕೇತರ ಹಣಕಾಸು ಕಂಪನಿಗಳು 1990ರ ದಶಕದ ನಂತರ ಮುನ್ನಲೆಗೆ ಬಂದಿತು.

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.
ಎ. 1 ಮಾತ್ರ ಬಿ. 2 ಮಾತ್ರ
ಸಿ. 1 ಮತ್ತು 2
ಡಿ. ಮೇಲಿನ ಎರಡು ಹೇಳಿಕೆಗಳು ತಪ್ಪಾಗಿವೆ.

ಉತ್ತರ : ಸಿ

7. ಕೆಳಗಿನ ಯಾವ ಒಕ್ಕೂಟ ಉಕ್ರೇನ್‌ಗೆ 50 ಶತಕೋಟಿ ಡಾಲರ್ ಬೆಂಬಲ ನೀಡಲು ನಿರ್ಧಾರವನ್ನು ಕೈಗೊಂಡಿದೆ?

ಎ. G-8 ಒಕ್ಕೂಟ.
ಬಿ. G-7 ಒಕ್ಕೂಟ.
ಸಿ. G-20 ಒಕ್ಕೂಟ.
ಡಿ. G-77 ಒಕ್ಕೂಟ.

ಉತ್ತರ : ಬಿ

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ


ಎಸ್ಸೆಸ್ಸೆಲ್ಸಿ ಇಂಗ್ಲಿಷ್

Dr. B. R. Ambedkar

8. How did Dr. Ambedkar and Mahatma Gandhi try to wipe out caste discrimination from India?

Ans: The efforts of Dr. Ambedkar and Gandhi in wiping out caste discrimination and establishing an egalitarian society can be described as two sides of the same coin. In a divided India, suffering from the 'Divide and Rule' tactics of the British, the approaches of Ambedkar and the Mahatma were the unifying forces. If Gandhi tried to abolish the caste system by reminding the upper caste people of their duty towards the oppressed, Ambedkar goaded the oppressed to exercise their right to equality. Thus, together, the two great visionaries were the architects of Modern India with the vision of equality and fraternity.

9.Discuss with your friends and complete the web-chart given below



Ans: 1. Found the Books 2. Fist Law Minister
3. Symbol of Revolt
4. Chairman of the drafting committee
5. The pilot of Indian constitution.

****

Unit-2 PROSE

There's a Girl by the Tracks!

Author – Deven Kanal

Deven Kanal is a writer in English. He writes short stories in English to journals and magazines.

Check your understanding

Share your responses

1. It's a regular scene." What was regular about the scene? (Para-1)

Ans: It is regular scene that as the 6:32pm Mumbai suburban electric train makes its 20 second halt at a station, commuters swarm in and out of its 12 packed coaches.

2. "Roma Talreja tried to settle into a corner near the door in the train." Was she right in doing this? What would you have done, if you were there?

Ans: No, Roma Talreja was not doing right thing by trying to settle near door of a fast moving suburban train which is jam packed. If I were the traveller I would have tried to settle myself away from the door and with a grip on handlebar and would have persuaded to the same for Roma Talreja.

3. "There's a girl by the tracks," the voices cried out. Whose voices do you think those were?

Ans: The voices were of the co-passengers of Mr. Baleshwar Mishra who was travelling in a train running on parallel tracks in the opposite direction of the train of Ms.Roma Talreja

4. Baleshwar was impulsive in taking a decision because---------------

(Fill in the blank appropriately).(para-3)

Answer: He had just seen a young woman lying next to the track

Expln:- He could not believe that he has just seen-a young woman lying next to tracks. Meanwhile he also heard gasps and screams emanating from his compartment" There is a girl by tracks". His own sighting of girl lying by track unconscious and panic screams by co passengers made Mr Baleshwar Misha react impulsively.

5. The dictionary says 'callous' means 'unconcerned'. In this situation, who do you think were callous towards the accident.

Ans: When Mr Baleshwar Mishra pulled emergency stop chain, the train screeched to slow down but did not stop. It picked up speed again and disappeared. The first callousness was shown by the train driver and guard who had mandatory duty to enquire why emergency chain was pulled and mitigate the emergency by using their wireless communication equipment to control room. Then when Mr Baleshwar called the co-passengers to help the girl lying by the tracks,

none of them responded being wary of getting involved. The co-passengers of Mr Baleshwar were also callous.

6. 'Baleshwar rushed to help the girl.' His movement has been described with verbs like 'shoved'. Identify two more such verbs / verbal phrases in paragraph (5).

Ans: Jumped off, started to sprint back.

Check your understanding

Share your responses

1. Where did Baleshwar find Roma at last?

Ans: Mr Baleswar was far away from Roma. After running for several minutes, he found her sprawled by the side of the tracks.

2."Behenji, aap theek hai?" But there was no response and no help in sight. Why was it so? Read paragraph 6 and answer. *(Contd……)*

II PUC BIOLOGY

MOLECULAR BASIS OF INHERITANCE

11. Write a note on autosomal disorders.

Ans:- **(……..Contd)**

It is characterized by anaemia, hepatosplenomegaly, yellowing of eyes and skin (jaundice). Bone changes occur like overgrowth of upper jaw and prominent forehead.

In case all the four genes are defective, the foetus develops **hydrops foetalis** or excessive fluid build up in the body. There is anemia, enlarged liver and spleen, heart defects, abnormalities in urinary system and genitalia. The mother often develops dangerously high blood pressure with swelling. Delivery is generally premature with abnormal blood loss. There is either still birth or death soon after delivery.

(ii) Beta Thalassemia - It develops due to decreased synthesis of β-globin of haemoglobin because of the defect in a pair of alleles (HBB) present on chromosome 11. Depending on the nature of mutation and involvement of one or both the alleles, there are three forms of β-thalassemia-minor, intermedia and major. In β-thalassemia minor, there is one defective allele, i.e., the individual is heterozygous. RBCs are higher in number but microcytic with 15% less haemoglobin.

Thalassemia intermedia (B^+) has moderate anaemia with splenomegaly. The condition is intermediate between homozygous and heterozygous forms.

Thalassemia major (B^0) – is severe form of anaemia that appears due to homozygous state or both the alleles being defective. It is also known as Cooley's anaemia (β+). Due to excess of α-chains, tetramer formation is prevented. The globins tend to bind to RBC membrane, cause damage to it resulting in severe anaemia. The manifestation of the disease begins 4-6 months after birth. There is severe haemolytic, hypochromic microcytic anaemia with hepatosplenomeglay, skeletal deformation, mongoloid face and cardiac enlargement.

(iii) Delta Thalassemia - The defect is of minor nature as delta globin occurs in only 3% of adult haemoglobin as alpha and delta tetramers. The gene controlling the synthesis of delta globin is HBD situated on chromosome 11.

Thalassemia differs from sickle cell anaemia. It is a quantitative problem of synthesizing too few globin molecules. Sickle cell anaemia is a qualitative problem of synthesizing an incorrectly functioning globin.

(c) Cystic Fibrosis - It is due to an autosomal recessive gene present on chromosome 7 that controls the synthesis of a unique glycoprotein. It results in the production of very high viscosity mucus and excessive excretion of sodium in sweat. The disease affects many exocrine glands-skin glands, lungs, liver, pancreas. Mucus collects in lungs and makes breathing difficult. Susceptibility to infections is high. Bile production is impaired. Liver may undergo cirrhosis. Pancreas does not produce sufficient pancreatic juice. Digestion is impaired. Fat content of stool is high. Cardiac failure is common. Persons with cystic fibrosis die early.

(d) Alzheimer's Disease - It is a degenerative disease of brain which is caused by two autosomal defective alleles, one on chromosome 21 and other on chromosome 19. The defective allele on 21 is dominant and produces the disorder very early. It is associated with Down's syndrome which is due to trisomy of 21.

The most common type of alzeimer's diseases is one which sets late (after the age of 40). This is caused by the E4 allele of chromosome 19. There are deposition of senile plaques in the nervous system due to non-metabolism of amyloid b – peptide. This results in degeneration of neurons. Choline acetyl transferase activity is reduced. There are changes in personality, disturbance in memory and trembling of hands. Dementia or loss of memory increases progressively.

(e) Myotonic Dystrophy – It is a rare, slow progressing autosomal dominant disorder which is characterised by the increased muscular irritability and contractility with decreasing relaxation that leads to atrophy of muscles, especially of face and neck, cataracts, hypogonadism, frontal balding and cardiac abnormalities.

(f) Haemophilia – It is a **sex linked recessive** disorder by John Otto (1803). The defect is known as bleeder's disease because the exposed blood of haemophiliac patient fails to coagulate due to deficiency of blood clotting **factor VIII (antihaemophilia globulin,** 80%) or factor **IX (plasma thromboplastin,** 20%).

The two types of haemophilia are haemophilia A and haemophilia **B**.

Haemophilia B is also known as **Christmas disease.** The defect has been inherited by many royal families of Europe through queen Victoria. Human females are generally carrier of this disorder and remain normal throughout their life.

If double recessive condition appears in a female, the same dies before birth.

Human males suffer from this disorder because of the hemizygous nature of most sex linked traits. *(Contd……)*


ಎಸ್ಸೆಸ್ಸೆಲ್ಸಿ ಸಮಾಜ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ತಗ್ಗು ಪ್ರದೇಶಗಳು ಜಲಾವೃತ ● ಉತ್ತರ ಕನ್ನಡ ಜಿಲ್ಲೆಯಾದ್ಯಂತ ರಭಸದ ಗಾಳಿ

ರಾಜ್ಯದ ಹಲವೆಡೆ ಮಳೆ ಬಿರುಸು

ಪ್ರಜಾವಾಣಿ ವಾರ್ತೆ



ಚಿಕ್ಕಮಗಳೂರು ಜಿಲ್ಲೆ ಶೃಂಗೇರಿ ತಾಲ್ಲೂಕಿನಲ್ಲಿ ನಿರಂತರ ಸುರಿಯುತ್ತಿರುವ ಮಳೆಯಿಂದ ತುಂಗಾ ನದಿಯ ನೀರಿನ ಮಟ್ಟ ಹೆಚ್ಚಳವಾಗಿದೆ

ಬೆಂಗಳೂರು/ಕಾರವಾರ: ರಾಜ್ಯದ ಹಲವೆಡೆ ಬುಧವಾರ ಧಾರಾಕಾರ ಮಳೆಯಾಗಿದೆ. ಉತ್ತರ ಕನ್ನಡ ಜಿಲ್ಲೆಯಾದ್ಯಂತ ರಭಸದ ಗಾಳಿ ಸಹಿತ ಬಿರುಸಿನ ಮಳೆ ಸುರಿಯಿತು. ಹಲವೆಡೆ ತಗ್ಗು ಪ್ರದೇಶಗಳು ಜಲಾವೃತಗೊಂಡವು.

ಕರಾವಳಿ ಭಾಗದಲ್ಲಿ ನಿರಂತರ ಮಳೆ ಸುರಿದಿದೆ. ಭಟ್ಕಳ, ಮುರ್ಡೇಶ್ವರ ಭಾಗದಲ್ಲಿ ಹಲವು ಮನೆ, ದೇವಸ್ಥಾನಗಳಿಗೆ ನೀರು ನುಗ್ಗಿದೆ. ಕುಮಟಾ ತಾಲ್ಲೂಕಿನ ವಾಲ್ಗಳ್ಳಿ ಸಮೀಪ ಕುಮಟಾ–ಸಿದ್ದಾಪುರ ರಾಜ್ಯ ಹೆದ್ದಾರಿಯಲ್ಲಿ ಮಳೆನೀರು ನಿಂತು ಕೆಲ ಕಾಲ ಸಂಚಾರಕ್ಕೆ ತೊಂದರೆಯಾಯಿತು. ಕಾರವಾರ ತಾಲ್ಲೂಕಿನ ಹೋಟೆಗಾಳಿಯಲ್ಲಿ ಅಂಗಡಿ ಮನೆಗಳಿಗೂ ನೀರು ನುಗ್ಗಿತು.

ಶಿರಸಿ ತಾಲ್ಲೂಕಿನಲ್ಲಿ ಒಂದು ಶಾಲೆ ಮತ್ತು ಎರಡು ಮನೆಗಳ ಮೇಲೆ ಮರ ಬಿದ್ದು, ಭಾಗಶಃ ಹಾನಿಯಾಗಿದೆ.

ಮಂಗಳೂರು ವರದಿ: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಳೆಯಿಂದಾಗಿ ಅನೇಕ ಕಡೆ ಮರಗಳು ಉರುಳಿವೆ. ತಗ್ಗು ಪ್ರದೇಶಗಳು ಜಲಾವೃತವಾಗಿವೆ. ಬಂಟ್ವಾಳ ಸಮೀಪದ ತುಂಬೆಯಲ್ಲಿ ಮಳೆ ನೀರು ಹರಿಯಲು ಸೂಕ್ತ ವ್ಯವಸ್ಥೆ ಇಲ್ಲದೇ ರಾಷ್ಟ್ರೀಯ ಹೆದ್ದಾರಿ ಜಲಾವೃತವಾಗಿ ವಾಹನ ಸವಾರರು ಸಮಸ್ಯೆ ಎದುರಿಸಿದರು. ಬಡಗ ಎಡಪದವು ಎಂಬಲ್ಲಿ ಮೂಡುಬಿದಿರೆ–ಮಂಗಳೂರು ರಾಷ್ಟ್ರೀಯ ಹೆದ್ದಾರಿಯೂ ಜಲಾವೃತವಾಗಿತ್ತು.

ಉಡುಪಿ ಜಿಲ್ಲೆಯಾದ್ಯಂತ ಬುಧವಾರ ದಿನವಿಡೀ ಧಾರಾಕಾರ ಮಳೆ ಸುರಿಯಿತು. ಚಿಕ್ಕಮಗಳೂರು ಜಿಲ್ಲೆಯ ಮಲೆನಾಡಿನ ಭಾಗವಾದ ಶೃಂಗೇರಿ, ಕಳಸ, ನರಸಿಂಹರಾಜಪುರ, ಕೊಪ್ಪ, ಮೂಡಿಗೆರೆ, ಬಾಳೆಹೊನ್ನೂರು ಭಾಗದಲ್ಲಿ ಜೋರು ಮಳೆ ಸುರಿಯಿತು. ಚಿಕ್ಕಮಗಳೂರು ನಗರದಲ್ಲೂ ಆಗಾಗ ಜೋರು ಮಳೆ ಆಯಿತು. ಬಯಲು ಸೀಮೆಯಾದ ಕಡೂರು, ಬೀರೂರು, ಅಜ್ಜಂಪುರ ಭಾಗದಲ್ಲೂ ಸಾಧಾರಣ ಮಳೆಯಾಯಿತು.

ಮಡಿಕೇರಿ ವರದಿ: ಕೊಡಗು ಜಿಲ್ಲೆಯಲ್ಲಿ ಮಳೆಯೊಂದಿಗೆ ಬಿರುಗಾಳಿ ಬೀಸಿ ಅಲ್ಲಲ್ಲಿ ಮರಗಳು ಬೀಳುತ್ತಿವೆ. ವಿದ್ಯುತ್ ಕಂಬಗಳು ನೆಲಕಚ್ಚಿ ವಿದ್ಯುತ್ ವ್ಯತ್ಯಯ ಉಂಟಾಗುತ್ತಿದೆ.

ಸುಂಟಿಕೊಪ್ಪ ಸಮೀಪದ ಚೆಟ್ಟಳ್ಳಿ–ನೀರುಕೊಲ್ಲಿ ರಸ್ತೆಯಲ್ಲಿ ದೊಡ್ಡ ಮರವೊಂದು ಬಿದ್ದು, ಸಂಚಾರ ಸಂಪೂರ್ಣ ಸ್ಥಗಿತಗೊಂಡಿತ್ತು. ಅದರಿಂದ ಆ ಮಾರ್ಗದಲ್ಲಿ ತೆರಳುವ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳಿಗೆ ತೊಂದರೆಯಾಯಿತು. ನಂತರ, ಅರಣ್ಯ ಇಲಾಖೆ ಸಿಬ್ಬಂದಿ ಸಾರ್ವಜನಿಕರ ನೆರವಿನಿಂದ ಮರವನ್ನು ತೆರವುಗೊಳಿಸಿದರು.

ಧಾರಾಕಾರ ಮಳೆ: ತುಂಬಿದ ಹೊಳೆ

ಒಂದನೇ ಪುಟದಿಂದ...

ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು ಜಿಲ್ಲೆಯಾದ್ಯಂತ ಬುಧವಾರ ಭಾರಿ ಮಳೆಯಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜೂನ್ 27ರಂದು ರೆಡ್ ಅಲರ್ಟ್ ಘೋಷಿಸಿದ್ದು, ಶಾಲಾ–ಕಾಲೇಜುಗಳಿಗೆ ರಜೆ ಘೋಷಿಸಲಾಗಿದೆ. ಕೊಡಗು ಜಿಲ್ಲೆಯ ಪೊನ್ನಂಪೇಟೆ ಮತ್ತು ವಿರಾಜಪೇಟೆಯ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಕೂಡ ಗುರುವಾರ ರಜೆ ನೀಡಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಂಗಳವಾರ ರಾತ್ರಿ 9 ಗಂಟೆ ಸುಮಾರಿಗೆ ಶುರುವಾಗಿದ್ದ ಮಳೆ ಮುಂಜಾನೆವರೆಗೂ ಬಿಟ್ಟು ಬಿಟ್ಟು ಸುರಿಯಿತು. ಬುಧವಾರವೂ ದಿನವಿಡೀ ಮಳೆಯಾಯಿತು.

ಮಂಗಳೂರು ನಗರದ ಜಪ್ಪಿನಮೊಗರು ಪ್ರದೇಶದಲ್ಲಿ ತಗ್ಗು ಪ್ರದೇಶಗಳು ಜಲಾವೃತವಾಗಿವೆ. ಬಜಾಲ್‌ನಲ್ಲಿ ರೈಲ್ವೆ ಕೆಳಸೇತುವೆಯಲ್ಲಿ ನೀರು ತುಂಬಿ ಸಾರ್ವಜನಿಕರು ಸಮಸ್ಯೆ ಎದುರಿಸಿದರು. ಮಳೆಯಿಂದಾಗಿ ಜಿಲ್ಲೆಯಾದ್ಯಂತ ಅಲ್ಲಲ್ಲಿ ರಸ್ತೆ ಹಾಗೂ ಹೆದ್ದಾರಿಗಳಲ್ಲಿ ಗುಂಡಿಗಳು ನಿರ್ಮಾಣವಾಗಿವೆ. ಸುರತ್ಕಲ್‌ನಲ್ಲಿ ರಾಷ್ಟ್ರೀಯ ಹೆದ್ದಾರಿಯಲ್ಲಿದ್ದ ಗುಂಡಿಯಿಂದಾಗಿ ಸ್ಕೂಟರ್ ಸವಾರರೊಬ್ಬರು ಆಯತಪ್ಪಿ ನೆಲಕ್ಕುರುಳಿದರು. ಅದೇ ಗುಂಡಿಯಲ್ಲಿ ತಮ್ಮ ಸ್ಕೂಟರ್ ನಿಲ್ಲಿಸಿದ ಅವರು ಅದರ ಪಕ್ಕದಲ್ಲಿ ನಿಂತು ವಿನೂತನ ರೀತಿಯಲ್ಲಿ ಪ್ರತಿಭಟನೆ ನಡೆಸಿದರು. ಗುಂಡಿ ಇರುವ ಬಗ್ಗೆ ಇತರ ವಾಹನಗಳ ಚಾಲಕರಲ್ಲೂ ಜಾಗೃತಿ ಮೂಡಿಸಿದರು.

ಎಲ್ಲೆಲ್ಲಿ ಮಳೆ	ಪ್ರಮಾಣ ಸೆಂ.ಮೀ.ಗಳಲ್ಲಿ
ನಾಲಡಿ ಗ್ರಾಮ (ನಾಪೋಕ್ಲು ಹೋಬಳಿ)	19.6
ಮಂಚಿ (ಬಂಟ್ವಾಳ)	18
ಮಂಕಿ (ಉತ್ತರ ಕನ್ನಡ ತಾಲ್ಲೂಕು)	17
ಭಾಗಮಂಡಲ (ಕೊಡಗು)	15
ಮಾಣಿ (ಬಂಟ್ವಾಳ)	14
ಕುಂದಾಪುರ (ಉಡುಪಿ)	13
ಇರಾ (ಬಂಟ್ವಾಳ)	15
ಬಾಳ್ತಿಲ (ಬಂಟ್ವಾಳ)	14
ಕೋಟೆಕಾರು (ಉಲ್ಲಾಳ)	12
ಬೋಳಿಯಾರ್ (ಉಲ್ಲಾಳ)	12
ಬ್ರಹ್ಮಾವರ (ಉಡುಪಿ)	10

ಅಲರ್ಟ್ ಘೋಷಣೆ: ರಾಜ್ಯದ ಹಲವೆಡೆ ಗುರುವಾರವೂ ಗುಡುಗು ಸಹಿತ ಭಾರಿ ಮಳೆಯಾಗುವ ಸಾಧ್ಯತೆಯಿದ್ದು, ಹವಾಮಾನ ಇಲಾಖೆಯು 10 ಜಿಲ್ಲೆಗಳಿಗೆ 'ಅಲರ್ಟ್' ಘೋಷಿಸಿದೆ. ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ, ಕೊಡಗು, ಶಿವಮೊಗ್ಗ ಹಾಗೂ ಚಿಕ್ಕಮಗಳೂರು ಜಿಲ್ಲೆಗೆ 'ಆರೆಂಜ್ ಅಲರ್ಟ್' ನೀಡಲಾಗಿದೆ. ಬೆಳಗಾವಿ, ಧಾರವಾಡ, ಹಾವೇರಿ ಹಾಗೂ ಹಾಸನ ಜಿಲ್ಲೆಗೆ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ. ಇಲ್ಲಿ ಗಂಟೆಗೆ 45 ಕಿ.ಮೀ.ಯಿಂದ 55 ಕಿ.ಮೀ. ವೇಗದಲ್ಲಿ ಗಾಳಿ ಬೀಸುವ ಸಾಧ್ಯತೆ ಇದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.

ಕರಾವಳಿ ಉದ್ದಕ್ಕೂ ಬಿರುಗಾಳಿಯ ಅರ್ಭಟ ಹೆಚ್ಚಿರುವ ಸಾಧ್ಯತೆಯಿದೆ. ಗಂಟೆಗೆ 35 ಕಿ.ಮೀ.ಯಿಂದ 55 ಕಿ.ಮೀ. ವೇಗದಲ್ಲಿ ಗಾಳಿ ಬೀಸುವ ಸಂಭವವಿದೆ. ಸಮುದ್ರದಲ್ಲಿ ಭಾರಿ ಅಲೆಗಳು ಕಾಣಿಸಿಕೊಳ್ಳಬಹುದು. ಆದ್ದರಿಂದ, ಮೀನುಗಾರರು ಸಮುದ್ರಕ್ಕೆ ಇಳಿಯುವಾಗ ಎಚ್ಚರ ವಹಿಸಬೇಕು. ಸಣ್ಣ ಹಡಗುಗಳು ಸಂಚಾರ ಹಾಗೂ ಸಮುದ್ರದ ದಡದಲ್ಲಿ ಮನೋರಂಜನಾ ಚಟುವಟಿಕೆಗಳನ್ನು ನಡೆಸದಂತೆ ಇಲಾಖೆ ಎಚ್ಚರಿಕೆ ನೀಡಿದೆ.

ಇಬ್ಬರು ಮಕ್ಕಳು, ಅಪ್ಪ–ಅಮ್ಮ ಸಾವು

ಒಂದನೇ ಪುಟದಿಂದ...

ಆರು ವರ್ಷಗಳ ಹಿಂದೆ ಮನೆ ಖರೀದಿಸಿದ್ದ ಯಾಸಿರ್ ಅದನ್ನು ಭೋಗ್ಯಕ್ಕೆ ನೀಡಿದ್ದರು. ಆರು ತಿಂಗಳ ಹಿಂದಷ್ಟೇ ಮನೆಗೆ ವಾಪಸ್ಸಾಗಿದ್ದರು. ಎರಡು ವರ್ಷಗಳ ಹಿಂದೆಯೂ ಇದೇ ಮನೆ ಮೇಲೆ ಆವರಣ ಗೋಡೆ ಕುಸಿದಿತ್ತು ಎಂದು ಸ್ಥಳೀಯರು ಮಾಹಿತಿ ನೀಡಿದರು.

ವಿಧಾನ ಸಭಾಧ್ಯಕ್ಷ ಯು.ಟಿ.ಖಾದರ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಸಂತ್ರಸ್ತ ಕುಟುಂಬಕ್ಕೆ ಗರಿಷ್ಠ ಪರಿಹಾರ ಕೊಡಿಸಲು ಪ್ರಯತ್ನಿಸುವುದಾಗಿ ಭರವಸೆ ನೀಡಿದರು.

ಕೆಂಪೇಗೌಡರು ಇದ್ದ ಸೆರೆಮನೆ ಪತ್ತೆ

ಪ್ರಜಾವಾಣಿ ವಾರ್ತೆ



ಗಂಗಾವತಿ ತಾಲ್ಲೂಕಿನ ಆನೆಗೊಂದಿಯಲ್ಲಿ ಪತ್ತೆಯಾದ ಕೆಂಪೇಗೌಡರು ಬಂಧನದಲ್ಲಿದ್ದ ಸೆರೆಮನೆಯ ಕಟ್ಟಡ ಭಾಗ

ಗಂಗಾವತಿ (ಕೊಪ್ಪಳ ಜಿಲ್ಲೆ): ಆಧುನಿಕ ಬೆಂಗಳೂರಿನ ಸಂಸ್ಥಾಪಕ ಕೆಂಪೇಗೌಡ ಅವರು ಬಂಧನದಲ್ಲಿದ್ದ ಆನೆಗೊಂದಿಯ ಸೆರೆಮನೆ ಪತ್ತೆಯಾಗಿದೆ ಎಂದು ಇತಿಹಾಸ ಸಂಶೋಧಕ ಶರಣಬಸಪ್ಪ ಕೋಲ್ಕಾರ್ ತಿಳಿಸಿದ್ದಾರೆ.

'ಹಲವಾರು ವರ್ಷಗಳಿಂದ ನಡೆಸಿದ ನಿರಂತರ ಶೋಧನೆಯಿಂದಾಗಿ ಅಂತಿಮವಾಗಿ ಆನೆಗೊಂದಿಯ ಜಿಂಜರ ಬೆಟ್ಟದಲ್ಲಿ ಸೆರೆಮನೆ ಪತ್ತೆಯಾಗಿದೆ. ವಿಜಯನಗರ ಸಾಮ್ರಾಜ್ಯದ ನಿಷ್ಠಾವಂತ ಮಾಂಡಲಿಕನಾಗಿದ್ದ ಯಲಹಂಕ ನಾಡಪ್ರಭು ಕೆಂಪೇಗೌಡರು ಅಳಿಯ ರಾಮರಾಯನ ಕಾಲದಲ್ಲಿ ತನ್ನ ರಾಜ್ಯದಲ್ಲಿ ಉಂಟಾದ ಆರ್ಥಿಕ ದುಸ್ಥಿತಿ ಸುಧಾರಿಸಲು ಮತ್ತು ಪ್ರಜೆಗಳ ಹಿತರಕ್ಷಣೆಗಾಗಿ ಸಾಮ್ರಾಟನ ಅನುಮತಿ ಪಡೆಯದೆ ಭೈರೇಶ್ವರ ಹೆಸರಿನ ಸ್ವಂತ ನಾಣ್ಯಗಳನ್ನು ಚಲಾಯಿಸಿದನು. ಇದರಿಂದ ಕೆರಳಿದ ಅಳಿಯ ರಾಮರಾಯ ಕೆಂಪೇಗೌಡನನ್ನು ರಾಜಧಾನಿ ವಿಜಯನಗರದಲ್ಲಿ ಜರುಗುತ್ತಿದ್ದ ದಸರಾ ಉತ್ಸವಕ್ಕೆ ಆಹ್ವಾನಿಸಿ, ಬಂಧಿಸಿ ಆನೆಗೊಂದಿ ಸೆರೆಮನೆಗೆ ತಳ್ಳುತ್ತಾನೆ' ಎಂದು ಅವರು ಹೇಳಿದ್ದಾರೆ.

ಕೆಂಪೇಗೌಡರು 1560ರಿಂದ ಐದು ವರ್ಷಗಳ ಕಾಲ ಆನೆಗೊಂದಿ ಸೆರೆಮನೆಯಲ್ಲಿದ್ದರು. 1565ರಲ್ಲಿ ಭಾರಿ ದಂಡ ತೆತ್ತು ಬಿಡುಗಡೆಗೊಂಡರು. ಈ ಸಂಗತಿಯನ್ನು ಮೈಸೂರ್ ಗೆಜೆಟಿಯರ್‌ನಲ್ಲಿ ಉಲ್ಲೇಖಿಸಲಾಗಿದೆ ಎಂದಿದ್ದಾರೆ.

'ಕೆಂಪೇಗೌಡರು ಬಂಧನದಲ್ಲಿದ್ದ ಸೆರೆಮನೆಯ ಹುಡುಕಾಟ ನಡೆಸಲಾಗಿತ್ತು. ಆನೆಗೊಂದಿಯಲ್ಲಿ ಪ್ರಚಲಿತವಾಗಿರುವ ಮೌಖಿಕ ಹೇಳಿಕೆಗಳು ಕೆಂಪೇಗೌಡರು ಜಿಂಜರ ಬೆಟ್ಟದಲ್ಲಿ ಬಂಧನದಲ್ಲಿದ್ದರು ಎಂಬುದನ್ನು ಸೂಚಿಸುತ್ತಿದ್ದವು. ಆ ಮೌಖಿಕ ಮಾಹಿತಿ ಅನುಲಕ್ಷಿಸಿ ಬೆಟ್ಟವನ್ನು ಅಮೂಲಾಗ್ರವಾಗಿ ಪರಿಶೋಧಿಸಿದಾಗ ಬೆಟ್ಟದ ಮೇಲೆ ವಿಶಾಲವಾದ ಜಾಗದಲ್ಲಿ ಸುತ್ತಲೂ ರಕ್ಷಣಾ ಗೋಡೆಗಳು, ಅಲ್ಲಲ್ಲಿ ಕಾವಲು ಗೋಪುರಗಳು, ಕಾವಲುಗಾರರ ಮನೆಗಳು, ಸೈನಿಕರ ವಸತಿಗಳು, ಭದ್ರತಾ ಕಟ್ಟಡ (ಸೆರೆಮನೆ), ಕಣಜ ಮತ್ತು ನೈಸರ್ಗಿಕ ನೀರಿನ ಕೊಳಗಳು ಕಂಡು ಬಂದವು' ಎಂದು ಅವರು ಹೇಳಿದ್ದಾರೆ.

ಸಿ.ಎಂ ಇಂದು ದೆಹಲಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗುರುವಾರ ದೆಹಲಿಗೆ ತೆರಳಲಿದ್ದು, ಅಲ್ಲಿ ರಾಜ್ಯದ ಸಂಸದರ ಜತೆ ಸಭೆ ನಡೆಸಲಿದ್ದಾರೆ.

ರಾಜ್ಯಕ್ಕೆ ಸಂಬಂಧಿಸಿದ ವಿವಿಧ ಯೋಜನೆಗಳು ಮತ್ತು ಬೇಡಿಕೆಗಳ ಬಗ್ಗೆ ಸಂಸತ್ತಿನಲ್ಲಿ ಒಗ್ಗಟ್ಟಿನಿಂದ ಪ್ರಸ್ತಾಪಿಸುವುದರ ಮೂಲಕ ರಾಜ್ಯದ ಹಿತ ಕಾಪಾಡುವ ಬಗ್ಗೆ ಸಂಸದರ ಸಭೆಯಲ್ಲಿ ಚರ್ಚಿಸಲಾಗುವುದು. ಅಲ್ಲದೇ, ಪಕ್ಷದ ಹೈಕಮಾಂಡ್ ಜೊತೆ ರಾಜ್ಯ ರಾಜಕೀಯ ಬೆಳವಣಿಗೆಗಳ ಬಗ್ಗೆಯೂ ಸಮಾಲೋಚನೆ ನಡೆಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರದ ವಿವಿಧ ಸಚಿವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭೇಟಿ ಮಾಡಲಿದ್ದಾರೆ ಎಂದು ಮೂಲಗಳು ಹೇಳಿವೆ.

ಜಯದೇವ: ಆಡಳಿತಾಧಿಕಾರಿ ನೇಮಕ



ಗಂಗಾಧರ ಅಡಗಟ್ಟಿ

ಹುಬ್ಬಳ್ಳಿ: ಗದಗ ಜಿಲ್ಲೆಯ ಸೂರಿ ಗ್ರಾಮದ ನಿವೃತ್ತ ಕೆಎಎಸ್ ಅಧಿಕಾರಿ ಗಂಗಾಧರ ಅಂದಾನಪ್ಪ ಅಡಗಟ್ಟಿ ಅವರನ್ನು ಬೆಂಗಳೂರಿನ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ಮುಖ್ಯ ಆಡಳಿತಾಧಿಕಾರಿಯಾಗಿ ಒಂದು ವರ್ಷದ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಕನ್ಯೆ ಹುಡುಕಿಕೊಡಿ: ಡಿ.ಸಿಗೆ ಮನವಿ


ಪ್ರಜಾವಾಣಿ ವಾರ್ತೆ

ಕನಕಗಿರಿ (ಕೊಪ್ಪಳ ಜಿಲ್ಲೆ): 'ಹತ್ತು ವರ್ಷಗಳಿಂದ ಕನ್ಯಾ ಹುಡುಕುತ್ತಿದ್ದರೂ ಸಿಗುತ್ತಿಲ್ಲ. ಆದಷ್ಟು ಬೇಗನೆ ಹುಡುಕಿಕೊಡಿ ಸರ್...'

ಪಟ್ಟಣದಲ್ಲಿ ಜಿಲ್ಲಾಡಳಿತದ ವತಿಯಿಂದ ಬುಧವಾರ ನಡೆದ ತಾಲ್ಲೂಕು ಮಟ್ಟದ ಜನಸ್ಪಂದನ ಕಾರ್ಯಕ್ರಮದಲ್ಲಿ ಕನಕಗಿರಿಯ ಯುವಕ ಸಂಗಪ್ಪ ಅವರು ತಮಗೆ ಕನ್ಯೆ ಹುಡುಕಿಕೊಡುವಂತೆ ಜಿಲ್ಲಾಧಿಕಾರಿ ನಲಿನ್ ಅತುಲ್ ಅವರಿಗೆ ಮನವಿ ಮಾಡಿಕೊಂಡರು.

ಜಿಲ್ಲಾಧಿಕಾರಿ ಅಹವಾಲು ಸ್ವೀಕರಿಸುತ್ತಿದ್ದಾಗ ವೇದಿಕೆಯತ್ತ ಬಂದ ಸಂಗಪ್ಪ, 'ರೈತ ಕುಟುಂಬದಿಂದ ಬಂದಿದ್ದೇನೆ. ಹತ್ತಾರು ವರ್ಷಗಳಿಂದಲೂ ವಧು ಅನ್ವೇಷಣೆಗಾಗಿ ಲಕ್ಷಾಂತರ ರೂಪಾಯಿ ಕಳೆದುಕೊಂಡಿದ್ದೇನೆ. ಯಾರೂ ಕನ್ಯಾ ನೀಡಲು ಮುಂದೆ ಬರುತ್ತಿಲ್ಲ. ಹೀಗಾಗಿ ಮಾನಸಿಕವಾಗಿ ನೊಂದಿದ್ದೇನೆ. ನೀವಾದರೂ ಕನ್ಯಾ ಹುಡುಕಿ ನನ್ನ ಮದುವೆಗೆ ಸಹಕರಿಸಿ' ಎಂದು ಲಿಖಿತ ಮನವಿ ಕೊಟ್ಟರು.

ಈ ವಿಷಯ ಕೇಳಿ ಜಿಲ್ಲಾಧಿಕಾರಿ ಹಾಗೂ ವೇದಿಕೆ ಮೇಲಿದ್ದ ಅಧಿಕಾರಿಗಳೆಲ್ಲರೂ ನಗೆಗಡಲಲ್ಲಿ ತೇಲಿದರು. ಪತ್ರ ಓದಿದ ಜಿಲ್ಲಾಧಿಕಾರಿ ಅವರು ಕೆಲ ಪ್ರಶ್ನೆಗಳನ್ನು ಯುವಕನಿಗೆ ಕೇಳಿದರು. ಕೊನೆಯಲ್ಲಿ 'ತಹಶೀಲ್ದಾರ್ ನಿಮಗೆ ಕನ್ಯಾ ಹುಡುಕಿ ಕೊಡುತ್ತಾರೆ' ಎಂದು ಚಟಾಕಿ ಹಾರಿಸಿದರು.



ಕನ್ಯೆ ಹುಡುಕಿಕೊಡುವಂತೆ ಜಿಲ್ಲಾಧಿಕಾರಿಗೆ ಯುವಕ ಬರೆದ ಪತ್ರ

ವಿಳಂಬ ಧೋರಣೆ: ಮುಖ್ಯಮಂತ್ರಿ ಗರಂ

2ನೇ ಮುಖಪುಟದಿಂದ...

ನಿಗಮದ ಬಳಿ ₹24,996 ಕೋಟಿ ಲಭ್ಯವಿದೆ. ₹7,928 ಕೋಟಿ ಮೊತ್ತದ 358 ಯೋಜನೆಗಳಿಗೆ ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಬಿ. ಸುದರ್ಶನ ರೆಡ್ಡಿ ನೇತೃತ್ವದ ಮೇಲ್ವಿಚಾರಣಾ ಪ್ರಾಧಿಕಾರ ಅನುಮತಿ ನೀಡಿದೆ. ಈ ಪೈಕಿ ₹3,469 ಕೋಟಿ ವೆಚ್ಚದ 182 ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ. 135 ಯೋಜನೆಗಳಿಗೆ ಟೆಂಡರ್ ಆಹ್ವಾನಿಸಿದ್ದು, 47 ಕಾಮಗಾರಿಗಳಿಗೆ ಕಾರ್ಯಾದೇಶ ನೀಡಲಾಗಿದೆ. 23 ಕಾಮಗಾರಿಗಳನ್ನು ವಿವಿಧ ಸಂಸ್ಥೆಗಳಿಗೆ ವಹಿಸಲಾಗಿದೆ ಎಂಬ ಮಾಹಿತಿಯನ್ನು ನಿಗಮದ ಅಧಿಕಾರಿಗಳು ನೀಡಿದರು.

ಡಿಪಿಆರ್ ಅನುಮೋದನೆಗೆ ಗಡುವು: ಹೆಚ್ಚಿನ ಯೋಜನೆಗಳು, ಕಾಮಗಾರಿಗಳಿಗೆ ಇಲಾಖಾ ಕಾರ್ಯದರ್ಶಿಗಳು ಡಿಪಿಆರ್‌ಗಳಿಗೆ ಅನುಮೋದನೆ ನೀಡಿಲ್ಲ ಎಂಬುದನ್ನು ತಿಳಿದ ಮುಖ್ಯಮಂತ್ರಿಯವರು, ಸಭೆಯಲ್ಲಿದ್ದ ಅಧಿಕಾರಿಗಳ ಮೇಲೆ ಹರಿಹಾಯ್ದರು. ಅನುದಾನ ಲಭ್ಯವಿದ್ದರೂ ಡಿಪಿಆರ್ ಅನುಮೋದಿಸದೇ ವಿಳಂಬ ಮಾಡುತ್ತಿರುವುದರ ಹಿಂದಿನ ಕಾರಣ ಏನು ಎಂದು ಪ್ರಶ್ನಿಸಿದರು ಎಂದು ಮುಖ್ಯಮಂತ್ರಿಯವರ ಸಚಿವಾಲಯದ ಮೂಲಗಳು ತಿಳಿಸಿವೆ.

'ಮುಖ್ಯಮಂತ್ರಿಯವರು ಡಿಪಿಆರ್ ಅನುಮೋದನೆಗೆ ಕೆಲವು ಇಲಾಖೆಗಳಿಗೆ ವಾರದ ಗಡುವು ನೀಡಿದ್ದಾರೆ. ಇನ್ನೂ ಕೆಲವು ಇಲಾಖೆಗಳಿಗೆ ತಿಂಗಳವರೆಗೂ ಗಡುವು ನೀಡಿದ್ದಾರೆ. ಗಡುವಿನೊಳಗೆ ಪ್ರಕ್ರಿಯೆ ಪೂರ್ಣಗೊಳಿಸದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಕೆ ನೀಡಿದ್ದಾರೆ' ಎಂದು ಮೂಲಗಳು ಹೇಳಿವೆ.

ಸೆಪ್‌ಮಿಜ್ ಕಾರ್ಯಕ್ರಮ ಅನುಷ್ಠಾನ ಮಾಡುತ್ತಿರುವ ಎಲ್ಲ ಇಲಾಖೆಗಳೂ ಯೋಜನಾ ಮೇಲ್ವಿಚಾರಣಾ ಘಟಕ ಸ್ಥಾಪಿಸಬೇಕು. ವಸತಿ ಯೋಜನೆಗಳ ಫಲಾನುಭವಿಗಳನ್ನು ತ್ವರಿತವಾಗಿ ಗುರುತಿಸಬೇಕು. ಶಾಲಾ ಕೊಠಡಿ ನಿರ್ಮಾಣ, ಕಟ್ಟಡಗಳ ದುರಸ್ತಿ, ಪ್ರಯೋಗಾಲಯ ಸ್ಥಾಪನೆ, ಅಂಗನವಾಡಿ ಮತ್ತು ವಿದ್ಯಾರ್ಥಿ ನಿಲಯಗಳ ಕಟ್ಟಡ ನಿರ್ಮಾಣಕ್ಕೆ ಆದ್ಯತೆ ನೀಡಬೇಕು ಎಂದು ಸಿದ್ದರಾಮಯ್ಯ ಸೂಚಿಸಿದರು.

ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತೆ ಶಾಲಿನಿ ರಜನೀಶ್, ಮುಖ್ಯಮಂತ್ರಿಯವರ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ. ಅತೀಕ್, ಕಾರ್ಯದರ್ಶಿ ಕೆ.ವಿ. ತ್ರಿಲೋಕಚಂದ್ರ, ಕೆಎಂಇಆರ್‌ಸಿ ವ್ಯವಸ್ಥಾಪಕ ನಿರ್ದೇಶಕ ಗುರುಪ್ರಸಾದ್ ಎಂ.ಪಿ. ಸಭೆಯಲ್ಲಿದ್ದರು.

ಮುಂಗಡ ನೀಡದಂತೆ ತಾಕೀತು

ಸೆಪ್‌ಮಿಜ್ ಕಾಮಗಾರಿಗಳ ಗುತ್ತಿಗೆದಾರರಿಗೆ ಮುಂಗಡ ಪಾವತಿಸುವ ಕುರಿತು ಕೆಎಂಇಆರ್‌ಸಿಯಲ್ಲಿ ಚರ್ಚೆ ನಡೆದಿತ್ತು. ಈ ಪ್ರಸ್ತಾವದ ಕುರಿತು ಅಸಮಾಧಾನ ವ್ಯಕ್ತಪಡಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಗುತ್ತಿಗೆದಾರರಿಗೆ ಮುಂಗಡ ನೀಡದಂತೆ ಅಧಿಕಾರಿಗಳಿಗೆ ತಾಕೀತು ಮಾಡಿದ್ದಾರೆ.

'ಇದು ವಿಶೇಷ ಯೋಜನೆ. ಟೆಂಡರ್‌ನ ವಾಡಿಕೆ ಷರತ್ತುಗಳು ಈ ಕಾಮಗಾರಿಗಳಿಗೆ ಅನ್ವಯಿಸುವುದಿಲ್ಲ. ಕಾಮಗಾರಿ ಮುಗಿದ ವಾರದೊಳಗೆ ನಿಗಮ ಬಿಲ್ ಪಾವತಿಸುತ್ತದೆ. ಆದ್ದರಿಂದ ಮುಂಗಡ ನೀಡಲಾಗದು ಎಂಬುದನ್ನು ಗುತ್ತಿಗೆದಾರರಿಗೆ ಸ್ಪಷ್ಟಪಡಿಸಬೇಕು' ಎಂದು ಸೂಚಿಸಿದ್ದಾರೆ.

ಭಾರತೀಯ ವಿಜ್ಞಾನ ಸಂಸ್ಥೆಯ ಬಯೊ ಎಂಜಿನಿಯರಿಂಗ್ ವಿಭಾಗದಿಂದ ಅನ್ವೇಷಣೆ


ಕ್ಷಯ ಪತ್ತೆಗೆ '3ಡಿ ಹೈಡ್ರೋಜೆಲ್' ಅಭಿವೃದ್ಧಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ಷಯರೋಗಿಗಳಲ್ಲಿ ಬ್ಯಾಕ್ಟೀರಿಯಾಗಳಿಂದ ಶ್ವಾಸಕೋಶಕ್ಕೆ ಯಾವ ಪ್ರಮಾಣದಲ್ಲಿ ಸೋಂಕು ಹರಡುತ್ತಿದೆ ಎಂಬುದನ್ನು ಕರಾರುವಾಕ್ಕಾಗಿ ಪತ್ತೆ ಮಾಡಲು ಸಾಧ್ಯವಾಗುವ 3ಡಿ ಹೈಡ್ರೋಜೆಲ್ ಕಲ್ಚರ್ ವ್ಯವಸ್ಥೆಯನ್ನು ಭಾರತೀಯ ವಿಜ್ಞಾನ ಸಂಸ್ಥೆಯ ಬಯೋ ಎಂಜಿನಿಯರಿಂಗ್ ವಿಭಾಗ ಅಭಿವೃದ್ಧಿಪಡಿಸಿದೆ.

ಕ್ಷಯ ವಿಶ್ವದಾದ್ಯಂತ ತೀವ್ರ ಸ್ವರೂಪದಲ್ಲಿ ಬಾಧಿಸುತ್ತಿರುವ ಸೋಂಕು. ಇದರ ಬ್ಯಾಕ್ಟೀರಿಯಾಗಳು ಔಷಧ ನಿರೋಧಕ ಶಕ್ತಿಯನ್ನೂ ಬೆಳೆಸಿಕೊಂಡು ತೀರಾ ಅಪಾಯಕಾರಿಯಾಗಿ ಪರಿಣಮಿಸಿವೆ. 3ಡಿ ಹೈಡ್ರೋಜೆಲ್ ಕಲ್ಚರ್ (ಕಸಿ) ವ್ಯವಸ್ಥೆಯು ಕ್ಷಯರೋಗಕ್ಕೆ ಫಲಪ್ರದ ಮತ್ತು ಪರಿಣಾಮಕಾರಿ ಚಿಕಿತ್ಸೆಗೆ ಹೊಸ ಮತ್ತು ಸರಳ ವಿಧಾನವಾಗಲಿದೆ.

ಈ ಹೈಡ್ರೋಜೆಲ್ ವ್ಯವಸ್ಥೆಯು ಸಸ್ತನಿಗಳಲ್ಲಿನ ಶ್ವಾಸಕೋಶದ ಪರಿಸರವನ್ನು ಅನುಕರಿಸುತ್ತದೆ. ಅಲ್ಲದೇ, ಶ್ವಾಸಕೋಶದ ಕೋಶಗಳಿಗೆ ಹೇಗೆ ಬ್ಯಾಕ್ಟೀರಿಯಾವನ್ನು ಅಂಟಿಸುತ್ತದೆ ಎಂಬುದನ್ನು ಪತ್ತೆ ಮಾಡಲು ಮತ್ತು ಮುಂದುವರೆದ ಅಧ್ಯಯನ ನಡೆಸಲು ಶಕ್ತಿಶಾಲಿ ವೇದಿಕೆಯನ್ನು ಕಲ್ಪಿಸಿಕೊಡಲಿದೆ. ಜತೆಗೆ ಕ್ಷಯಕ್ಕೆ ಹೇಗೆ ಚಿಕಿತ್ಸೆ ನೀಡಬೇಕು ಮತ್ತು ಅದಕ್ಕೆ ಬಳಸುವ ಚಿಕಿತ್ಸಕಗಳ ಪರಿಣಾಮಕಾರಿ ವಿಧಾನಗಳನ್ನೂ ಇದರ ಮೂಲಕ ಪರೀಕ್ಷಿಸಬಹುದಾಗಿದೆ.


3ಡಿ ಹೈಡ್ರೋಜೆಲ್

'ಮೈಕೊ ಬ್ಯಾಕ್ಟಿರಿಯಂ ಟ್ಯುಬರ್ ಕ್ಯೂಲೋಸಿಸ್ (ಎಂಟಿಬಿ) ಅತ್ಯಂತ ಹಳೆಯ ಬ್ಯಾಕ್ಟೀರಿಯಾ, ಮಾನವನ ದೇಹದಲ್ಲೇ ಒಂದಷ್ಟು ಪ್ರಮಾಣದಲ್ಲಿ ವಿಕಾಸಗೊಂಡಿದೆ' ಎಂದು ಬಯೋ ಎಂಜಿನಿಯರಿಂಗ್ ವಿಭಾಗದ ಸಹಾಯಕ ಪ್ರೊಫೆಸರ್ ರಚಿತ್ ಅಗರ್‌ವಾಲ್ ತಿಳಿಸಿದ್ದಾರೆ.

ಎಂಟಿಬಿ ಸೋಂಕಿನ ಅಧ್ಯಯನಕ್ಕೆ ಈಗ ಚಾಲ್ತಿಯಲ್ಲಿರುವ ಕಸಿ ಮಾದರಿ (2ಡಿ) ಹಲವು ಮಿತಿಗಳನ್ನು ಹೊಂದಿದೆ. ಶ್ವಾಸಕೋಶದ ಪರಿಸರದಲ್ಲಿ ಬ್ಯಾಕ್ಟೀರಿಯಾಗಳು ಹೇಗೆ ವರ್ತಿಸುತ್ತವೆ ಎಂಬುದನ್ನು ಮೂರು ಆಯಾಮಗಳಲ್ಲಿ ನಿಖರವಾಗಿ ಅನುಕರಿಸಿ (ಮಿಮಿಕ್) ತೋರಿಸುವುದಿಲ್ಲ. ಏಕೆಂದರೆ ಕಸಿ ಮಾಡುವ ಹಾಳೆಗಳು ಏಕಪದರದ್ದಾಗಿರುತ್ತವೆ. 2ಡಿ ಕಸಿ ಹಾಳೆಗಳಲ್ಲಿ ಕಂಡು ಬರುವ ಫಲಿತಾಂಶಕ್ಕೂ ಶ್ವಾಸಕೋಶವನ್ನು ಆವರಿಸಿರುವ ಅಂಗಾಂಶದ ಬಾಹ್ಯಕೋಶಿಯ ಮ್ಯಾಟ್ರಿಕ್ಸ್‌ಗೂ ಸಾಕಷ್ಟು ವ್ಯತ್ಯಾಸ ಕಂಡುಬರುತ್ತದೆ ಎನ್ನುತ್ತಾರೆ ಪಿಎಚ್.ಡಿ ವಿದ್ಯಾರ್ಥಿ ವಿಶಾಲ್ ಗುಪ್ತಾ.

2ಡಿ ಕಸಿ ಹಾಳೆಗಳಿಗೂ ನೈಜ ಶ್ವಾಸಕೋಶದ ಅಂಗಾಂಶಗಳಿಗೂ ಅಜಗಜಾಂತರ ವ್ಯತ್ಯಾಸ, ಒಂದು ಗಟ್ಟಿ ಕಲ್ಲಿಗೂ ಮತ್ತೊಂದು ದಿಂಬಿಗೂ ಹೋಲಿಸಬಹುದು ಎನ್ನುತ್ತಾರೆ ಅಗರ್‌ವಾಲ್.

ರಚಿತ್ ಅಗರ್‌ವಾಲ್ ಮತ್ತು ವಿಶಾಲ್ ಗುಪ್ತಾ ಸೇರಿ ಈ ವಿನೂತನ 3ಡಿ ಹೈಡ್ರೋಜೆಲ್ ಕಲ್ಚರ್ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಿದ್ದಾರೆ. ವಿಶೇಷವೆಂದರೆ ಶ್ವಾಸಕೋಶದ ಕೋಶಗಳ ಇಸಿಎಂನಲ್ಲಿರುವ ಮಹತ್ವದ ಅಣು ಹೈಡ್ರೋಜೆಲ್‌ನಲ್ಲೂ ಇರುತ್ತದೆ. 3ಡಿ ಹೈಡ್ರೋಜೆಲ್ ಅನ್ನು ಕಾಲಜನ್ ಎಂಬ ಒಂದು ಬಗೆಯ ಪ್ರೋಟೀನ್‌ನಿಂದ ತಯಾರಿಸಲಾಗುತ್ತದೆ.

ಮೈಕೊ ಬ್ಯಾಕ್ಟಿರಿಯಂ ಟ್ಯುಬರ್‌ಕ್ಯೂಲೋಸಿಸ್ (ಬ್ಯಾಕ್ಟೀರಿಯಾ) ಹೈಡ್ರೋಜೆಲ್‌ಗೆ ಸೋಂಕಿದ ಬಳಿಕ ಅದರ ಬೆಳವಣಿಗೆ ಹೇಗೆ ಸಾಗುತ್ತದೆ ಎಂಬುದನ್ನು ಅಧ್ಯಯನ ತಂಡ ಎರಡರಿಂದ ಮೂರು ವಾರಗಳ ಕಾಲ ಗಮನಿಸಿದೆ. ಈ ವ್ಯವಸ್ಥೆಯಲ್ಲಿ ಸಸ್ತನಿಗಳ ಕೋಶ ಮೂರು ವಾರಗಳ ಕಾಲ ಬದುಕುಳಿದರೆ, ಈಗಿನ 2ಡಿ ವ್ಯವಸ್ಥೆಯಲ್ಲಿ ನಾಲ್ಕರಿಂದ ಏಳು ದಿನಗಳು ಮಾತ್ರ ಬದುಕುಳಿಯಬಲ್ಲವು. ಅಂದರೆ ದೇಹದಲ್ಲಿ ಈ ರೋಗಕಾರಕ ತೀರಾ ಮಂದಗತಿಯಲ್ಲಿ ಬೆಳೆಯುತ್ತವೆ ಎಂಬುದು ಗಮನಕ್ಕೆ ಬಂದಿದೆ ಎನ್ನುತ್ತಾರೆ ಅಗರ್‌ವಾಲ್.

ಈ 3ಡಿ ಹೈಡ್ರೋಜೆಲ್ ಕಲ್ಚರ್ ವ್ಯವಸ್ಥೆಯ ಮೇಲೆ ಪೇಟೆಂಟ್ ಪಡೆಯಲು ಅರ್ಜಿಯನ್ನು ಸಲ್ಲಿಸಿದೆ. ಇದನ್ನು ರೋಗಿಗಳಲ್ಲಿ ಬ್ಯಾಕ್ಟೀರಿಯಾ ಬೆಳವಣಿಗೆ ಮತ್ತು ಔಷಧ ಪರೀಕ್ಷೆಗೆ ಬಳಸಬಹುದಾಗಿದೆ. ಉದ್ಯಮಗಳು ದೊಡ್ಡ ಪ್ರಮಾಣದಲ್ಲಿ ತಯಾರಿಸಿ ಮಾರುಕಟ್ಟೆಗೆ ಬಿಡುಗಡೆ ಮಾಡಬಹುದು.

1.6 ಕೋಟಿ ಜನರಿಗೆ ಸೋಂಕು

'ಮೈಕೊ ಬ್ಯಾಕ್ಟಿರಿಯಂ ಟ್ಯುಬರ್ ಕ್ಯೂಲೋಸಿಸ್ (ಎಂಟಿಬಿ) ಅತ್ಯಂತ ಅಪಾಯಕಾರಿ ಬ್ಯಾಕ್ಟೀರಿಯಾ. 2022ರಲ್ಲಿ ಜಗತ್ತಿನಲ್ಲಿ 1.6 ಕೋಟಿ ಮಂದಿಗೆ ಈ ಸೋಂಕು ತಗುಲಿತ್ತು. ಇದರಿಂದ 10.3 ಲಕ್ಷ ಮಂದಿ ಮೃತಪಟ್ಟಿದ್ದರು' ಎಂಬುದು ವಿಶ್ವ ಆರೋಗ್ಯ ಸಂಸ್ಥೆಯ ಮಾಹಿತಿ.

ಸರ್ಕಾರದ ಬಾಕಿ ₹3,773 ಕೋಟಿ

2ನೇ ಮುಖಪುಟದಿಂದ...

ಟಿಪ್ಪಣಿಯಲ್ಲಿ ಏನಿದೆ?: ಇಂಧನ ವೆಚ್ಚ ಮತ್ತು ಕಾಲಕಾಲಕ್ಕೆ ತುಟ್ಟಿ ಭತ್ಯೆ ಹೆಚ್ಚಳ, ಬಿಡಿ ಭಾಗಗಳ ವೆಚ್ಚದಲ್ಲಿ ಹೆಚ್ಚಳದಿಂದಾಗಿ ನಿಗಮಗಳ ಕಾರ್ಯಾಚರಣೆ ವೆಚ್ಚದಲ್ಲಿ ಏರಿಕೆ ಉಂಟಾಗಿದೆ. ಆದರೆ, ಇದಕ್ಕೆ ಅನುಗುಣವಾಗಿ ಪ್ರಯಾಣಿಕರ ಟಿಕೆಟ್ ದರಗಳನ್ನು 2020ರಿಂದ ಹಾಗೂ ವಿದ್ಯಾರ್ಥಿಗಳ ರಿಯಾಯಿತಿ ಪಾಸ್‌ಗಳ ದರಗಳನ್ನು 2012ರಿಂದ ಪರಿಷ್ಕರಿಸಿಲ್ಲ. 2023ರ ಮಾರ್ಚ್ 1ರಿಂದ ಸಿಬ್ಬಂದಿ ವೇತನ ಪರಿಷ್ಕರಣೆಯಿಂದ ನಿಗಮಕ್ಕೆ ತಿಂಗಳಿಗೆ ₹55.35 ಕೋಟಿ ಹೆಚ್ಚುವರಿ ವೆಚ್ಚ ಉಂಟಾಗುತ್ತಿದ್ದು, ಅದನ್ನು ನಿಬಾಯಿಸಲು ಅನುದಾನ ಬಿಡುಗಡೆ ಆಗಿಲ್ಲ.

2023–24ನೇ ಸಾಲಿನಲ್ಲಿ ನಿಗಮಗಳ ಆದಾಯದಲ್ಲಿ ಶೇ 47ರಷ್ಟು 'ಶಕ್ತಿ' ಯೋಜನೆಯಡಿ ಹಾಗೂ ಶೇ 53ರಷ್ಟು 'ಶಕ್ತಿ'ಯೇತರವಾಗಿ ಬಂದಿದೆ. ಡೀಸೆಲ್, ಸಿಬ್ಬಂದಿ ವೆಚ್ಚ ಮತ್ತು ಇತರ ಕಾರ್ಯಾಚರಣೆ ವೆಚ್ಚಗಳನ್ನು ತಿಂಗಳಿಡೀ ನಿಭಾಯಿಸಲು 'ಶಕ್ತಿ'ಯೇತರ ಆದಾಯದ ಜೊತೆಗೆ 'ಶಕ್ತಿ' ಯೋಜನೆಯಡಿ ಸಂಗ್ರಹವಾಗುವ ಸಂಪೂರ್ಣ ಮೊತ್ತವೂ ಅತ್ಯಗತ್ಯವಾಗಿದೆ. ಆದರೆ, 'ಶಕ್ತಿ' ಯೋಜನೆಯಡಿ ಸಂಗ್ರಹವಾದ ಆದಾಯ ಸಂಪೂರ್ಣವಾಗಿ ಮರು ಪಾವತಿಯಾಗದೇ ಇರುವುದರಿಂದ, ಆ ಮೊತ್ತವೂ ಸೇರಿ ಒಟ್ಟು ₹3,773.79 ಕೋಟಿಯನ್ನು ಸರ್ಕಾರ ಮರು ಪಾವತಿಸಲು ಬಾಕಿಯಿದೆ ಎಂದು ವಿವರಿಸಿರುವ ಸಚಿವರು, ಆ ವಿವರಗಳ ಪಟ್ಟಿಯನ್ನೂ ಟಿಪ್ಪಣಿಯಲ್ಲಿ ನೀಡಿದ್ದಾರೆ.

'ಶಕ್ತಿ' ಯೋಜನೆ ಜಾರಿಗೆ ಬಂದ ನಂತರ ಗ್ರಾಮಾಂತರ ಪ್ರದೇಶವೂ ಸೇರಿದಂತೆ ರಾಜ್ಯದಾದ್ಯಂತ ಹೆಚ್ಚಿನ ಸಾರಿಗೆ ಸೌಲಭ್ಯ ಕಲ್ಪಿಸಲು ಭಾರಿ ಬೇಡಿಕೆ ಇದೆ. ಹೀಗಾಗಿ, ಹೊಸ ವಾಹನಗಳನ್ನು ಖರೀದಿಸುವ ಮೂಲಕ ನಿಗಮಗಳ ವಾಹನ ಬಲ ಹೆಚ್ಚಿಸುವುದು ಅತ್ಯಗತ್ಯವಾಗಿದೆ. ಹೊಸ ವಾಹನಗಳ ಖರೀದಿಗೆ 2023–24ನೇ ಸಾಲಿನಲ್ಲಿ ಸರ್ಕಾರ ₹600 ಕೋಟಿ ಬಿಡುಗಡೆ ಮಾಡಿದೆ. ಆದರೆ, ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಯಾವುದೇ ಅನುದಾನ ಒದಗಿಸಿಲ್ಲ. ಸಂಗ್ರಹವಾಗುತ್ತಿರುವ ನಗದು ಆದಾಯದಿಂದ ನೌಕರರ ವೇತನ ಮತ್ತು ಬಸ್‌ಗಳ ಕಾರ್ಯಾಚರಣೆಗೆ ಅತ್ಯಗತ್ಯವಾದ ಇಂಧನ ಮತ್ತು ಇತರ ವೆಚ್ಚಗಳನ್ನು ಮಾತ್ರ ಭರಿಸಲಾಗುತ್ತಿದೆ. ಭವಿಷ್ಯ ನಿಧಿಗೆ ಪಾವತಿಸಬೇಕಿರುವ ಮೊತ್ತವು ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. 2023ರ ವೇತನ ಪರಿಷ್ಕರಣೆಯಂತೆ ಹಾಲಿ ಮತ್ತು ನಿವೃತ್ತ ನೌಕರರಿಗೆ ಹಿಂಬಾಕಿ ಪಾವತಿಸಲು ಸಾಧ್ಯವಾಗುತ್ತಿಲ್ಲ. ಹೊಸ ಬಸ್‌ಗಳ ಖರೀದಿಗೆ ಸಂಪನ್ಮೂಲ ಕ್ರೋಡೀಕರಿಸಿ ನಿಭಾಯಿಸುವುದು ಕಷ್ಟ ಸಾಧ್ಯವಾಗಿದೆ ಎಂದೂ ಟಿಪ್ಪಣಿಯಲ್ಲಿದೆ.

'ಡಿಕೆಶಿ ಸಿ.ಎಂ, ಡಜನ್ ಡಿಸಿಎಂ ಮಾಡಲಿ'

ಕೆಪಿಸಿಸಿ ಅಧ್ಯಕ್ಷರನ್ನು ಸಿ.ಎಂ ಮಾಡುವುದು ಪದ್ಧತಿ– ಶಾಸಕ ಬಸವರಾಜ್

ಪ್ರಜಾವಾಣಿ ವಾರ್ತೆ


ಬಸವರಾಜು ಶಿವಗಂಗಾ

ಬೆಂಗಳೂರು: 'ಡಿ.ಕೆ. ಶಿವಕುಮಾರ್ ಅವರನ್ನು ಮುಖ್ಯಮಂತ್ರಿ ಮಾಡಿ, ನಂತರ ಒಂದು ಡಜನ್ ಉಪ ಮುಖ್ಯಮಂತ್ರಿ ಮಾಡಲಿ' ಎಂದು ಚನ್ನಗಿರಿ ಕಾಂಗ್ರೆಸ್ ಶಾಸಕ ಬಸವರಾಜ್ ಶಿವಗಂಗಾ ಹೇಳಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರನ್ನು ಸದಾಶಿವನಗರದಲ್ಲಿರುವ ಮನೆಯಲ್ಲಿ ಬುಧವಾರ ಭೇಟಿ ಮಾಡಿದ ಬಳಿಕ ಸುದ್ದಿಗಾರ ಜೊತೆ ಮಾತನಾಡಿದ ಅವರು, 'ಕೆಪಿಸಿಸಿ ಅಧ್ಯಕ್ಷರನ್ನು ಮುಖ್ಯಮಂತ್ರಿ ಮಾಡುವುದು ಪದ್ಧತಿ' ಎಂದರು.

'ಲೋಕಸಭೆ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಗೆ ಮುನ್ನಡೆ ಸಿಕ್ಕಿಲ್ಲ ಎಂದಮೇಲೆ ಮತ್ತೆ ಪಕ್ಷ ಸಂಘಟನೆ ಮಾಡಬೇಕು. ಐದು ವರ್ಷದ ನಂತರ ಅಧಿಕಾರಕ್ಕೆ ಬರಬೇಕಾದರೆ ಈಗಲೇ ಎಚ್ಚೆತ್ತುಕೊಳ್ಳಬೇಕು' ಎಂದರು.

'ಸಮುದಾಯವಾರು ಉಪ ಮುಖ್ಯಮಂತ್ರಿ ಹುದ್ದೆಯನ್ನು ಸೃಷ್ಟಿಸುವ ಅಗತ್ಯ ಇದೆಯೇ' ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ಈ ಬಗ್ಗೆ ಹಿರಿಯ ಸಚಿವರು ಮಾತನಾಡಿದ್ದಾರೆ. ಹೆಚ್ಚುವರಿ ಉಪ ಮುಖ್ಯಮಂತ್ರಿ ವಿಚಾರದ ಕುರಿತು ಹೈಕಮಾಂಡ್ ತೀರ್ಮಾನ ಮಾಡಬೇಕು. ಅದರ ಮೇಲೂ ಆಗಲೇಬೇಕೆಂಬ ಆಸೆ ಇದ್ದರೆ ಮಾಡಲಿ. ನಮ್ಮ ವಿರೋಧ ಇಲ್ಲ. ನಮ್ಮ ಡಿಕೆ ಸಾಹೇಬ್ರರನ್ನು ಮುಖ್ಯಮಂತ್ರಿ ಮಾಡಲಿ. ನಂತರ ಒಂದು ಡಜನ್ ಡಿಸಿಎಂ ಮಾಡಲಿ' ಎಂದರು.

'ಮುಖ್ಯಮಂತ್ರಿ ಹುದ್ದೆ ಖಾಲಿ ಇದೆಯೇ' ಎಂಬ ಪ್ರಶ್ನೆಗೆ, 'ಉಪ ಮುಖ್ಯಮಂತ್ರಿ ಹುದ್ದೆಯೂ ಖಾಲಿ ಇಲ್ಲವಲ್ಲ' ಎಂದರು.

'ಸಿದ್ದರಾಮಯ್ಯ ಅವರು ಹಿಂದೆ ಐದು ವರ್ಷ ಮುಖ್ಯಮಂತ್ರಿ ಆಗಿದ್ದರು. ಮತ್ತೆ ಮುಖ್ಯಮಂತ್ರಿಯಾಗಿ ಇದ್ದಾರೆ. ಕಳೆದ ಅವಧಿಯಲ್ಲಿ ಲೋಕಸಭೆಯಲ್ಲಿ ರಾಜ್ಯದಿಂದ ಕಾಂಗ್ರೆಸ್‌ನ ಒಬ್ಬರು ಸದಸ್ಯರಿದ್ದರು. ಈ ಬಾರಿ ಒಂಬತ್ತು ಸ್ಥಾನಗಳನ್ನು ಗೆದ್ದಿದ್ದೇವೆ. ಡಿ.ಕೆ. ಶಿವಕುಮಾರ್ ಅವರು ಪಕ್ಷ ಸಂಘಟಿಸಿದ್ದರಿಂದ ಇದು ಸಾಧ್ಯವಾಗಿದೆ. ಹೀಗಾಗಿ, ಅವರನ್ನು ಮುಖ್ಯಮಂತ್ರಿ ಮಾಡಿದರೆ ಅನುಕೂಲವಾಗುತ್ತದೆ' ಎಂದೂ ಪ್ರತಿಪಾದಿಸಿದರು.

ಕೆಪಿಸಿಸಿ ಅಧ್ಯಕ್ಷ ಬದಲಾವಣೆ: ರಾಜಣ್ಣ ಪರೋಕ್ಷ ಆಗ್ರಹ

'ಲೋಕಸಭೆ ಚುನಾವಣೆ ಮುಗಿಯುವವರೆಗೆ ಡಿ.ಕೆ. ಶಿವಕುಮಾರ್ ಅಧ್ಯಕ್ಷರಾಗಿರುತ್ತಾರೆ ಎಂದು ಹೈಕಮಾಂಡ್ ಹೇಳಿತ್ತು. ಅದನ್ನು ಈಗ ನೆನಪು ಮಾಡಿಕೊಡಲು ಒತ್ತಾಯಿಸುತ್ತೇನೆ' ಎಂದು ಸಹಕಾರ ಸಚಿವ ಕೆ.ಎನ್. ರಾಜಣ್ಣ ಹೇಳಿದರು. ಆ ಮೂಲಕ, ಕೆಪಿಸಿಸಿ ಅಧ್ಯಕ್ಷರ ಬದಲಾವಣೆಗೆ ಪರೋಕ್ಷವಾಗಿ ಒತ್ತಾಯಿಸಿದ್ದಾರೆ.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಲಿಂಗಾಯತ ನಾಯಕರು ಕೆಪಿಸಿಸಿ ಅಧ್ಯಕ್ಷ ಸ್ಥಾನ ಕೇಳುವುದರಲ್ಲಿ ತಪ್ಪೇನೂ ಇಲ್ಲ. ಎಲ್ಲ ಸಮುದಾಯದವರೂ ಕೆಪಿಸಿಸಿ ಅಧ್ಯಕ್ಷರಾಗಲು ಅರ್ಹರಿದ್ದಾರೆ' ಎಂದರು.


ಕೆ.ಎನ್. ರಾಜಣ್ಣ

'ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಆಯ್ಕೆ ಸಮಯದಲ್ಲಿ ಹೈಕಮಾಂಡ್ ಏನು ಹೇಳಿತ್ತು? ಸಿದ್ದರಾಮಯ್ಯ ಮುಖ್ಯಮಂತ್ರಿ, ಡಿ.ಕೆ. ಶಿವಕುಮಾರ್ ಅವರು ಉಪ ಮುಖ್ಯಮಂತ್ರಿ. ಕೆಪಿಸಿಸಿ ಅಧ್ಯಕ್ಷರು ಲೋಕಸಭೆ ಚುನಾವಣೆ ಮುಗಿಯುವವರೆಗೆ ಮುಂದುವರಿಯಲಿದ್ದಾರೆ ಎಂದೂ ಹೈಕಮಾಂಡ್ ಹೇಳಿತ್ತು' ಎಂದರು.

'ಹೆಚ್ಚುವರಿ ಉಪಮುಖ್ಯಮಂತ್ರಿ ವಿಚಾರದಲ್ಲಿ ನನ್ನ ಅಭಿಪ್ರಾಯವನ್ನು ಈಗಾಗಲೇ ಹೇಳಿದ್ದೇನೆ. ಶಾಸಕರಾದ ಎಚ್.ಸಿ. ಬಾಲಕೃಷ್ಣ, ಬಸವರಾಜ್ ಶಿವಗಂಗಾ ಅವರೂ ತಮ್ಮ ಅಭಿಪ್ರಾಯ ಹೇಳಿದ್ದಾರೆ. ಅಂತಿಮವಾಗಿ ಹೈಕಮಾಂಡ್ ತೀರ್ಮಾನ ಮಾಡುತ್ತದೆ' ಎಂದು ರಾಜಣ್ಣ ಹೇಳಿದರು.

ಸುದ್ದಿ 2 ನಿಮಿಷ

ತುರ್ತು ಪರಿಸ್ಥಿತಿ ಬಡವರ ಪರವಾಗಿತ್ತು: ಎಚ್.ವಿಶ್ವನಾಥ್

ಮೈಸೂರು: 'ತುರ್ತು ಪರಿಸ್ಥಿತಿ ಬಡವರಿಗೆ ಒಳ್ಳೆಯದನ್ನು ಮಾಡಿತ್ತು. ಅದು ಬಡವರ ಪರವಿದ್ದ ಅಲೆ' ಎಂದು ವಿಧಾನ ಪರಿಷತ್ ಸದಸ್ಯ ಅಡಗೂರು ಎಚ್. ವಿಶ್ವನಾಥ್ ಹೇಳಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ನೇತೃತ್ವದಲ್ಲಿ ಬಿಜೆಪಿ ಕರಾಳ ದಿನ ಆಚರಿಸಿದೆ. ಆದರೆ, ತುರ್ತು ಪರಿಸ್ಥಿತಿಯು ರಾಜ್ಯದ ಪಾಲಿಗೆ ಕರುಣಾಳು ದಿನಗಳಾಗಿದ್ದವು. ವಾಸ್ತವ ಅರಿತು ಬಿಜೆಪಿಗರು ಮಾತನಾಡಲಿ' ಎಂದರು.

'ಹಳೇ ವಿಚಾರಗಳನ್ನೇ ಇನ್ನೆಷ್ಟು ದಿನ ಮಾತನಾಡಬೇಕು. ಪ್ರತಿಭಟನೆಯಿಂದ ಲಾಭವಿಲ್ಲ. ಆಗ ಡಿ.ದೇವರಾಜ ಅರಸು ಅವರು ಅಭಿವೃದ್ಧಿಗೆ ಬಳಸಿಕೊಂಡರು. ಅದರಿಂದ ದಲಿತರಿಗೆ, ಬಡವರಿಗಾದ ಲಾಭವನ್ನು ಯಾರೂ ವಿಶ್ಲೇಷಣೆ ಮಾಡುತ್ತಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

'ತುರ್ತು ಪರಿಸ್ಥಿತಿ ಘೋಷಣೆಯಾಗಿ 50 ವರ್ಷವಾಗಿದೆ. ಬಾಲಕರಾಗಿದ್ದಾಗ ಜೈಲು ಪಾಲಾಗಿದ್ದುದಾಗಿ ಆರ್.ಅಶೋಕ ಸುಳ್ಳು ಹೇಳುತ್ತಿದ್ದಾರೆ. ಬಾಲಕರನ್ನು ಜೈಲಿಗೆ ಹಾಕಲು ಸಾಧ್ಯವೇ' ಎಂದು ಪ್ರಶ್ನಿಸಿದರು.

'ಒಂದೇ ಮನೆಯವರೇಕೆ ಜೈಲಿನಲ್ಲಿದ್ದಾರೆ? ಪೋಕ್ಸೊ ಪ್ರಕರಣದಡಿ ಸ್ವಾಮೀಜಿಯೇಕೆ ಜೈಲಿಗೆ ಹೋಗಿದ್ದಾರೆ. ಮೋದಿ ಅವರ ಕಾರಿಗೆ ಚಪ್ಪಲಿ ತೂರಿಬಂದ ಕಾರಣವೇನು? ರಾಮಮಂದಿರ ಏಕೆ ಸೋರುತ್ತಿದೆ. ಇದಕ್ಕೆಲ್ಲ ಕಾಂಗ್ರೆಸ್ ಕಾರಣವೇ? ವರ್ತಮಾನದ ಸಂಕಷ್ಟಗಳ ಬಗ್ಗೆ ಅಶೋಕ ಮಾತನಾಡಲಿ' ಎಂದು ಕಿಡಿಕಾರಿದರು.

'ಪೆಟ್ರೋಲ್, ಹಾಲು ಬೆಲೆ ಏರಿಕೆಯಿಂದ ಜನ ಸಂಕಷ್ಟದಲ್ಲಿದ್ದಾರೆ. ಬೆಲೆ ಹೆಚ್ಚಿಸುವುದಿಲ್ಲವೆಂದು, ಚುನಾವಣೆಗೆ ಮುನ್ನ ಹೇಳಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ವಚನ ಭ್ರಷ್ಟರಾಗಿದ್ದಾರೆ' ಎಂದು ಟೀಕಿಸಿದರು.



ಫಲಿತಾಂಶ ಕುಸಿತ: ಶಿಕ್ಷಕರ ವಾರ್ಷಿಕ ಬಡ್ತಿಗೆ ತಡೆ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಅತ್ಯಂತ ಕಡಿಮೆ ಅಂಕ ಪಡೆದ ವಿದ್ಯಾರ್ಥಿಗಳಿರುವ ಪ್ರೌಢಶಾಲೆಗಳ ಶಿಕ್ಷಕರ ಒಂದು ವಾರ್ಷಿಕ ಬಡ್ತಿಯನ್ನು ತಡೆ ಹಿಡಿಯಲಾಗಿದೆ.

ಈ ಕುರಿತು ಆದೇಶ ಹೊರಡಿಸಿರುವ ಕೆಲ ಜಿಲ್ಲೆಗಳ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲೆಯ ವಿಷಯವಾರು ಸರಾಸರಿಗಿಂತ ಕಡಿಮೆ ಫಲಿತಾಂಶ ಪಡೆದ ಸರ್ಕಾರಿ ಹಾಗೂ ಅನುದಾನಿತ ಪ್ರೌಢ ಶಾಲೆಗಳ ವಿಷಯವಾರು ಶಿಕ್ಷಕರ ಒಂದು ವಾರ್ಷಿಕ ಬಡ್ತಿಯನ್ನು ತಡೆ ಹಿಡಿಯಬೇಕು. ಕೈಗೊಂಡ ಕ್ರಮದ ವರದಿಯನ್ನು ತಕ್ಷಣ ಜಿಲ್ಲಾ ಪಂಚಾಯಿತಿಗೆ ಸಲ್ಲಿಸಬೇಕು ಎಂದು ನಿರ್ದೇಶನ ನೀಡಿದ್ದಾರೆ.

2023–24ನೇ ಸಾಲಿನ ಎಸ್‌ಎಸ್‌ಎಲ್‌ಸಿ ಫಲಿತಾಂಶ ಕಳೆದ ಬಾರಿಗಿಂತ ಶೇಕಡ 10.49ರಷ್ಟು ಕುಸಿತ ಕಂಡಿತ್ತು. ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಹಲವು ಜಿಲ್ಲೆಗಳು ಸುಧಾರಣೆ ಕಂಡರೆ, 2023ರ ಫಲಿತಾಂಶದಲ್ಲಿ ಅಗ್ರಸ್ಥಾನದಲ್ಲಿದ್ದ ಜಿಲ್ಲೆಗಳು ಈ ಬಾರಿ ಕುಸಿತ ಕಂಡಿವೆ.



ಕೀಟನಾಶಕ ಸಿಂಪಡಣೆ

ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಅವರು ಬೆಳಗಾವಿ ಜಿಲ್ಲೆಯ ಬೈಲಹೊಂಗಲ ಸಮೀಪದ ಬೈಲವಾಡ ಗ್ರಾಮದ ಭೂಮಿಯಲ್ಲಿ ಬುಧವಾರ ಯಾಂತ್ರೀಕೃತ ಕೀಟನಾಶಕ ಸಿಂಪಡಿಸಿದರು

ಡಿ.ಸಿ ಕಚೇರಿಗಳಿಗೆ ಮುತ್ತಿಗೆ ನಾಳೆ: ವಿಜಯೇಂದ್ರ

ನವದೆಹಲಿ: 'ವಾಲ್ಮೀಕಿ ಅಭಿವೃದ್ಧಿ ನಿಗಮದ ₹187 ಕೋಟಿ ಹಗರಣ ಸಂಬಂಧ ಹಣಕಾಸು ಸಚಿವರಾದ ಮುಖ್ಯಮಂತ್ರಿಯವರು ಜವಾಬ್ದಾರಿ ಹೊರಬೇಕು. ಈ ಸಂಬಂಧ ಸಚಿವ ಶರಣಪ್ರಕಾಶ ಪಾಟೀಲ, ನಿಗಮದ ಅಧ್ಯಕ್ಷರು ರಾಜೀನಾಮೆ ಕೊಡಬೇಕು ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಆಗ್ರಹಿಸಿದರು.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಪರಿಶಿಷ್ಟ ಪಂಗಡಕ್ಕೆ ಮೀಸಲಿಟ್ಟ ಹಣ ಪೋಲಾಗಿದೆ; ಅದರ ದುರ್ಬಳಕೆ ಆಗಿದೆ. ಕಾಂಗ್ರೆಸ್ ಸರ್ಕಾರವು ಈ ಹಣವನ್ನು ದೋಚಿದೆ. ಇದೇ 28ರಂದು ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿ ಕಚೇರಿಗೆ ಮುತ್ತಿಗೆ ಹಾಕಲಿದ್ದೇವೆ' ಎಂದು ಹೇಳಿದರು.

'ರಾಜ್ಯದಲ್ಲಿ ಬೆಲೆ ಏರಿಕೆಯ ಪರ್ವ ನಡೆಯುತ್ತಿದೆ. ಗ್ಯಾರಂಟಿ ಹೆಸರಿನಲ್ಲಿ ಜನರ ಕಿವಿಗೆ ಹೂ ಮುಡಿಸಿದ್ದಾರೆ. ಕಾಂಗ್ರೆಸ್ ಸರ್ಕಾರವು ನಾಡಿನ ಜನತೆಗೆ ದ್ರೋಹ ಬಗೆಯುತ್ತಿದೆ' ಎಂದು ಕಿಡಿಕಾರಿದರು.

ಪವಿತ್ರಾಗೆ ಮೇಕಪ್ ಮಾಡಲು ಅವಕಾಶ: ಪಿಎಸ್‌ಐಗೆ ನೋಟಿಸ್

ನಾಲ್ವರು ತುಮಕೂರು ಜೈಲಿಗೆ ಸ್ಥಳಾಂತರ

ಪ್ರಜಾವಾಣಿ ವಾರ್ತೆ

ಬೆಂಗಳೂರು/ ತುಮಕೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ಬಂಧಿತರಾದ 17 ಆರೋಪಿಗಳ ಪೈಕಿ ನಾಲ್ವರನ್ನು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಿಂದ ತುಮಕೂರು ಜೈಲಿಗೆ ಬುಧವಾರ ಸ್ಥಳಾಂತರ ಮಾಡಲಾಯಿತು. ಭದ್ರತೆಯಲ್ಲಿ ಆರೋಪಿಗಳನ್ನು ಪೊಲೀಸರು ತುಮಕೂರು ಜೈಲಿಗೆ ಕರೆದೊಯ್ದರು.

ನ್ಯಾಯಾಲಯದ ಆದೇಶದಂತೆ ಎ–8 ರವಿಶಂಕರ್, ಎ–15 ಕಾರ್ತಿಕ್ ಅಲಿಯಾಸ್ ಕಪ್ಪೆ (27), ಎ–16 ಕೇಶವಮೂರ್ತಿ (27) ಮತ್ತು ಎ–17 ನಿಖಿಲ್ ನಾಯಕ್ (21) ಅವರನ್ನು ಸ್ಥಳಾಂತರಿಸಲಾಯಿತು.

'ಕೊಲೆ ಪ್ರಕರಣದಲ್ಲಿ ಬಂಧನಕ್ಕೆ ಒಳಗಾದ ನಾಲ್ವರಿಗೆ ಜೀವ ಬೆದರಿಕೆಯಿದ್ದು ಇವರನ್ನು ಬೇರೆ ಜೈಲಿಗೆ ಕಳುಹಿಸಲು ಆದೇಶಿಸಬೇಕು ಎಂದು ಸರ್ಕಾರಿ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಪಿ.ಪ್ರಸನ್ನ ಕುಮಾರ್ ನ್ಯಾಯಾಲಯದಲ್ಲಿ ಮನವಿ ಮಾಡಿದ್ದರು. ನ್ಯಾಯಾಲಯದ ಸೂಚನೆ ಮೇರೆಗೆ ನಾಲ್ವರನ್ನು ಬೇರೆ ಜೈಲಿಗೆ ಕಳುಹಿಸಲಾಗಿದೆ' ಎಂದು ಮೂಲಗಳು ತಿಳಿಸಿವೆ.

ಕೊಲೆ ಪ್ರಕರಣದಲ್ಲಿ ನಾಲ್ವರು ಆರೋಪಿಗಳು ಪೊಲೀಸರಿಗೆ ಮೊದಲು ಶರಣಾಗಿದ್ದರು. ಆರೋಪಿ ಪ್ರದೋಷ್ ಎಂಬುವರು ಈ ನಾಲ್ವರಿಗೆ ತಲಾ ₹ 5 ಲಕ್ಷ ನೀಡಿ ನಟ ದರ್ಶನ್ ಹೆಸರು ಬಾಯ್ಬಿಡದಂತೆ ಸೂಚಿಸಿದ್ದರು ಎನ್ನಲಾಗಿದೆ. ಪೊಲೀಸ್ ವಿಚಾರಣೆ ವೇಳೆ ಪ್ರಮುಖರ ಹೆಸರು ಹೇಳಿದ್ದರಿಂದ ಆರೋಪಿಗಳ ನಡುವೆಯೇ ದ್ವೇಷ ಉಂಟಾಗಿತ್ತು. ಇದರಿಂದ ಬೇರೆ ಜೈಲಿಗೆ ಸ್ಥಳಾಂತರಿಸುವಂತೆ ತನಿಖಾಧಿಕಾರಿಗಳೂ ಮನವಿ ಮಾಡಿದ್ದರು.

ಪಿಎಸ್‌ಐ ಗೀತಾಗೆ ನೋಟಿಸ್: ಈ ಪ್ರಕರಣದ ಎ–1 ಆರೋಪಿ ಪವಿತ್ರಾಗೌಡ ಅವರ ಮನೆಯಲ್ಲಿ ನಡೆದ ಮಹಜರು ವೇಳೆ ಆರೋಪಿಗೆ ಮೇಕಪ್ ಮಾಡಲು ಅವಕಾಶ ನೀಡಲಾಗಿತ್ತು ಎಂಬ ಆರೋಪದ ಮೇಲೆ ಪಿಎಸ್‌ಐ ಗೀತಾ ಅವರಿಗೆ ಪಶ್ಚಿಮ ವಿಭಾಗ ಡಿಸಿಪಿ ನೋಟಿಸ್ ಜಾರಿ ಮಾಡಿದ್ದರು.

ಕರ್ತವ್ಯ ಲೋಪ ಎಸಗಿದ್ದ ಆರೋಪದ ಮೇಲೆ ಪಿಎಸ್‌ಐಗೆ ನೋಟಿಸ್ ನೀಡಲಾಗಿತ್ತು. ಅವರು ನೋಟಿಸ್‌ಗೆ ಉತ್ತರಿಸಿದ್ದಾರೆ ಎಂದು ಮೂಲಗಳು ಹೇಳಿವೆ.

'ಮಹಜರು ವೇಳೆ ಪವಿತ್ರಾಗೌಡ ಅವರು ತಮ್ಮ ಮನೆಯಲ್ಲಿ ಶೌಚಾಲಯಕ್ಕೆ ತೆರಳಿದ್ದರು. ಆಗ ಲಿಪ್‌ಸ್ಟಿಕ್ ಹಚ್ಚಿಕೊಂಡಿರುವ ಸಾಧ್ಯತೆಯಿದೆ. ಆ ಕೊಠಡಿಯಲ್ಲಿ ಮೇಕಪ್ ಬಾಕ್ಸ್ ಇದ್ದ ಮಾಹಿತಿ ತಿಳಿದಿರಲಿಲ್ಲ' ಎಂದು ಪಿಎಸ್‌ಐ ಅವರು ಉತ್ತರಿಸಿದ್ದಾರೆ ಎಂದು ಗೊತ್ತಾಗಿದೆ.

'ಪವಿತ್ರಾಗೌಡ ಅವರು ಪೊಲೀಸ್ ಕಸ್ಟಡಿಯಲ್ಲಿದ್ದ ವೇಳೆ ನಿಮ್ಹಾನ್ಸ್ ಆಸ್ಪತ್ರೆ ಬಳಿಯ ಮಹಿಳಾ ಸಾಂತ್ವನ ಕೇಂದ್ರದಲ್ಲಿ ಇರಿಸಲಾಗಿತ್ತು. ಪ್ರತಿನಿತ್ಯ ಅವರನ್ನು ಅಲ್ಲಿಂದಲೇ ಅನ್ನಪೂರ್ಣೇಶ್ವರಿ ಠಾಣೆಯ ಸೆಲ್‌ಗೆ ವಿಚಾರಣೆಗೆ ಕರೆತಲಾಗುತ್ತಿತ್ತು. ಆಗಲೂ ಆರೋಪಿ ಮೇಕಪ್ ಸೆಟ್ ಜತೆಗೆ ಇಟ್ಟುಕೊಂಡು ವಿಚಾರಣೆಗೆ ಬರುತ್ತಿದ್ದರು. ಆಗಲೂ ಅಧಿಕಾರಿಯೊಬ್ಬರು ಕರ್ತವ್ಯ ಲೋಪ ಎಸಗಿರುವುದು ಪತ್ತೆಯಾಗಿದ್ದು ಅವರಿಂದ ವಿವರಣೆ ಪಡೆದುಕೊಳ್ಳಲಾಗಿದೆ' ಎಂದು ಮೂಲಗಳು ಹೇಳಿವೆ.

ರಿವಾಲ್ವರ್ ಜಪ್ತಿಗೆ ಸೂಚನೆ: ಆರೋಪಿಗಳಾದ ದರ್ಶನ್ ಹಾಗೂ ಪ್ರದೋಷ್ ಅವರ ಮನೆಯಲ್ಲಿರುವ ರಿವಾಲ್ವರ್ ವಶಕ್ಕೆ ಪಡೆಯಲು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಸೂಚಿಸಿದ್ದಾರೆ.

ದರ್ಶನ್ ಅವರ ನಿವಾಸ ಆರ್.ಆರ್. ನಗರದಲ್ಲಿದ್ದು ಪ್ರದೋಷ್ ಅವರ ನಿವಾಸ ಗಿರಿನಗರದಲ್ಲಿದೆ. ಆಯಾ ವ್ಯಾಪ್ತಿಯ ಇನ್‌ಸ್ಪೆಕ್ಟರ್‌ಗಳಿಗೆ ರಿವಾಲ್ವರ್ ಜಪ್ತಿಗೆ ಸೂಚಿಸಲಾಗಿದೆ ಎಂದು ಮೂಲಗಳು ಹೇಳಿವೆ.

ಹಾಲಿನ ಪ್ರಮಾಣ ಹೆಚ್ಚಿಸಿದ್ದೇವೆ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅರ್ಧ ಲೀಟರ್ ಪ್ಯಾಕೆಟ್‌ನಲ್ಲಿ ಹಾಲಿನ ಪ್ರಮಾಣವನ್ನು 50 ಮಿ.ಲೀ ಹೆಚ್ಚು ಮಾಡಿದ್ದು, ಆ ಪ್ರಮಾಣಕ್ಕೆ ತಕ್ಕಂತೆ ₹2.10 ಹೆಚ್ಚು ಬೆಲೆ ನಿಗದಿ ಮಾಡಲಾಗಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, 'ರಾಜ್ಯದಲ್ಲಿ ಹಾಲು ಉತ್ಪಾದನೆ ಹೆಚ್ಚಾಗಿದ್ದು, ಅದನ್ನು ಗ್ರಾಹಕರಿಗೆ ನೀಡಿ ಅದಕ್ಕೆ ತಕ್ಕ ದರವನ್ನಷ್ಟೇ ನಿಗದಿ ಮಾಡಿದ್ದೇವೆ' ಎಂದರು.

ಹೋಟೆಲ್ ಮಾಲೀಕರ ಸಂಘದವರು ಸಭೆ ಸೇರಿ ಕಾಫಿ, ಚಹ ದರ ಹೆಚ್ಚಿಸುವ ಕುರಿತು ಚರ್ಚಿಸಿದ ವಿಷಯವನ್ನು ಮುಖ್ಯಮಂತ್ರಿಯವರ ಗಮನ ಸೆಳೆದಾಗ, 'ಹೇಗೆ ಹೆಚ್ಚಿಸುತ್ತಾರೆ. ಹಾಲಿನ ದರ ಏರಿದ್ದರೆ ಮಾತ್ರ ಹೆಚ್ಚಿಸಬೇಕು. ನಾವು ಬೆಲೆ ಹೆಚ್ಚಿಸಿಲ್ಲ. ಪ್ಯಾಕೆಟ್‌ನಲ್ಲಿ ನೀಡುತ್ತಿದ್ದ ಹಾಲಿಗೆ ಹೆಚ್ಚಿನ ಪ್ರಮಾಣ ಸೇರಿಸಿ, ಅದಕ್ಕೆ ತಕ್ಕ ಬೆಲೆ ನಿಗದಿ ಮಾಡಿದ್ದೇವೆ' ಎಂದರು.

ಕೆಕೆಆರ್‌ಟಿಸಿ ಡಿ.ಸಿ ಲೋಕಾಯುಕ್ತ ಬಲೆಗೆ

ಪ್ರಜಾವಾಣಿ ವಾರ್ತೆ


ವಿ.ಎಸ್. ಜಗದೀಶ್

ಹೊಸಪೇಟೆ (ವಿಜಯನಗರ): ಕರ್ತವ್ಯ ಲೋಪ ಪ್ರಕರಣವೊಂದಕ್ಕೆ ಸಂಬಂಧಿಸಿ ಬಸ್ ನಿರ್ವಾಹಕರಿಂದ ಬುಧವಾರ ಸಂಜೆ ಇಲ್ಲಿ ₹20 ಸಾವಿರ ಲಂಚ ಪಡೆಯುತ್ತಿದ್ದ ಆರೋಪದ ಮೇಲೆ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ (ಕೆಕೆಆರ್‌ಟಿಸಿ) ವಿಭಾಗೀಯ ನಿಯಂತ್ರಣಾಧಿಕಾರಿ (ಡಿ.ಸಿ) ವಿ.ಎಸ್.ಜಗದೀಶ್ ಎಂಬುವರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

'ಇಲಾಖಾ ವಿಚಾರಣೆ ಕೈಬಿಡಲು ಡಿಸಿ ಅವರು ₹25 ಸಾವಿರಕ್ಕೆ ಬೇಡಿಕೆ ಇಟ್ಟಿದ್ದಾರೆ. ಅದರಲ್ಲಿ ₹5 ಸಾವಿರ ಮುಂಗಡವಾಗಿ ಪಡೆದಿದ್ದಾರೆ ಎಂಬ ದೂರು ಬಂದಿತ್ತು. ಉಳಿದ ₹20 ಸಾವಿರವನ್ನು ಇಲ್ಲಿನ ಕೆಕೆಆರ್‌ಟಿಸಿ ಬಸ್ ನಿಲ್ದಾಣದ ಮೊದಲ ಮಹಡಿಯಲ್ಲಿರುವ ಕಚೇರಿಯಲ್ಲಿ ಪಡೆಯುತ್ತಿದ್ದ ವೇಳೆ ದಾಳಿ ನಡೆಸಿದೆವು. ನಗದು ಸಮೇತ ಡಿಸಿ ಸಿಕ್ಕಿಬಿದ್ದರು' ಎಂದು ಬಳ್ಳಾರಿ ಲೋಕಾಯುಕ್ತ ಎಸ್‌ಪಿ ಸಿದ್ದರಾಜು ತಿಳಿಸಿದ್ದಾರೆ.

ಲೋಕಾಯುಕ್ತ ಡಿವೈಎಸ್‌ಪಿ ಶೀಲವಂತ ಹೊಸಮನಿ ನೇತೃತ್ವದಲ್ಲಿ ಈ ದಾಳಿ ನಡೆಯಿತು.

ಭಾರಿ ಖರ್ಚು: ಹೈಕೋರ್ಟ್ ಅತೃಪ್ತಿ

ಒಂದನೇ ಪುಟದಿಂದ...

ವಿಚಾರಣೆ ವೇಳೆ ರಾಜ್ಯ ಸರ್ಕಾರದ ಪರ ಹಾಜರಾಗಿದ್ದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, 'ಕಲ್ಯಾಣ ಮಂಡಳಿಯು ಈಗಾಗಲೇ 6 ಲಕ್ಷ ವಿದ್ಯಾರ್ಥಿಗಳಿಗೆ ₹500 ಕೋಟಿ ಶೈಕ್ಷಣಿಕ ಸಹಾಯಧನ ವಿತರಿಸಿದೆ. ಕಟ್ಟಡ ಕಾರ್ಮಿಕರಿಗಾಗಿ ಮಂಡಳಿಯ ಮುಖಾಂತರ ಇನ್ನೂ 19 ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಗುತ್ತಿದೆ' ಎಂದರು.

ಇದಕ್ಕೆ ಪ್ರತಿಯಾಗಿ ಅರ್ಜಿದಾರರ ಪರ ವಕೀಲ ಆದಿತ್ಯ ಚಟರ್ಜಿ, '2019ರ ಸಿಎಜಿ ವರದಿಯ ಅನುಸಾರ ಕರ್ನಾಟಕ ಕಟ್ಟಡ ನಿರ್ಮಾಣ ಕಲ್ಯಾಣ ಮಂಡಳಿಯು ತನ್ನ ಆಡಳಿತಾತ್ಮಕ ವೆಚ್ಚವನ್ನು ಕಾನೂನಾತ್ಮಕವಾಗಿ ನಿಗದಿಪಡಿಸಿದ ಶೇ 5ರಷ್ಟನ್ನು ಮೀರಿ ಶೇ 9ರಿಂದ ಶೇ 72ರಷ್ಟು ಹೆಚ್ಚಾಗಿ ಖರ್ಚು ಮಾಡಲಾಗಿದೆ' ಎಂದು ಆರೋಪಿಸಿದರು.

'ಘಟನೋತ್ತರ ಅನುಮೋದನೆ ಮೂಲಕ ಮಂಡಳಿಯು ಇನ್ನೋವಾ ಕಾರುಗಳನ್ನು ಖರೀದಿಸಿದ್ದು, ಮಂಡಳಿಯ ನಿಧಿಯನ್ನು ಅನಗತ್ಯವಾಗಿ ಖರ್ಚು ಮಾಡಿದೆ. ಹೈಕೋರ್ಟ್‌ನ ಇದೇ ಪೀಠವು ನೀಡಿದ್ದ ಮಧ್ಯಂತರ ಆದೇಶದಂತೆ ಇಬ್ಬರು ವಿದ್ಯಾರ್ಥಿನಿಯರಿಗೆ ಇನ್ನೂ ಹಣ ಪಾವತಿ ಮಾಡಿಲ್ಲ' ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು.

ವೇತನ ಪಾವತಿ: ಈ ಹಿಂದಿನ ಅಂದರೆ 2024ರ ಏಪ್ರಿಲ್ 23ರಂದು ಈ ಅರ್ಜಿ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ನಾಗಪ್ರಸನ್ನ ಅವರು, 'ನಾಲ್ಕು ವಾರದೊಳಗೆ ಎಲ್.ಎಲ್.ಬಿ ಹಾಗೂ ಎಂ.ಬಿ.ಎ ವಿದ್ಯಾಭ್ಯಾಸ ಮಾಡುತ್ತಿರುವ ಇಬ್ಬರು ಅರ್ಜಿದಾರ ವಿದ್ಯಾರ್ಥಿನಿಯರಿಗೆ ದಂಡಸಹಿತ ಶೈಕ್ಷಣಿಕ ಧನಸಹಾಯ ಪಾವತಿಸಬೇಕು' ಎಂದು 'ಕರ್ನಾಟಕ ರಾಜ್ಯ ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ'ಗೆ ಆದೇಶಿಸಿದ್ದರು.

ಈ ಕುರಿತಂತೆ ನ್ಯಾಯಪೀಠಕ್ಕೆ ಸ್ಪಷ್ಟನೆ ನೀಡಿದ ಕಲ್ಯಾಣ ಮಂಡಳಿ ಪರ ವಕೀಲರು, 'ಇಬ್ಬರು ವಿದ್ಯಾರ್ಥಿನಿಯರಿಗೆ ಕೋರ್ಟ್ ಆದೇಶದ ಅನುಸಾರ ₹60,000 ಹಾಗೂ ₹55,000 ಪಾವತಿಸಲಾಗಿದೆ' ಎಂದು ಪಾವತಿಯ ನಕಲನ್ನು ನೀಡಿದರು. ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ ವಿಚಾರಣೆಯನ್ನು ಜುಲೈ 26ಕ್ಕೆ ಮುಂದೂಡಿದೆ.


'ಒಂದೊಂದು ರೂಪಾಯಿಯೂ ಸದ್ವಿನಿಯೋಗವಾಗಬೇಕು'

ಅರ್ಜಿದಾರರ ಪರ ವಕೀಲರ ವಿವರಣೆ ಆಲಿಸಿದ ನ್ಯಾಯಪೀಠ, 'ಕಲ್ಯಾಣ ಮಂಡಳಿಯಲ್ಲಿರುವ ಪ್ರತಿಯೊಂದು ರೂಪಾಯಿಯೂ ಬಡ ಕಾರ್ಮಿಕರ ಕಲ್ಯಾಣ ಮತ್ತು ಅವರ ಮಕ್ಕಳ ಶೈಕ್ಷಣಿಕ ಬದುಕಿಗೆ ವಿನಿಯೋಗ ಆಗಬೇಕು. ಮಂಡಳಿಯಲ್ಲಿ ಸಾವಿರಾರು ಕೋಟಿ ರೂಪಾಯಿ ಸೆಸ್ ಇದ್ದರೂ ಮಕ್ಕಳ ಶೈಕ್ಷಣಿಕ ಧನ ಸಹಾಯವನ್ನು ಶೇ 60-70ರಷ್ಟು ಕಡಿತ ಮಾಡಿರುವ ಕ್ರಮವನ್ನು ಒಪ್ಪಲು ಸಾಧ್ಯವಿಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿತು.

ಕೂಡಿ ಹಾಕಿ, ಬೆದರಿಸಿ, ಮೊದಲ ಸಂತ್ರಸ್ತನ ವಿರುದ್ಧ ದೂರು ಕೊಡಿಸಿದ್ದ ಸೂರಜ್; ಆರೋಪ

ಲಾಕ್‌ಡೌನ್ ವೇಳೆ ಲೈಂಗಿಕ ದೌರ್ಜನ್ಯ; ಸೂರಜ್ ಆಪ್ತ

ಪ್ರಜಾವಾಣಿ ವಾರ್ತೆ


ಸೂರಜ್

ಹಾಸನ: 'ನನ್ನ ಮೇಲೆ ವಿಧಾನ ಪರಿಷತ್ ಸದಸ್ಯ ಡಾ.ಸೂರಜ್ ರೇವಣ್ಣ ಅವರು ನಾಲ್ಕು ವರ್ಷಗಳ ಹಿಂದೆ ಲೈಂಗಿಕ ದೌರ್ಜನ್ಯ ಎಸಗಿದ್ದರು..'

–ಜೆಡಿಎಸ್ ಕಾರ್ಯಕರ್ತರಾದ ಸೂರಜ್ ಆಪ್ತರೊಬ್ಬರು ಹೊಳೆನರಸೀಪುರ ಗ್ರಾಮಾಂತರ ಠಾಣೆಯಲ್ಲಿ ಮಂಗಳವಾರ ನೀಡಿದ ದೂರಿನಲ್ಲಿ ಹೀಗೆ ಆರೋಪಿಸಿದ್ದಾರೆ.

ಲೈಂಗಿಕ ದೌರ್ಜನ್ಯದ ಕುರಿತು ಸೂರಜ್ ವಿರುದ್ಧ ಮೊದಲ ದೂರು ನೀಡಿದ್ದ ಸಂತ್ರಸ್ತನ ವಿರುದ್ಧ ಈ ದೂರುದಾರರೇ ದೂರು ನೀಡಿದ್ದರು. ಇದೀಗ ಸೂರಜ್ ವಿರುದ್ಧವೇ ದೂರು ನೀಡಿರುವುದು ಪ್ರಕರಣಕ್ಕೆ ಹೊಸ ತಿರುವು ದೊರಕಿದೆ. ಸೂರಜ್ ಮೊದಲ ಆರೋಪಿಯಾಗಿದ್ದು, ರಕ್ಷಿತ್ ಮತ್ತು ಸಚಿನ್ ಕ್ರಮವಾಗಿ ಎರಡು ಮತ್ತು ಮೂರನೇ ಆರೋಪಿಗಳಾಗಿದ್ದಾರೆ. 'ಸೂರಜ್ ರೇವಣ್ಣ ಬ್ರಿಗೇಡ್'ನಲ್ಲೂ ದೂರುದಾರ ಗುರುತಿಸಿಕೊಂಡಿದ್ದಾರೆ.

ಐಪಿಸಿ ಕಲಂ 342 (ಅಕ್ರಮವಾಗಿ ಕೂಡಿಹಾಕುವುದು), 506 (ಬೆದರಿಕೆ), 377 (ಅಸ್ವಾಭಾವಿಕ ಲೈಂಗಿಕ ಕ್ರಿಯೆ), 34 (ಹಲವರೊಂದಿಗೆ ಸೇರಿ ಅಪರಾಧ) ಅಡಿ ಪ್ರಕರಣ ದಾಖಲಾಗಿದೆ.

'ಕೋವಿಡ್-19 ಮೊದಲ ಅಲೆಯ ಲಾಕ್‌ಡೌನ್ ಸಂದರ್ಭದಲ್ಲಿ ಡಾ.ಸೂರಜ್ ನನ್ನ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದರು. ಆ ಘಟನೆ ಗನ್ನಿಗಡದ ಅವರ ತೋಟದ ಮನೆಯಲ್ಲಿ ನಡೆದಿತ್ತು. ಮನನೊಂದು, ಯಾರಿಗೂ ಹೇಳಿಕೊಳ್ಳದೇ ಸುಮ್ಮನಿದ್ದೆ. ಸೂರಜ್ ಅವರದ್ದು ಪ್ರತಿಷ್ಠಿತ ಕುಟುಂಬವಾಗಿದ್ದು, ಕೊಲೆ ಮಾಡಿಸಬಹುದು ಎಂಬ ಭಾವನೆಯಿಂದ ಸುಮ್ಮನಿದ್ದೆ' ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಒತ್ತಡದಿಂದ ದೂರು: 'ಹಣಕ್ಕೆ ಬೇಡಿಕೆ ಇಟ್ಟಿರುವ ಬಗ್ಗೆ ಮೊದಲನೇ ಸಂತ್ರಸ್ತನ ವಿರುದ್ಧ ಸೂರಜ್ ಅವರೇ ಒತ್ತಡದಿಂದ ನನ್ನಿಂದ ದೂರು ಕೊಡಿಸಿದ್ದರು. ದೂರು ಕೊಡದಿದ್ದರೆ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದ್ದರು. ಜೂನ್ 21ರಂದು ಸೂರಜ್ ಆಪ್ತರಾದ ರವಿ, ಧರಣಿ, ಸಚಿನ್ ಎಂಬುವವರು ನನ್ನನ್ನು ಒತ್ತಾಯದಿಂದ ಹೊಳೆನರಸೀಪುರ ನಗರ ಠಾಣೆಗೆ ಕರೆದೊಯ್ದಿದ್ದರು. ನನಗೆ ಮನಸ್ಸಿಲ್ಲದಿದ್ದರೂ ಒತ್ತಡದಿಂದ ಎಫ್‌ಐಆರ್‌ಗೆ ಸಹಿ ಹಾಕಿದ್ದೆ' ಎಂದು ದೂರಿನಲ್ಲಿ ತಿಳಿಸಿದ್ದಾರೆ.

'ನಾನು ಮತ್ತು ಮೊದಲನೇ ಸಂತ್ರಸ್ತ ಜೊತೆಯಾಗಿಯೇ ಕೆಲಸ ಮಾಡಿದ್ದು, ಪರಸ್ಪರ ಪರಿಚಯವಿದೆ. ಜೂನ್ 16 ರಂದು ಸೂರಜ್ ಅವರು ಆತನ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಬಗ್ಗೆ ನನಗೆ ತಿಳಿಸಿದ್ದ. ಅದನ್ನು ನಾನು ಸೂರಜ್ ಅವರಿಗೆ ತಿಳಿಸಿದ್ದೆ. ಅದಕ್ಕೆ ನನ್ನ ಕಡೆಯವರು ಬಂದು ₹ 1 ಕೋಟಿ ಕೊಡುತ್ತಾರೆ. ಅದನ್ನು ತೆಗೆದುಕೊಂಡು ಆತನನ್ನು ಪುಸಲಾಯಿಸುತ್ತಿರು. ಅಷ್ಟರಲ್ಲಿ ಇನ್ನೂ ₹ 1 ಕೋಟಿ ಕಳುಹಿಸುತ್ತೇನೆ. ಆತನನ್ನು ಜೊತೆಯಲ್ಲಿಯೇ ಇಟ್ಟುಕೊಂಡಿರು. ನಾನು ಒಂದು ಪ್ಲಾನ್ ಮಾಡುತ್ತೇನೆ ಎಂದು ಸೂರಜ್ ತಿಳಿಸಿದ್ದರು' ಎಂದು ದೂರಿನಲ್ಲಿ ತಿಳಿಸಿದ್ದಾರೆ.

'ಅದರಂತೆ ಹಾಸನದ ಕೌನ್ಸಿಲರ್ ಕುಳ್ಳ ಮಂಜಣ್ಣ ಹಾಗೂ ಇತರ ಮೂವರು ನಾನಿದ್ದಲ್ಲಿಗೆ ಬಂದಿದ್ದರು. ಆದರೆ, ಮೊದಲನೇ ಸಂತ್ರಸ್ತ ಅಲ್ಲಿ ಇರಲಿಲ್ಲ. ನಂತರ ನನ್ನನ್ನು ಡಾ.ಸೂರಜ್ ಅವರ ಬಳಿ ತೋಟದ ಮನೆಗೆ ಕರೆದೊಯ್ದರು. ಅಲ್ಲಿಂದಲೇ ಸೂರಜ್ ಅವರು ನನ್ನ ಮೂಲಕ ಮೊದಲನೇ ಸಂತ್ರಸ್ತನಿಗೆ ಕರೆ ಮಾಡಿಸಿದ್ದು, ಬೇಡಿಕೆ ಇಟ್ಟಿರುವಂತೆ ಮಾತನಾಡಿ, ಅದನ್ನು ತಮ್ಮ ಮೊಬೈಲ್ ಫೋನ್‌ನಲ್ಲಿ ರೆಕಾರ್ಡ್ ಮಾಡುತ್ತಿದ್ದರು' ಎಂದು ತಿಳಿಸಿದ್ದಾರೆ.

'ನಂತರ ಮೊದಲನೇ ಸಂತ್ರಸ್ತನ ವಿರುದ್ಧ ಹಣಕ್ಕಾಗಿ ಬೇಡಿಕೆ ಇಟ್ಟಿರುವ ಬಗ್ಗೆ ದೂರು ಕೊಡು ಎಂದು ಒತ್ತಾಯಿಸಿದರು. ಅದಕ್ಕೆ ಒಪ್ಪದೇ ಇದ್ದಾಗ, ತೋಟದ ಮನೆಯಲ್ಲಿ ನನ್ನನ್ನು ಕೂಡಿ ಹಾಕಿ, ನನ್ನ ಮೊಬೈಲ್‌ಫೋನ್‌ನಿಂದ ಪೊಲೀಸ್ ಮುಖ್ಯಸ್ಥರಿಗೆ ವಾಟ್ಸ್ ಆ್ಯಪ್ ಹಾಗೂ ಮೇಲ್ ಮಾಡಿಸಿದರು. ಅಲ್ಲದೇ ಸಚಿನ್ ಎಂಬಾತ ನನ್ನನ್ನು ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿ ಒತ್ತಾಯದಿಂದ ದೂರು ಕೊಡಿಸಿದರು' ಎಂದು ದೂರಿನಲ್ಲಿ ವಿವರಿಸಿದ್ದಾರೆ.

ಸೂರಜ್ ರೇವಣ್ಣಗೆ ವೈದ್ಯಕೀಯ ಪರೀಕ್ಷೆ

ಬೆಂಗಳೂರು: ವಿಧಾನ ಪರಿಷತ್‌ನ ಜೆಡಿಎಸ್ ಸದಸ್ಯ ಸೂರಜ್ ರೇವಣ್ಣ ಅವರನ್ನು ಸಿಐಡಿ ಅಧಿಕಾರಿಗಳು ಬುಧವಾರ ಬೌರಿಂಗ್ ಆಸ್ಪತ್ರೆಯಲ್ಲಿ ವೈದ್ಯಕೀಯ ಪರಿಕ್ಷೆಗೆ ಒಳಪಡಿಸಿದರು.

ಸಿಐಡಿ ಕಚೇರಿಯಿಂದ ಪೊಲೀಸ್ ವಾಹನದಲ್ಲಿ ಸೂರಜ್ ರೇವಣ್ಣ ಅವರನ್ನು ಆಸ್ಪತ್ರೆಗೆ ಕರೆತಂದ ಸಿಐಡಿ ಅಧಿಕಾರಿಗಳು, ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದರು. ವೈದ್ಯಕೀಯ ಪರೀಕ್ಷೆ ನಡೆಸಿದ ಬಳಿಕ ಮತ್ತೆ ಕಚೇರಿಗೆ ಕರೆ ತರಲಾಯಿತು. ಸೂರಜ್ ವಿರುದ್ಧ ದೂರು ನೀಡಿದ್ದ ಮತ್ತೊಬ್ಬ ಸಂತ್ರಸ್ತನಿಗೂ ವೈದ್ಯಕೀಯ ಪರೀಕ್ಷೆ ನಡೆಸಲಾಗಿದೆ. ಸೂರಜ್ ವಿರುದ್ಧ ಹಾಸನದ ಹೊಳೆನರಸೀಪುರ ಠಾಣೆಯಲ್ಲಿ ದಾಖಲಾಗಿದ್ದ ಮತ್ತೊಂದು ಪ್ರಕರಣವನ್ನೂ ಸಿಐಡಿಗೆ ವರ್ಗಾವಣೆ ಮಾಡಲಾಗಿದೆ ಎಂದು ಮೂಲಗಳು ಹೇಳಿವೆ.

ಪ್ರಜ್ವಲ್ ಜಾಮೀನು ಅರ್ಜಿ ತಿರಸ್ಕೃತ



ಬೆಂಗಳೂರು: ಹಾಸನ ಜಿಲ್ಲೆಯ ಹೊಳೆನರಸೀಪುರ ನಗರ ಠಾಣೆಯಲ್ಲಿ ದಾಖಲಾಗಿರುವ ಮೊದಲನೇ ಅತ್ಯಾಚಾರ ಆರೋಪದ ಪ್ರಕರಣದಲ್ಲಿ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರಿಗೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ (ಸೆಷನ್ಸ್) ಜಾಮೀನು ನಿರಾಕರಿಸಿದೆ.

ಪ್ರಜ್ವಲ್ ರೇವಣ್ಣ ಸಲ್ಲಿಸಿದ್ದ ಜಾಮೀನು ಅರ್ಜಿಯ ವಿಚಾರಣೆ ಪೂರ್ಣಗೊಳಿಸಿ ಕಾಯ್ದಿರಿಸಿದ್ದ ಆದೇಶವನ್ನು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ್ ಗಜಾನನ್ ಭಟ್ ಬುಧವಾರ ಪ್ರಕಟಿಸಿದರು. 'ಪ್ರಜ್ವಲ್ ಅವರ ಜಾಮೀನು ಅರ್ಜಿಯನ್ನು ತಿರಸ್ಕರಿಸಲಾಗಿದೆ' ಎಂದು ಆದೇಶದಲ್ಲಿ ತಿಳಿಸಲಾಗಿದೆ. ವಿಸ್ತೃತ ಆದೇಶ ಇನ್ನಷ್ಟೇ ಪ್ರಕಟವಾಗಬೇಕಿದೆ.

ಹೊಳೆನರಸೀಪುರದಲ್ಲಿ ಮಹಜರು

ಹೊಳೆನರಸೀಪುರ(ಹಾಸನ): ಪ್ರಜ್ವಲ್ ರೇವಣ್ಣ ಅವರನ್ನು ಇಲ್ಲಿನ ಚೆನ್ನಾಂಬಿಕಾ ನಿವಾಸಕ್ಕೆ ಬುಧವಾರ ಕರೆತಂದ ಎಸ್‌ಐಟಿ ಅಧಿಕಾರಿಗಳು ಸ್ಥಳ ಮಹಜರು ನಡೆಸಿದರು. ಲೈಂಗಿಕ ದೌರ್ಜನ್ಯದ ಕುರಿತು ಮತ್ತೊಬ್ಬ ಸಂತ್ರಸ್ತೆ ನೀಡಿದ ದೂರನ್ನು ಆಧರಿಸಿ ಈ ಕ್ರಮ ಕೈಗೊಳ್ಳಲಾಯಿತು.

ಸದ್ಯ ನ್ಯಾಯಾಂಗ ಬಂಧನದಲ್ಲಿದ್ದ ಪ್ರಜ್ವಲ್ ಅವರನ್ನು, ಇದೇ ದೂರಿನ ಮೇರೆಗೆ ಎಸ್‌ಐಟಿ ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ.

ಈ ಪ್ರಕರಣದಲ್ಲಿ ಅತ್ಯಾಚಾರ ನಡೆದಿದೆ ಎನ್ನಲಾದ ಚೆನ್ನಾಂಬಿಕಾ ನಿವಾಸದಲ್ಲಿ ಸ್ಥಳ ಮಹಜರು ನಡೆಸಲಾಯಿತು. ಹಾಸನದ ಎಎಸ್‌ಪಿ ತಮ್ಮಯ್ಯ, ಎಸ್‌ಐಟಿ ಅಧಿಕಾರಿಗಳು ಇದ್ದರು.

ತುರ್ತು ಪರಿಸ್ಥಿತಿ ವಿರುದ್ಧ ಲೋಕಸಭೆಯಲ್ಲಿ ನಿರ್ಣಯ • ಪ್ರಧಾನಿ, ಬಿಜೆಪಿ ಸದಸ್ಯರ ಸ್ವಾಗತ

ಸ್ಪೀಕರ್ ವಿರುದ್ಧ ಕೆರಳಿದ ಕಾಂಗ್ರೆಸ್

ನವದೆಹಲಿ (ಪಿಟಿಐ): 18ನೇ ಲೋಕಸಭೆಯ ಸ್ಪೀಕರ್ ಆಗಿ ಅಧಿಕಾರ ಸ್ವೀಕರಿಸಿದ ಬಳಿಕ ಓಂ ಬಿರ್ಲಾ ಅವರು ತುರ್ತು ಪರಿಸ್ಥಿತಿ ವಿರುದ್ಧದ ನಿರ್ಣಯವನ್ನು ಓದಿದ್ದು, ಕಾಂಗ್ರೆಸ್ ಸದಸ್ಯರನ್ನು ಕೆರಳಿಸಿತು.

ತಮ್ಮ ಆಸನಗಳಿಂದ ಎದ್ದುನಿಂತ ಬಾವಿಗಿಳಿದ ಕಾಂಗ್ರೆಸ್ ಸದಸ್ಯರು ಪ್ರತಿಭಟನೆ ನಡೆಸಿ, ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಸದನದಲ್ಲಿ ಕೋಲಾಹಲ ಉಂಟಾಯಿತು.

ನಿರ್ಣಯವನ್ನು ಪ್ರಧಾನಿ ಮೋದಿ ಸೇರಿದಂತೆ ಬಿಜೆಪಿ ಸದಸ್ಯರು ಸ್ವಾಗತಿಸಿದರು.

'1975ರ ಜೂನ್ 26ರಂದು ಈ ದೇಶದ ಜನರು ತುರ್ತುಪರಿಸ್ಥಿತಿಯ ಕ್ರೂರ ವಾಸ್ತವತೆಗೆ ತೆರೆದುಕೊಂಡರು. ಪ್ರಧಾನಿಯಾಗಿದ್ದ ಇಂದಿರಾ ಗಾಂಧಿಯವರು ಹೇರಿದ್ದ ತುರ್ತು-ಪರಿಸ್ಥಿತಿ ಸಂವಿಧಾನದ ಮೇಲಿನ ದಾಳಿಯಾಗಿತ್ತು. ಅಂದಿನ ಕಾಂಗ್ರೆಸ್ ಸರ್ಕಾರ ವಿರೋಧ ಪಕ್ಷಗಳ ಸದಸ್ಯರನ್ನು ಜೈಲಿಗೆ ಹಾಕಿತ್ತು, ಮಾಧ್ಯಮಗಳ ಮೇಲೆ ಹಲವು ನಿರ್ಬಂಧಗಳನ್ನು ಹೇರಿತ್ತು ಮತ್ತು ನ್ಯಾಯಾಂಗದ ಸ್ವಾಯತ್ತೆಯನ್ನು ಕಸಿದುಕೊಂಡಿತ್ತು' ಎಂದು ಓಂ ಬಿರ್ಲಾ ಅವರು ನಿರ್ಣಯವನ್ನು ಓದುತ್ತಾ ಹೇಳಿದರು.

'ಪ್ರಜಾಪ್ರಭುತ್ವದ ಮೌಲ್ಯಗಳು ಮತ್ತು ಚರ್ಚೆಯನ್ನು ಭಾರತ ಯಾವಾಗಲೂ ಬೆಂಬಲಿಸುತ್ತಾ ಬಂದಿದೆ... ಇಂತಹ ಭಾರತದ ಮೇಲೆ ಇಂದಿರಾಗಾಂಧಿ ಅವರು ಸರ್ವಾಧಿಕಾರವನ್ನು ಹೇರಿದರು. ಪ್ರಜಾಪ್ರಭುತ್ವದ ಮೌಲ್ಯಗಳನ್ನು ಹೊಸಕಿಹಾಕಿದರು. ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕಿದರು' ಎಂದು ಹೇಳಿದರು.

'ತುರ್ತು ಪರಿಸ್ಥಿತಿ ಹೇರಿದ 50ನೇ ವರ್ಷಕ್ಕೆ ಕಾಲಿಡುತ್ತಿದ್ದೇವೆ. ಈ ಸಂದರ್ಭದಲ್ಲಿ 18ನೇ ಲೋಕಸಭೆಯು ಬಾಬಾ ಸಾಹೇಬ್ ಅಂಬೇಡ್ಕರ್ ಅವರು ರೂಪಿಸಿರುವ ಸಂವಿಧಾನವನ್ನು ರಕ್ಷಿಸುವುದು, ಅದರ ಆಶಯಗಳನ್ನು ಎತ್ತಿ ಹಿಡಿಯುವ ಬದ್ಧತೆಯನ್ನು ಪುನರುಚ್ಚರಿಸುತ್ತದೆ' ಎಂದು ಹೇಳಿದರು.

'ಸದನವು ತುರ್ತುಪರಿಸ್ಥಿತಿ ಹೇರಿರುವುದನ್ನು ಬಲವಾಗಿ ಖಂಡಿಸುತ್ತದೆ. ತುರ್ತು ಪರಿಸ್ಥಿತಿಯನ್ನು ವಿರೋಧಿಸಿದವರು, ಭಾರತದ ಪ್ರಜಾ-ಪ್ರಭುತ್ವವನ್ನು ರಕ್ಷಿಸುವ ಜವಾಬ್ದಾರಿಯನ್ನು ನಿರ್ವಹಿಸಿದವರ ದೃಢಸಂಕಲ್ಪವನ್ನು ನಾವು ಗೌರವಿಸುತ್ತೇವೆ' ಎಂದು ವಿರೋಧ ಪಕ್ಷಗಳ ಸದಸ್ಯರ ಪ್ರತಿಭಟನೆ, ಕೂಗಾಟದ ನಡುವೆಯೇ ಓಂ ಬಿರ್ಲಾ ಹೇಳಿದರು.

ಮೋದಿ ಸ್ವಾಗತ: ಸ್ಪೀಕರ್ ಮಾಡಿದ ಪ್ರಸ್ತಾಪವನ್ನು ಸ್ವಾಗತಿಸಿದ ಪ್ರಧಾನಿ ನರೇಂದ್ರ ಮೋದಿ, 'ಸಂವಿಧಾನವನ್ನು ದ್ವಂಸಮಾಡಿದಾಗ, ಜನರ ಅಭಿಪ್ರಾಯಗಳನ್ನು ಹತ್ತಿಕ್ಕಿದಾಗ ಮತ್ತು ಸಂಸ್ಥೆಗಳನ್ನು ನಾಶ ಮಾಡಿದಾಗ ಏನಾಗುತ್ತದೆ ಎಂಬುದಕ್ಕೆ ತುರ್ತು ಪರಿಸ್ಥಿತಿ ಅವಧಿ ಉದಾಹರಣೆ. ಸರ್ವಾಧಿಕಾರ ಹೇಗಿರುತ್ತದೆ ಎಂಬುದನ್ನು ತುರ್ತುಪರಿಸ್ಥಿತಿ ಸಂದರ್ಭದಲ್ಲಿ ನಡೆದಿರುವ ಘಟನೆಗಳು ವಿವರಿಸುತ್ತವೆ' ಎಂದು ಹೇಳಿದರು.

ತುರ್ತು ಪರಿಸ್ಥಿತಿ: ಎನ್‌ಡಿಎ ಪ್ರತಿಭಟನೆ

ನವದೆಹಲಿ (ಪಿಟಿಐ): 1975ರಲ್ಲಿ ತುರ್ತು ಪರಿಸ್ಥಿತಿ ಹೇರಿದ್ದಕ್ಕಾಗಿ ಕಾಂಗ್ರೆಸ್ ವಿರುದ್ಧ ಬುಧವಾರ ಸಂಸತ್ ಭವನದಲ್ಲಿ ಪ್ರತಿಭಟನೆ ನಡೆಸಿದ ಎನ್‌ಡಿಎ ಸಂಸದರು, ಸಂವಿಧಾನವನ್ನು ಉಲ್ಲಂಘಿಸಿದ್ದಕ್ಕಾಗಿ ಕ್ಷಮೆ ಕೇಳಬೇಕು ಎಂದು ಒತ್ತಾಯಿಸಿದರು. ಬಿಜೆಪಿ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಕೇಂದ್ರ ಸಚಿವರು ಸೇರಿದಂತೆ ಎನ್‌ಡಿಎ ಸಂಸದರು ಭಾಗವಹಿಸಿದ್ದರು.

ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಸಂವಿಧಾನದ ಮೌಲ್ಯಗಳ ಮೇಲೆ ದಾಳಿ ನಡೆಸಿದೆ ಎಂದು ಕಾಂಗ್ರೆಸ್ ಸೇರಿದಂತೆ 'ಇಂಡಿಯಾ' ಕೂಟದ ಮಿತ್ರಪಕ್ಷಗಳು ನಿರಂತರವಾಗಿ ಟೀಕಿಸಿದ್ದವು. ತುರ್ತು-ಪರಿಸ್ಥಿತಿಯ 49ನೇ ವಾರ್ಷಿಕೋತ್ಸವದ ಹಿನ್ನೆಲೆಯಲ್ಲಿ ಬಿಜೆಪಿ ಕಾಂಗ್ರೆಸ್‌ಗೆ ತಿರುಗೇಟು ನೀಡಿತು.

ಲೋಕಸಭೆಯಲ್ಲಿ ಸ್ಪೀಕರ್ ಓಂ ಬಿರ್ಲಾ ಅವರು, ಕಲಾಪವನ್ನು ಮುಂದೂಡಿದ ಬಳಿಕ ಎನ್‌ಡಿಎ ಸಂಸದರು ಬಿಜೆಪಿ ನೇತೃತ್ವದಲ್ಲಿ ಸಂಸತ್ ಭವನದ ಹೊರಗೆ ಸೇರಿ, ಭಿತ್ತಿಫಲಕಗಳನ್ನು ಹಿಡಿದು ಘೋಷಣೆಗಳನ್ನು ಹಾಕಿದರು.

ಕೇಂದ್ರ ಸಚಿವರಾದ ಅಶ್ವಿನಿ ವೈಷ್ಣವ್, ಪ್ರಲ್ಹಾದ ಜೋಶಿ, ಕಿರಣ್ ರಿಜಿಜು, ಲಲನ್ ಸಿಂಗ್, ಅರ್ಜುನ್ ರಾಮ್ ಮೇಘವಾಲ್, ಗಜೇಂದ್ರ ಸಿಂಗ್ ಶೆಖಾವತ್ ಪ್ರತಿಭಟನಕಾರರ ಜತೆ ಸೇರಿದರು.

ಬಿಜೆಪಿ ಸಂಸದ ಮತ್ತು ಪಕ್ಷದ ರಾಷ್ಟ್ರೀಯ ವಕ್ತಾರ ಸಂಬೀತ್ ಪಾತ್ರಾ ಮಾತನಾಡಿ, 'ಸಂವಿಧಾನದ ರಕ್ಷಣೆಯ ಮಾತನಾಡುವವರಿಗೆ ಮತ್ತು ಸಂವಿಧಾನದ ಪ್ರತಿ ಕೈಯಲ್ಲಿ ಹಿಡಿದಿರುವವರಿಗೆ ಕನ್ನಡಿ ಹಿಡಿಯಬೇಕಾದ ಅಗತ್ಯವಿದೆ. ಅವರು ಸಂವಿಧಾನವನ್ನು ನಿರ್ಮೂಲನೆ ಮಾಡಲು ಪ್ರಯತ್ನಿಸಿದವರು. ಹೀಗಾಗಿಯೇ ನಾವು 'ರಾಹುಲ್ ಗಾಂಧಿ ಕ್ಷಮೆ ಕೇಳಿ' ಎಂಬ ಘೋಷಣೆ ಕೇಳುತ್ತಿರುವುದು' ಎಂದು ಅವರು ಹೇಳಿದರು.



ತುರ್ತು ಪರಿಸ್ಥಿತಿ ವರ್ಷಾಚರಣೆಯ ಅಂಗವಾಗಿ ಕೇಂದ್ರ ಸಚಿವ ಕಿರಣ್ ರಿಜಿಜು ಹಾಗೂ ಬಿಜೆಪಿ ಸಂಸದರು ಬುಧವಾರ ಸಂಸತ್ ಭವನದ ಆವರಣದಲ್ಲಿ ಕಾಂಗ್ರೆಸ್ ವಿರುದ್ಧ ಪ್ರತಿಭಟನೆ ನಡೆಸಿದರು –ಪಿಟಿಐ ಚಿತ್ರ

ಮತ ವಿಭಜನೆ: ಹಿಂದೆ ಸರಿದ 'ಇಂಡಿಯಾ'

ಪ್ರಜಾವಾಣಿ ವಾರ್ತೆ

ನವದೆಹಲಿ: ಲೋಕಸಭಾ ಸ್ಪೀಕರ್ ಚುನಾವಣೆಯಲ್ಲಿ ಮತ ವಿಭಜನೆಯ ಬೇಡಿಕೆ ಇಡುವುದಕ್ಕಾಗಿ 'ಇಂಡಿಯಾ' ಒಕ್ಕೂಟ ಎಲ್ಲ ಸಿದ್ಧತೆಗಳನ್ನು ಮಾಡಿಕೊಂಡಿತ್ತು.

ಆದರೆ, ಮೈತ್ರಿಕೂಟದ ಕೆಲವು ಪಕ್ಷಗಳು ಭಿನ್ನ ಅಭಿಪ್ರಾಯ ವ್ಯಕ್ತಪಡಿಸಿದ್ದರಿಂದ, ಮೈತ್ರಿಯಲ್ಲಿ ಬಿರುಕು ಇರುವುದು ಬಹಿರಂಗವಾಗುವ ಭಯದಿಂದ ಮತ ವಿಭಜನೆಗೆ ಒತ್ತಾಯಿಸುವ ಯೋಚನೆಯನ್ನು ಕೈಬಿಟ್ಟಿತು.

ಸದನದಲ್ಲಿ ನಡೆಯುವ ಮತದಾನದ ಪ್ರಕ್ರಿಯೆಯ ಬಗ್ಗೆ ಸಂಸತ್ತಿನಲ್ಲಿರುವ ಪಕ್ಷದ ಕಚೇರಿಯಲ್ಲಿ ಕಾಂಗ್ರೆಸ್ ತನ್ನ ಸಂಸದರಿಗೆ ಮಾಹಿತಿ ನೀಡಿತ್ತು. ಧ್ವನಿ ಮತ ಅಥವಾ ಮತ ವಿಭಜನೆ ಬಗ್ಗೆ ತೃಣಮೂಲ ಕಾಂಗ್ರೆಸ್ ಕೈಗೊಳ್ಳುವ ನಿರ್ಧಾರದ ಬಗ್ಗೆ ಅದು ಕಾದಿತ್ತು.

'ಧ್ವನಿ ಮತ ಅಥವಾ ಮತ ವಿಭಜನೆ ಕುರಿತಂತೆ ಕಾಂಗ್ರೆಸ್ ಕೈಗೊಳ್ಳುವ ನಿರ್ಧಾರಕ್ಕೆ ಬದ್ಧ ಎಂದು ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರಿಗೆ ತಿಳಿಸಲಾಗಿತ್ತು' ಎಂದು ಟಿಎಂಸಿ ಮೂಲಗಳು ಹೇಳಿವೆ.

ಆದರೆ, ಧ್ವನಿ ಮತಕ್ಕೆ ಹೋಗುವುದು ತನಗೆ ಇಷ್ಟ ಇಲ್ಲದಿರುವುದರ ಬಗ್ಗೆ ಟಿಎಂಸಿ ಮನವರಿಕೆ ಮಾಡಿತ್ತು ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಟಿಎಂಸಿ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಅವರಿಂದ ಸೂಚನೆ ಬಂದ ಬಳಿಕ, ಕಲ್ಯಾಣ್ ಬ್ಯಾನರ್ಜಿ ಸೇರಿದಂತೆ ತೃಣಮೂಲ ಕಾಂಗ್ರೆಸ್ ಮುಖಂಡರು, ತಮ್ಮ ಬಳಿ ಸಾಕಷ್ಟು ಸಂಖ್ಯೆಯಲ್ಲಿ ಸದಸ್ಯರಿಲ್ಲ, ವೈಎಸ್‌ಆರ್ ಕಾಂಗ್ರೆಸ್ ಮತ್ತು ಈಶಾನ್ಯ ಭಾಗದ ಸಂಸದರು ಬೆಂಬಲ ನೀಡಿದರೆ ಎನ್‌ಡಿಎಯ ಸಂಖ್ಯಾ ಬಲ ಹೆಚ್ಚಲಿದೆ ಎಂಬ ಶಂಕೆ ವ್ಯಕ್ತಪಡಿಸಿದ್ದರು.

ಸಂಖ್ಯಾ ಬಲ ಮುಂದಿಟ್ಟುಕೊಂಡು ಮತದಾನಕ್ಕಾಗಿ ಒತ್ತಾಯ ಮಾಡುವುದು ಉತ್ತಮ ಕಾರ್ಯತಂತ್ರವಲ್ಲ ಎಂದು ಟಿಎಂಸಿ ಮುಖಂಡರು ರಾಹುಲ್ ಗಾಂಧಿ ಮತ್ತು ಇತರ ಮುಖಂಡರಿಗೆ ತಿಳಿಸಿದ್ದರು.

'ಲೋಕಸಭೆಯ ಕಲಾಪಗಳು ಆರಂಭವಾಗುವುದಕ್ಕೂ ಅರ್ಧ ಗಂಟೆ ಮೊದಲು ಟಿಎಂಸಿ ತನ್ನ ಅಭಿಪ್ರಾಯ ತಿಳಿಸಿತು. ಬಳಿಕ ರಾಹುಲ್ ಗಾಂಧಿ ಅವರು ಸಮಾಜವಾದಿ ಪಕ್ಷದ ಅಖಿಲೇಶ್ ಯಾದವ್ ಮತ್ತು ಡಿಎಂಕೆಯ ಟಿ.ಆರ್.ಬಾಲು ಅವರೊಂದಿಗೆ ಚರ್ಚಿಸಿದರು. ಮೈತ್ರಿಕೂಟದಲ್ಲಿ ಭಿನ್ನಾಭಿಪ್ರಾಯ ಇದೆ ಎಂಬಂತಹ ಸನ್ನಿವೇಶವನ್ನು ಸೃಷ್ಟಿಸುವುದು ಬೇಡ ಎಂಬ ತೀರ್ಮಾನಕ್ಕೆ ಅವರು ಬಂದರು' ಎಂದು ಮೂಲಗಳು ಹೇಳಿವೆ.

'ವಿಪಕ್ಷಗಳೆಲ್ಲವೂ ಒಟ್ಟಾಗಿ ಇರುವುದನ್ನು ರಾಹುಲ್ ಗಾಂಧಿ ಬಯಸಿದ್ದರು. ಭಿನ್ನ ಅಭಿಪ್ರಾಯ ಬಂದಿದ್ದರಿಂದ ಧ್ವನಿ ಮತಕ್ಕೆ ಒತ್ತಾಯ ಮಾಡದಂತೆ ಪಕ್ಷದ ಸಂಸದರಿಗೆ ಅವರು ಸೂಚಿಸಿದರು' ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ವಿರೋಧ ಪಕ್ಷಗಳಿಗೆ ಡೆಪ್ಯುಟಿ ಸ್ಪೀಕರ್ ಹುದ್ದೆ ನೀಡಲು ಸರ್ಕಾರ ಒಪ್ಪದೇ ಇದ್ದುದರಿಂದ ಕೋಡಿಕುನ್ನಿಲ್ ಸುರೇಶ್ ಅವರನ್ನು ಕಣಕ್ಕಿಳಿಸಲು ಇಂಡಿಯಾ ಕೂಟ ತೀರ್ಮಾನಿಸಿತ್ತು.

'ಇಂಡಿಯಾ' ಕೂಟದ ಅಭ್ಯರ್ಥಿಯಾಗಿ ಸುರೇಶ್ ಅವರನ್ನು ಆಯ್ಕೆ ಮಾಡುವಾಗ ಕಾಂಗ್ರೆಸ್ ತನ್ನೊಂದಿಗೆ ಸಮರ್ಪಕ ಚರ್ಚೆ ನಡೆಸಿಲ್ಲ ಎಂದು ಟಿಎಂಸಿ ಅಸಮಾಧಾನಗೊಂಡಿತ್ತು.

ವಿಪಕ್ಷ ನಾಯಕ: ರಾಹುಲ್‌ಗೆ ಮಾನ್ಯತೆ



ನವದೆಹಲಿ (ಪಿಟಿಐ): ರಾಹುಲ್ ಗಾಂಧಿ ಅವರಿಗೆ ವಿರೋಧ ಪಕ್ಷದ ನಾಯಕರಾಗಿ ಸ್ಪೀಕರ್ ಓಂ ಬಿರ್ಲಾ ಅವರು ಬುಧವಾರ ಅಧಿಕೃತ ಮಾನ್ಯತೆ ನೀಡಿದರು.

ಈ ಸಂಬಂಧ ಬುಧವಾರ ಲೋಕಸಭೆಯ ಆಡಳಿತಾಧಿಕಾರಿ ಅಧಿಸೂಚನೆ ಹೊರಡಿಸಿದ್ದು, ರಾಹುಲ್ ಗಾಂಧಿ ಅವರು ವಿರೋಧ ಪಕ್ಷದ ನಾಯಕರಾಗಿದ್ದಾರೆ ಎಂದು ತಿಳಿಸಿದ್ದಾರೆ.

'ನಾವು ಪ್ರತಿಯೊಬ್ಬ ಭಾರತೀಯನ ಪರವಾಗಿ ಸಂಸತ್ತಿನಲ್ಲಿ ಧ್ವನಿ ಎತ್ತುತ್ತೇವೆ, ಸಂವಿಧಾನ ರಕ್ಷಿಸುತ್ತೇವೆ ಮತ್ತು ಎನ್‌ಡಿಎ ಸರ್ಕಾರವನ್ನು ಅದರ ಕ್ರಿಯೆಗಳಿಗೆ ಉತ್ತರದಾಯಿಗಳನ್ನಾಗಿ ಮಾಡುತ್ತೇವೆ' ಎಂದು ರಾಹುಲ್ ಗಾಂಧಿ ಹೇಳಿದ್ದಾರೆ.

ಓಂ ಬಿರ್ಲಾ ಮತ್ತೆ ಸ್ಪೀಕರ್

ಒಂದನೇ ಪುಟದಿಂದ..

ಅಧಿಕಾರ ಸ್ವೀಕಾರ: ಇದಕ್ಕೂ ಮೊದಲು, ಓಂ ಬಿರ್ಲಾ ಆಯ್ಕೆಯನ್ನು ಹಂಗಾಮಿ ಸ್ಪೀಕರ್ ಘೋಷಿಸುತ್ತಿದ್ದಂತೆಯೇ, ಆಡಳಿತ ಪಕ್ಷಗಳ ಸದಸ್ಯರ ಸಾಲಿನಲ್ಲಿ ಕುಳಿತಿದ್ದ ಬಿರ್ಲಾ ಬಳಿಗೆ ತೆರಳಿದ ಪ್ರಧಾನಿ ಮೋದಿ, ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅವರು, ಹೊಸ ಸ್ಪೀಕರ್ ಅವರನ್ನು ಸಭಾಧ್ಯಕ್ಷರ ಕುರ್ಚಿ ಬಳಿಗೆ ಕರೆದೊಯ್ದರು. ಕಾಂಗ್ರೆಸ್ ಮುಖಂಡ ಮತ್ತು ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರೂ ಜೊತೆಯಾದರು. ಈ ಸಂದರ್ಭದಲ್ಲಿ ರಾಹುಲ್, ಮೋದಿ ಅವರ ಕೈಕುಲುಕಿದರು.

ಅಧಿಕಾರ ಸ್ವೀಕರಿಸಿ ಮಾತನಾಡಿದ ಬಿರ್ಲಾ, 'ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳು ಒಟ್ಟಾಗಿ ಸದನವನ್ನು ನಡೆಸುತ್ತವೆ. ಪ್ರತಿಯೊಬ್ಬರ ಮಾತು ಕೇಳುವುದು ಮತ್ತು ಎಲ್ಲರ ಒಪ್ಪಿಗೆಯೊಂದಿಗೆ ಸದನ ನಡೆಸುವುದು ಭಾರತದ ಪ್ರಜಾಪ್ರಭುತ್ವದ ಶಕ್ತಿ. ಎಲ್ಲರ ಸಮ್ಮತಿಯೊಂದಿಗೆ ಸದನ ನಡೆಸುವುದನ್ನು ನಾನು ನಿರೀಕ್ಷಿಸುತ್ತೇನೆ. ಯಾವುದೇ ಪಕ್ಷದಿಂದ ಒಬ್ಬ ಸದಸ್ಯ ಇದ್ದರೂ, ಅವರಿಗೂ ಸಮಯ ಸಿಗಬೇಕು' ಎಂದು ಹೇಳಿದರು.

ಮೋದಿ ಶ್ಲಾಘನೆ: ಬಿರ್ಲಾ ಅವರನ್ನು ಅಭಿನಂದಿಸಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ, 'ಸಂಸದೀಯಪಟುವಾಗಿ ಬಿರ್ಲಾ ಅವರ ಕೆಲಸಗಳು ಲೋಕಸಭೆಯ ಹೊಸ ಸದಸ್ಯರಿಗೆ ಸ್ಫೂರ್ತಿಯಾಗಬೇಕು. ಲೋಕಸಭೆಯ ಇತಿಹಾಸದಲ್ಲೇ ಓಂ ಬಿರ್ಲಾ ಅವರು ಸುವರ್ಣಯುಗದಲ್ಲಿ ಸಭಾಧ್ಯಕ್ಷರಾಗಿದ್ದರು. ಹಿಂದಿನ ಅವಧಿಯಲ್ಲಿ ಲೋಕಸಭೆಯು ಹಲವು ಐತಿಹಾಸಿಕ ನಿರ್ಧಾರಗಳನ್ನು ಕೈಗೊಂಡಿತ್ತು' ಎಂದು ಅವರು ಹೇಳಿದರು.

'ವಿಪಕ್ಷಗಳಿಗೂ ಅವಕಾಶದ ನಂಬಿಕೆ'

ಒಂದನೇ ಪುಟದಿಂದ..

ಸದನವು ಎಷ್ಟು ದಕ್ಷವಾಗಿ ಕಾರ್ಯನಿರ್ವಹಿಸಿದೆ ಎಂಬುದು ಮುಖ್ಯವಲ್ಲ. ಭಾರತದ ಧ್ವನಿಗೆ ಅಲ್ಲಿ ಎಷ್ಟು ಮನ್ನಣೆ ಸಿಕ್ಕಿದೆ ಎಂಬುದು ಮುಖ್ಯ ಎಂದು ರಾಹುಲ್ ಪ್ರತಿಪಾದಿಸಿದರು.

'ಈ ಸದನವು ದೇಶದ ಜನರ ಧ್ವನಿಯನ್ನು ಪ್ರತಿನಿಧಿಸುತ್ತದೆ. ಸರ್ಕಾರಕ್ಕೆ ರಾಜಕೀಯ ಅಧಿಕಾರ ಇದೆ. ಆದರೆ, ವಿರೋಧ ಪಕ್ಷಗಳು ಕೂಡ ಈ ದೇಶದ ಜನರ ಧ್ವನಿಯಾಗಿವೆ. ಕಳೆದ ಅವಧಿಗೆ ಹೋಲಿಸಿದರೆ, ಈ ಬಾರಿ ವಿರೋಧ ಪಕ್ಷಗಳು ಭಾರತದ ಹೆಚ್ಚು ಜನರ ಧ್ವನಿಗಳನ್ನು ಪ್ರತಿನಿಧಿಸುತ್ತವೆ' ಎಂದರು.

ಹಿಂದಿನ ಅವಧಿಯಲ್ಲಿ ವಿರೋಧ ಪಕ್ಷದ ಸಂಸದರನ್ನು ಅಮಾನತು ಮಾಡಿದ ರೀತಿಯಲ್ಲಿ ಸದನದ ಘನತೆಗೆ ಚ್ಯುತಿ ತರುವ ಕ್ರಮಗಳನ್ನು ಕೈಗೊಳ್ಳಬೇಡಿ

ಅಖಿಲೇಶ್ ಯಾದವ್, ಸಮಾಜವಾದಿ ಪಕ್ಷದ ಮುಖ್ಯಸ್ಥ

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸದನವು ವಿರೋಧ ಪಕ್ಷಗಳಿಗೆ ಸೇರಿದ್ದು. ವಿಪಕ್ಷಗಳ ಸಂಸದರ ಅಮಾನತು ಪ್ರಕರಣ ಮರುಕಳಿಸಬಾರದು

ಸುದೀಪ್ ಬಂದೋಪಾಧ್ಯಾಯ, ಟಿಎಂಸಿ ನಾಯಕ

ಲೋಕಸಭೆಯ ಸ್ಪೀಕರ್ ಆದವರು ವಿರೋಧ ಪಕ್ಷ ಮತ್ತು ಆಡಳಿತ ಪಕ್ಷಗಳನ್ನು ಸಮಾನವಾಗಿ ಕಾಣಬೇಕು

ಟಿ.ಆರ್.ಬಾಲು, ಡಿಎಂಕೆ ಮುಖಂಡ

ಕ್ರಿಮಿನಲ್ ಅಪರಾಧಗಳಿಗೆ 3 ಹೊಸ ಕಾನೂನುಗಳು

ಜುಲೈ 1ರಿಂದ ಅನುಷ್ಠಾನ

ನವದೆಹಲಿ (ಪಿಟಿಐ): ನಡೆದಿರುವ ಅಪರಾಧದ ಬಗ್ಗೆ ಯಾವುದೇ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸುವುದು, ಆನ್‌ಲೈನ್ ಮೂಲಕ ದೂರು ಸಲ್ಲಿಕೆಗೆ ಅವಕಾಶ, ಹೇಯ ಅಪರಾಧ ನಡೆದಾಗ ಸ್ಥಳವನ್ನು ಚಿತ್ರೀಕರಿಸುವುದನ್ನು ಕಡ್ಡಾಯಗೊಳಿಸಿರುವುದು ಜುಲೈ 1ರಿಂದ ಜಾರಿಗೆ ಬರಲಿರುವ ಕ್ರಿಮಿನಲ್ ಅಪರಾಧ ಕಾನೂನುಗಳಲ್ಲಿ ಇರುವ ಪ್ರಮುಖ ಅಂಶಗಳು.

ಭಾರತೀಯ ನ್ಯಾಯ ಸಂಹಿತೆ 2023, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ 2023 ಮತ್ತು ಭಾರತೀಯ ಸಾಕ್ಷ್ಯ ಅಧಿನಿಯಮ 2023 ಎಲ್ಲರಿಗೂ ದಕ್ಷವಾಗಿ ನ್ಯಾಯ ಒದಗಿಸುವ ವ್ಯವಸ್ಥೆಯನ್ನು ರೂಪಿಸುವಲ್ಲಿ ಇರಿಸಿರುವ ಗಮನಾರ್ಹ ಹೆಜ್ಜೆ ಎಂದು ಮೂಲಗಳು ಹೇಳಿವೆ.

ಈ ಮೂರು ಕಾನೂನುಗಳು ಬ್ರಿಟಿಷ್ ಕಾಲದಲ್ಲಿ ರೂಪುಗೊಂಡ ಭಾರತೀಯ ದಂಡ ಸಂಹಿತೆ, ಅಪರಾಧ ದಂಡಪ್ರಕ್ರಿಯಾ ಸಂಹಿತೆ ಮತ್ತು ಭಾರತೀಯ ಸಾಕ್ಷ್ಯ ಕಾಯ್ದೆಯ ಬದಲಿಗೆ ಜಾರಿಗೆ ಬರಲಿವೆ.

- ಅಪರಾಧಗಳ ಬಗ್ಗೆ ಎಲೆಕ್ಟ್ರಾನಿಕ್ ಸಂವಹನ ಮಾಧ್ಯಮ ಬಳಸಿ ದೂರು ನೀಡಬಹುದು. ವ್ಯಕ್ತಿಯು ಪೊಲೀಸ್ ಠಾಣೆಗೆ ಖುದ್ದಾಗಿ ಹೋಗಬೇಕು ಎಂದೇನೂ ಇಲ್ಲ. ಇದು ಅಪರಾಧ ಕೃತ್ಯಗಳ ಬಗ್ಗೆ ಸುಲಭವಾಗಿ ದೂರು ನೀಡಲು ಅವಕಾಶ ಕಲ್ಪಿಸುತ್ತದೆ.
- ಸಂತ್ರಸ್ತರಿಗೆ ಎಫ್‌ಐಆರ್ ಪ್ರತಿಯು ಉಚಿತವಾಗಿ ಸಿಗುತ್ತದೆ.

ಜೆಇಎಂನ ಮೂವರು ಶಂಕಿತ ಉಗ್ರರು ಹತ

ಭದೇರ್ವಾ/ಜಮ್ಮು (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ದೋಡಾ ಜಿಲ್ಲೆಯ ಅರಣ್ಯ ಪ್ರದೇಶದಲ್ಲಿ ಬುಧವಾರ ಬೆಳಿಗ್ಗೆ ಆರು ಗಂಟೆಗಳಿಗೂ ಹೆಚ್ಚು ಕಾಲ ನಡೆದ ಗುಂಡಿನ ಚಕಮಕಿಯಲ್ಲಿ ಪಾಕಿಸ್ತಾನ ಮೂಲದ ಜೈಷ್-ಎ- ಮೊಹಮ್ಮದ್ (ಜೆಇಎಂ) ಸಂಘಟನೆಯ ಮೂವರು ಶಂಕಿತ ಉಗ್ರರು ಹತರಾಗಿದ್ದಾರೆ. ಗಂಡೋಹ್ ಪ್ರದೇಶದ ಬಜಾದ್‌ನಲ್ಲಿ ನಡೆದ ಗುಂಡಿನ ಚಕಮಕಿಯಲ್ಲಿ ಒಬ್ಬ ಪೊಲೀಸ್ ಅಧಿಕಾರಿ ಗಾಯಗೊಂಡಿದ್ದಾರೆ. ಬಳಿಕ ಸಿಆರ್‌ಪಿಎಫ್ ಜಂಟಿಯಾಗಿ ಶೋಧ ಕಾರ್ಯ ಕೈಗೊಂಡಿದ್ದವು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಉಪಯುಕ್ತವಾದುದನ್ನು ಹೆಕ್ಕಿಕೊಳ್ಳಿ, ಅನಗತ್ಯವಾದುದನ್ನು ದೂರ ತಳ್ಳಿ, ನಿಮ್ಮದೇ ಆದ ಅನನ್ಯವಾದುದನ್ನು ಸೇರಿಸಿಕೊಳ್ಳಿ.

-ಬ್ರೂಸ್ ಲೀ

ಡೆಂಗಿ ಉಲ್ಬಣ ಕಳವಳಕಾರಿ ನಿಯಂತ್ರಣಕ್ಕೆ ಕ್ರಮ ಅಗತ್ಯ

ರಾಜ್ಯದಾದ್ಯಂತ, ಅದರಲ್ಲೂ ರಾಜಧಾನಿ ಬೆಂಗಳೂರಿನಲ್ಲಿ ಡೆಂಗಿ ಪ್ರಕರಣಗಳ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಏರಿಕೆ ಆಗುತ್ತಿರುವುದು ಕಳವಳಕಾರಿ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರೂ ಡೆಂಗಿಯಿಂದ ಬಳಲುತ್ತಿರುವುದು ನಗರದಲ್ಲಿ ಈ ಜ್ವರದ ತೀವ್ರತೆ ಎಷ್ಟಿದೆ ಎಂಬುದರ ದ್ಯೋತಕ. ಬಿಬಿಎಂಪಿ ವ್ಯಾಪ್ತಿಯೊಂದರಲ್ಲೇ 1,200ಕ್ಕೂ ಅಧಿಕ ಪ್ರಕರಣಗಳು ವರದಿಯಾಗಿವೆ. ಚಿಕ್ಕಮಗಳೂರು, ಮೈಸೂರು, ಹಾವೇರಿ, ಶಿವಮೊಗ್ಗ, ಚಿತ್ರದುರ್ಗ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳು ರಾಜ್ಯದ ಇತರ ತೀವ್ರ ಬಾಧಿತ ಪ್ರದೇಶಗಳಾಗಿವೆ. ಕಳೆದ ವರ್ಷದ ಜೂನ್‌ಗೆ ಹೋಲಿಸಿದರೆ ಈ ಸಲ ಬಿಬಿಎಂಪಿ ವ್ಯಾಪ್ತಿಯಲ್ಲಿ ವರದಿಯಾದ ಪ್ರಕರಣಗಳ ಸಂಖ್ಯೆ ಎರಡು ಪಟ್ಟು ಹೆಚ್ಚಾಗಿದೆ. ಬಿಬಿಎಂಪಿ ಆಡಳಿತವು ಸೂಕ್ತ ಮುನ್ನೆಚ್ಚರಿಕೆ ಕ್ರಮವನ್ನು ಕೈಗೊಂಡಿಲ್ಲ ಎನ್ನುವುದು ಇದರಿಂದ ವೇದ್ಯ. ಚಿಕಿತ್ಸೆಗಿಂತಲೂ ರೋಗವನ್ನು ನಿಯಂತ್ರಿಸುವುದೇ ಹೆಚ್ಚು ಪರಿಣಾಮಕಾರಿ ಎನ್ನುವ ಪಾಠವನ್ನು ಅಧಿಕಾರಿಗಳು ಪದೇ ಪದೇ ಮರೆಯುತ್ತಿರುವುದೂ ಸ್ಪಷ್ಟ. ಮಳೆಗಾಲದ ಈ ಸಂದರ್ಭದಲ್ಲಿ ಅಲ್ಲಲ್ಲಿ ನೀರು ಸಂಗ್ರಹವಾಗಿ, ಅಲ್ಲಿ ಸೊಳ್ಳೆಗಳ ಉತ್ಪತ್ತಿ ಹೆಚ್ಚಾಗುತ್ತಿರುವುದೇ ಡೆಂಗಿ ಉಲ್ಬಣಕ್ಕೆ ಕಾರಣ. ಸೊಳ್ಳೆಗಳು ಕಚ್ಚುವುದರಿಂದ ಆಂತರಿಕ ರಕ್ತಸ್ರಾವ, ರಕ್ತದೊತ್ತಡದಲ್ಲಿ ದಿಢೀರ್ ಇಳಿಕೆಯಂತಹ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ. ಕೆಲವು ಸಂದರ್ಭಗಳಲ್ಲಿ ಬಾಧೆಗೆ ಒಳಗಾದವರ ಸಾವೂ ಸಂಭವಿಸಬಹುದು ಎಂದು ತಜ್ಞವೈದ್ಯರು ಹೇಳುತ್ತಾರೆ. ಜ್ವರ, ವಸಡು ಹಾಗೂ ಮೂಗಿನಿಂದ ಆಗುವ ರಕ್ತಸ್ರಾವ, ವಾಂತಿ, ಉಸಿರಾಟದಲ್ಲಿ ಉಂಟಾಗುವ ಸಮಸ್ಯೆ, ಆಯಾಸದಂತಹ ರೋಗದ ಲಕ್ಷಣಗಳನ್ನು ಯಾವುದೇ ಕಾರಣಕ್ಕೂ ಕಡೆಗಣಿಸಬಾರದು ಎಂಬುದು ಅವರು ಕೊಡುವ ಸಲಹೆ. ಜನ, ಈ ಸಲಹೆಯನ್ನು ಚಾಚೂತಪ್ಪದೆ ಪಾಲಿಸಬೇಕು.



ಎಲ್ಲ ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸಾ ಸೌಲಭ್ಯ, ಔಷಧಿಗಳ ಲಭ್ಯತೆಯನ್ನು ಖಾತರಿಪಡಿಸಬೇಕು

ಡೆಂಗಿ ಜ್ವರ ಪತ್ತೆಗೆ ನಿಗಾ ವ್ಯವಸ್ಥೆ ಹೆಚ್ಚಿಸಿದ್ದರಿಂದ ಪ್ರಕರಣಗಳ ಸಂಖ್ಯೆಯಲ್ಲಿ ಏರಿಕೆಯಾಗಿದೆ; ಹೀಗಾಗಿ ಜನ ಆತಂಕಗೊಳ್ಳುವ ಅಗತ್ಯವಿಲ್ಲ ಎಂದು ಬಿಬಿಎಂಪಿ ಏನೋ ಸಮಾಧಾನದ ಮಾತು ಹೇಳಿದೆ. ಆದರೆ, ತಾನು ಮಾಡಬೇಕಾದ ಹಲವು ಕೆಲಸಗಳನ್ನು ಅದು ಮರೆತು ಕುಳಿತಿದೆ. ಮಳೆನೀರು ನಿಲ್ಲುವ ಸ್ಥಳಗಳಲ್ಲಿ ಸೊಳ್ಳೆಗಳ ಸಂತತಿ ಉಲ್ಬಣಗೊಂಡು ಡೆಂಗಿ ವ್ಯಾಪಕವಾಗುತ್ತಿದೆ ಎಂಬ ಅರಿವಿದ್ದರೂ ರಸ್ತೆಗಳಲ್ಲಿ ಮಳೆನೀರು ನಿಲ್ಲದಂತೆ ನೋಡಿಕೊಳ್ಳುವಲ್ಲಿ ಅದು ವಿಫಲವಾಗಿದೆ. ಸರಾಗವಾಗಿ ನೀರು ಹರಿಯುವಂತೆ ಚರಂಡಿ ಹಾಗೂ ಮೋರಿಗಳನ್ನು ಸುಸ್ಥಿತಿಯಲ್ಲಿಡಲು ಸಹ ಬಿಬಿಎಂಪಿಯಿಂದ ಸಾಧ್ಯವಾಗಿಲ್ಲ. ಡೆಂಗಿ ಪ್ರಕರಣಗಳ ಸಂಖ್ಯೆಯನ್ನು ಕಲೆ ಹಾಕುವುದಷ್ಟೇ ತಮ್ಮ ಕೆಲಸ ಎಂದು ಅಧಿಕಾರಿಗಳು ಭಾವಿಸಿದಂತಿದೆ. ಪರೀಕ್ಷೆ ಪ್ರಮಾಣವನ್ನು ಹೆಚ್ಚಿಸಿರುವ ಕ್ರಮ ಸ್ವಾಗತಾರ್ಹವಾದರೂ ಚಿಕಿತ್ಸೆಗೆ ಸಮರ್ಪಕ ವ್ಯವಸ್ಥೆ ಮಾಡುವುದು ಹಾಗೂ ರೋಗ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳುವುದು ಕೂಡ ಅಷ್ಟೇ ಮುಖ್ಯ. ಡೆಂಗಿಯಿಂದ ಬಾಧೆಗೊಳಗಾದವರ ಚಿಕಿತ್ಸೆಗೆ ಕೆಲವು ಖಾಸಗಿ ಆಸ್ಪತ್ರೆಗಳು ಹಣ ಸುಲಿಗೆ ಮಾಡುತ್ತಿವೆ ಎಂದೂ ವರದಿಯಾಗಿದೆ. ಮಾನವೀಯತೆ ಮರೆತು ಹಣ ಮಾಡುವ ದಂಧೆಯಲ್ಲಿ ಮುಳುಗಿದ ಅಂತಹ ಆಸ್ಪತ್ರೆಗಳ ಮೇಲೆ ಅಂಕುಶ ವಿಧಿಸುವುದು ಕೂಡ ಬಿಬಿಎಂಪಿ ಆಡಳಿತದ ಹೊಣೆಯಾಗಿದೆ.

ರಾಜ್ಯದಲ್ಲಿ ಸೋಮವಾರದವರೆಗೆ ಒಟ್ಟು 5,374 ಡೆಂಗಿ ಪ್ರಕರಣಗಳು ವರದಿಯಾಗಿವೆ. ಐವರ ಸಾವು ಸಂಭವಿಸಿದೆ. ಮರಣ ಪ್ರಮಾಣ ಶೇ 0.09ರಷ್ಟಿದೆ. ಪರಿಸ್ಥಿತಿಯ ಗಾಂಭೀರ್ಯವನ್ನು ಅರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಡೆಂಗಿ ನಿಯಂತ್ರಣದ ಕುರಿತು ಅಧಿಕಾರಿಗಳ ಸಭೆ ನಡೆಸಿದ್ದಾರೆ. ಅಗತ್ಯ ಪ್ರಮಾಣದ ಚುಚ್ಚುಮದ್ದು ಮತ್ತು ಪ್ಲೇಟ್‌ಲೆಟ್‌ಗಳ ಸಂಗ್ರಹಕ್ಕೆ ಸೂಚನೆ ನೀಡಿದ್ದಾರೆ. ಇಷ್ಟೇ ಸಿದ್ಧತೆ ಸಾಲದು. ಎಲ್ಲ ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸಾ ಸೌಲಭ್ಯ, ಔಷಧಿಗಳ ಲಭ್ಯತೆಯನ್ನು ಖಾತರಿಪಡಿಸಬೇಕು. ಆಶಾ ಕಾರ್ಯಕರ್ತೆಯರು, ನರ್ಸಿಂಗ್ ಹಾಗೂ ಎನ್‌ಎಸ್‌ಎಸ್ ವಿದ್ಯಾರ್ಥಿಗಳು, ಸ್ವಯಂಸೇವಕರ ನೆರವಿನೊಂದಿಗೆ ಮನೆ ಮನೆ ಸಮೀಕ್ಷೆ ನಡೆಸಿ ಅರಿವು ಮೂಡಿಸಬೇಕು. ಒಮ್ಮೆ ಸಭೆ ನಡೆಸಿದ ಶಾಸ್ತ್ರ ಮಾಡಿ ಕೈತೊಳೆದುಕೊಂಡರೆ ಆರೋಗ್ಯ ಇಲಾಖೆಯು ತನ್ನ ಹೊಣೆ ನಿಭಾಯಿಸಿದಂತೆ ಆಗುವುದಿಲ್ಲ. ನಿರಂತರವಾಗಿ ನಿಗಾ ವಹಿಸಿ, ಅಧಿಕಾರಿಗಳು ಮೈಮರೆಯದಂತೆ ಚುರುಕು ಮುಟ್ಟಿಸುವ ಕೆಲಸವನ್ನು ಮಾಡಬೇಕು. ಸೊಳ್ಳೆಗಳ ನಿಯಂತ್ರಣ ಸೇರಿದಂತೆ ಪರಿಸರವನ್ನು ಚೊಕ್ಕಟವಾಗಿಡುವ ಅಗತ್ಯದ ಕುರಿತು ಆರೋಗ್ಯ ಇಲಾಖೆ ಮತ್ತು ಸ್ಥಳೀಯ ಆಡಳಿತಗಳು ಸಾರ್ವಜನಿಕರಿಗೆ ಅರಿವು ಮೂಡಿಸುವ ಕಾರ್ಯವನ್ನು ಆಂದೋಲನದ ರೂಪದಲ್ಲಿ ನಡೆಸಬೇಕು. ಜನರೂ ಅಷ್ಟೆ; ತಮ್ಮ ಸುತ್ತಲಿನ ಪ್ರದೇಶವನ್ನು ಸ್ವಚ್ಛವಾಗಿ ಇಟ್ಟುಕೊಳ್ಳುವ ಹಾಗೂ ನೀರು ನಿಲ್ಲದಂತೆ ನೋಡಿಕೊಳ್ಳುವ ಮೂಲಕ ಆರೋಗ್ಯ ಕಾಪಾಡಿಕೊಳ್ಳುವಲ್ಲಿ ಸ್ಥಳೀಯ ಆಡಳಿತದ ಜತೆ ಕೈಜೋಡಿಸಬೇಕು.

ತೆರಿಗೆ ಸಂಗ್ರಹ ಪ್ರಮಾಣಕ್ಕೆ ಹೊಡೆತ ಕೊಟ್ಟ 'ತೆರಿಗೆ ಸ್ವರ್ಗ'ಗಳು

ತೆರಿಗೆ ಕಳವಿಗೆ ಜಾಗತಿಕ ಕಣ್ಗಾವಲು



ವಿಶ್ಲೇಷಣೆ

ಟಿ.ಎಸ್. ವೇಣುಗೋಪಾಲ್

ಈ ಜಗತ್ತಿನಲ್ಲಿ ಸಾವು ಹಾಗೂ ತೆರಿಗೆ ಬಿಟ್ಟು ಯಾವುದೂ ಖಾತರಿ ಇಲ್ಲ ಎಂಬ ಮಾತಿದೆ. ಶತಕೋಟ್ಯಧಿಪತಿಗಳಾಗಿದ್ದರೂ ಸಾವಿನಿಂದ ತಪ್ಪಿಸಿಕೊಳ್ಳಲಾಗದು. ಆದರೆ ತೆರಿಗೆ ತಪ್ಪಿಸಿಕೊಳ್ಳುವಲ್ಲಿ ಬಹಳಷ್ಟು ಮಂದಿ ನಿಪುಣರಾಗಿದ್ದಾರೆ. ಜಾಗತೀಕರಣದ ನಂತರವಂತೂ ತೆರಿಗೆಯಿಂದ ತಪ್ಪಿಸಿಕೊಳ್ಳುವುದಕ್ಕೆ ಅಂತಹವರಿಗೆ ನೂರಾರು ಅವಕಾಶಗಳು ತೆರೆದುಕೊಂಡಿವೆ. ಕೆಲವೆಡೆ, ತೆರಿಗೆ ವಿಧಿಸಿದರೂ ಪ್ರಯೋಜನವಿಲ್ಲ, ತಪ್ಪಿಸಿಕೊಳ್ಳುತ್ತಾರೆ ಅನ್ನುವಂತಹ ಪರಿಸ್ಥಿತಿ ಸೃಷ್ಟಿಯಾಗಿದೆ. ಅದರ ನಡುವೆಯೂ ವಾಸ್ತವ ಅಷ್ಟೊಂದು ನಿರಾಶಾದಾಯಕವಾಗಿಯೇನೂ ಇಲ್ಲ. ತೆರಿಗೆ ಕಳ್ಳತನವನ್ನು ನಿಗ್ರಹಿಸುವ ಪ್ರಯತ್ನಗಳು ನಡೆಯುತ್ತಿವೆ. ಅವು ಇನ್ನಷ್ಟು ಬಲ ಪಡೆದುಕೊಳ್ಳಬೇಕು. ಇಲ್ಲವಾದರೆ ಸರ್ಕಾರದ ಸಂಸ್ಥೆಗಳ ಬಗ್ಗೆ ಜನ ವಿಶ್ವಾಸ ಕಳೆದುಕೊಳ್ಳುತ್ತಾರೆ.

ಈ ಬಗೆಯ ಆತಂಕವು ಜಗತ್ತಿನಾದ್ಯಂತ ಸಂಶೋಧಕರು ಈ ಕುರಿತು ಯೋಚಿಸುವಂತೆ ಒತ್ತಾಯಿಸುತ್ತಿದೆ. ಅದರ ಫಲವಾಗಿ 2024ರ 'ಗ್ಲೋಬಲ್ ಟ್ಯಾಕ್ಸ್ ಇವೇಷನ್' ವರದಿ ಪ್ರಕಟವಾಗಿದೆ. ನೂರಾರು ಸಂಶೋಧಕರು ಒಟ್ಟಿಗೆ ಸೇರಿ ಮಾಹಿತಿ ಸಂಗ್ರಹಿಸಿ, ವಿಶ್ಲೇಷಿಸಿ, ತೆರಿಗೆ ಕಳ್ಳತನದ ಎಲ್ಲಾ ಆಯಾಮಗಳ ಕುರಿತು ಬಹಳಷ್ಟು ನಿಖರವಾದ ಚಿತ್ರಣವನ್ನು ಕಟ್ಟಿಕೊಟ್ಟಿದ್ದಾರೆ.

ಶತಕೋಟ್ಯಧಿಪತಿಗಳ ವರಮಾನ ಹಾಗೂ ಸಂಪತ್ತು ತೀವ್ರಗತಿಯಲ್ಲಿ ಬೆಳೆಯುತ್ತಿರುವುದು ನಮಗೆ ಗೊತ್ತಿದೆ. ಅದಕ್ಕೆ ತಕ್ಕಂತೆ ತೆರಿಗೆ ಸಂದಾಯವಾಗುತ್ತಿಲ್ಲ ಎಂಬುದನ್ನು ಈ ವರದಿ ನಮ್ಮ ಗಮನಕ್ಕೆ ತರುತ್ತದೆ. ತೆರಿಗೆ ತಪ್ಪಿಸಿಕೊಳ್ಳಲು ಅವರು ಹಲವು ಮಾರ್ಗಗಳನ್ನು ಬಳಸುತ್ತಾರೆ. ಕಾನೂನಿನಲ್ಲಿ ಯಾವುದೋ ಉದ್ದೇಶಕ್ಕೆ ಕಲ್ಪಿಸಿರುವ ಅವಕಾಶವನ್ನು ಇವರು ತಮ್ಮ ಅನುಕೂಲಕ್ಕೆ ಬಳಸಿಕೊಳ್ಳುತ್ತಾರೆ. ಕಾನೂನಿನ ಕಣ್ಣು ತಪ್ಪಿಸಿಯೂ ತೆರಿಗೆ ಕದಿಯುತ್ತಾರೆ. ವಿದೇಶಿ ಹಣಕಾಸು ಸಂಸ್ಥೆಗಳಿಗೆ ಹಣ, ಸಂಪತ್ತು ವರ್ಗಾಯಿಸುವುದು, ಕಡಿಮೆ ಪ್ರಮಾಣದಲ್ಲಿ ತೆರಿಗೆ ವಿಧಿಸುವ ದೇಶಗಳಿಗೆ ಲಾಭ ವರ್ಗಾಯಿಸುವುದು, ಶೆಲ್ ಕಂಪನಿಗಳ ಮೂಲಕ ವ್ಯವಹರಿಸುವುದು... ಹೀಗೆ ತೆರಿಗೆ ತಪ್ಪಿಸಲು ಹಲವು ದಾರಿಗಳಿವೆ.

ಈ ವರದಿಯು ತೆರಿಗೆ ಕಳ್ಳತನವನ್ನು ಕಾನೂನಿನ ದೃಷ್ಟಿಯಿಂದ ನೋಡುತ್ತಿಲ್ಲ, ಬದಲಿಗೆ ಆರ್ಥಿಕ ದೃಷ್ಟಿಯಿಂದ ನೋಡುತ್ತದೆ. ತೆರಿಗೆ ಕಳ್ಳತನದಿಂದ ಸರ್ಕಾರದ ವರಮಾನ, ಆರ್ಥಿಕತೆ ಮತ್ತು ಅಸಮಾನತೆಯ ಮೇಲೆ ಆಗುವ ಪರಿಣಾಮವನ್ನು ಗಮನಿಸುತ್ತದೆ. ತೆರಿಗೆ ಕಳ್ಳತನವನ್ನು ತಡೆಯುವುದರಲ್ಲಿ ಸರ್ಕಾರದ ನೀತಿಗಳು ಎಷ್ಟು ಸಫಲವಾಗಿವೆ ಮತ್ತು ಅವುಗಳನ್ನು ಹೇಗೆ ಹೆಚ್ಚು ಪರಿಣಾಮಕಾರಿಯಾಗಿ ಮಾಡಬಹುದು ಎಂಬ ವಿಷಯಗಳತ್ತ ಯೋಚಿಸುತ್ತದೆ.

ತೆರಿಗೆ ತಪ್ಪಿಸಿಕೊಳ್ಳುವುದಕ್ಕೆ ಶತಕೋಟ್ಯಧಿಪತಿಗಳು ಅನುಸರಿಸುವ ಒಂದು ಕ್ರಮವೆಂದರೆ, ಹಣಕಾಸು ಸ್ವತ್ತನ್ನು ವಿದೇಶಕ್ಕೆ ವರ್ಗಾಯಿಸುವುದು. ಹಣಕಾಸು ಸ್ವತ್ತು ಅಂದರೆ ಬ್ಯಾಂಕ್ ಠೇವಣಿ, ಷೇರುಗಳು, ಬಾಂಡ್‌ಗಳು, ಮ್ಯೂಚುಯಲ್ ಫಂಡ್ ಯೂನಿಟ್‌ನಂತಹವು. ಅಂತಹ ಹಣಕಾಸು ಸ್ವತ್ತುಗಳಲ್ಲಿ ಶೇಕಡ 90ಕ್ಕೂ ಹೆಚ್ಚು ಭಾಗ ನಿರ್ದಿಷ್ಟವಾಗಿ ಇಂಥವರದ್ದೇ ಎಂದು ತೆರಿಗೆ ಅಧಿಕಾರಿಗಳಿಗೆ ಗೊತ್ತಾಗುತ್ತಿರಲಿಲ್ಲ. ಅವನ್ನು ಠೇವಣಿಯನ್ನಾಗಿ ಇಟ್ಟುಕೊಂಡ ವಿದೇಶಿ ಹಣಕಾಸು ಸಂಸ್ಥೆಗಳೂ ಸಂಬಂಧಪಟ್ಟ ಅಧಿಕಾರಿಗಳಿಗೆ ಆ ಬಗ್ಗೆ ಮಾಹಿತಿ ನೀಡುತ್ತಿರಲಿಲ್ಲ. ಹಾಗಾಗಿ, 2017ರವರೆಗೆ ಈ ಬಗ್ಗೆ ಮಾಹಿತಿ ಸಿಗುವುದು ತುಂಬಾ ಕಷ್ಟವಿತ್ತು. ಬಚ್ಚಿಟ್ಟ ಸಂಪತ್ತಿನ ವಿರಾಟ್‌ಸ್ವರೂಪ ಜಗತ್ತಿಗೆ ತಿಳಿದದ್ದು ಪನಾಮ ಪೇಪರ್ಸ್‌ನಂತಹ ಪ್ರಕರಣಗಳಿಂದ. ಆಗಲೂ ವಿದೇಶಿ ಹಣಕಾಸಿನ ಪ್ರಮಾಣದ ಬಗ್ಗೆಯಾಗಲಿ, ಯಾರೆಲ್ಲಾ ಇಟ್ಟಿದ್ದಾರೆ, ಯಾವ ಉದ್ದೇಶಕ್ಕೆ ಇಟ್ಟಿದ್ದಾರೆ ಅನ್ನುವಂತಹ ಮಾಹಿತಿಯಾಗಲಿ ಇರಲಿಲ್ಲ. ಕೆಲವು ಅತಿಶ್ರೀಮಂತರು ಈ ಕೆಲಸ ಮಾಡುತ್ತಿದ್ದಾರೆ ಅನ್ನುವುದಷ್ಟೇ ತಿಳಿದಿತ್ತು.

2017ರಿಂದ ಪರಿಸ್ಥಿತಿ ಸ್ವಲ್ಪಮಟ್ಟಿಗೆ ಬದಲಾಗಿದೆ. ನೂರಕ್ಕೂ ಹೆಚ್ಚು ದೇಶಗಳು ತಮ್ಮ ಹಣಕಾಸು ಸಂಸ್ಥೆಗಳಲ್ಲಿರುವ ಖಾತೆಗಳ ಬಗೆಗಿನ ಮಾಹಿತಿಯನ್ನು ಸಂಬಂಧಪಟ್ಟ ದೇಶಗಳ ತೆರಿಗೆ ಅಧಿಕಾರಿಗಳೊಂದಿಗೆ ವಿನಿಮಯ ಮಾಡಿಕೊಳ್ಳಲು ಒಪ್ಪಂದ ಮಾಡಿಕೊಂಡಿವೆ. ಹಾಗಾಗಿಯೇ ವಿದೇಶಿ ಹಣಕಾಸು ಸಂಸ್ಥೆಗಳಲ್ಲಿ ಇರಿಸಿರುವ ಸಂಪತ್ತಿನ ಮಾಹಿತಿಯು 2022ರಲ್ಲಿ ಜಗತ್ತಿಗೆ ಗೊತ್ತಾಯಿತು.

ಮಾಹಿತಿ ವಿನಿಮಯ ವ್ಯವಸ್ಥೆಯಿಂದಾಗಿ ತೆರಿಗೆ ಕಳ್ಳತನದ ಪ್ರಮಾಣ ಗಣನೀಯವಾಗಿ ಕಡಿಮೆಯಾಗಿದೆ. ಆದರೆ ಪೂರ್ತಿ ನಿಂತಿಲ್ಲ. ಕೆಲವು ದೇಶಗಳು ಈ ಬಗ್ಗೆ ಮಾಹಿತಿ ನೀಡಲು ಹಿಂದೇಟು ಹಾಕುತ್ತಿವೆ. ಮಾಹಿತಿ ನೀಡಿದರೆ ತಮ್ಮ ದೇಶದಿಂದ ಬಂಡವಾಳ ಹರಿದು ಹೋಗಿಬಿಡುತ್ತದೆ ಅನ್ನುವ ಆತಂಕ ಅವುಗಳಿಗೆ. ಜೊತೆಗೆ ಈ ಒಪ್ಪಂದದಲ್ಲೇ ಕೆಲವು ಸಮಸ್ಯೆಗಳಿವೆ. ಈ ಒಪ್ಪಂದ ಚಿರಾಸ್ತಿಗೆ ಅನ್ವಯವಾಗುವುದಿಲ್ಲ. ಅದರ ಪ್ರಕಾರ, ಚಿರಾಸ್ತಿಯಂತಹ ಕೆಲವು ಸ್ವತ್ತುಗಳ ಬಗ್ಗೆ ಮಾಹಿತಿ ನೀಡಲೇಬೇಕಾದ ಅಗತ್ಯವಿಲ್ಲ. ಹಾಗಾಗಿ, ಶ್ರೀಮಂತರು ಬಹುತೇಕ ಠೇವಣಿಯನ್ನು ಚಿರಾಸ್ತಿಯಾಗಿ ಮಾರ್ಪಡಿಸಿಕೊಳ್ಳಲು ಪ್ರಾರಂಭಿಸಿದ್ದಾರೆ.

2020ರಲ್ಲಿ ವಿದೇಶಿಯರು ದುಬೈನಲ್ಲಿ ವಿಪರೀತ ಚಿರಾಸ್ತಿ ಖರೀದಿಸಿರುವುದಕ್ಕೆ ಇದೂ ಒಂದು ಕಾರಣ ಎನ್ನಲಾಗಿದೆ. ಹೀಗಾಗಿ, ಶೇ 25ರಷ್ಟು ವಿದೇಶಿ ಸಂಪತ್ತು ಇನ್ನೂ ತೆರಿಗೆ ವ್ಯಾಪ್ತಿಗೆ ಬಂದಿಲ್ಲ. ಆದರೂ ಇಷ್ಟು ಸಾಧ್ಯವಾಗಿರುವುದು ದೊಡ್ಡ ವಿಷಯ. ರಾಜಕೀಯ ಇಚ್ಛಾಶಕ್ತಿ ಇದ್ದರೆ ತೆರಿಗೆ ಕಳ್ಳತನವನ್ನು ಪರಿಣಾಮಕಾರಿಯಾಗಿ ತಡೆಯಬಹುದು ಅನ್ನುವುದಕ್ಕೆ ಇದೊಂದು ಉದಾಹರಣೆ. ಹಣಕಾಸಿನ ವಿಷಯದಲ್ಲಿ ಆದಂತೆ ಆಸ್ತಿಯ ವಿಷಯದಲ್ಲೂ ಮಾಹಿತಿಯನ್ನು ಹಂಚಿಕೊಂಡರೆ ತೆರಿಗೆ ಕಳ್ಳತನ ಇನ್ನಷ್ಟು ತಪ್ಪಬಹುದು.



ಇಂತಹ ವ್ಯವಹಾರಗಳಲ್ಲಿ ಇನ್ನೂ ಒಂದು ಸಮಸ್ಯೆಯಿದೆ. ಒಂದು ದೇಶದ ಬೃಹತ್ ಉದ್ಯಮಪತಿಗಳು ಇನ್ನೊಂದು ದೇಶದಲ್ಲಿರುವ ಶೆಲ್ ಕಂಪನಿಗಳು, ಟ್ರಸ್ಟುಗಳಂತಹವುಗಳ ಮೂಲಕ ಮೂರನೇ ದೇಶದಲ್ಲಿ ವ್ಯವಹಾರ ನಡೆಸುತ್ತಿರುತ್ತಾರೆ. ಹಾಗಾಗಿ, ಯಾವ ದೇಶದಿಂದ, ಯಾರ ಹಣ, ಎಲ್ಲಿಗೆ ವರ್ಗಾವಣೆ ಆಗುತ್ತಿದೆ ಅನ್ನುವುದನ್ನು ತಿಳಿದುಕೊಳ್ಳುವುದು ಕಷ್ಟವಾಗುತ್ತದೆ. ಈಗ ಹಲವು ರಾಷ್ಟ್ರಗಳಲ್ಲಿನ ವಿದೇಶಿ ಹಣಕಾಸು ಸಂಸ್ಥೆಗಳು ಈ ಬಗ್ಗೆ ಮಾಹಿತಿಯನ್ನು ಹಂಚಿಕೊಳ್ಳುತ್ತಿರುವುದರಿಂದ ಪರಿಸ್ಥಿತಿ ಸುಧಾರಿಸಿದೆ. ಜೊತೆಗೆ ಈ ರೀತಿಯ ವ್ಯವಹಾರಗಳನ್ನು ಪತ್ತೆಹಚ್ಚುವುದಕ್ಕೆ ಸಂಶೋಧಕರು ತಮ್ಮದೇ ಆದ ಮಾರ್ಗಗಳನ್ನು ಕಂಡುಕೊಳ್ಳುತ್ತಿದ್ದಾರೆ.

ಕೆಲವು ಬಹುರಾಷ್ಟ್ರೀಯ ಕಂಪನಿಗಳು ಗಳಿಸಿದ ಲಾಭಕ್ಕೆ ಸಹ ಸೂಕ್ತ ರೀತಿಯಲ್ಲಿ ತೆರಿಗೆ ಕಟ್ಟದೆ ತಪ್ಪಿಸಿಕೊಳ್ಳುತ್ತವೆ. ತಮ್ಮ ಲಾಭದ ಬಹುಭಾಗವನ್ನು 'ತೆರಿಗೆ ಸ್ವರ್ಗ'ಗಳಿಗೆ ಅಂದರೆ ತೆರಿಗೆಯೇ ಇಲ್ಲದ ಅಥವಾ ಅತಿ ಕಡಿಮೆ ತೆರಿಗೆ ವಿಧಿಸುವ ದೇಶಗಳಿಗೆ ವರ್ಗಾಯಿಸುತ್ತವೆ. 2022ರಲ್ಲಿ ಬಹುರಾಷ್ಟ್ರೀಯ ಕಂಪನಿಗಳು ತಾವು ಗಳಿಸಿದ ಲಾಭದಲ್ಲಿ ಶೇಕಡ 35ರಷ್ಟನ್ನು 'ತೆರಿಗೆ ಸ್ವರ್ಗ'ಗಳಿಗೆ ವರ್ಗಾಯಿಸಿದ್ದವು. ಇದರಿಂದ ಜಾಗತಿಕವಾಗಿ ತೆರಿಗೆ ಸಂಗ್ರಹದ ಪ್ರಮಾಣ ಕಡಿಮೆಯಾಯಿತು.

ಇದಕ್ಕೆ ಸಂಬಂಧಿಸಿದಂತೆ ಇನ್ನೊಂದು ಸಮಸ್ಯೆ ಪ್ರಾರಂಭವಾಗಿದೆ. ಹಲವು ದೇಶಗಳು ಆರ್ಥಿಕ ಅಭಿವೃದ್ಧಿಗೆ ವಿದೇಶಿ ಬಂಡವಾಳವನ್ನು ನೆಚ್ಚಿಕೊಂಡಿವೆ. ಹಾಗಾಗಿ, ಬಂಡವಾಳವನ್ನು ತಮ್ಮಲ್ಲೇ ಉಳಿಸಿಕೊಳ್ಳಲು ಅವು ಹೆಣಗುತ್ತಿವೆ. ಕಾರ್ಪೊರೇಟ್ ತೆರಿಗೆಯಲ್ಲಿ ಕಡಿತ ಮಾಡಿ ವಿದೇಶಿ ಬಂಡವಾಳವನ್ನು ಆಕರ್ಷಿಸಲು ಪ್ರಯತ್ನಿಸುತ್ತಿವೆ. ಇದರಿಂದ ಜಾಗತಿಕವಾಗಿ ತೆರಿಗೆ ಸಂಗ್ರಹದ ಪ್ರಮಾಣ ಕುಸಿಯುತ್ತದೆ. ಇದನ್ನು ತಪ್ಪಿಸುವ ಸಲುವಾಗಿ ಜಾಗತಿಕ ಮಟ್ಟದಲ್ಲಿ ಕಾರ್ಪೊರೇಟ್ ಸಂಸ್ಥೆಗಳ ಲಾಭದ ಮೇಲೆ ಶೇ 15ರಷ್ಟು ಕನಿಷ್ಠ ತೆರಿಗೆ ವಿಧಿಸುವುದಕ್ಕೆ 2021ರಲ್ಲಿ 140ಕ್ಕೂ ಹೆಚ್ಚು ದೇಶಗಳು ಒಪ್ಪಿಕೊಂಡವು. ಇದೊಂದು ಮಹತ್ವದ ತೀರ್ಮಾನ. ಆದರೆ ಹಲವು ದೇಶಗಳು ಕೆಲವು ರಿಯಾಯಿತಿಗಳನ್ನು ನೀಡಲು ಪ್ರಾರಂಭಿಸಿದವು. ಅದರಿಂದ ನಿರೀಕ್ಷಿಸಿದಷ್ಟು ತೆರಿಗೆ ಸಂಗ್ರಹವಾಗಲಿಲ್ಲ. ಕೊನೆಗೆ ಲಾಭವಾಗಿದ್ದು ಶತಕೋಟ್ಯಧಿಪತಿಗಳಿಗೆ.

ಇಂದು ಶತಕೋಟ್ಯಧಿಪತಿಗಳ ಸಂಪತ್ತಿನ ಬಗ್ಗೆ ಮೊದಲಿಗಿಂತ ಹೆಚ್ಚು ನಿಖರವಾದ ಮಾಹಿತಿ ಲಭ್ಯವಿದೆ. ಅಂತಹವರ ಸಂಖ್ಯೆಯು ಹೆಚ್ಚೆಂದರೆ 3,000. ಹಾಗಾಗಿ, ಅವರಿಂದ ತೆರಿಗೆ ಸಂಗ್ರಹ ಕಷ್ಟವಾಗಬಾರದು. ಜೊತೆಗೆ ಅವರ ಸಂಪತ್ತು ಹಿಂದಿನ ದಶಕದಲ್ಲಿ ಶೇ 7ರಷ್ಟು ಏರಿರುವುದರಿಂದ ಅದರ ಮೇಲೆ ವಿಧಿಸುವ ಶೇ 2ರಷ್ಟು ತೆರಿಗೆ ದೊಡ್ಡ ಮೊತ್ತವಲ್ಲ. ಇದರಿಂದ 250 ಶತಕೋಟಿ ಡಾಲರುಗಳನ್ನು ಸಂಗ್ರಹಿಸಬಹುದು ಎಂದು ವರದಿ ತಿಳಿಸುತ್ತದೆ.

ಪರೋಕ್ಷ ತೆರಿಗೆ ಹೆಚ್ಚಿಸಿ ಜನರಿಗೆ ಹೊರೆ ಮಾಡುವ ಬದಲು ನೇರ ತೆರಿಗೆಯ ಮೂಲಕ ಸಂಪನ್ಮೂಲ ಸಂಗ್ರಹಿಸಿ ಸಾಮಾನ್ಯರಿಗೆ ಮೂಲ ಸೌಕರ್ಯ ಒದಗಿಸುವ ದಿಸೆಯಲ್ಲಿ ಯೋಚಿಸಬೇಕಾಗಿದೆ. ತೆರಿಗೆಯನ್ನು ಅಸಮಾನತೆಯ ನಿಯಂತ್ರಣಕ್ಕೆ, ಹೆಚ್ಚು ಸಮಾನವಾದ ಸಮಾಜದ ಕಡೆ ಚಲಿಸುವುದಕ್ಕೆ ಅವಶ್ಯವಾದ ಸಾಧನವಾಗಿ ಬಳಸಿಕೊಳ್ಳುವ ಬಗ್ಗೆ ಯೋಚಿಸಬೇಕಾಗಿದೆ. ಈ ದಿಸೆಯಲ್ಲಿ ಸಂಶೋಧಕರು ಪ್ರಕಟಿಸಿರುವ ಈ ವರದಿ ಅತ್ಯಂತ ಮಹತ್ವದ್ದು.

ಚುರುಮುರಿ



ದೇವಮೂಲೆ ಅದೃಷ್ಟ!

● ಗುರು ಪಿ.ಎಸ್.

ಗಂಡ-ಹೆಂಡತಿ ಸಂಬಳದಲ್ಲಿ ಖರ್ಚು ಕಳೆದು, ಇಬ್ಬರೂ ಒಂದಿಷ್ಟು ಹಣ ತೆಗೆದಿಡುವುದು ನಮ್ಮ ಮನೆಯ ಅಲಿಖಿತ ನಿಯಮ.

'ಏನು ಈ ಸಲ ಸೇವಿಂಗ್ಸ್ ದುಡ್ಡು ಕಡಿಮೆ ಆಗಿದೆಯಲ್ಲ' ಹೆಂಡತಿಗೆ ಕೇಳಿದೆ.

'ಏನು ಮಾಡೋದು ರೀ, ಹಾಲು, ತರಕಾರಿ ರೇಟ್ ಜಾಸ್ತಿಯಾಗಿದೆ. ಅದಕ್ಕೇ ದುಡ್ಡು ಕಡಿಮೆ ಆಗಿದೆ. ನೀವು ಕೂಡ ಕಡಿಮೆ ದುಡ್ಡು ಇಟ್ಟಿದ್ದೀರಲ್ಲ' ಹಣ ಎಣಿಸುತ್ತಾ ಕೇಳಿದಳು.

'ಪೆಟ್ರೋಲ್ ರೇಟ್ ಜಾಸ್ತಿಯಾಗಿ, ಆಲ್ಕೊಹಾಲಿನ ರೇಟು ಸ್ವಲ್ಪ ಕಡಿಮೆಯಾಯ್ತಲ್ಲ ಹಾಗಾಗಿ...' ನಕ್ಕೆ.

ಕೆಕ್ಕರಿಸಿ ನೋಡಿದ ಪತ್ನಿ, 'ನೋಡಿ, ನೀವು ಸಪೋರ್ಟ್ ಮಾಡೋ ಪಾರ್ಟಿಯವರಿಗೆ ಸೆಂಟ್ರಲ್‌ನಲ್ಲಿ ಫುಲ್ ಮೆಜಾರಿಟಿ ಬರಲಿಲ್ಲ ಅಂತ ಎಲ್ಲದರ ರೇಟ್ ಜಾಸ್ತಿ ಮಾಡ್ತಿದ್ದಾರೆ' ಎಂದಳು.

'ನೀನು ಸಪೋರ್ಟ್ ಮಾಡೋ ಪಾರ್ಟಿಯವರಿಗೆ ರಾಜ್ಯದಲ್ಲಿ ಜಾಸ್ತಿ ಸೀಟು ಬರಲಿಲ್ಲ ಅಂತ ಇವರೂ ರೇಟ್ ಜಾಸ್ತಿ ಮಾಡ್ತಿದಾರಲ್ಲ' ತಿರುಗೇಟು ನೀಡಿದೆ.

'ಮತ್ತೆ ನೀವೇ ಆಗ ಹೇಳ್ತಿದ್ರಿ, ಪೆಟ್ರೋಲ್ ರೇಟ್ 500 ರೂಪಾಯಿ ಆದರೂ ಕೊಡ್ತೀವಿ ಅಂತ, ಈಗ ನೋಡಿದ್ರೆ ವಟ ವಟ ಅಂತೀದೀರಿ'.

'ಆಗ ನೀವೂ ಊರ್ ತುಂಬಾ ಪ್ರೊಟೆಸ್ಟ್ ಮಾಡಿದ್ರಿ, ಈಗ ನೀವೇ ಜಾಸ್ತಿ ಮಾಡಿಲ್ವ' ಸಮರ್ಥಿಸಿಕೊಂಡೆ.

'ರೇಟ್ ಜಾಸ್ತಿ ಮಾಡಿದ್ರೇನಾಯ್ತು ಬಿಡ್ರೀ, ನಮ್ಮಿಬ್ಬರದೂ ಸ್ಯಾಲರಿ ಜಾಸ್ತಿ ಆಗಿಲ್ವ' ವಾದಿಸಿದಳು ಮಡದಿ.

'ಹಂಗಂತ, ಸಂಬಳದ ಹಣ ಪೂರ್ತಿ ಖಾಲಿ ಮಾಡಿಸಲೇಬೇಕು ಅಂತ ಡಿಸೈಡ್ ಮಾಡಿದಾರಾ ನಿಮ್ ಸರ್ಕಾರದವರು' ರೇಗಿದೆ.

'ಯಾವ ಪಾರ್ಟಿಯವರು ರೇಟ್ ಜಾಸ್ತಿ ಮಾಡಿದ್ರೂ ನಮ್ಮಿಬ್ಬರ ಸಂಬಳ ತಾನೆ ಖಾಲಿ ಆಗೋದು' ಎಂದಳು ಸಮಾಧಾನದ ದನಿಯಲ್ಲಿ.

'ಈ ಎಲ್ಲ ಕಷ್ಟ ಬೇಡವೇ ಬೇಡಮ್ಮ, ಹೋಗಿ ಚನ್ನಪಟ್ಟಣದಲ್ಲಿ ಸೆಟ್ಲ್ ಆಗೋಣ'.

'ಅಲ್ಲಿಗ್ಯಾಕ್ರಿ?'

'ಅದು ದೇವಮೂಲೆಯಲ್ಲಿದೆ. ಅಲ್ಲಿಗೆ ಹೋದಮೇಲಾದರೂ ನಮ್ ಅದೃಷ್ಟ ಖುಲಾಯಿಸಿ ಜಾಸ್ತಿ ದುಡ್ಡು ಉಳಿಯುತ್ತೋ ನೋಡೋಣ' ಎಂದೆ. ಇಬ್ಬರೂ ನಗತೊಡಗಿದೆವು.

ದಿನದ ಟ್ವೀಟ್

ಗಂಭೀರ ಸಾಮಾಜಿಕ ಸಮಸ್ಯೆ

ಪ್ರಾಮಾಣಿಕವಾದ ಕೋರಿಕೆ... ಬಹುತೇಕ ಗ್ರಾಮಗಳು/ತಾಲ್ಲೂಕುಗಳಲ್ಲಿ ಇಂತಹ ಸ್ಥಿತಿ ಇದೆ. ಆದರೆ ಈ ವಿಷಯದಲ್ಲಿ ಜಿಲ್ಲಾಡಳಿತ ಏನು ಮಾಡಲು ಸಾಧ್ಯ? ಇಂತಹ ಕಾಳಜಿಗಳ ಬಗ್ಗೆ ಗಮನಹರಿಸಲು ಅವರು ವಧು-ವರ ಮೇಳ ಆಯೋಜಿಸಲಾದೀತೆ?

(ಕೊಪ್ಪಳ ಜಿಲ್ಲೆಯಲ್ಲಿ ನಡೆದ ಜನಸ್ಪಂದನ ಕಾರ್ಯಕ್ರಮದಲ್ಲಿ ಯುವ ರೈತನೊಬ್ಬ ತನಗೆ ವಧುವನ್ನು ಹುಡುಕಿಕೊಡುವಂತೆ ಕೋರಿ ಜಿಲ್ಲಾಧಿಕಾರಿಗೆ ಅರ್ಜಿ ಸಲ್ಲಿಸಿರುವುದಕ್ಕೆ ಪ್ರತಿಕ್ರಿಯೆ)

ಭಾಸ್ಕರ್ ವಿ.ಎಚ್., ಉದ್ಯಮಿ

ಕಿಡಿನುಡಿ



ಬೆಲೆಬಾಳುವ ಎಲೆಕ್ಟ್ರಾನಿಕ್ ಉಪಕರಣಗಳು, ಹಣ್ಣುಗಳನ್ನು ಈ ರೀತಿ ನಿರ್ವಹಿಸಿದರೆ ಹೇಗೆ ಎಂದು ಯೋಚಿಸಿ? ಬೃಹತ್ ಇ- ಕಾಮರ್ಸ್ ಕಂಪನಿಗಳು ತಮ್ಮದೇ ಸರಕು ಸಾಗಣೆ ವ್ಯವಸ್ಥೆ ಮಾಡಿಕೊಂಡಿರುವುದಕ್ಕೆ ಸಕಾರಣವಿದೆ. ರೈಲ್ವೆಯು ಗಣನೀಯ ಪ್ರಮಾಣದ ವರಮಾನವನ್ನು ಖಾಸಗಿ ಕಂಪನಿಗಳಿಗೆ ಬಿಟ್ಟುಕೊಡುತ್ತಿದೆ. ಭಾರತೀಯ ರೈಲ್ವೆಯ ಕೆಲವು ವಿಭಾಗಗಳನ್ನು ಖಾಸಗೀಕರಣ ಮಾಡಬೇಕಾದ ಅಗತ್ಯವಿದೆ.

(ಸರಕು ತುಂಬಿದ ರಟ್ಟಿನ ಪೆಟ್ಟಿಗೆಗಳನ್ನು, ರೈಲಿನ ಒಳಗಿನಿಂದ ಪ್ಲ್ಯಾಟ್‌ಫಾರ್ಮ್ ಮೇಲೆ ಎತ್ತಿ ಎಸೆಯುವ ಕಾರ್ಮಿಕರ ಕ್ರಮಕ್ಕೆ ವಿರೋಧ)

ರವಿಸುತಾಂಜನಿ, ಉದ್ಯಮಿ

25 ವರ್ಷಗಳ ಹಿಂದೆ

ಭಾನುವಾರ, 27-6-1999

● **ಪಾಕ್‌ನ 8 ಬಂಕರ್ ಧ್ವಂಸ 20 ಉಗ್ರಗಾಮಿಗಳ ಸಾವು**

ನವದೆಹಲಿ, ಜೂನ್ 26– ಭಾರತೀಯ ವಾಯುಪಡೆಯ ಮಿರಾಜ್– 2000 ಜೆಟ್ ಯುದ್ಧವಿಮಾನಗಳು ಬಟಾಲಿಕ್, ಡ್ರಾಸ್– ಮಷ್ಕೋವ್ ಕಣಿವೆ, ಟೈಗರ್ ಹಿಲ್ ಮತ್ತು ಮುಂಥೊ ಧಾಲೋ ಪ್ರದೇಶಗಳಲ್ಲಿ ಇಂದು ನಡೆಸಿದ ವ್ಯಾಪಕ ದಾಳಿಯಿಂದ ಪಾಕಿಸ್ತಾನಿ ಅತಿಕ್ರಮಣಕಾರರ ಎಂಟು ಬಂಕರ್‌ಗಳು ಪೂರ್ಣವಾಗಿ ನಾಶವಾಗಿದ್ದು, ಕೊನೇಪಕ್ಷ ಇಪ್ಪತ್ತು ಮಂದಿ ಪಾಕಿಸ್ತಾನದ ಉಗ್ರಗಾಮಿಗಳು ಸತ್ತಿದ್ದಾರೆ.

ಪಾಕಿಸ್ತಾನಿ ಆಕ್ರಮಣಕಾರರನ್ನು ಹಿಮ್ಮೆಟ್ಟಿಸುವಲ್ಲಿ ಈಗ ಬಹುತೇಕ ಗಡಿ ನಿಯಂತ್ರಣ ರೇಖೆಯ ಸಮೀಪದಲ್ಲಿ ಕಾರ್ಯಾಚರಣೆ ನಡೆಸುತ್ತಿರುವುದರಿಂದ ಪಾಕಿಸ್ತಾನಿ ಅತಿಕ್ರಮಣಕಾರರಿಗೆ ಶಸ್ತ್ರಾಸ್ತ್ರಗಳು ಮತ್ತು ಆಹಾರ ಪದಾರ್ಥ ಪೂರೈಕೆಯಾಗುತ್ತಿದ್ದ ಕ್ಯಾಂಪ್‌ಗಳು ಹಾಗೂ ಬಂಕರ್‌ಗಳ ಮೇಲೆ ಯುದ್ಧ ವಿಮಾನಗಳು ದಾಳಿ ನಡೆಸಿವೆ.

● **ಮಂಗಳೂರು ಜೈಲಿನಿಂದ ಮೂವರು ಕೈದಿಗಳ ಪರಾರಿ**

ಮಂಗಳೂರು, ಜೂನ್ 26– ನೂರು ವರ್ಷಗಳಷ್ಟು ಹಳೆಯದಾದ ನಗರದ ಸಬ್ ಜೈಲು ಸೆಲ್‌ನ ಸರಳನ್ನೇ ಕತ್ತರಿಸಿ, ಮೂವರು ಕುಖ್ಯಾತ ಕೈದಿಗಳು ಪರಾರಿಯಾದ ಘಟನೆ ನಿನ್ನೆ ಮಧ್ಯರಾತ್ರಿಯ ವೇಳೆಗೆ ನಡೆದಿದೆ.

ದೇಶದಾದ್ಯಂತ ಸಾವಿರಕ್ಕೂ ಹೆಚ್ಚು ಪ್ರಕರಣಗಳಲ್ಲಿ ಪೊಲೀಸರಿಗೆ ಬೇಕಾಗಿದ್ದ ಕಳ್ಳನೋಟು ಪ್ರಕರಣದ ಕುಖ್ಯಾತ ಆರೋಪಿ ಭಾಸ್ಕರ ನಾಯರ್, ಪುತ್ತೂರು ಸೌಮ್ಯ ಭಟ್ ಕೊಲೆ ಪ್ರಕರಣದ ಆರೋಪಿ ಮಿಲ್ಟಿ ಅಶ್ರಫ್, ಕ್ರಿಮಿನಲ್ ಪ್ರಕರಣವೊಂದರ ಆರೋಪಿ ಮೋಹನ್ ದಾಸ್ ಮೂವರೂ ಜೈಲಿನಿಂದ ತಪ್ಪಿಸಿಕೊಂಡಿದ್ದು, ಪೊಲೀಸ್ ಇಲಾಖೆಗೆ ದೊಡ್ಡ ಸವಾಲಿನಂತಾಗಿದೆ.

50 ವರ್ಷಗಳ ಹಿಂದೆ

ಗುರುವಾರ, 27-6-1974

● **ಲಿಂಗನಮಕ್ಕಿ ಪ್ರದೇಶಕ್ಕೆ ಹನಿ ಮಳೆಯ ತಂಪು: ಜಡಿ ಆರಂಭಕ್ಕೆ ಸೂಚಿ**

ಬೆಂಗಳೂರು, ಜೂನ್ 26– ಲಿಂಗನಮಕ್ಕಿ ಜಲಾಶಯದ ಸುತ್ತಮುತ್ತಲ ಪ್ರದೇಶದಲ್ಲಿ, ರಾಜ್ಯದ ಜನಜೀವನವೇ ಕುಸಿದುಬೀಳುವ ಅನಾಹುತವನ್ನು ತಪ್ಪಿಸಬಹುದಾದ ಮುಂಗಾರು ಹನಿ ಆರಂಭ.

ಇದರ ಬೆನ್ನ ಹಿಂದೆಯೇ ಭಾರಿ ಮಳೆ ಆರಂಭವಾಗುವ ಸ್ಪಷ್ಟ ಲಕ್ಷಣ– ಈ ಸಂತಸದ ಸುದ್ದಿ ರಾಜಧಾನಿಯನ್ನು ತಲುಪಿದೆ.

ಇದುವರೆಗಿನ ಹನಿಮಳೆಯ ಪರಿಣಾಮವಾಗಿ, ಸುಮಾರು 18 ಗಂಟೆಗಳ ಕಾಲ ವಿದ್ಯುತ್ ಉತ್ಪಾದನೆಗೆ ಸಾಕಾಗುವಷ್ಟು ಹೊಸ ನೀರು ಜಲಾಶಯ ಸೇರಿದೆ (ನೀರಿನ ಮಟ್ಟ 1,230.2 ಅಡಿ) ಎಂದು ಲೋಕೋಪಯೋಗಿ ಮಂತ್ರಿ ಶ್ರೀ ಎಚ್. ಎಂ. ಚನ್ನಬಸಪ್ಪ ತಿಳಿಸಿದರು.

ಮಳೆ ಬರದೇ ಹೋಗಿದ್ದರೆ ಶರಾವತಿ ವಿದ್ಯುತ್ ಉತ್ಪಾದನೆ ಸಂಪೂರ್ಣ ನಿಂತುಹೋಗುವ ಸ್ಥಿತಿ ಇತ್ತು.

ಸಂಗತ

ನಿಜಭಕ್ತಿಯಲ್ಲ, ಕಣ್ಕಟ್ಟಿನ ಆಚರಣೆ

ಹೆಚ್ಚಿನ ಮೌಢ್ಯಗಳಿಗೆ ಅನುಕರಣೆಯೇ ಬಲವಾದ ಕಾರಣವಾಗಿದೆ

● ದೀಪಾ ಫಡ್ಕೆ

ಮೈಸೂರಿಗೆ ಇತ್ತೀಚೆಗೆ ಹೋಗಿದ್ದಾಗ, ಮನೆಮಕ್ಕಳೆಲ್ಲ ಬಲಮುರಿಗೆ ಹೋಗಬೇಕೆಂದು ಗಲಾಟೆ ಎಬ್ಬಿಸಿದರು. ಹಾಗೆ ಹೋದಾಗ ಅಲ್ಲಿ ಕಂಡದ್ದು ಬತ್ತಿದ್ದ ಬಲಮುರಿ ಮತ್ತು ದಡದ ತುಂಬ ಎಸೆದಿದ್ದ ಬಟ್ಟೆಗಳ ರಾಶಿ. ಕಾಲಿಡಲೂ ಆಗದಷ್ಟು ಪ್ರಮಾಣದಲ್ಲಿ ಸೀರೆ, ಷರ್ಟು, ಪಂಚೆಗಳನ್ನು ಎಸೆದುಹೋಗಿದ್ದ ಕಾರಣ, ಕಾವೇರಿಯ ದಡವನ್ನು ಬೇಸರ, ವಿಷಾದದಿಂದ ನೋಡುವಂತೆ ಆಯಿತು.

ದಾನವು ಪ್ರಾಯಶಃ ಎಲ್ಲ ಸಂಸ್ಕೃತಿ ಮತ್ತು ಮತಗಳಲ್ಲಿ ಇರುವ ಉನ್ನತ ಮೌಲ್ಯ. ವಸ್ತ್ರದಾನವೂ ಹಾಗೆಯೇ ಒಂದು ಸಂಪ್ರದಾಯವಾಗಿ ಬೆಳೆದುಬಂದಿದೆ. ಹಬ್ಬಹರಿದಿನಗಳಲ್ಲಿ ಕೊಡುವ ರವಿಕೆ ಖಣವೂ ಅದರದೇ ಒಂದು ಅಂಗ. ನದಿ ಮತ್ತು ನೀರಿನ ಮೂಲಗಳು ಮನುಕುಲವನ್ನು ಪಾಲಿಸುವ, ಬದುಕನ್ನು ಪೊರೆಯುವ ಆಧಾರಗಳು. ಈ ಕಾರಣದಿಂದಲೇ ಗಂಗೆ, ಯಮುನೆ ಸೇರಿದಂತೆ ಎಲ್ಲ ನದಿ, ನೀರಿನ ಮೂಲಗಳನ್ನು ಆರಾಧಿಸುತ್ತಾ ಗೌರವಿಸುತ್ತಾ ಅವನ್ನು ಬಳಸಿಕೊಂಡು ಬದುಕುವ ಅಭ್ಯಾಸ ನಮಗಾಗಿರುವುದು.

ನಾನು ಕೃಷಿ ಸಂಸ್ಕೃತಿಯಲ್ಲಿ ಹುಟ್ಟಿ ಬೆಳೆದವಳು. ಬೇಸಿಗೆಯಲ್ಲಿ ನಮ್ಮ ತೋಟಗಳಿಗೆ ನೀರು ಹನಿಸುವ ಉದ್ದೇಶದಿಂದ ನೂರಾರು ವರ್ಷಗಳಿಂದ ನದಿಗೆ 'ಕಟ್ಟ' ಎನ್ನುವ ಅಡ್ಡ ಕಟ್ಟ, ನೀರನ್ನು ಆ ಪ್ರದೇಶದ ಎಲ್ಲರ ತೋಟಗಳಿಗೆ ಬಳಸುತ್ತೇವೆ. ಹಾಗೆ ಅಡ್ಡ ಕಟ್ಟದ ನಂತರ ನಮ್ಮ ತೋಟದ ತೋಡುಗಳಿಗೆ ನೀರು ಸರಸರ ಹರಿದು ಬಂದು ತೋಡು ತುಂಬಿದ ಮೇಲೆ, ಮೊದಲು ನೀರನ್ನು ಪೂಜಿಸಿಯೇ ತೋಟಕ್ಕೆ ಬಳಸುವುದು. ಬದುಕಿಗೆ ಆಧಾರವಾಗುವ ನೀರಿಗೆ ದೈವಿಕ ಸ್ಪರ್ಶವನ್ನು ನೀಡಿದ್ದು ಅದರೆಡೆಗೆ ಒಂದು ಗೌರವವಿರಲಿ ಎಂದು. ಆಗ ಅದನ್ನು ಅಗತ್ಯಕ್ಕೆ ತಕ್ಕಷ್ಟೇ ಸದ್ಬಳಕೆ ಮಾಡುವಂತೆ ಆಗುತ್ತದೆ ಎನ್ನುವುದೇ ಅದರ ಹಿಂದಿನ ಉದ್ದೇಶ.

ಈ ಪದ್ಧತಿ ಎಲ್ಲ ಕಡೆಯೂ ಇದೆ. 'ಕೆರೆಯಂ ಕಟ್ಟಿಸು, ಬಾವಿಯಂ ಸವೆಸು' ಎನ್ನುವ ಮಾತೂ ಮನುಷ್ಯನ ಜೀವನಕ್ಕೆ ಅಗತ್ಯವಿರುವ ನೀರನ್ನು ಪೂರೈಕೆ ಮಾಡುವುದೇ ಅತ್ಯಂತ ದೊಡ್ಡ ದಾನ, ಧರ್ಮವೆಂದು ಅರಿತುಕೊಂಡದ್ದಕ್ಕೆ ನಿದರ್ಶನ.

ಮೊನ್ನೆಯಷ್ಟೇ ಕುಕ್ಕೆ ಸುಬ್ರಹ್ಮಣ್ಯದ ಸ್ನಾನ ಘಟ್ಟದಲ್ಲಿ ಸ್ವಚ್ಛತಾ ಕಾರ್ಯ ನಡೆದಾಗ, ಕುಮಾರ ಧಾರೆಯಲ್ಲಿ ತುಂಬಿದ್ದ ಬಟ್ಟೆಗಳ ರಾಶಿ, ದುಶ್ಶಾಸನ ಎಳೆದುಹಾಕಿದ್ದ ದ್ರೌಪದಿಯ ಸೀರೆಯ ರಾಶಿಯಂತೆ ಟ್ರ್ಯಾಕ್ಟರ್ ತುಂಬ ಇತ್ತು. ಇದು ಅತ್ಯಂತ ಹೇಯಕರ. ನದಿಯೊಂದರ ಅಸ್ತಿತ್ವದ ಮೇಲೇ ಮನುಷ್ಯ ಮಾಡಿದ ಅನಾಚಾರವಿದು. ನದಿಸ್ನಾನ, ಸಮುದ್ರಸ್ನಾನ ಎನ್ನುವುದು ಶಾಸ್ತ್ರಗಳಲ್ಲಿ ಪ್ರಸ್ತಾಪವಾಗಿರುವುದಿದೆ. ಆದರೆ ಹೀಗೆ ಸ್ನಾನದ ನಂತರ ಉಟ್ಟ ಬಟ್ಟೆಯನ್ನು ಅಥವಾ ಬೇರೆ ಬಟ್ಟೆಯನ್ನು ನದಿಗೆ ಎಸೆಯುವ ಪದ್ಧತಿಯನ್ನು ಯಾವ ಶಾಸ್ತ್ರದಲ್ಲೂ ಹೇಳಿಲ್ಲ.

ಇಂತಹ ಹೆಚ್ಚಿನ ಮೌಢ್ಯಗಳಿಗೆ ಅನುಕರಣೆಯು ಬಲವಾದ ಕಾರಣವಾಗಿದೆ. ಯಾವುದೋ ಕಾಲದ ಅಥವಾ ಯಾರೋ ಯಾವುದೋ ಕಾರಣಕ್ಕಾಗಿ ಮಾಡಿದ್ದ ಇಂತಹ ಕೆಲವು ಆಚಾರಗಳನ್ನು ನೋಡಿ ಅನುಕರಿಸುವುದು ವಿದ್ಯಾವಂತ ಸಮಾಜಕ್ಕೆ ಸಲ್ಲದು. ಈ ರೀತಿ ಬಟ್ಟೆಗಳನ್ನು ಎಸೆಯುವುದು ಖಂಡಿತ ವಸ್ತ್ರದಾನವಾಗದು. ಸಂಕಟವನ್ನು ಕಳೆದುಕೊಳ್ಳುವ ಭಾವದಿಂದೇನಾದರೂ ಮಾಡುತ್ತಿದ್ದರೆ ಅದೂ ಆಗದು. ಏಕೆಂದರೆ ಮನುಷ್ಯನ ಜೀವನಾಡಿಯಾದ ನದಿಗಳನ್ನು ಹೀಗೆ ಕಸದ ತೊಟ್ಟಿಗಳಾಗಿಸುವಷ್ಟು ದೊಡ್ಡ ಪಾಪ ಇನ್ನೊಂದಿಲ್ಲ. ಭಕ್ತಿಯ ಹೆಸರಿನಲ್ಲಿ ಇಂತಹ ಕಣ್ಕಟ್ಟಿನ ಆಚರಣೆಗಳು ನಡೆದರೆ ಅದು ಮೌಢ್ಯವೇ ವಿನಾ ನಿಜಭಕ್ತಿಯಾಗದು. ಭಕ್ತಿ ಎಂದರೆ ಅಂತಃಕರಣ. ಅದು ಎಂದಿಗೂ ಇನ್ನೊಂದನ್ನು ನೋಯಿಸದು.

ಪ್ರತಿ ಆಚಾರಕ್ಕೂ ಪರ್ಯಾಯ ಇದ್ದೇ ಇರುತ್ತದೆ. ನಮ್ಮ ಮಿತಿಯಲ್ಲಿ ಸಂಪ್ರದಾಯಗಳನ್ನು ಆಚರಿಸುವ ವಿವೇಕವನ್ನು ಆಧುನಿಕ ಶಿಕ್ಷಣ ನೀಡಿದೆ. ನಗರಗಳಲ್ಲಿ ಚೌತಿಯ ಗಣಪನನ್ನು ಪೂಜಿಸಿ ನಂತರ ಬಕೆಟ್ಟಿನಲ್ಲಿ ವಿಸರ್ಜಿಸಿ ಕೃತಾರ್ಥರಾಗುವವರು ನಾವೇ ಅಲ್ಲವೆ?! ಹಾಗೇ ಇಂಥ ಆಚಾರ ನಡೆಯಲೇಬೇಕು ಎನ್ನುವವರು ನದಿಯಲ್ಲಿ ಸ್ನಾನ ಮಾಡಿದ ನಂತರ ಬಟ್ಟೆಯನ್ನು ಕಸದ ಬುಟ್ಟಿಯಲ್ಲಿ ಅಥವಾ ಬೇರೆ ಕಡೆ ಹಾಕಬಹುದು ಇಲ್ಲವೇ ಬಟ್ಟೆ ಉತ್ತಮವಾಗಿದ್ದರೆ ಅಗತ್ಯವಿರುವವರಿಗೂ ನೀಡಬಹುದು.



ದಾನಕ್ಕೆ ನೂರಾರು ಮುಖಗಳಿವೆ. ಮುಖ್ಯವಾಗಿ ನಮ್ಮಲ್ಲಿ ಮೂಡಬೇಕಾಗಿರುವುದು ಕಾಳಜಿ. ನೀರು, ಆಹಾರದಂತಹ ಅಗತ್ಯಗಳನ್ನು ಹಾಳು ಮಾಡುವ ಯಾವುದೇ ಆಚರಣೆಯೂ ಯಾವ ಉತ್ತಮ ಫಲವನ್ನೂ ನೀಡದು ಎನ್ನುವ ಅತ್ಯಂತ ಮೂಲಭೂತ ಜ್ಞಾನ ನಮ್ಮದಾಗಬೇಕು.

ನದಿ ದಡದ ದೇವಾಲಯಗಳ ಆಡಳಿತ ಮಂಡಳಿ ಇದರ ಬಗ್ಗೆ ಗಂಭೀರವಾಗಿ ಚಿಂತನೆ ನಡೆಸಬೇಕು. ದೇವಾಲಯಗಳು, ನದಿತೀರಗಳು ಪಾಪ ಕಳೆದುಕೊಳ್ಳುವ ಕೇಂದ್ರಗಳಲ್ಲ. ಅವು ಮನಸ್ಸಿಗೆ ಸಾಂತ್ವನ ನೀಡುವ ಸ್ಥಳಗಳು. ಸಾಂತ್ವನವೂ ಪ್ರಕೃತಿಗೆ, ಮುಖ್ಯವಾಗಿ ನಮ್ಮದೇ ಬದುಕಿಗೆ ಮಾರಕವಾಗಬಾರದು ಅಲ್ಲವೇ? ನೀರು, ಗಾಳಿ ಕಲುಷಿತವಾದರೆ ನಮ್ಮ ಬದುಕೂ ಸಮಾಪನವಾದಂತೆಯೇ. ನದಿದಂಡೆಗಳಲ್ಲಿ ಈ ರೀತಿ ವಸ್ತ್ರ ಎಸೆಯಬಾರದೆನ್ನುವ ಸೂಚನಾ ಫಲಕಗಳನ್ನು ಹಾಕಬೇಕು. ನಿಯಮ ಉಲ್ಲಂಘಿಸಿದವರಿಗೆ ದಂಡ ವಿಧಿಸುವ ಎಚ್ಚರಿಕೆಯನ್ನೂ ಸರ್ಕಾರ ನೀಡಬೇಕು.

ಪ್ರತಿ ವಿಷಯ ವಾಟ್ಸ್‌ಆ್ಯಪ್‌ನಲ್ಲಿ ಮಿಂಚಿನ ವೇಗದಲ್ಲಿ ಸಂಚರಿಸುವ ಈ ಹೊತ್ತಿನಲ್ಲಿ, ಇಂಥ ಸಂದೇಶಗಳು ತಲುಪಿದರೆ ಸಣ್ಣ ಬದಲಾವಣೆ ಮೂಡಬಹುದೇನೊ.

ವಾಚಕರ ವಾಣಿ

ಸಮ್ಮೇಳನಾಧ್ಯಕ್ಷರ ಆಯ್ಕೆ: ಸರ್ಕಾರದ ಪಾತ್ರವೇಕೆ?

ಸಾಂಸ್ಕೃತಿಕ ಅಕಾಡೆಮಿಗಳು ಮತ್ತು ಪ್ರಾಧಿಕಾರಗಳು ಸರ್ಕಾರದ ಹಂಗಿನಲ್ಲಿರಬೇಕು ಎಂಬರ್ಥದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಹೇಳಿಕೆಯು ಸಾಹಿತ್ಯ, ಸಾಂಸ್ಕೃತಿಕ ವಲಯದಲ್ಲಿ ಬಹಳಷ್ಟು ವಾದ ವಿವಾದಗಳನ್ನು ಹುಟ್ಟುಹಾಕಿರುವುದು ಸರಿಯಷ್ಟೇ. ಈ ಸಂದರ್ಭದಲ್ಲಿ, ಮಂಡ್ಯದಲ್ಲಿ ನಡೆಯಲಿರುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರ ಆಯ್ಕೆ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನೀಡಿರುವ ಹೇಳಿಕೆಯು (ಪ್ರ.ವಾ., ಜೂನ್ 26) ಶಿವಕುಮಾರ್ ಅವರ ಧೋರಣೆಯನ್ನೇ ಸಮರ್ಥಿಸುವಂತಿದೆ. ಸಮ್ಮೇಳನದ ಅಧ್ಯಕ್ಷರ ಆಯ್ಕೆ ಬಾಕಿ ಇದ್ದು, ಜಿಲ್ಲಾಡಳಿತ ಮತ್ತು ಸಾಹಿತ್ಯ ಪರಿಷತ್ತು ಸಾಹಿತಿಗಳ ಪಟ್ಟಿಯನ್ನು ಒದಗಿಸಿದ ನಂತರ ಚರ್ಚಿಸಿ ಹೆಸರನ್ನು ಅಂತಿಮಗೊಳಿಸಲಾಗುವುದು ಎಂದು ಅವರು ಹೇಳಿರುವುದನ್ನು ನೋಡಿದರೆ, ಅಧ್ಯಕ್ಷರ ಆಯ್ಕೆಯಲ್ಲಿ ಪರೋಕ್ಷವಾಗಿ ಸರ್ಕಾರದ ಪಾತ್ರವಿದೆ ಎಂದಂತಾಯಿತು.

ಕಸಾಪ ನಿಯಮಾವಳಿ ಅನುಸಾರ, ಅಧ್ಯಕ್ಷರನ್ನು ಆಯ್ಕೆ ಮಾಡುವುದು ಅದರ ಕಾರ್ಯಕಾರಿ ಮಂಡಳಿ. ಇದರಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳ ಚುನಾಯಿತ ಅಧ್ಯಕ್ಷರು, ಹೊರನಾಡ ಕನ್ನಡಿಗರು, ವಿಶ್ವವಿದ್ಯಾಲಯ ಹಾಗೂ ಸರ್ಕಾರದ ನಾಮನಿರ್ದೇಶಿತ ಸದಸ್ಯರು ಇರುತ್ತಾರೆ. ಬಹುತೇಕ ಸಂದರ್ಭಗಳಲ್ಲಿ ಆಯ್ಕೆಯು ಸರ್ವಾನುಮತದಿಂದ ಕೂಡಿರುತ್ತದೆ. ಆದರೆ ಒಬ್ಬರಿಗಿಂತ ಹೆಚ್ಚು ಜನರ ಹೆಸರುಗಳು ಪ್ರಸ್ತಾಪವಾದರೆ ಗುಪ್ತ ಮತದಾನದ ಮೂಲಕವೂ ಆಯ್ಕೆ ನಡೆಯುತ್ತದೆ. ಒಟ್ಟಿನಲ್ಲಿ ಸಮ್ಮೇಳನದ ಅಧ್ಯಕ್ಷರನ್ನು ಆಯ್ಕೆ ಮಾಡುವುದು ಕಸಾಪ ಕಾರ್ಯಕಾರಿ ಮಂಡಳಿಯೇ ವಿನಾ ಸರ್ಕಾರವಲ್ಲ. ಹೀಗಿರುವಾಗ, ಮುಖ್ಯಮಂತ್ರಿಯವರ ಹೇಳಿಕೆ ಅಚ್ಚರಿಯ ಸಂಗತಿ. ಇದು ಸಾಂಸ್ಕೃತಿಕ ಸಂಸ್ಥೆಗಳ ಮೇಲೆ ತನ್ನ ಪಾರಮ್ಯವನ್ನು ಸಾಧಿಸಲು ಸರ್ಕಾರದ ಹುನ್ನಾರವೇ?

ಎಸ್.ಬಿ.ರಂಗನಾಥ್, ದಾವಣಗೆರೆ

'ಹೆಚ್ಚು'ವರಿ

ಕುಲುಕುತ್ತ ಬಳುಕುತ್ತ
ಮನೆಮನೆಗೆ ಬೆಳ್ಳಂಬೆಳಗ್ಗೆ
ಬಿರಬಿರನೆ ಬರುತ್ತಿದ್ದ
ಶ್ವೇತಸುಂದರಿ ನಂದಿನಿ
ಈಗ ಬರುತ್ತಿರುವೆ
ಮತ್ತಷ್ಟು ಮೈದುಂಬಿ...
50 ಮಿಲಿ ಹೆಚ್ಚು ಹೆಚ್ಚಾಗಿ!
ಜತೆಗೇ ಏರಿಸಿಕೊಂಡು ಹೆಚ್ಚು ದರ
ಅದಕ್ಕೇ ನಿನ್ನ ಹೊಸ ವರಸೆ ಕಂಡು
ಗ್ರಾಹಕರಿಗಾಗಿದೆಯಂತೆ ಬಲು ಬೇಸರ!

ಮ.ಗು.ಬಸವಣ್ಣ, ಮೈಸೂರು

ಮಾನವ ಹಕ್ಕು ಕಾರ್ಯಕರ್ತರಲ್ಲಿ ಸಂತಸ

ಹಲವು ವರ್ಷಗಳ ಸುದೀರ್ಘ ಕಾನೂನು ಹೋರಾಟದ ನಂತರ, ವಿಕಿಲೀಕ್ಸ್ ಸಂಸ್ಥಾಪಕ ಜೂಲಿಯನ್ ಅಸ್ಸಾಂಜೆ ಅವರನ್ನು ಲಂಡನ್‌ನ ಜೈಲಿನಿಂದ ಬಿಡುಗಡೆಗೊಳಿಸಿರುವುದು ಜಗತ್ತಿನಾದ್ಯಂತ ಪತ್ರಿಕಾ ಸ್ವಾತಂತ್ರ್ಯ ಹಾಗೂ ಮಾನವ ಹಕ್ಕುಗಳ ಕಾರ್ಯಕರ್ತರಲ್ಲಿ ಸಂತಸ ಮೂಡಿಸಿದೆ. ಅದೇ ರೀತಿ ಭಾರತದಲ್ಲಿಯೂ ಹಲವಾರು ಸಾಮಾಜಿಕ ಕಾರ್ಯಕರ್ತರು ಹಾಗೂ ಚಿಂತಕರು ಕೆಲವು ವರ್ಷಗಳಿಂದ ಜೈಲಿನಲ್ಲಿಯೇ ಕೊಳೆಯುತ್ತಿರುವುದು ವಿಷಾದದ ಸಂಗತಿ. ನ್ಯಾಯಾಲಯಗಳಲ್ಲಿ ವಿಚಾರಣೆ ತಡವಾಗುತ್ತಿರುವ ಪ್ರಕರಣಗಳಲ್ಲಿ, ವಿಚಾರಣೆ ಆದಷ್ಟು ಶೀಘ್ರವಾಗಿ ನಡೆದು, ಎಲ್ಲಾ ಹೋರಾಟಗಾರರು ಜೈಲಿನಿಂದ ಬಿಡುಗಡೆಯಾಗಿ ಬರಲಿ ಎಂಬುದು ಸ್ವಾತಂತ್ರ್ಯಪ್ರೇಮಿಗಳ ಬಯಕೆಯಾಗಿದೆ.

ಭೀಮನಗೌಡ ಕಾಶಿರೆಡ್ಡಿ, ಬೆಂಗಳೂರು

'ಪಾನ'ಪ್ರಿಯರ ಅಳಲು!

ಪೆಟ್ರೋಲ್, ಡೀಸೆಲ್ ಬೆಲೆ ಏರಿಸಿದ್ದಕ್ಕೆ ವಿರೋಧ ಪಕ್ಷದವರು ಬೀದಿಗಿಳಿದು ಪ್ರತಿಭಟಿಸುತ್ತಾರೆ. ಇನ್ನು ಹಾಲಿನ ಬೆಲೆ ಏರಿಕೆ ಬಗ್ಗೆಯೂ ಪ್ರತಿಭಟನೆಯಂತೆ. ಆದರೆ ಮದ್ಯದ ದರ ಏರಿಸಿದ್ದಕ್ಕೆ ಯಾವತ್ತಾದರೂ ಪ್ರತಿಭಟನೆ ನೋಡಿದ್ದೀರಾ? ಇಲ್ಲವೇ ಇಲ್ಲ! ಕೊನೇಪಕ್ಷ ಮಾಧ್ಯಮಗಳಲ್ಲೂ ಹೇಳಿಕೆಯನ್ನು ಕೊಡಲಾರರು. ನಮ್ಮ ಅಳಲನ್ನು ಕೇಳುವವರಾರು? ಅದೇ ಮಂಡೆ ಬಿಸಿಯಲ್ಲಿ ವಸಿ ಹೆಚ್ಚೇ ತಗೋತೀವಿ! ಇದು ನಮ್ ಪ್ರಾಬ್ಲಂ!

ನಗರ ಗುರುದೇವ್ ಭಂಡಾರ್ಕರ್, ಹೊಸನಗರ

ಹೆಚ್ಚು ಹಾಲು, ಹೆಚ್ಚು ಹಣ: ಯಾಕಾಗಿ?

ರಾಜ್ಯದಲ್ಲಿ ಬುಧವಾರದಿಂದ ಗ್ರಾಹಕರು ಅಗತ್ಯಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಹಾಲನ್ನು ಕೊಳ್ಳಬೇಕಾದ ಪ್ರಸಂಗ ಬಂದಿದೆ. ಹಾಲಿನ ದರವನ್ನು ಹೆಚ್ಚಿಸಿಲ್ಲವೆಂದು ಸರ್ಕಾರ ಹೇಳುತ್ತದೆ. ಇದುವರೆಗೂ ಅರ್ಧ ಲೀಟರ್ ಹೋಮೋಜಿನೈಸ್ಡ್ ಹಸುವಿನ ಹಾಲಿನ ಬೆಲೆ ₹ 24 ಇತ್ತು. ಈಗ, ಇದನ್ನು 550 ಎಂಎಲ್ ಹಾಲಿನ ಪ್ಯಾಕೆಟ್ ಮಾಡಿ ಇದಕ್ಕೆ ₹ 26 ನಿಗದಿಗೊಳಿಸಲಾಗಿದೆ. ಇನ್ನುಮುಂದೆ ಗ್ರಾಹಕರಿಗೆ 550 ಎಂಎಲ್ ಪ್ಯಾಕೆಟ್ ಮಾತ್ರ ಲಭ್ಯ. ಹಾಲಿನ ಪ್ರಮಾಣವನ್ನು 50 ಎಂಎಲ್‌ನಷ್ಟು ಹೆಚ್ಚು ಮಾಡಿದ್ದೇವೆಯೇ ವಿನಾ ದರವನ್ನು ಹೆಚ್ಚಿಸಿಲ್ಲ ಎಂದು ಸರ್ಕಾರ ಹೇಳಿರುವುದರಲ್ಲಿ ಸತ್ಯವಿದೆ. ಏಕೆಂದರೆ, ಅರ್ಧ ಲೀಟರ್ ಹಾಲಿನ ಪ್ಯಾಕೆಟ್‌ಗೆ ಕೊಡುತ್ತಿದ್ದ ₹ 24ರ ದರದಂತೆಯೇ ಲೆಕ್ಕ ಹಾಕಿದರೆ, 50 ಎಂಎಲ್‌ಗೆ ₹ 2.40 ಆಗುತ್ತದೆ. ಹೆಚ್ಚಿಸಿರುವುದು ₹ 2 ಮಾತ್ರ. ಆದರೆ, ವಸ್ತುಸ್ಥಿತಿ ಇದಲ್ಲ!

ಅರ್ಧ ಲೀಟರ್ ಹಾಲಿಗಿಂತ ಹೆಚ್ಚಿನ ಅಗತ್ಯ ಇಲ್ಲದವರೂ ಈಗ 550 ಎಂಎಲ್ ಪ್ಯಾಕೆಟ್ಟನ್ನು ಕಡ್ಡಾಯವಾಗಿ ಕೊಳ್ಳಬೇಕು. ಅಂದರೆ ಈಗ ಇವರು ತಿಂಗಳಿಗೆ ಹಾಲಿನ ಬಾಬ್ತಿಗೆ ಹೆಚ್ಚುವರಿ ಹಣವನ್ನು ಮೀಸಲಿಡಬೇಕು! ಹಾಲು ಉತ್ಪಾದನೆ ಹೆಚ್ಚಾಗಿ, ಹೆಚ್ಚು ಹೆಚ್ಚು ಪ್ರಮಾಣದಲ್ಲಿ ಹಾಲನ್ನು ರೈತರಿಂದ ಅನಿವಾರ್ಯವಾಗಿ ಕೊಳ್ಳಬೇಕಾಗಿರುವುರಿಂದ ಕೆಎಂಎಫ್‌ಗೆ ಆಗುವ ಹೆಚ್ಚುವರಿ ಹೊರೆಯನ್ನು ಗ್ರಾಹಕರಿಗೆ ದಾಟಿಸುವ ಉಪಾಯ ಇದಾಗಿದೆಯೇ ಎಂಬ ಪ್ರಶ್ನೆ ಮೂಡುವುದು ಸಹಜ. ಸರ್ಕಾರ ದರ ಹೆಚ್ಚಿಸಿಲ್ಲ ಎಂಬುದೇನೋ ನಿಜ. ಆದರೆ ಗ್ರಾಹಕರು ಅನಗತ್ಯವಾಗಿ ಹೆಚ್ಚು ಹಾಲು ಕೊಳ್ಳುವಂತಾಗಿ ಹೆಚ್ಚು ಹಣ ತೆರುವಂತಾಗಿದೆ ಎನ್ನುವುದು ಸತ್ಯವಲ್ಲವೇ?

ಸಾಮಗ ದತ್ತಾತ್ರಿ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ವಿಶ್ವಕಪ್ ಅಂಗಳದ ಪ್ರೇರಣೆಯ ಕತೆಗಳು

ವೆಸ್ಟ್ ಇಂಡೀಸ್–ಅಮೆರಿಕದ ಜಂಟಿ ಆತಿಥ್ಯದಲ್ಲಿ ನಡೆಯುತ್ತಿರುವ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯು ಈಗ ಪ್ರಮುಖ ಘಟ್ಟಕ್ಕೆ ಬಂದು ನಿಂತಿದೆ. ಗುರುವಾರ ಸೆಮಿಫೈನಲ್ ಪಂದ್ಯಗಳು ನಡೆಯಲಿವೆ. ಕಳೆದೊಂದು ದಶಕದಿಂದ ಅಚ್ಚರಿಯ ಫಲಿತಾಂಶಗಳನ್ನು ನೀಡುತ್ತಿರುವ ಅಫ್ಗಾನಿಸ್ತಾನ ಈ ಬಾರಿ ಮತ್ತೊಂದು ಮೈಲಿಗಲ್ಲು ಸ್ಥಾಪಿಸಿದೆ. ಅಫ್ಗಾನಿಸ್ತಾನವಷ್ಟೇ ಅಲ್ಲ, ಕ್ರಿಕೆಟ್ ಲೋಕಕ್ಕೆ ಈಗಷ್ಟೇ ತೆರೆದುಕೊಳ್ಳುತ್ತಿರುವ, ಯುಗಾಂಡ, ನೇಪಾಳ, ಪಪುವಾ ನ್ಯೂಗಿನಿ, ಅಮೆರಿಕ, ಕೆನಡಾದಂತಹ ದೇಶಗಳ ಆಟಗಾರರು, ಭಾರತದ ರಿಷಭ್ ಪಂತ್ ಅವರ ಛಲಗಾರಿಕೆಯು ಯುವ ಸಮುದಾಯಕ್ಕೆ ಸ್ಫೂರ್ತಿಯ ಕಥೆಗಳಾಗಿವೆ

• ಗಿರೀಶ ದೊಡ್ಡಮನಿ

ರಶೀದ್ ಖಾನ್ ಹುಟ್ಟಿದ್ದು ಪೂರ್ವ ಅಫ್ಗಾನಿಸ್ತಾನದ ನಂಗರ್‌ಹಾರ್ ಪಟ್ಟಣದಲ್ಲಿ. ಸಂಘರ್ಷ ಪೀಡಿತವಾದ ಅಫ್ಗಾನಿಸ್ತಾನದಿಂದ ಕುಟುಂಬವು ಪಾಕಿಸ್ತಾನಕ್ಕೆ ವಲಸೆ ಹೋಯಿತು. ಕೆಲವು ವರ್ಷಗಳವರೆಗೆ ಅಲ್ಲಿಯ ನಿರಾಶ್ರಿತರ ಶಿಬಿರದಲ್ಲಿ ವಾಸವಿತ್ತು. ಸಂಘರ್ಷ ಮುಗಿದು ವಾತಾವರಣ ತಿಳಿಯಾದ ನಂತರ ತಾಯ್ನಾಡಿಗೆ ರಶೀದ್ ಅವರ ಕುಟುಂಬ ಮರಳಿತ್ತು. ಶಾಲೆಗೆ ಹೋಗಲು ಆರಂಭಿಸಿದ ರಶೀದ್ ಕ್ರಿಕೆಟ್ ಚೆಂಡು ಕೈಗೆ ತೆಗೆದುಕೊಂಡರು. ಎಳೆಯ ಬೆರಳುಗಳಲ್ಲಿ ಸ್ಪಿನ್ ಮಾಡುವ ಕಲೆಯನ್ನು ಕರಗತ ಮಾಡಿಕೊಂಡರು. ಸ್ಪಿನ್ ಬೌಲಿಂಗ್ ಅವರ ಜೀವನವನ್ನಷ್ಟೇ ಅಲ್ಲ; ಅಫ್ಗಾನಿಸ್ತಾನದ ಯುವಜನತೆಯ ಮನಸ್ಸನ್ನೂ ಪರಿವರ್ತಿಸಿತು.

ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಮಿಂಚಿದ ಅವರು ಭಾರತೀಯ ನೆಲದಲ್ಲಿಯೂ ಅಭಿಮಾನಿ ಬಳಗವನ್ನು ಸಂಪಾದಿಸಿದರು. ಅಷ್ಟೇ ಅಲ್ಲ; ತಮ್ಮ ದೇಶದ ಯುವ ಕ್ರಿಕೆಟಿಗರಿಗೆ 'ಗುರು'ವಾಗಿ, ಸ್ನೇಹಿತನಾಗಿ ತಂಡ ಕಟ್ಟಿದರು. ಇದೀಗ ಅವರ ನಾಯಕತ್ವದ ತಂಡವು ಟಿ20 ವಿಶ್ವಕಪ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿದೆ. 25 ವರ್ಷದ ರಶೀದ್ ಈಗ ಎಲ್ಲರ ಕಣ್ಮಣಿಯಾಗಿದ್ದಾರೆ. ಅವರೊಂದಿಗೆ ಆಡುತ್ತಿರುವ ಗುಲ್ಬದೀನ್ ನೈಬ್, ನವೀನ್ ಉಲ್ ಹಕ್, ಇಬ್ರಾಹಿಂ ಝುದ್ರಾನ್, ಫಜಲ್‌ಹಕ್ ಫಾರೂಕಿ, ರೆಹಮಾನುಲ್ಲಾ ಗುರ್ಬಾಜ್ ಅವರೂ ಈಗ ಅಫ್ಗಾನ್ ಯುವಜನರ ನೆಚ್ಚಿನ ಆಟಗಾರರಾಗಿದ್ದಾರೆ.

ಎರಡು ದಿನಗಳ ಹಿಂದೆ ಕೆರಿಬಿಯನ್ ದ್ವೀಪದ ಕ್ರೀಡಾಂಗಣದಲ್ಲಿ ಬಾಂಗ್ಲಾದೇಶದ ವಿರುದ್ಧ ಗೆದ್ದ ಅಫ್ಗಾನ್ ತಂಡವು ವಿಶ್ವಕಪ್ ಟೂರ್ನಿಯ ನಾಲ್ಕರ ಘಟ್ಟಕ್ಕೆ ಲಗ್ಗೆ ಹಾಕಿತು. ಇತ್ತ ಕಾಬೂಲ್ ನಗರದ ರಸ್ತೆ, ಚೌಕಗಳಲ್ಲಿ ಸಾವಿರಾರು ಜನರು ಕುಣಿದು ಕುಪ್ಪಳಿಸಿದರು. ಹಲವು ವರ್ಷಗಳಿಂದ ಯುದ್ಧ, ಹಿಂಸೆ, ರಾಜಕೀಯ ಅಸ್ಥಿರತೆಗಳನ್ನೇ ಹಾಸಿ ಹೊದ್ದುಕೊಂಡ ದೇಶದಲ್ಲಿ ಇಂತಹುದೊಂದು ಸಂಭ್ರಮದ ಹೊನಲು ಹರಿಯಲು ಕ್ರಿಕೆಟ್ ಕಾರಣವಾಗಿದೆ.

2010ರಲ್ಲಿ ಮೊದಲ ಅಂತರರಾಷ್ಟ್ರೀಯ ಟಿ20 ಪಂದ್ಯ ಆಡಿದ್ದ ಅಫ್ಗಾನ್ ತಂಡವು 2017ರಲ್ಲಿ ಟೆಸ್ಟ್ ಕ್ರಿಕೆಟ್ ಮಾನ್ಯತೆ ಗಳಿಸಿತ್ತು. ಕಳೆದ 14 ವರ್ಷಗಳಲ್ಲಿ ಈ ತಂಡವು ಆಡಿದ ವಿಶ್ವಕಪ್ ಟೂರ್ನಿಗಳಲ್ಲಿ ಗಮನಾರ್ಹ ಸಾಧನೆ ಮಾಡುತ್ತ ಒಂದೊಂದೇ ಮೆಟ್ಟಿಲು ಏರಿದೆ. ಅಮೆರಿಕ ಮತ್ತು ವೆಸ್ಟ್ ಇಂಡೀಸ್ ಜಂಟಿ ಆತಿಥ್ಯದಲ್ಲಿ ನಡೆಯುತ್ತಿರುವ ಟಿ20 ವಿಶ್ವಕಪ್ ಟೂರ್ನಿಯ ಗುಂಪು ಹಂತದಲ್ಲಿ ನ್ಯೂಜಿಲೆಂಡ್, ಸೂಪರ್ 8ರ ಹಂತದಲ್ಲಿ ಆಸ್ಟ್ರೇಲಿಯಾದಂತಹ ಬಲಾಢ್ಯರನ್ನು ಸೋಲಿಸಿತು. ಇದೀಗ ದಕ್ಷಿಣ ಆಫ್ರಿಕಾವನ್ನು ನಾಲ್ಕರ ಘಟ್ಟದಲ್ಲಿ ಎದುರಿಸಲಿದೆ.

ಅಫ್ಗಾನಿಸ್ತಾನದಲ್ಲಿ ಟೆನಿಸ್ ಬಾಲ್ ಕ್ರಿಕೆಟ್ ಆಡುವುದಕ್ಕೂ ವ್ಯವಸ್ಥೆ ಇರದ ಕಾಲದಲ್ಲಿ ಈ ಹುಡುಗರು ಕ್ರಿಕೆಟಿಗರಾಗುವ ಕನಸು ಕಂಡವರು. ಆ ಸಂದರ್ಭದಲ್ಲಿ ಇಲ್ಲಿಯ ಪ್ರತಿಭಾನ್ವಿತ ಆಟಗಾರರಿಗೆ ಆಶ್ರಯ ಕೊಟ್ಟಿದ್ದು ಭಾರತ. ಡೆಹ್ರಾಡೂನ್ ಮತ್ತು ಗ್ರೇಟರ್ ನೋಯ್ಡಾ, ಅಫ್ಗಾನಿಸ್ತಾನ ತಂಡಕ್ಕೆ ತವರು ತಾಣಗಳಾಗಿದ್ದವು. ಭಾರತದ ಲಾಲ್‌ಚಂದ್ ರಜಪೂತ್, ಮನೋಜ್ ಪ್ರಭಾಕರ್ ಮತ್ತು ಅಜಯ್ ಜಡೇಜ ಅವರು ತಂಡಕ್ಕೆ ಮಾರ್ಗದರ್ಶನ ನೀಡಿದರು. ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ಎಲ್ಲ ರೀತಿಯಲ್ಲಿಯೂ ಬೆಂಬಲಿಸಿದೆ.

ಈ ಬಾರಿ ಅಫ್ಗಾನಿಸ್ತಾನ ಚಾಂಪಿಯನ್ ಆಗುವುದೋ ಇಲ್ಲವೋ ಗೊತ್ತಿಲ್ಲ. ಆದರೆ, ಒಂದು ಹಿಂಸಾಪೀಡಿತ ದೇಶದ ಜನರ ಮನಃಸ್ಥಿತಿಯನ್ನು ಬದಲಿಸಿ, ಭರವಸೆಯ ಬೆಳಕಿನೆಡೆಗೆ ಕೈಹಿಡಿದು ನಡೆಸುವ ಶಕ್ತಿ ಕ್ರೀಡೆಗೆ ಇದೆ ಎಂಬುದನ್ನು ಅಫ್ಗಾನಿಸ್ತಾನ ತೋರಿಸಿಕೊಟ್ಟಿದೆ.

'ಕ್ರೀಡೆಗೆ ವಿಶ್ವವನ್ನು ಬದಲಿಸುವ ಶಕ್ತಿ ಇದೆ. ಪ್ರೇರಣೆ ನೀಡುವ ಸಾಮರ್ಥ್ಯವೂ ಇದೆ' ಎಂದು ದಕ್ಷಿಣ ಆಫ್ರಿಕಾದ ನಾಯಕ ನೆಲ್ಸನ್ ಮಂಡೇಲಾ ದಶಕಗಳ ಹಿಂದೆ ಹೇಳಿದ ಮಾತು ಅಫ್ಗಾನಿಸ್ತಾನದಲ್ಲಿಯೂ ದಿಟವಾಗಿದೆ.

ಈ ಬಾರಿಯ ವಿಶ್ವಕಪ್ ಟೂರ್ನಿಯಲ್ಲಿ ಅಫ್ಗಾನಿಸ್ತಾನದ್ದು ಒಂದು ಯಶೋಗಾಥೆ. ಅದೇ ರೀತಿ ಬೇರೆ ಬೇರೆ ತಂಡಗಳಲ್ಲಿ ಇಣುಕಿ ನೋಡಿದರೆ ಸ್ಫೂರ್ತಿಯ ಇನ್ನಷ್ಟು ಕತೆಗಳು ಹೃದಯದ ಕದ ತಟ್ಟುತ್ತವೆ.



ರಶೀದ್ ಖಾನ್ (ಅಫ್ಗಾನಿಸ್ತಾನ)

ಬೌಲಿಂಗ್
ಪಂದ್ಯ 7
ಒಟ್ಟು ವಿಕೆಟ್ 14
ಶ್ರೇಷ್ಠ 17ಕ್ಕೆ 4
ಸರಾಸರಿ 12.21

ಬ್ಯಾಟಿಂಗ್
ಒಟ್ಟು ರನ್ 49
ಗರಿಷ್ಠ 19*

ಪೂರಕ ಮಾಹಿತಿ: ಪ್ರದೀಶ್ ಎಚ್. ಮರೋಡಿ

ಐಟಿ ಉದ್ಯೋಗಿಗಳ ಛಲ

ಭಾರತ, ಪಾಕಿಸ್ತಾನ ಮತ್ತಿತರ ದೇಶಗಳಿಂದ ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಕೆಲಸ ಮಾಡಲು ಅಮೆರಿಕ, ಕೆನಡಾ ದೇಶಗಳಿಗೆ ವಲಸೆ ಹೋದ ಹುಡುಗರು ಈಗ ಕ್ರಿಕೆಟ್ ತಾರೆಯರಾಗಿ ಹೊರಹೊಮ್ಮಿದ್ದಾರೆ.

ಅಮೆರಿಕ ತಂಡದಲ್ಲಿರುವ ಸೌರಭ್ ನೇತ್ರಾವಳ್ಕರ್ ಅವರು ಗುಂಪು ಹಂತದಲ್ಲಿ ಪಾಕಿಸ್ತಾನದ ಎದುರು ಗೆಲುವಿನ ರೂವಾರಿಯಾದರು. ಇದೇ ತಂಡದಲ್ಲಿರುವ ಕನ್ನಡಿಗ ನಾಸ್ತುಷ್ ಕೆಂಜಿಗೆ, ಮೊನಾಂಕ್ ಪಟೇಲ್, ಪಾಕಿಸ್ತಾನದ ಅಲಿ ಖಾನ್, ಕೆನಡಾ ತಂಡದಲ್ಲಿರುವ ಕನ್ನಡಿಗ ಶ್ರೇಯಸ್ ಮೊವಾ ಹೀಗೆ ದೊಡ್ಡ ಪಟ್ಟಿಯೇ ಬೆಳೆಯುತ್ತದೆ. ಇವರೆಲ್ಲರ ಶ್ರಮದಿಂದಾಗಿ ಈಗ ಅಮೆರಿಕದಲ್ಲಿಯೂ ಕ್ರಿಕೆಟ್ ಗೀಳು ಸೃಷ್ಟಿಯಾಗಿದೆ. ಇಲ್ಲಿ ಭಾರತ ಮತ್ತು ಪಾಕಿಸ್ತಾನ ತಂಡಗಳು ಸಾಂಪ್ರದಾಯಿಕ ಎದುರಾಳಿಗಳಾಗಿಯೇ ಉಳಿದಿವೆ. ಆದರೆ ಅಮೆರಿಕ ತಂಡದಲ್ಲಿ ಉಭಯ ದೇಶಗಳ ಆಟಗಾರರು ಸೇರಿಕೊಂಡು ಪಾಕಿಸ್ತಾನ ತಂಡವನ್ನು ಸೋಲಿಸಿದರು. ಭಾರತ ತಂಡಕ್ಕೆ ಉತ್ತಮ ಪೈಪೋಟಿಯೊಡ್ಡಿದರು. ಎಲ್ಲಕ್ಕಿಂತ ಮಿಗಿಲಾಗಿ ಕ್ರೀಡೆಯ ಮೂಲತತ್ವವಾದ ಸೌಹಾರ್ದ ಮೆರೆದರು.



ಸೌರಭ್ ನೇತ್ರಾವಳ್ಕರ್

ಕೊಳೆಗೇರಿಯಿಂದ ಹೊರಹೊಮ್ಮಿದ ತಾರೆ

ಯುಗಾಂಡ ದೇಶದ ರಾಜಧಾನಿ ಕಂಪಾಲಾದ ಹೊರವಲಯದಲ್ಲಿರುವ ಕೊಳೆಗೇರಿ ನುಗುರು. ಡ್ರಗ್ಸ್, ಗೂಂಡಾಗಿರಿ ಮತ್ತಿತರ ಕಾನೂನುಬಾಹಿರ ಚಟುವಟಿಕೆಗಳ ತಾಣ. ಅಂತಹದೊಂದು ತಾಣದಿಂದ ಹೊರಹೊಮ್ಮಿದ ಪ್ರತಿಭೆ ಜುಮಾ ಮಿಯಾಗಿ. 21 ವರ್ಷದ ಬಲಗೈ ವೇಗಿ ಮಿಯಾಗಿಯು ಬಡ ಕುಟುಂಬದ ಹುಡುಗ. ಈಗ ಅದೇ ಪ್ರದೇಶದ ಹಲವಾರು ಹುಡುಗರಿಗೆ ಸ್ಫೂರ್ತಿಯ ಸೆಲೆಯಾಗಿದ್ದಾರೆ. ಯುಗಾಂಡ ತಂಡವು ವಿಶ್ವಕಪ್ ಟೂರ್ನಿಗೆ ಅರ್ಹತೆ ಗಿಟ್ಟಿಸುವಲ್ಲಿ ಈ ಹುಡುಗನ ಪಾತ್ರವೂ ಇತ್ತು. ತಂಡದಲ್ಲಿರುವ ಬಹುತೇಕ ಸ್ಥಳೀಯರು ಇಂತಹ ಹಿನ್ನೆಲೆಯಿಂದ ಬಂದವರು. ಕಾನೂನುಬಾಹಿರ ಚಟುವಟಿಕೆಗಳಲ್ಲಿದ್ದ ಹುಡುಗರ ಜೀವನದ ದಿಕ್ಕು ಬದಲಿಸುವಲ್ಲಿ ಭಾರತದ ಕಾಣಿಕೆ ಇಲ್ಲಿಯೂ ಇದೆ. ಭಾರತದ ಕೋಚ್ ಅಭಯ್ ಶರ್ಮಾ ಅವರು ಈ ಎಲ್ಲ ಹುಡುಗರನ್ನು ಒಂದೆಡೆ ಸೇರಿಸಿ ತಂಡವಾಗಿ ಬೆಳೆಸಿದ್ದು ಕೂಡ ರೋಚಕ ಕತೆಯೇ ಸರಿ.

ಯುಗಾಂಡ ತಂಡದ ಜುಮಾ ಮಿಯಾಗಿ (ಎಡದಿಂದ ಎರಡನೆಯವರು) ಮತ್ತು ಸಹ ಆಟಗಾರರು ನ್ಯೂಜಿಲೆಂಡ್ ಬ್ಯಾಟರ್‌ಗಳನ್ನು ಅಭಿನಂದಿಸಿದರು –ಎಎಫ್‌ಪಿ ಚಿತ್ರ



ದಿಟ್ಟೆದೆಯ ಹುಡುಗ ಪಂತ್

ಒಂದೂವರೆ ವರ್ಷದ ಹಿಂದೆ ಭೀಕರ ರಸ್ತೆ ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡಿದ್ದ ರಿಷಭ್ ಪಂತ್ ಅವರನ್ನು ನೋಡಿದ್ದವರೆಲ್ಲರೂ 'ಅಯ್ಯೋ, ಈ ಹುಡುಗನ ಕ್ರಿಕೆಟ್ ಇಲ್ಲಿಗೆ ಮುಗಿಯಿತು' ಎಂದಿದ್ದರು. ಆದರೆ ಹಾಗಾಗಲಿಲ್ಲ.

ರಿಷಭ್ ಪಂತ್ ಅಪಘಾತಕ್ಕಿಂತ ಮುಂಚೆ ಆಡುತ್ತಿದ್ದ ರೀತಿಗಿಂತಲೂ ಈಗ ಹೆಚ್ಚು ಮಿಂಚುತ್ತಿದ್ದಾರೆ. ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯ ಮೂಲಕ ಕ್ರಿಕೆಟ್‌ಗೆ ಕಮ್‌ಬ್ಯಾಕ್ ಮಾಡಿದರು. ಡೆಲ್ಲಿ ಕ್ಯಾಪಿಟಲ್ಸ್ ತಂಡದ ನಾಯಕನಾಗಿ ಆಡಿದರು. ಬ್ಯಾಟಿಂಗ್, ಕೀಪಿಂಗ್‌ನಲ್ಲಿ ಮಿಂಚಿದರು.

ಟಿ20 ವಿಶ್ವಕಪ್ ಟೂರ್ನಿಯಲ್ಲಿ ಆಡಲು ತಂಡದಲ್ಲಿ ಸ್ಥಾನ ಪಡೆದಾಗ ಹಲವರು ಹುಬ್ಬೇರಿಸಿದ್ದರು. ಆದರೆ ಈಗ ಅದೇ ಜನಗಳು ರಿಷಭ್ ಆಟಕ್ಕೆ ತಲೆದೂಗುತ್ತಿದ್ದಾರೆ.

ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡುತ್ತಿದ್ದಾರೆ. ಒಟ್ಟು ಆರು ಪಂದ್ಯಗಳಿಂದ 167 ರನ್ ಪೇರಿಸಿದ್ದಾರೆ. ವಿಕೆಟ್ ಕೀಪಿಂಗ್‌ನಲ್ಲಿಯಂತೂ ಚಿರತೆ ವೇಗ ತೋರುತ್ತಿದ್ದಾರೆ. ತಮ್ಮ ಎಡ ಮತ್ತು ಬಲ ಬದಿಗೆ ಮಿಂಚಿನ ವೇಗದಲ್ಲಿ ಡೈವ್ ಮಾಡಿ ಚೆಂಡನ್ನು ತಡೆಯುತ್ತಿದ್ದಾರೆ. ಎತ್ತರಕ್ಕೆ ಚಿಮ್ಮಿದ ಚೆಂಡನ್ನು ಬಹುದೂರದವರೆಗೂ ಬೆನ್ನತ್ತಿ ಗ್ಲೌಸ್‌ನಲ್ಲಿ ಸೆರೆ ಹಿಡಿಯುತ್ತಿದ್ದಾರೆ. ಒಟ್ಟಾರೆ ತಂಡದ ಗೆಲುವಿಗೆ ಮಹತ್ವದ ಕಾಣಿಕೆ ನೀಡುತ್ತಿದ್ದಾರೆ.

ಸಣ್ಣಪುಟ್ಟ ಗಾಯಗಳಿಗೆ ಅಂಜಿ ಆಟದಿಂದ ಬಿಡುವು ಪಡೆಯುವವರಿಗೆ ರಿಷಭ್ ಛಲದ ಪಾಠ ಹೇಳಿಕೊಡುತ್ತಿದ್ದಾರೆ.



ರಿಷಭ್ ಪಂತ್ (ಭಾರತ)
ಪಂದ್ಯ 6
ಒಟ್ಟು ರನ್ 167
ಗರಿಷ್ಠ 42
ಸ್ಟ್ರೈಕ್ ರೇಟ್ 132.53
ಬೌಂಡರಿ 19
ಸಿಕ್ಸರ್ 6
ಕ್ಯಾಚ್ 10

ತಿದ್ದುಪಡಿ

17ನೇ ಲೋಕಸಭೆಯಲ್ಲಿ ಡೆಪ್ಯುಟಿ ಸ್ಪೀಕರ್ ಹುದ್ದೆಯನ್ನು ಐದೂ ವರ್ಷಗಳವರೆಗೆ ತೆರವಾಗಿಯೇ ಇರಿಸಲಾಗಿತ್ತು. ಇದರ ವಿರುದ್ಧ ಸುಪ್ರೀಂ ಕೋರ್ಟ್‌ನಲ್ಲಿ ಪಿಐಎಲ್ ದಾಖಲಾಗಿತ್ತು. 1952, 1962, 1971 ಮತ್ತು 1996ರಲ್ಲಿ ಹೊರತುಪಡಿಸಿ ಉಳಿದ ಎಲ್ಲಾ ಲೋಕಸಭೆಗಳಲ್ಲಿ ವಿರೋಧ ಪಕ್ಷಗಳ ಸಂಸದರನ್ನೇ ಡೆಪ್ಯುಟಿ ಸ್ಪೀಕರ್ ಹುದ್ದೆಗೆ ಆಯ್ಕೆ ಮಾಡುತ್ತಾ ಬರಲಾಗಿದೆ. ಬುಧವಾರದ ಸಂಚಿಕೆಯಲ್ಲಿ ಪ್ರಕಟವಾಗಿದ್ದ 'ಆಳ–ಅಗಲ' ವರದಿಯಲ್ಲಿ ಈ ಮಾಹಿತಿಗಳು ತಪ್ಪಾಗಿದ್ದವು.



ಜಾರ್ಜ್ ಗಿಲ್‌ಬರ್ಟ್ ಸ್ವೆಲ್ ಅವರು 1969ರಿಂದ 1977ರವರೆಗೆ ಲೋಕಸಭೆಯ ಡೆಪ್ಯುಟಿ ಸ್ಪೀಕರ್ ಆಗಿದ್ದರು. ಬುಧವಾರದ ಸಂಚಿಕೆಯ, 'ಆಳ–ಅಗಲ' ವರದಿಯಲ್ಲಿ ಅವರ ಚಿತ್ರದ ಬದಲಿಗೆ ಬೇರೊಬ್ಬರ ಚಿತ್ರ ಪ್ರಕಟವಾಗಿತ್ತು.

ಸಿನಿ ಬಿಟ್ಸ್

ಡಾರ್ಲಿಂಗ್ ಜೊತೆ ಶಶಾಂಕ್ ಮತ್ತೊಂದು ಸಿನಿಮಾ



ಡಾರ್ಲಿಂಗ್ ಕೃಷ್ಣ



ಶಶಾಂಕ್

'ಮೊಗ್ಗಿನ ಮನಸು' ಖ್ಯಾತಿಯ ನಿರ್ದೇಶಕ ಶಶಾಂಕ್ ನಟ ಡಾರ್ಲಿಂಗ್ ಕೃಷ್ಣ ಅವರಿಗೆ ಮತ್ತೊಮ್ಮೆ ಆ್ಯಕ್ಷನ್ ಕಟ್ ಹೇಳಲಿದ್ದಾರೆ. 'ಕೌಸಲ್ಯಾ ಸುಪ್ರಜಾ ರಾಮ' ಸಿನಿಮಾ ಬಳಿಕ ಈ ಕಾಂಬಿನೇಷನ್‌ನಲ್ಲಿ ಹೊಸಚಿತ್ರ ಸೆಟ್ಟೇರಲಿದ್ದು, ಇದೊಂದು ಪ್ಯಾನ್ ಇಂಡಿಯಾ ಸಿನಿಮಾ ಎಂದಿದ್ದಾರೆ ಶಶಾಂಕ್.

'ಮೊಗ್ಗಿನ ಮನಸು', 'ಕೃಷ್ಣನ್ ಲವ್ ಸ್ಟೋರಿ', 'ಕೃಷ್ಣ ಲೀಲಾ', 'ಲವ್ 360'.. ಹೀಗೆ ಸಾಲು ಸಾಲು ಪ್ರೇಮಕಥೆಗಳನ್ನು ತೆರೆಯ ಮೇಲೆ ಹೊತ್ತು ತಂದಿದ್ದ ನಿರ್ದೇಶಕ ಶಶಾಂಕ್, 'ಕೌಸಲ್ಯಾ ಸುಪ್ರಜಾ ರಾಮ' ಸಿನಿಮಾದಲ್ಲಿ ಹೊಸ ಬಗೆಯ ಕಥೆಯೊಂದನ್ನು ಪ್ರೇಕ್ಷಕರ ಎದುರಿಗೆ ಇರಿಸಿದ್ದರು. ಇದು ಪ್ರೇಕ್ಷಕರನ್ನು ಸೆಳೆದಿತ್ತು. 'ನಮ್ಮ ಮೊದಲ ಸಿನಿಮಾಗೆ ಪ್ರೇಕ್ಷಕರು ತೋರಿದ ಪ್ರೀತಿ, ಬೆಂಬಲಕ್ಕೆ ಧನ್ಯವಾದ. ಇದೀಗ ನಾವು ಮತ್ತೆ ಹೊಸ ಸಿನಿಮಾದೊಂದಿಗೆ ಬರುತ್ತಿದ್ದೇವೆ' ಎಂದಿದ್ದಾರೆ ಶಶಾಂಕ್. ಸದ್ಯ ಡಾರ್ಲಿಂಗ್ ಕೃಷ್ಣ ಅವರು 'ಆರ್.ಸಿ. ಸ್ಟುಡಿಯೊಸ್'ನಡಿ ನಿರ್ದೇಶಕ ಆರ್.ಚಂದ್ರು ನಿರ್ಮಾಣ ಮಾಡುತ್ತಿರುವ, ರಾಜ್ ಮೋಹನ್ ಆ್ಯಕ್ಷನ್ ಕಟ್ ಹೇಳುತ್ತಿರುವ 'ಫಾದರ್' ಸಿನಿಮಾದಲ್ಲಿ ನಟಿಸುತ್ತಿದ್ದಾರೆ. ಇದು ಪೂರ್ಣಗೊಂಡ ಬಳಿಕ ಹೊಸ ಸಿನಿಮಾ ಸೆಟ್ಟೇರುವ ಸಾಧ್ಯತೆ ಇದೆ.

ಜುಲೈ 19ಕ್ಕೆ 'ಹೆಜ್ಜಾರು' ತೆರೆಗೆ

ಕಿರುತೆರೆಯ ಹೆಸರಾಂತ ನಿರ್ದೇಶಕ ಕೆ.ಎಸ್.ರಾಮಜಿ ಗಗನ ಎಂಟರ್‌ಪ್ರೈಸಸ್ ಮೂಲಕ ನಿರ್ಮಿಸಿ, ಜನಪ್ರಿಯ ಗೀತ ಸಾಹಿತಿ ಹರ್ಷಪ್ರಿಯ ನಿರ್ದೇಶಿಸಿರುವ 'ಹೆಜ್ಜಾರು' ಚಿತ್ರ ಜುಲೈ 19ರಂದು ತೆರೆಗೆ ಬರಲಿದೆ.

'ಈ ಹಿಂದೆ ಸಾಕಷ್ಟು ಕಿರುತೆರೆ, ಹಿರಿತೆರೆಗೆ ಗೀತೆಗಳಿಗೆ ಸಾಹಿತ್ಯ ರಚಿಸಿದ್ದೇನೆ. ದಶಕಗಳ ಕಾಲ ಕಿರುತೆರೆಯ ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡಿದ ಅನುಭವದಿಂದ ಈ ಚಿತ್ರ ನಿರ್ದೇಶನಕ್ಕಿಳಿದೆ. ಕನ್ನಡದ ಮೊಟ್ಟ ಮೊದಲ ಪ್ಯಾರಲಲ್ ಲೈಫ್ ಸಿನಿಮಾವಿದು. ಥ್ರಿಲ್ಲರ್ ಜಾನರ್‌ನ ಕಥೆ ಹೊಂದಿದೆ' ಎನ್ನುತ್ತಾರೆ ನಿರ್ದೇಶಕ ಹರ್ಷಪ್ರಿಯ ಭದ್ರಾವತಿ.

ಭಗತ್ ಆಳ್ವಾ ಚಿತ್ರದ ನಾಯಕ. ನಾಯಕಿಯಾಗಿ ಶ್ವೇತ ಲೀಯೊನಿಲ್ಲಾ ಡಿಸೋಜಾ ಹಾಗೂ ಮೊದಲ ಬಾರಿಗೆ ನವೀನ್ ಕೃಷ್ಣ ಅವರು ವಿಲನ್ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಗೋಪಾಲಕೃಷ್ಣ ದೇಶಪಾಂಡೆ, ಅರುಣಾ ಬಾಲರಾಜ್, ಮುನಿರಾಜ್ ಮೊದಲಾದವರು ಚಿತ್ರದಲ್ಲಿದ್ದಾರೆ.

'ಲೂಸಿಯಾ' ಖ್ಯಾತಿಯ ಪೂರ್ಣಚಂದ್ರ ತೇಜಸ್ವಿ ಸಂಗೀತ, ಅಮರ್ ಗೌಡ ಕ್ಯಾಮೆರಾ ಕೈಚಳಕವಿದೆ. ಮಂಗಳೂರು, ಉಪ್ಪಿನಂಗಡಿ, ಗುರುವಾಯನಕೆರೆ ಹಾಗೂ ಮಲೆನಾಡಿನಲ್ಲಿ ಚಿತ್ರೀಕರಣ ಮಾಡಲಾಗಿದೆ.



ಶ್ವೇತ ಲೀಯೊನಿಲ್ಲಾ ಡಿಸೋಜಾ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net


ಗುಂಡಣ್ಣ



ಬೇಟೆಗಾರನೇ ಬೇಟೆಯಾದಾಗ...

ನುಡಿ ಬೆಳಗು





ದೀಪಾ ಹಿರೇಗುತ್ತಿ, ಇಂಗ್ಲಿಷ್ ಉಪನ್ಯಾಸಕಿ

ಅಮೆರಿಕದ ಖ್ಯಾತ ಲೇಖಕ ಡಾನ್ ಮಾರ್ಕ್ವಿಸ್‌ನ ಒಂದು ಕವನದಲ್ಲಿ ಹಸಿದ ರಾಬಿನ್ ಹಕ್ಕಿಯೊಂದು ಪುಟ್ಟ ಹುಳುವೊಂದನ್ನು ತಿನ್ನುವಾಗ ಹೇಳುತ್ತದೆ, 'ನಿನ್ನನ್ನು ತಿನ್ನುತ್ತಿರುವುದಕ್ಕಾಗಿ ಕ್ಷಮಿಸು. ಆದರೆ ಹಕ್ಕಿಯೂ ಬದುಕಬೇಕಲ್ಲ'. ದಡ್ಡ ಹುಳು ಉತ್ತರ ಕೊಡುವುದರೊಳಗೆ ಅದು ಹಕ್ಕಿಯ ಹೊಟ್ಟೆ ಸೇರಿರುತ್ತದೆ. ಹೊಟ್ಟೆ ತುಂಬಿದ ಹಕ್ಕಿ, 'ನಿನ್ನೆ ಮಳೆ ಬಂದಾಗ ದೇವರ ಇರುವಿಕೆಯ ಬಗ್ಗೆ ಸಂದೇಹ ಪಟ್ಟಿದ್ದೆ. ಇವತ್ತು ನನಗೆ ಹೊಟ್ಟೆ ತುಂಬಿದೆ. ಜಗತ್ತಿನಲ್ಲಿ ಎಲ್ಲವೂ ಸುಂದರವಾಗಿದೆ' ಎಂದು ಹಾಡಲಾರಂಭಿಸುತ್ತದೆ. ತಾನು ಹಾಡುವ ಭರದಲ್ಲಿ ರಾಬಿನ್ ಹಕ್ಕಿ, ಮೆಹಿಟಬೆಲ್ ಎನ್ನುವ ಬೆಕ್ಕು ತನ್ನ ಹತ್ತಿರ ಬರುತ್ತಿರುವುದನ್ನು ಗಮನಿಸುವುದೇ ಇಲ್ಲ. ಕುತ್ತಿಗೆ ಎತ್ತಿ ಹಾಡನ್ನು ತೀವ್ರಗತಿಯಲ್ಲಿ ಹಾಡುತ್ತಿದ್ದಂತೆಯೇ ಬೆಕ್ಕು ಹಕ್ಕಿಯನ್ನು ತಿಂದುಬಿಡುತ್ತದೆ. ಹಕ್ಕಿ ಹೊಟ್ಟೆಗೆ ಹೋದ ನಂತರ ಕೊನೆಯ ಗರಿಯನ್ನು ತನ್ನ ಮೀಸೆಯಿಂದ ನೆಕ್ಕುತ್ತಾ ಆಹಾ ಎನ್ನುತ್ತಿದ್ದ ಬೆಕ್ಕಿಗೆ ಹಕ್ಕಿ ಹಾಡುತ್ತಿದ್ದ ಹಾಡು ಚೆನ್ನಾಗಿತ್ತಲ್ಲವೇ ಎಂದೆನಿಸುತ್ತದೆ. ಆದರೂ ಅದಕ್ಕೇನೂ ಬೇಸರವಿಲ್ಲ. ತಾನು ತಿಂದ ಹಕ್ಕಿಯ ಹಾಡು ತನ್ನ ಹೊಟ್ಟೆಯೆಂಬ ಜಂಗಲ್ಲಿನಲ್ಲಿ ಪ್ರತಿಧ್ವನಿಗೊಳ್ಳುತ್ತಿದೆ ಎನ್ನುತ್ತದೆ ಅದು.

ಜಗತ್ತಿನಲ್ಲಿರುವುದೆಲ್ಲವೂ ತನಗಾಗಿ ಎಂದುಕೊಂಡೇ ಬದುಕುತ್ತಿರುವವರಿಗೆ ತಾವೂ ಮತ್ತೊಂದಕ್ಕಾಗಿ ಎಂಬುದು ಅರಿವಾಗುವ ಹೊತ್ತಿಗೆ ಕಾಲ ಮಿಂಚಿರುತ್ತದೆ. ಮನುಷ್ಯ ತನ್ನನ್ನು ತಾನು ಜಗತ್ತಿನ ಕೇಂದ್ರವೆಂದೂ ನಿಸರ್ಗವಿರುವುದು ತನ್ನ ಸುಖಕ್ಕಾಗಿ ಎಂದು ಬಹಳ ಹಿಂದಿನಿಂದಲೂ ತಿಳಿದುಕೊಂಡಿದ್ದಾನೆ. ತನ್ನ ಐಷಾರಾಮಕ್ಕಾಗಿ ಪ್ರಕೃತಿಯನ್ನು ಅಗೆದು ಬಗೆದು ನಾಶ ಮಾಡುತ್ತ ವಿವಿಧ ಪ್ರಯೋಗಗಳನ್ನು ಮಾಡುತ್ತಿರುತ್ತಾನೆ. ಆದರೆ ನೈಸರ್ಗಿಕ ವಿಕೋಪಗಳಾದಾಗ ಪ್ರಕೃತಿಯನ್ನೇ ದೂರುತ್ತಾನೆ. ನಾವು ನಮ್ಮ ಮನುಷ್ಯಕೇಂದ್ರಿತ ದೃಷ್ಟಿಕೋನವನ್ನು ಪ್ರಕೃತಿ ಕೇಂದ್ರಿತವಾಗಿ ಬದಲಾಯಿಸುವವರೆಗೂ ಇದು ನಡೆಯುತ್ತಲೇ ಇರುತ್ತದೆ.

ಅಷ್ಟೇ ಅಲ್ಲ, ಮೇಲಿನ ಪದ್ಯದ ಹಕ್ಕಿಯಂತೆ ನಮ್ಮೆಲ್ಲರಿಗೂ ನಾವು ಸಂತೋಷದಿಂದಿದ್ದರೆ, ನಮಗೆ ಕಷ್ಟಗಳು ಇಲ್ಲದಿದ್ದರೆ ಜಗತ್ತೇ ಅತ್ಯಂತ ಸುಂದರವಾಗಿದೆ ಎನಿಸುತ್ತದೆ. ಆದರೆ ನಾವು ನೋವಿನಲ್ಲಿದ್ದರೆ ಜಗತ್ತಿನಲ್ಲಿ ಬರೀ ಸಂಕಷ್ಟವೇ ತುಂಬಿದೆ ಎನಿಸುತ್ತಿರುತ್ತದೆ. ಆದರೆ ವಾಸ್ತವ ಹೀಗಿರುವುದಿಲ್ಲ. ಜಗತ್ತು ಅದರದ್ದೇ ಆದ ಗತಿಯಲ್ಲಿ, ಅದರದ್ದೇ ಆದ ರೀತಿಯಲ್ಲಿ ಮುನ್ನಡೆಯುತ್ತಿರುತ್ತದೆ. ನಾವು ಸುಖವಾಗಿದ್ದಾಗ ಜಗತ್ತಿನಲ್ಲಿ ಎಲ್ಲವೂ ಸರಿಯಿದೆ ಎಂದುಕೊಂಡು ಅಹಂಕಾರ ಪಡುವುದು ಎಷ್ಟು ತಪ್ಪೋ ಅಷ್ಟೇ ತಪ್ಪು ಸಂಕಟ ಬಂದಾಗ ಜಗತ್ತಿನ ಮೇಲೆ ಭರವಸೆ ಕಳೆದುಕೊಳ್ಳುವುದು... ಬದುಕಿನ ಕಾಲಚಕ್ರದಲ್ಲಿ ಪ್ರತಿಯೊಬ್ಬರ ಸ್ಥಾನವೂ ಬದಲಾಗುತ್ತಿರುತ್ತದೆ.

ಹೀಗಾಗಿ ಅನಿವಾರ್ಯವಾಗಿರುವುದು ಬದಲಾವಣೆಯೊಂದೇ ಎನ್ನುವುದನ್ನು ಅರ್ಥ ಮಾಡಿಕೊಂಡು ಕೊಂಚ ಸಹಾನುಭೂತಿ, ಒಂದಿಷ್ಟು ಹೊಂದಾಣಿಕೆಯನ್ನು ಬೆಳೆಸಿಕೊಂಡರೆ ಈ ನಿಸರ್ಗದ ಪಾತ್ರಪರಿವರ್ತನೆಯ ಅನಿವಾರ್ಯತೆಯನ್ನು ಗೌರವಯುತವಾಗಿ ಸ್ವೀಕರಿಸಲು ಸಾಧ್ಯ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಜೂನ್ 27, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಕೃಷ್ಣ ಷಷ್ಠಿ ಗಂ. 18-40 ನಕ್ಷತ್ರ: ಶತಭಿಷ ಗಂ. 11-37 ಯೋಗ: ಆಯುಷ್ಮಾನ್ ಗಂ. 24-28 ಕರಣ: ಗರ ಗಂ. 07-48, ಮಿಥುನ ಮಾಸದ 13 ನೇ ದಿನ, ಮಳೆನಕ್ಷತ್ರ: ಆರ್ದ್ರಾ 2.
ರಾಹುಕಾಲ : ಮಧ್ಯಾಹ್ನ 01-30 – 03-00
ಸೂರ್ಯೋದಯ : 06-10 ಸೂರ್ಯಾಸ್ತ : 06-57
ಮುಸ್ಲಿಂ ದಿನಾಂಕ : 21 ಜುಲ್‌ಹಿಜಾ
ಅದೃಷ್ಟ ಸಂಖ್ಯೆ : 5, 3

ಮೇಷ: ರಕ್ಷಕರು ಕಾವಲಿಗೆ ಇರುವ ಸಮಯದಲ್ಲಿ ಯಾವುದೇ ಸೋಮಾರಿತನ ಮಾಡಬೇಡಿ. ನಿರ್ಲಕ್ಷ್ಯ ಹಲವು ನಷ್ಟಕ್ಕೆ ಕಾರಣವಾಗಬಹುದು. ಶಾಂತಿಯಿಂದ ವರ್ತಿಸಿದರೆ ಸಮಸ್ಯೆಗೆ ಪರಿಹಾರ ಲಭ್ಯ.

ವೃಷಭ: ಸಕುಟುಂಬ ಸಮೇತರಾಗಿ ಮನೆದೇವರ ದರ್ಶನ ಮಾಡುವ ಆಸೆ ಕನಸಾಗಿ ಉಳಿಯುತ್ತದೆ. ಪರಿಶ್ರಮದಿಂದ ಬಹುದಿನಗಳ ಕನಸು ನನಸಾಗಿಸುವಿರಿ. ವಸ್ತ್ರಾಭರಣ ಖರೀದಿ ಯೋಗವಿದೆ.

ಮಿಥುನ: ಈ ಕ್ಷಣದಲ್ಲಿ ಹಣವು ಸಮೃದ್ಧವಾಗಿದೆ ಎಂದು ಮನಸ್ಸಿಗೆ ಬಂದ ಹಾಗೆ ಖರ್ಚು ಮಾಡುವ ಪ್ರವೃತ್ತಿ ಬೇಡ. ಮಗಳು ವಿವಾಹ ವಿಚಾರದಲ್ಲಿ ತೋರುತ್ತಿರುವ ಅಸಡ್ಡೆ ಅಸಮಾಧಾನಕ್ಕೆ ಕಾರಣವಾಗುವುದು.

ಕರ್ಕಾಟಕ: ಆತ್ಮೀಯ ಸ್ನೇಹಿತರ ಸಂಪರ್ಕದಿಂದ ಜೀವನ ನಡೆಸಲು ಬೇಕಾದ ಉಪಾಯವನ್ನು ಹೊಂದುವಿರಿ. ಉತ್ಸಾಹದಿಂದ ಕೆಲಸ ಆರಂಭಿಸಿದಲ್ಲಿ ಸಮಸ್ಯೆಗಳು ತಾನಾಗಿಯೇ ಪರಿಹಾರಗೊಳ್ಳಲಿವೆ. ಸತ್ಫಲಗಳು ದೊರಕಲಿದೆ.

ಸಿಂಹ: ದಿನಚರಿಯ ಬದಲಾವಣೆಗಾಗಿ ಸಣ್ಣ ಪ್ರಮಾಣದ ಪ್ರವಾಸಕ್ಕಾಗಿ ಯೋಚನೆ ನಡೆಸುವಿರಿ. ಉದ್ಯೋಗದಲ್ಲಿ ಮೇಲಧಿಕಾರಿಗಳ ಕಿರುಕುಳ ಸಂಗಡಿಗರನ್ನು ರೋಸಿಹೋಗುವಂತೆ ಮಾಡುತ್ತದೆ.

ಕನ್ಯಾ: ಅನಾರೋಗ್ಯದಲ್ಲೂ ಲವಲವಿಕೆಯ ಓಡಾಟ ಇತರರ ಅಸೂಯೆಗೆ ಕಾರಣಾವಾಗುತ್ತದೆ. ಆಪ್ತರು ಹಲವಾರು ಸಲಹೆಗಳನ್ನು ನೀಡಿದರೂ ಅದು ಸರಿ ಹೋಗದೆ ಕ್ಷಿಪ್ರವಾದ ಕೆಲವು ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗುತ್ತದೆ.

ತುಲಾ: ಸಾಧನಗಳ ತಯಾರಕ, ಮಾರಾಟಗಾರರಿಗೆ ಲಾಭದಾಯಕ ದಿನ. ಅರಣ್ಯದಲ್ಲಿ ಕಾರ್ಯ ನಿಮಿತ್ತವಾಗಿ ಸಂಚರಿಸುವವರಿಗೆ ವಿಷಜಂತುಗಳ ಕಾಟ ಇರಬಹುದು. ಸ್ಪರ್ಧಾತ್ಮಕ ಪರೀಕ್ಷೆ ಎದುರಿಸಲು ಅಧ್ಯಯನ ಅಗತ್ಯ.

ವೃಶ್ಚಿಕ: ವೃತ್ತಿಯಲ್ಲಿ ಬಡ್ತಿಯನ್ನು ಬಯಸುವವರಿಗೆ, ಸ್ಥಾನ ಬದಲಾವಣೆಗೂ ತಯಾರಿರಬೇಕಾಗುತ್ತದೆ. ಮಳೆಯ ಕಾರಣದಿಂದ ಮನೆಯ ದುರಸ್ತಿಯ ಕೆಲಸಗಳನ್ನು ಮಾಡಿಸುವ ಅನಿವಾರ್ಯ ಬರಲಿದೆ.

ಧನು: ಆರಕ್ಷಕ ಸಿಬ್ಬಂದಿಗೆ ಹೆಚ್ಚಿನ ಕೆಲಸಗಳು ಒದಗಿ ಬರಲಿವೆ. ಬುದ್ಧಿವಂತಿಕೆ, ನಡೆ-ನುಡಿಯಿಂದ ಸಮಸ್ಯೆಗಳು ಹಿಮದಂತೆ ಕರಗಲಿವೆ. ಪಾರಂಪರಿಕವಾಗಿ ಹಿಂದಿನ ಕಾಲದಲ್ಲಿ ಬಳಸುತ್ತಿದ್ದ ವಸ್ತುವನ್ನು ಕಳೆಯಬೇಡಿ.

ಮಕರ: ತಾಂತ್ರಿಕ ಕ್ಷೇತ್ರದಲ್ಲಿನ ಸಾಧನೆಗಾಗಿ ಕೆಲವರಿಗೆ ಪ್ರಶಸ್ತಿ ಲಭಿಸುವಂತೆ ಆಗುವುದು. ಮನುಷ್ಯ ಪ್ರಯತ್ನದ ಜೊತೆ ಆಂಜನೇಯನ ಮೊರೆ ಹೋಗುವುದರಿಂದ ಕಾರ್ಯ ಸಿದ್ಧಿ. ವೈದ್ಯರು ನೀಡಿದ ಸಲಹೆಯನ್ನು ತಪ್ಪದಿರಿ.

ಕುಂಭ: ಕಾದಂಬರಿಪ್ರಿಯರಿಗೆ ಅನಿರೀಕ್ಷಿತವಾಗಿ ಇಷ್ಟಪಡುವ ಪುಸ್ತಕ ದೊರೆಯುವುದು. ಸಂಗಡಿಗರು ಅಧರ್ಮದ ಮಾರ್ಗದಿಂದ ಹೂಡಿಕೆ ಮಾಡುತ್ತಿರುವುದು ಅನುಭವಕ್ಕೆ ಬರಲಿದೆ.


ಮೀನ: ಕೆಲವೊಂದು ವಿಚಾರಗಳನ್ನು ಅರಿತ ಮೇಲೆ ನೀವಂದುಕೊಂಡ ರೀತಿಯ ಭವಿಷ್ಯ ಇರುವುದೇ ಎಂಬ ಚಿಂತೆ ಉಂಟಾಗುತ್ತದೆ. ಕೆಲವು ಪ್ರಶ್ನೆಗಳಿಗೆ ಉತ್ತರ ಸಿಗದಂತೆ ಆಗಲಿದೆ. ಇತರರನ್ನು ಗೌರವಿಸಿ.

ಪದಬಂಧ 5724

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಗುಪ್ತ ದ್ರೋಹವಿದು (4)
3.ಇಂದ್ರಿಯಗಳ ಮೂಲಕ ಬರುವ ಜ್ಞಾನ (4)
5.ಗಂಡನೊಡಗೂಡಿದ ಸೇನಾನಾಯಕ (4)
7.ಗರಳ ಇಲ್ಲಿದೆ (3)
8.ಕೈ ಮುಂದು ಮಾಡಿ ತಟ್ಟಿರುವ ಚಪ್ಪಾಳೆ (5)
11.ಬುಡಕಟ್ಟಿನವನಿಂದಾದ ಬೋರು! (3)
12.ಈತ ಲೆಕ್ಕ ಬರೆಯುವವನು (4)
14.ಹತ್ತನೆಯ ಒಂದು ಭಾಗ (4)
15.ಮನೆಯನ್ನು ಹೀಗೂ ಹೇಳುವರು (4)

ಮೇಲಿಂದ ಕೆಳಕ್ಕೆ
1.ಅಂತರಂಗದ ಮಾತಿದು (4)
2.ತಾಪದ ಹೊತ್ತಿನಲ್ಲಿ ತೋಡಿಕೊಂಡ ದುಃಖ (3)
4.ನೀರಿನ ಅಧಿದೇವತೆ (3)
6.ಕತ್ತಲು ಇಲ್ಲಿ ಆವರಿಸಿದೆ (3)
7.ಕಾಡು ಕೊನೆಯಲ್ಲಿದ್ದಾಗಲೇ ಇದು ಪವಿತ್ರ! (3)
8.ಸುಲಭವಾಗಿ ಬಿಡಿಸಲಾಗದ ಗಂಟು (3)
9.ಕನ್ನಡಕದಲ್ಲಿ ನಮ್ಮ ಭಾಷೆ ಉಲ್ಟಾ ಕಾಣುತ್ತಿದೆಯಲ್ಲಾ! (3)
10.ಕೂಡುವ ಲೆಕ್ಕವಿದು (4)
11.ನೀರ ಮೇಲಿನ ಗುಳ್ಳೆ (3)
13.ರಸದಲ್ಲಿರುವ ವೇಗ (3)



5723ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಕಾರಂಜಿ 4.ತಿಲಕ
5.ಜಾಯಮಾನ 6.ತಾರಾಗಣ
7.ಯತಿ 9.ನವ
13.ಸಮರ್ಪಕ 14.ಆರಾಧಕ
15.ರಕುತ 16.ಶರಣ

ಮೇಲಿಂದ ಕೆಳಕ್ಕೆ:
1.ಪ್ರತಿಪಾದನೆ
2.ಕಾಕತಾಳೀಯ 3.ಅಮಾನತ್ತು
5.ಜಾಣತನ 8.ತಿನ್ನಾಸಕ
10.ವಶೀಕರಣ 11.ನರಪೇತಲ
12.ಅಪರಾಹ್ನ

ಸುಡೊಕು 6109

		3	1			4		
6	1			5				8
	4		8				6	
4			5		9	2		1
	2			4			5	
3		5	2		8		4	6
5	7					8		9
		1	4		5			
	8			7			3	4

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6108 ಸುಡೊಕು

5	7	6	8	3	1	9	4	2
9	8	2	4	5	6	7	3	1
3	4	1	2	7	9	8	5	6
4	1	7	5	6	8	3	2	9
6	5	9	3	2	7	1	8	4
8	2	3	9	1	4	5	6	7
1	6	5	7	8	2	4	9	3
7	9	8	6	4	3	2	1	5
2	3	4	1	9	5	6	7	8

ಬೆಳ್ಳಿ ದರ ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಬುಧವಾರ ಚಿನ್ನ ಮತ್ತು ಬೆಳ್ಳಿ ಧಾರಣೆಯಲ್ಲಿ ಇಳಿಕೆಯಾಗಿದೆ.

ಚಿನ್ನವು ಪ್ರತಿ 10 ಗ್ರಾಂಗೆ ₹250 ಕಡಿಮೆಯಾಗಿ ₹72,300ರಂತೆ ಮಾರಾಟವಾಗಿದೆ. ಬೆಳ್ಳಿ ಧಾರಣೆ ಕೆ.ಜಿಗೆ ₹900 ಇಳಿಕೆಯಾಗಿ, ₹90,600 ಆಗಿದೆ. ಅಮೆರಿಕದ ಫೆಡರಲ್ ರಿಸರ್ವ್‌ನ ಬಡ್ಡಿ ದರ ಕಡಿತ ಮುನ್ಸೂಚನೆ, ಡಾಲರ್ ಮೌಲ್ಯ ಏರಿಕೆಯಿಂದ ಚಿನ್ನದ ಬೆಲೆ ಇಳಿದಿದೆ.


ಷೇರುಪೇಟೆ ವಹಿವಾಟು	620
ಹಿಂದಿನ ಅಂತ್ಯ	78,053
ಇಂದಿನ ಅಂತ್ಯ	78,674



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ	23,721
ಇಂದಿನ ಅಂತ್ಯ	23,868
▲	147
ದಿನದ ಗರಿಷ್ಠ	23,889

ವಿನಿಮಯ ದರ	
$ ಡಾಲರ್	83.57
£ ಪೌಂಡ್	105.86
€ ಯುರೊ	89.33
¥ ಯೆನ್ (100ಕ್ಕೆ)	52

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹560
12 ಕ್ಕೆ	₹75
ಮೈಸೂರು	
100ಕ್ಕೆ	₹565

ಖಾದ್ಯ ತೈಲ ಮುಂಬೈ (10 ಕೆಜಿಗೆ)



(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1530 (1530)
ಸೋಯಾ (ರಿಫೈನ್ಡ್)	₹965 (965)
ಸೂರ್ಯಕಾಂತಿ (ರಿಫೈನ್ಡ್)	₹965 (970)
ಪಾಮೋಲಿನ್	₹904 (905)

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ)	₹362-500
ದ್ವಿತಳಿ (ಬಿ.ವಿ)	₹393-636

ಸೆನ್ಸೆಕ್ಸ್ 620, ನಿಫ್ಟಿ 147 ಅಂಶ ಏರಿಕೆ : ಕಚ್ಚಾ ತೈಲದ ಬೆಲೆ ಏರಿಕೆ

ಮೂರನೇ ದಿನವೂ ಗೂಳಿ ಓಟ



ಮುಂಬೈ (ಪಿಟಿಐ): ಏಷ್ಯಾದ ಷೇರುಪೇಟೆಯಲ್ಲಿನ ಸಕಾರಾತ್ಮಕ ವಹಿವಾಟಿನಿಂದಾಗಿ ದೇಶದ ಷೇರುಪೇಟೆಗಳಲ್ಲಿ ಮೂರನೇ ದಿನವಾದ ಬುಧವಾರವೂ ಗೂಳಿ ಓಟ ಮುಂದುವರಿಯಿತು.

ರಿಲಯನ್ಸ್ ಇಂಡಸ್ಟ್ರಿಸ್ ಷೇರುಗಳ ಖರೀದಿ ಭರಾಟೆಯು ಸೂಚ್ಯಂಕಗಳು ಹೊಸ ಎತ್ತರಕ್ಕೆ ಜಿಗಿಯಲು ನೆರವಾಯಿತು.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 620 ಅಂಶ ಏರಿಕೆ (ಶೇ 0.80ರಷ್ಟು) ಕಂಡು 78,674 ಅಂಶಗಳಲ್ಲಿ ಸ್ಥಿರಗೊಂಡಿತು. ದಿನದ ವಹಿವಾಟಿನಲ್ಲಿ 705 ಅಂಶ ಏರಿಕೆ ಕಂಡಿತ್ತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 147 ಅಂಶ ಏರಿಕೆ (ಶೇ 0.62 ರಷ್ಟು) ಕಂಡು 23,868 ಅಂಶಗಳಲ್ಲಿ ವಹಿವಾಟು ಮುಕ್ತಾಯಗೊಳಿಸಿತು.

ಸೆನ್ಸೆಕ್ಸ್ ಗುಚ್ಛದಲ್ಲಿನ ಭಾರ್ತಿ ಏರ್‌ಟೆಲ್, ಅಲ್ಟ್ರಾಟೆಕ್ ಸಿಮೆಂಟ್, ಸನ್ ಫಾರ್ಮಾ, ಅದಾನಿ ಪೋರ್ಟ್ಸ್, ಎಕ್ಸಿಸ್ ಬ್ಯಾಂಕ್, ಎನ್‌ಟಿಪಿಸಿ ಹಾಗೂ ಬಜಾಜ್ ಫೈನಾನ್ಸ್ ಷೇರುಗಳ ಮೌಲ್ಯದಲ್ಲಿ ಏರಿಕೆಯಾಗಿದೆ.

ಮಹೀಂದ್ರ ಆ್ಯಂಡ್ ಮಹೀಂದ್ರ, ಟಾಟಾ ಸ್ಟೀಲ್, ಟೆಕ್ ಮಹೀಂದ್ರ ಹಾಗೂ ಜೆಎಸ್‌ಡಬ್ಲ್ಯು ಸ್ಟೀಲ್ ಷೇರಿನ ಮೌಲ್ಯ ಕುಸಿದಿದೆ.

'ಭಾರತದ ಜಿಡಿಪಿ ಬೆಳವಣಿಗೆ ಕುರಿತ ಧನಾತ್ಮಕ ವರದಿಗಳು ಮತ್ತು ಚಿಲ್ಲರೆ ಹಣದುಬ್ಬರವು ಇಳಿಕೆಯ ಹಾದಿಗೆ ಮರಳುತ್ತಿರುವುದು ದೇಶೀಯ ಸೂಚ್ಯಂಕಗಳ ಏರಿಕೆಗೆ ನೆರವಾಗಿದೆ. ಮಿಡ್ ಕ್ಯಾಪ್ ಮತ್ತು ಸ್ಮಾಲ್ ಕ್ಯಾಪ್ ಸೂಚ್ಯಂಕಗಳು ಏರಿಕೆ ಕಂಡಿವೆ' ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಸೋಲ್, ಟೋಕಿಯೊ, ಶಾಂಘೈ ಹಾಗೂ ಹಾಂಗ್‌ಕಾಂಗ್ ಮಾರುಕಟ್ಟೆಗಳು ಗಳಿಕೆ ಕಂಡಿವೆ. ಜಾಗತಿಕ ಮಟ್ಟದಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಶೇ 0.80ರಷ್ಟು ಏರಿಕೆಯಾಗಿದ್ದು, ಪ್ರತಿ ಬ್ಯಾರೆಲ್‌ಗೆ 85.69 ಡಾಲರ್ ಆಗಿದೆ.

ಮಂಗಳವಾರದ ವಹಿವಾಟಿನಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹1,175 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ರಿಲಯನ್ಸ್‌ಗೆ ₹80 ಸಾವಿರ ಕೋಟಿ ಸೇರ್ಪಡೆ

ನವದೆಹಲಿ (ಪಿಟಿಐ): ರಿಲಯನ್ಸ್ ಇಂಡಸ್ಟ್ರಿಸ್ ಷೇರಿನ ಮೌಲ್ಯದಲ್ಲಿ ಶೇ 4ರಷ್ಟು ಏರಿಕೆಯಾಗಿದ್ದು, ಕಂಪನಿಯ ಮಾರುಕಟ್ಟೆ ಮೌಲ್ಯಕ್ಕೆ ಒಂದೇ ದಿನ ₹80,359 ಕೋಟಿ ಸೇರ್ಪಡೆಯಾಗಿದೆ.

ಕಂಪನಿಯ ಮಾರುಕಟ್ಟೆ ಮೌಲ್ಯವು ₹20.48 ಲಕ್ಷ ಕೋಟಿ ದಾಟಿದೆ.

ಬಿಎಸ್‌ಇಯಲ್ಲಿ ಷೇರಿನ ಮೌಲ್ಯದಲ್ಲಿ ಶೇ 4.09ರಷ್ಟು ಏರಿಕೆಯಾಗಿದ್ದು, ಪ್ರತಿ ಷೇರಿನ ಬೆಲೆ ₹3,027 ಆಗಿದೆ. ಎನ್‌ಎಸ್‌ಇಯಲ್ಲಿ ಷೇರಿನ ಮೌಲ್ಯದಲ್ಲಿ ಶೇ 3.87ರಷ್ಟು ಹೆಚ್ಚಳವಾಗಿದ್ದು, ಪ್ರತಿ ಷೇರಿನ ಬೆಲೆಯು ₹3,021ಕ್ಕೆ ತಲುಪಿದೆ.

ರೂಪಾಯಿ ಮೌಲ್ಯ 14 ಪೈಸೆ ಇಳಿಕೆ



ಮುಂಬೈ (ಪಿಟಿಐ): ಅಮೆರಿಕದ ಡಾಲರ್ ಎದುರು ಬುಧವಾರ ರೂಪಾಯಿ ಮೌಲ್ಯವು 14 ಪೈಸೆಯಷ್ಟು ಕುಸಿದಿದೆ. ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ವಹಿವಾಟಿನ ಅಂತ್ಯಕ್ಕೆ ₹83.57ಕ್ಕೆ ತಲುಪಿದೆ.

ಡಾಲರ್ ಮೌಲ್ಯದಲ್ಲಿ ಏರಿಕೆ ಮತ್ತು ಕಚ್ಚಾ ತೈಲದ ಬೆಲೆ ಏರಿಕೆಯಿಂದಾಗಿ ರೂಪಾಯಿ ಒತ್ತಡಕ್ಕೆ ಸಿಲುಕಿದೆ.

'ದೇಶೀಯ ಮಾರುಕಟ್ಟೆಯಲ್ಲಿನ ಸಕಾರಾತ್ಮಕ ವಹಿವಾಟು, ವಿದೇಶಿ ಸಾಂಸ್ಥಿಕ ಹೂಡಿಕೆಯ ಒಳಹರಿವು ಹೆಚ್ಚಳವು ರೂಪಾಯಿ ಮೌಲ್ಯದ ವೃದ್ಧಿಗೆ ಸಹಕಾರಿಯಾಗಲಿದೆ' ಎಂದು ಬಿಎನ್‌ಪಿ ಪರಿಬಾಸ್‌ನ ಅನುಜ್ ಚೌಧರಿ ಹೇಳಿದ್ದಾರೆ.

ಮಂಗಳವಾರದ ವಹಿವಾಟಿನಲ್ಲಿ ಡಾಲರ್ ಎದುರು ರೂಪಾಯಿ ಮೌಲ್ಯವು 4 ಪೈಸೆ ಏರಿಕೆಯಾಗಿ ₹83.43ಕ್ಕೆ ತಲುಪಿತ್ತು.

ಸುದ್ದಿ 2 ನಿಮಿಷ

ಕೈಗಾ ಟೆಂಡರ್: ಮೇಘಾ ತೆಕ್ಕೆಗೆ

ಬೆಂಗಳೂರು: ರಾಜ್ಯದ ಕೈಗಾ ಸ್ಥಾವರದಲ್ಲಿ ಪರಮಾಣು ವಿದ್ಯುತ್ ಉತ್ಪಾದಿಸುವ ಯೋಜನೆಗೆ ಸಂಬಂಧಿಸಿದ ಟೆಂಡರ್ ಪಡೆಯುವಲ್ಲಿ ಮೇಘಾ ಎಂಜಿನಿಯರಿಂಗ್ ಆ್ಯಂಡ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್ (ಎಂಇಐಎಲ್) ಯಶಸ್ವಿಯಾಗಿದೆ.

ನ್ಯೂಕ್ಲಿಯರ್ ಪವರ್ ಕಾರ್ಪೊರೇಷನ್ ಆಫ್ ಇಂಡಿಯಾ (ಎನ್‌ಪಿಸಿಐಎಲ್) ಶುದ್ಧ ಹಾಗೂ ಸುರಕ್ಷಿತ ಅಣು ವಿದ್ಯುತ್ ಉತ್ಪಾದನೆಗಾಗಿ ಮಹತ್ವದ ಹೆಜ್ಜೆ ಇಟ್ಟಿದೆ. ಕೈಗಾದಲ್ಲಿ 2x700 ಮೆಗಾವಾಟ್ ವಿದ್ಯುತ್ ಉತ್ಪಾದಿಸುವ ಯೋಜನೆ ರೂಪಿಸಿದೆ.

ಇದಕ್ಕಾಗಿ ಎನ್‌ಪಿಸಿಐಎಲ್ ₹12,799 ಕೋಟಿ ಮೊತ್ತದ ಟೆಂಡರ್ ಕರೆದಿತ್ತು. ಸದ್ಯ ಈ ಪ್ರಕ್ರಿಯೆ ಪೂರ್ಣಗೊಂಡಿದೆ. ಕಡಿಮೆ ಮೊತ್ತದ ಬಿಡ್ ಸಲ್ಲಿಸಿದ್ದ ಮೇಘಾ ಎಂಜಿನಿಯರಿಂಗ್ ಆ್ಯಂಡ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್ ಈ ಟೆಂಡರ್ ಪಡೆದಿದೆ.

2023ರ ಮೇ ತಿಂಗಳಿನಲ್ಲಿ ಈ ಟೆಂಡರ್ ಪ್ರಕ್ರಿಯೆ ಪ್ರಾರಂಭವಾಗಿತ್ತು. ಅದೇ ವರ್ಷದ ಅಕ್ಟೋಬರ್‌ನಲ್ಲಿ ತಾಂತ್ರಿಕ ಬಿಡ್ ತೆರೆಯಲ್ಪಟ್ಟಿತು. ಅತ್ಯಂತ ಸ್ಪರ್ಧಾತ್ಮಕ ಬಿಡ್ಡಿಂಗ್ ಪ್ರಕ್ರಿಯೆಯಲ್ಲಿ ಬಿಎಚ್‌ಇಎಲ್, ಎಲ್ ಆ್ಯಂಡ್ ಟಿ ಮತ್ತು ಎಂಇಐಎಲ್ ಬಿಡ್ ಸಲ್ಲಿಸಿದ್ದವು.

'ಈ ಒಪ್ಪಂದವು ಎಂಇಐಎಲ್‌ಗೆ ಮಹತ್ವದ ಯೋಜನೆಯಾಗಿದೆ. ಜತೆಗೆ, ಪರಮಾಣು ಇಂಧನ ಕ್ಷೇತ್ರದ ಪ್ರವೇಶಕ್ಕೆ ಉತ್ತಮ ವೇದಿಕೆಯನ್ನು ಕಲ್ಪಿಸಿದೆ' ಎಂದು ಎಂಇಐಎಲ್ ನಿರ್ದೇಶಕ ಸಿ.ಎಚ್. ಸುಬ್ಬಯ್ಯ ತಿಳಿಸಿದ್ದಾರೆ.

'ಕಂಪನಿಯು ಉತ್ಕೃಷ್ಟತೆ ಮತ್ತು ನಾವೀನ್ಯತೆಗೆ ಹೆಸರುವಾಸಿಯಾಗಿದೆ. ಈ ಯೋಜನೆ ಮೂಲಕ ದೇಶದ ಶುದ್ಧ ಇಂಧನ ಪರಿಹಾರ ಮತ್ತು ಸ್ವಾವಲಂಬನೆಗೆ ಕೊಡುಗೆ ಸಲ್ಲಿಸಲು ಉತ್ಸುಕವಾಗಿದೆ' ಎಂದು ತಿಳಿಸಿದ್ದಾರೆ.

NPCIL

ಬಿಗಾಸ್‌ನ ವಿದ್ಯುತ್‌ಚಾಲಿತ ದ್ವಿಚಕ್ರ ವಾಹನ ಬಿಡುಗಡೆ

ಬೆಂಗಳೂರು: ಆರ್.ಆರ್. ಗ್ಲೋಬಲ್‌ನ ಪ್ರವರ್ತಕ ಕಂಪನಿಯಾದ ಬಿಗಾಸ್, ಹೊಸ ಮಾದರಿಯ ವಿದ್ಯುತ್‌ಚಾಲಿತ 'ಆರ್‌ಯುವಿ350' ದ್ವಿಚಕ್ರ ವಾಹನವನ್ನು ಮಾರುಕಟ್ಟೆ ಬಿಡುಗಡೆ ಮಾಡಿದೆ.

ಜುಲೈನಿಂದ ಎಲ್ಲಾ 120 ಬಿಗಾಸ್ ಡೀಲರ್‌ಶಿಪ್‌ಗಳಲ್ಲಿ ಈ ದ್ವಿಚಕ್ರ ವಾಹನವು ಖರೀದಿಗೆ ಲಭ್ಯವಿದೆ. ಇದರ ಆರಂಭಿಕ ಬೆಲೆ ₹1,09,999 ಆಗಿದೆ.

'ನಗರ ಪ್ರದೇಶದ ಪ್ರಯಾಣಿಕರ ಅಗತ್ಯತೆ ಪೂರೈಸಲು ಈ ದ್ವಿಚಕ್ರ ವಾಹನವನ್ನು ವಿನ್ಯಾಸಗೊಳಿಸಲಾಗಿದೆ. ಆಧುನಿಕ ಫೀಚರ್‌ಗಳನ್ನು ಒಳಗೊಂಡಿದೆ. ಗಟ್ಟಿಯಾದ ಲೋಹದ ದೇಹ ಹೊಂದಿದ್ದು, ಸವಾರರ ಸುರಕ್ಷತೆಗೆ ಒತ್ತು ನೀಡಲಾಗಿದೆ. ಜೊತೆಗೆ, ಆರಾಮದಾಯಕ ಸವಾರಿಯ ಅನುಭವ ನೀಡಲಿದೆ' ಎಂದು ಬಿಗಾಸ್ ಸಂಸ್ಥಾಪಕ ಮತ್ತು ವ್ಯವಸ್ಥಾಪಕ ನಿರ್ದೇಶಕ ಹೇಮಂತ್ ಕಾಬ್ರಾ ತಿಳಿಸಿದ್ದಾರೆ.

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	18000-28500
ಹೊಸತು	28500-37500
ಹಳತು	37500-45500
ಕಾರ್ಕಳ	
ಹೊಸತು	25000-38000
ಹಳತು	30000-46000
ಕುಮಟ	
ಬೆಟ್ಟೆ	32299-40209
ಚಿಪ್ಪು	25869-29099
ಕೋಕ	13869-25099
ಫ್ಯಾಕ್ಟರಿ	10169-20170
ಹಳೆಚಾಲಿ	35989-37599
ಹೊಸಚಾಲಿ	31189-34999
ಶಿವಮೊಗ್ಗ	
ಬೆಟ್ಟೆ	42509-55500
ಗೊರಬಲು	16509-34707
ರಾಶಿ	30038-51389
ಸರಕು	54100–86006
ಸಿದ್ದಾಪುರ	
ಬಿಳಿಗೋಟು	25719-28499
ಚಾಲಿ	33129-35599
ಕೋಕ	24900-26600
ಕೆಂಪುಗೋಟು	27500-28119
ರಾಶಿ	41889-46699
ತಟ್ಟಿಬೆಟ್ಟೆ	32899-42319
ಶಿರಸಿ	
ಬೆಟ್ಟೆ	30009-44899
ಬಿಳಿಗೋಟು	21900-29611
ಚಾಲಿ	32561-35711
ಕೆಂಪುಗೋಟು	15900-29699
ರಾಶಿ	44099-47479

ಎಸ್‌ಬಿಐ: ಬಾಂಡ್ ವಿತರಣೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾವು (ಎಸ್‌ಬಿಐ) ಮೂಲ ಸೌಕರ್ಯ ಬಾಂಡ್ ವಿತರಣೆ ಮೂಲಕ ₹10 ಸಾವಿರ ಕೋಟಿ ಬಂಡವಾಳ ಸಂಗ್ರಹಿಸಲು ಮುಂದಾಗಿದೆ.

'ಈ ಬಾಂಡ್‌ಗಳಿಗೆ ವಾರ್ಷಿಕ ಶೇ 7.36ರಷ್ಟು ಬಡ್ಡಿ ದರ ನಿಗದಿಪಡಿಸಲಾಗಿದೆ. ನಿರೀಕ್ಷೆಗೂ ಮೀರಿ ಬಾಂಡ್ ಖರೀದಿಗೆ ₹19,884 ಕೋಟಿ ಮೌಲ್ಯದ 143 ಬಿಡ್‌ಗಳು ಸಲ್ಲಿಕೆಯಾಗಿವೆ' ಎಂದು ಎಸ್‌ಬಿಐ, ಷೇರುಪೇಟೆಗೆ ಬುಧವಾರ ಮಾಹಿತಿ ನೀಡಿದೆ.

ಭವಿಷ್ಯ ನಿಧಿ, ಪಿಂಚಣಿ ನಿಧಿ, ವಿಮಾ ಕಂಪನಿಗಳು, ಮ್ಯೂಚುವಲ್ ಫಂಡ್ ಕಂಪನಿಗಳು ಹಾಗೂ ಕಾರ್ಪೊರೇಟ್ ಕಂಪನಿಗಳು ಬಿಡ್ ಸಲ್ಲಿಸಿವೆ. ದೀರ್ಘಾವಧಿಯ ಈ ಬಾಂಡ್‌ಗಳಿಂದ ಸಂಗ್ರಹಿಸುವ ಬಂಡವಾಳವನ್ನು ಕೈಗೆಟಕುವ ವಸತಿ ನಿರ್ಮಾಣದ ಮೂಲ ಸೌಕರ್ಯಕ್ಕೆ ಸಾಲ ನೀಡಲು ವಿನಿಯೋಗಿಸಲಾಗುವುದು ಎಂದು ತಿಳಿಸಿದೆ.


ಉಪಗ್ರಹ ಆಧಾರಿತ ಟೋಲ್ ಸಂಗ್ರಹ ಜಾರಿ

ನವದೆಹಲಿ (ಪಿಟಿಐ): 'ದೇಶದಲ್ಲಿ ಪ್ರಸಕ್ತ ಹಣಕಾಸು ವರ್ಷದಡಿ 5 ಸಾವಿರಕ್ಕೂ ಹೆಚ್ಚು ಕಿ.ಮೀ.ನಷ್ಟು ರಾಷ್ಟ್ರೀಯ ಹೆದ್ದಾರಿ ವ್ಯಾಪ್ತಿಯಲ್ಲಿ ಉಪಗ್ರಹ ಆಧಾರಿತ ಶುಲ್ಕ ಸಂಗ್ರಹ ವ್ಯವಸ್ಥೆಯನ್ನು ಜಾರಿಗೊಳಿಸಲಾಗುವುದು' ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವ ನಿತಿನ್ ಗಡ್ಕರಿ ತಿಳಿಸಿದ್ದಾರೆ.

ಟೋಲ್ ಪ್ಲಾಜಾಗಳ ಬದಲಾಗಿ ಉಪಗ್ರಹ ಆಧಾರಿತ ಟೋಲ್ ವ್ಯವಸ್ಥೆ ಜಾರಿ ಸಂಬಂಧ ಹಮ್ಮಿಕೊಂಡಿದ್ದ ಅಂತರರಾಷ್ಟ್ರೀಯಮಟ್ಟದ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

'ಹೆದ್ದಾರಿಗಳು ಸುಸ್ಥಿತಿಯಲ್ಲಿ ಇಲ್ಲದಿದ್ದರೆ ಏಜೆನ್ಸಿಗಳು ಬಳಕೆದಾರರಿಂದ ಶುಲ್ಕ ಸಂಗ್ರಹಿಸಬಾರದು' ಎಂದು ಸೂಚಿಸಿದರು.

'ಏಜೆನ್ಸಿಗಳು ಗುಣಮಟ್ಟದ ಸೇವೆ ನೀಡಲು ವಿಫಲವಾದರೆ ಯಾವುದೇ ಕಾರಣಕ್ಕೂ ಶುಲ್ಕ ಸಂಗ್ರಹಿಸಬಾರದು. ಆದರೆ, ತಮ್ಮ ಹಿತಾಸಕ್ತಿ ಕಾಪಾಡಿಕೊಳ್ಳಲು ಬಳಕೆದಾರರಿಂದ ತರಾತುರಿಯಲ್ಲಿ ಶುಲ್ಕ ಸಂಗ್ರಹಿಸುತ್ತಿವೆ' ಎಂದರು.



ನಿತಿನ್ ಗಡ್ಕರಿ

ಹೊಸ ವ್ಯವಸ್ಥೆ ಹೇಗೆ?: ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಜಿಎನ್‌ಎಸ್‌ಎಸ್ (ಗ್ಲೋಬಲ್ ನ್ಯಾವಿಗೇಷನ್ ಸ್ಯಾಟಲೈಟ್ ಸಿಸ್ಟಂ) ಆಧಾರಿತ ಎಲೆಕ್ಟ್ರಾನಿಕ್ ಟೋಲ್ ಕಲೆಕ್ಷನ್‌ಗೆ (ಇಟಿಸಿ) ಮುಂದಾಗಿದೆ. ಫಾಸ್ಟ್ಯಾಗ್ ವ್ಯವಸ್ಥೆಯನ್ನೇ ಶುಲ್ಕ ಸಂಗ್ರಹಕ್ಕೆ ಬಳಸಿಕೊಳ್ಳಲಿದೆ.

ಆರಂಭಿಕ ಹಂತದಲ್ಲಿ ಫಾಸ್ಟ್ಯಾಗ್ ವ್ಯವಸ್ಥೆ ಬಳಸಿಕೊಂಡೇ ಜಿಎನ್‌ಎಸ್‌ಎಸ್–ಇಟಿಸಿ ವ್ಯವಸ್ಥೆ ಜಾರಿಯಾಗಲಿದೆ. ಕೆಲಕಾಲ ಹಾಲಿ ಇರುವ ಆರ್‌ಎಫ್‌ಐಡಿ–ಇಟಿಸಿ (ರೇಡಿಯೊ ಫ್ರೀಕ್ವೆನ್ಸಿ ಐಡೆಂಟಿಫಿಕೇಷನ್) ಮತ್ತು ಹೊಸ ವ್ಯವಸ್ಥೆ ಎರಡೂ ಜಾರಿಯಲ್ಲಿ ಇರಲಿವೆ.

ಮೊದಲಿಗೆ ವಾಣಿಜ್ಯ ವಾಹನಗಳಿಗೆ ಈ ಹೊಸ ವ್ಯವಸ್ಥೆ ಜಾರಿಗೆ ಬರಲಿದೆ. ಬಳಿಕ ಖಾಸಗಿ ವಾಹನಗಳಿಗೆ ಈ ಸೇವೆ ವಿಸ್ತರಿಸಲು ಪ್ರಾಧಿಕಾರವು ನಿರ್ಧರಿಸಿದೆ. ವಂಚನೆ ತಡೆಗಟ್ಟುವ ಸಂಬಂಧ ಚಾಲಕರ ವರ್ತನೆ ಹಾಗೂ ಬಳಕೆಗೆ ಸಂಬಂಧಿಸಿದ ದತ್ತಾಂಶಗಳ ವಿಶ್ಲೇಷಣೆಗೂ ಪ್ರಾಧಿಕಾರವು, ಸಾರಿಗೆ ಸಚಿವಾಲಯಕ್ಕೆ ಶಿಫಾರಸು ಮಾಡಿದೆ.

ಜಿಎನ್‌ಎಸ್‌ಎಸ್ ಪಾವತಿ ಮಾದರಿಯನ್ನು ಪ್ರಿಪೇಯ್ಡ್‌ನಿಂದ ಪೋಸ್ಟ್ ಪೇಯ್ಡ್‌ಗೆ ಬದಲಾಯಿಸಬೇಕು. ಇದರಿಂದ ಬ್ಯಾಂಕ್ ಹಾಗೂ ಬ್ಯಾಂಕೇತರ ಹಣಕಾಸು ಸಂಸ್ಥೆಗಳು ತ್ವರಿತಗತಿಯ ಶುಲ್ಕ ಜಮಾ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಲು ನೆರವಾಗಲಿದೆ ಎಂದು ಹೇಳಿದೆ.

ಇರಾನ್: ಮತ್ತೆ ಹಿಜಾಬ್ ವಿವಾದ

ದುಬೈ (ಎಪಿ): ಇರಾನ್ ರಾಜಧಾನಿ ಟೆಹರಾನ್‌ನ ವಿವಿಧ ವೃತ್ತಗಳು, ಅಡ್ಡ ರಸ್ತೆಗಳಲ್ಲಿ ಮಧ್ಯಾಹ್ನದ ವೇಳೆ ಪೊಲೀಸರು ಭೇಟಿ ನೀಡಿ ಹಿಜಾಬ್ ಸರಿಯಾಗಿ ಧರಿಸದ, ಧರಿಸದೆಯೇ ಇರುವ ಮಹಿಳೆಯರಿಗಾಗಿ ಹುಡುಕಾಟ ನಡೆಸುವುದು ಇದೀಗ ಪ್ರತಿನಿತ್ಯದ ಬೆಳವಣಿಗೆಯಾಗಿದೆ.

ಪೊಲೀಸರು ಹಿಜಾಬ್ ನಿಯಮ ಧಿಕ್ಕರಿಸಿದವರನ್ನು ಹುಡುಕಿ ಶಿಕ್ಷಿಸುವುದಕ್ಕೆ ಕೆಲವು ತಿಂಗಳು ತಡೆ ಬಿದ್ದಿತ್ತು. ಅದಕ್ಕೆ ಕಾರಣವಾಗಿದ್ದು ಮಾಸಾ ಅಮೀನಿ ಎಂಬ ಯುವತಿಯ ಸಾವು. ಮಾಸಾ ಅಮೀನಿ ಹಿಜಾಬ್ ಸರಿಯಾಗಿ ಧರಿಸಿಲ್ಲ ಎನ್ನುವ ಆರೋಪದ ಮೇಲೆ ಪೊಲೀಸರು ಸೆಪ್ಟೆಂಬರ್ 2022ರಲ್ಲಿ ಬಂಧಿಸಿದ್ದರು. ಪೊಲೀಸ್ ಕಸ್ಟಡಿಯಲ್ಲಿ ಆಕೆ ಮೃತಪಟ್ಟಿದ್ದರು.

ನಂತರ ಕೆಲವು ತಿಂಗಳು ನೈತಿಕ ಪೊಲೀಸರು ಇರಾನ್‌ನ ಬೀದಿಗಳಿಂದ ಕಣ್ಮರೆಯಾಗಿದ್ದರು.

ಇದೀಗ ಮಹಿಳೆಯರನ್ನು ಪೊಲೀಸರು ತಮ್ಮ ವ್ಯಾನ್‌ಗಳಲ್ಲಿ ಹಾಕಿಕೊಂಡು ಹೋಗುವ ದೃಶ್ಯಗಳು ಎಲ್ಲೆಡೆ ಹರಿದಾಡತೊಡಗಿವೆ. ಕೂದಲನ್ನು ಹಿಜಾಬ್‌ನಿಂದ ಮುಚ್ಚಿಕೊಳ್ಳದ ಮಹಿಳೆಯರ ಸಾವಿರಾರು ಕಾರನ್ನು ಪೊಲೀಸರು ವಶಕ್ಕೆ ಪಡೆಯುತ್ತಿದ್ದಾರೆ. ಇರಾನ್ ಅಧ್ಯಕ್ಷರಾಗಿದ್ದ ಇಬ್ರಾಹಿಂ ರೈಸಿ ವಿಮಾನ ಅಪಘಾತದಲ್ಲಿ ಸಾಯುವುದಕ್ಕೆ ಮುಂಚೆಯೇ ಹಿಜಾಬ್ ನಿಯಮವನ್ನು ಧಿಕ್ಕರಿಸಿದವರಿಗಾಗಿ ಪೊಲೀಸರ ಹುಡುಕಾಟ ಆರಂಭವಾಗಿತ್ತು. ಇರಾನ್‌ನಲ್ಲಿ ಜೂನ್ 28ರಂದು ಅಧ್ಯಕ್ಷೀಯ ಚುನಾವಣೆ ನಡೆಯಲಿದೆ. ಈ ಚುನಾವಣೆಯಲ್ಲಿ ಯಾರು ಗೆಲ್ಲುತ್ತಾರೆ ಎನ್ನುವುದರ ಮೇಲೆ ದೇಶದಲ್ಲಿ ಮುಂದೆ ಹಿಜಾಬ್ ನಿಯಮ ಯಾವ ರೀತಿ ಜಾರಿಗೆ ಬರಲಿದೆ ಎನ್ನುವುದು ನಿರ್ಧಾರವಾಗಲಿದೆ.



ಇರಾನ್‌ನ ಸುಧಾರಣಾವಾದಿ ರಾಷ್ಟ್ರಪತಿ ಅಭ್ಯರ್ಥಿ ಮಸೌದ್ ಪೆಜೆಸ್ಕಿಯಾನ್ ಅವರ ಪೋಸ್ಟರ್‌ಗಳು ಅಂಟಿಸಿರುವ ರಸ್ತೆಯಲ್ಲಿ ಮಹಿಳೆಯರು ನಡೆದು ಹೋದರು – ಎಎಫ್‌ಪಿ ಚಿತ್ರ

ಚುನಾವಣೆ ಬಹಿಷ್ಕಾರಕ್ಕೆ ಕರೆ: ಅಧ್ಯಕ್ಷ ಚುನಾವಣೆಯ ಕಣದಲ್ಲಿರುವ ಅಭ್ಯರ್ಥಿಗಳ ಪೈಕಿ ಪೆಜೆಸ್ಕಿಯಾನ್ ಮಾತ್ರವೇ ಹಿಜಾಬ್ ನಿಯಮವನ್ನು ಟೀಕಿಸಿದ್ದಾರೆ. ಉಳಿದಂತೆ, ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಘೇರ್ ಕ್ವಾಲಿಬಫ್ ನಿಯಮವನ್ನು ಸೂಕ್ಷ್ಮ ರೀತಿಯಲ್ಲಿ ಜಾರಿ ಮಾಡಬೇಕು ಎಂದು ಪ್ರತಿಪಾದಿಸಿದ್ದಾರೆ. ಮೊಸ್ತಾಫಾ ಪೌರ್‌ಮೊಹಮ್ಮದಿ ಮಹಿಳೆಯರ ಮೇಲಿನ ಹಿಂಸೆಯನ್ನು ಖಂಡಿಸಿದ್ದು, ಪೊಲೀಸರು ದಂಡನೆಯ ಮಾರ್ಗ ಬಿಟ್ಟು ವಿಶ್ವಾಸ ಮತ್ತು ನಂಬಿಕೆಯ ದಾರಿ ಅನುಸರಿಸಬೇಕು ಎಂದಿದ್ದಾರೆ. ಇನ್ನೊಂದೆಡೆ, ನೊಬೆಲ್ ಶಾಂತಿ ಪ್ರಶಸ್ತಿ ವಿಜೇತೆಯಾಗಿರುವ ಮಹಿಳಾ ಹಕ್ಕು ಹೋರಾಟಗಾರ್ತಿ ನರ್ಗೀಸ್ ಮೊಹಮ್ಮದಿ ಅಧ್ಯಕ್ಷ ಚುನಾವಣೆಯನ್ನು ಬಹಿಷ್ಕರಿಸಬೇಕೆಂದು ಜೈಲಿನಿಂದಲೇ ಕರೆ ನೀಡಿದ್ದಾರೆ.

ನಿರೀಕ್ಷೆ ₹96,238 ಕೋಟಿ, ಸಂಗ್ರಹ ₹11 ಸಾವಿರ ಕೋಟಿ

ಒಂದನೇ ಪುಟದಿಂದ...

'ಕಂಪನಿಯ ಅಂಗಸಂಸ್ಥೆಯಾದ ಭಾರ್ತಿ ಹೆಕ್ಸಾಕಾಮ್ ₹1,000 ಕೋಟಿ ಮೌಲ್ಯದ 15 ಮೆಗಾ ಹರ್ಟ್ಜ್ ತರಂಗಾಂತರ ಖರೀದಿಸಿದೆ' ಎಂದು ಭಾರ್ತಿ ಏರ್‌ಟೆಲ್ ತಿಳಿಸಿದೆ.

900 ಮೆಗಾ ಹರ್ಟ್ಜ್, 1,800 ಮೆಗಾ ಹರ್ಟ್ಜ್ ಹಾಗೂ 2,100 ಮೆಗಾ ಹರ್ಟ್ಜ್ ಬ್ಯಾಂಡ್‌ಗಳಿಂದ ಒಟ್ಟು 97 ಮೆಗಾ ಹರ್ಟ್ಜ್ ತರಂಗಾಂತರ ಖರೀದಿಸಲಾಗಿದೆ ಎಂದು ಹೇಳಿದೆ. 'ಗ್ರಾಹಕರಿಗೆ ಉತ್ತಮ ಸೇವೆ ನೀಡುವುದೇ ಕಂಪನಿಯ ಗುರಿಯಾಗಿದೆ. ಇದಕ್ಕೆ ಅನುಗುಣವಾಗಿ ತರಂಗಾಂತರಗಳನ್ನು ಖರೀದಿಸಲಾಗಿದೆ. ಇದರಿಂದ ಕಂಪನಿ ಹೊಂದಿರುವ ಸಬ್ ಗಿಗಾ ಹರ್ಟ್ಜ್ ಹಾಗೂ ಮಿಡ್ ಬ್ಯಾಂಡ್ ಸೇವೆಯ ಬಲವರ್ಧನೆಗೆ ಸಹಕಾರಿಯಾಗಲಿದೆ' ಎಂದು ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಗೋಪಾಲ್ ವಿಟ್ಟಲ್ ತಿಳಿಸಿದ್ದಾರೆ.

ರಿಲಯನ್ಸ್ ಜಿಯೊ ₹973 ಕೋಟಿ ಹಾಗೂ ವೊಡಾಫೋನ್ ಐಡಿಯಾ ಕಂಪನಿಯು ₹3,510 ಕೋಟಿ ಮೌಲ್ಯದ ತರಂಗಾಂತರಗಳನ್ನು ಖರೀದಿಸಿದೆ.

ಬಿಸಿಗಾಳಿ: 450 ಮಂದಿ ಸಾವು

ಕರಾಚಿ (ಪಿಟಿಐ): ಬಿಸಿಗಾಳಿಯ ತೀವ್ರತೆಯಿಂದ ಪಾಕಿಸ್ತಾನದ ಅತಿದೊಡ್ಡ ನಗರವಾಗಿರುವ ಕರಾಚಿಯಲ್ಲಿ ಕಳೆದ ನಾಲ್ಕು ದಿನಗಳಲ್ಲಿ 450 ಮಂದಿ ಮೃತಪಟ್ಟಿದ್ದಾರೆ ಎಂದು ಸರ್ಕಾರೇತರ ಸಂಸ್ಥೆ ಎಧಿ ಫೌಂಡೇಶನ್ ಬುಧವಾರ ತಿಳಿಸಿದೆ.

ಬಂದರು ನಗರವಾಗಿರುವ ಕರಾಚಿಯಲ್ಲಿ ಶನಿವಾರದಿಂದ 40ಕ್ಕಿಂತ ಹೆಚ್ಚು ಡಿಗ್ರಿ ಸೆಲ್ಸಿಯಸ್‌ನಷ್ಟು ತಾಪಮಾನ ದಾಖಲಾಗುತ್ತಿದೆ. ಜೊತೆಗೆ ಕರಾವಳಿ ಪ್ರದೇಶಗಳಲ್ಲಿ ಬಿಸಿಲಿನ ಬೇಗೆ ಮತ್ತಷ್ಟು ಹೆಚ್ಚಿದೆ.

ಈ ಕುರಿತು ಪ್ರತಿಕ್ರಿಯಿಸಿದ ಎಧಿ ಫೌಂಡೇಶನ್ ಮುಖ್ಯಸ್ಥ ಫೈಸಲ್ ಎಧಿ, 'ಕರಾಚಿಯಲ್ಲಿ ನಾವು ಶವಾಗಾರವನ್ನು ನಿರ್ವಹಿಸುತ್ತಿದ್ದೇವೆ. ಹೆಚ್ಚುವರಿಯಾಗಿ ಬರುವ ಶವಗಳನ್ನು ಇಡಲು ಶವಾಗಾರದಲ್ಲಿ ಸ್ಥಳಾವಕಾಶವೇ ಇಲ್ಲದ ಸ್ಥಿತಿ ನಿರ್ಮಾಣವಾಗಿದೆ' ಎಂದರು.

ಮುಂಬೈ ಧಾರಣೆ (ಶೇಂಗಾ)

26-6-2024

ಜಾವಾ 70/80(ಹೊಸ)	11500-11600
ಜಾವಾ 80/90(ಹೊಸ)	11100-11200
ದಪ್ಪ ಮಧ್ಯಪ್ರದೇಶ(ಹೊಸ)	10100-10200
ದಪ್ಪ ಗುಜರಾತ್(ಹೊಸ)	10900-11000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1540 (1540)
ಒಂದು ವಾರದ ಡೆಲಿವರಿ	1535 (1535)
ಸೋಯಾ ಕಚ್ಚಾ	910 (915)
ಪಾಮ್ ವಾರದ ಡೆಲಿವರಿ	902 (903)
ಸೂರ್ಯಕಾಂತಿ ಎಣ್ಣೆ ಕಚ್ಚಾ	915 (920)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಚಿನ್ನ 10ಗ್ರಾಂ	₹70,800 (71,500)
ಬೆಳ್ಳಿ ಕೆ.ಜಿ	₹86,800 (88,400)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹201
ಆರ್‌ಎಸ್‌ಎಸ್-5	₹193
ಗುಡ್ ಲಾಟ್	₹180

(ಪ್ರತಿ ಕೆ.ಜಿಗೆ)

ತಾಯ್ನಾಡು ತಲುಪಿದ ಅಸ್ಸಾಂಜೆ

ಕ್ಯಾನ್‌ಬೆರಾ (ಎಪಿ): ದಶಕದ ಕಾನೂನು ಹೋರಾಟದ ನಂತರ ವಿಕಿಲೀಕ್ಸ್ ಸಂಸ್ಥಾಪಕ ಜೂಲಿಯನ್ ಅಸ್ಸಾಂಜೆ ಅವರು ಬುಧವಾರ ತಮ್ಮ ತಾಯ್ನಾಡು ಆಸ್ಟ್ರೇಲಿಯಾಕ್ಕೆ ಮರಳಿದರು.

ಅಮೆರಿಕದ ಸೇನಾ ರಹಸ್ಯ ಮಾಹಿತಿಗಳನ್ನು ಅಕ್ರಮವಾಗಿ ಪಡೆದು ಪ್ರಕಟಿಸಿದ ಬೇಹುಗಾರಿಕೆ ಆರೋಪದ ಪ್ರಕರಣದಲ್ಲಿ ಅಸ್ಸಾಂಜೆ ಬಂಧಿತರಾಗಿದ್ದರು. ನ್ಯಾಯಾಂಗ ಇಲಾಖೆಯ ಪ್ರಾಸಿಕ್ಯೂಟರ್‌ಗಳೊಂದಿಗಿನ ಒಪ್ಪಂದದ ಅನುಸಾರ ತಪ್ಪೊಪ್ಪಿಗೆ ಹೇಳಿಕೆ ನೀಡಿದ ಕೆಲವು ಗಂಟೆಗಳ ನಂತರ ಅಸ್ಸಾಂಜೆ ಅವರಿಗೆ ಸೈಪಾನ್‌ನಿಂದ ತಮ್ಮ ತಾಯ್ನಾಡಿಗೆ ಮರಳಲು ಅನುಮತಿಸಲಾಯಿತು.

52 ವರ್ಷದ ಅಸ್ಸಾಂಜೆ ಅವರು ಉತ್ತರ ಮರಿಯಾನಾ ದ್ವೀಪಗಳ ರಾಜಧಾನಿ ಸೈಪಾನ್‌ನಲ್ಲಿರುವ ಅಮೆರಿಕದ ಜಿಲ್ಲಾ ನ್ಯಾಯಾಲಯದಲ್ಲಿ ತಮ್ಮ ತಪ್ಪೊಪ್ಪಿಗೆಯ ಮನವಿ ಸಲ್ಲಿಸಿದರು. ಇದರೊಂದಿಗೆ ದಶಕದಿಂದ ಅವರು ಎದುರಿಸುತ್ತಿದ್ದ ಅಂತರರಾಷ್ಟ್ರೀಯ ಪಿತೂರಿಯ ಕ್ರಿಮಿನಲ್ ಪ್ರಕರಣವು ಅತ್ಯಂತ ಅಸಾಮಾನ್ಯ ಸನ್ನಿವೇಶದಲ್ಲಿ ಮತ್ತು ಆಶ್ಚರ್ಯಕರ ರೀತಿಯಲ್ಲಿ ಅಂತ್ಯ ಕಂಡಿತು.

ಸೋಮವಾರ ರಾತ್ರಿ ಲಂಡನ್ ಜೈಲಿನಿಂದ ಬಿಡುಗಡೆಯಾಗಿದ್ದ ಅಸ್ಸಾಂಜೆ ಅವರು ಪ್ರಯಾಣಿಸುತ್ತಿದ್ದ ವಿಶೇಷ ವಿಮಾನವನ್ನು ಇಂಧನ ಭರ್ತಿಗಾಗಿ ಮಂಗಳವಾರ ಬ್ಯಾಂಕಾಕ್‌ನಲ್ಲಿ ಇಳಿಸಲಾಗಿತ್ತು. ಇಲ್ಲಿಂದ ಬುಧವಾರ ಸೈಪಾನ್ ತಲುಪಿದ ಅಸ್ಸಾಂಜೆ, ನ್ಯಾಯಾಲಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದ ನಂತರ ಅದೇ ವಿಮಾನದಲ್ಲಿ ಆಸ್ಟ್ರೇಲಿಯಾ ರಾಜಧಾನಿ ಕ್ಯಾನ್‌ಬೆರಾ ತಲುಪಿದ್ದಾರೆ.



ಜೂಲಿಯನ್ ಅಸ್ಸಾಂಜೆ

ಸೈಪಾನ್ ನ್ಯಾಯಾಲಯದ ಹೊರಗೆ ಮಾತನಾಡಿದ ಅಸ್ಸಾಂಜೆಯವರ ವಕೀಲರಾದ ಜೆನ್ನಿಫರ್ ರಾಬಿನ್ಸನ್ ಅವರು, 'ಆಸ್ಟ್ರೇಲಿಯಾದ ಪ್ರಧಾನಿ ಅಲ್ಬನೀಸ್ ಅವರ ರಾಜನೀತಿ, ಅವರ ನಾಯಕತ್ವ ಹಾಗೂ ಅವರ ರಾಜತಾಂತ್ರಿಕತೆಯಿಂದ ಅಸ್ಸಾಂಜೆಯವರ ಬಿಡುಗಡೆಯನ್ನು ಸಾಧ್ಯವಾಗಿಸಿತು' ಎಂದು ಧನ್ಯವಾದ ಸಲ್ಲಿಸಿದರು.

ಅಸ್ಸಾಂಜೆ ಕ್ಯಾನ್‌ಬೆರಾದಿಂದ ಎಲ್ಲಿಗೆ ಹೋಗಲಿದ್ದಾರೆ ಮತ್ತು ಅವರ ಭವಿಷ್ಯದ ಯೋಜನೆಗಳೇನು ಎಂಬುದು ಇನ್ನೂ ಸ್ಪಷ್ಟವಾಗಿಲ್ಲ.

ಅಬಕಾರಿ ನೀತಿ ಹಗರಣ ನಂಟಿನ ಭ್ರಷ್ಟಾಚಾರ ಪ್ರಕರಣ • ಬಿಜೆಪಿಯಿಂದ ಸಿಬಿಐ ದುರ್ಬಳಕೆ– ಎಎಪಿ

ಕೇಜ್ರಿವಾಲ್: 3 ದಿನ ಸಿಬಿಐ ಕಸ್ಟಡಿಗೆ

ಪ್ರಜಾವಾಣಿ ವಾರ್ತೆ/ಪಿಟಿಐ



ಅರವಿಂದ ಕೇಜ್ರಿವಾಲ್

ನವದೆಹಲಿ: ತಿಹಾರ್ ಜೈಲಿನಲ್ಲಿ ನ್ಯಾಯಾಂಗ ಬಂಧನದಲ್ಲಿದ್ದ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರನ್ನು ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದ ಭ್ರಷ್ಟಾಚಾರ ಪ್ರಕರಣದಲ್ಲಿ ಸಿಬಿಐ ಬುಧವಾರ ಬಂಧಿಸಿದ್ದು, ದೆಹಲಿ ನ್ಯಾಯಾಲಯವು ಅವರನ್ನು ಮೂರು ದಿನಗಳವರೆಗೆ ಸಿಬಿಐ ಕಸ್ಟಡಿಗೆ ನೀಡಿದೆ.

ವಿಶೇಷ ನ್ಯಾಯಾಧೀಶರಿಂದ ಅನುಮತಿ ಪಡೆದ ಬಳಿಕ ಸಿಬಿಐ, ಕೇಜ್ರಿವಾಲ್ ಅವರನ್ನು ಬಂಧಿಸಿತು. ಆ ಬಳಿಕ ಅವರನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲಾಯಿತು.

ಜಾರಿ ನಿರ್ದೇಶನಾಲಯವು ತನಿಖೆ ನಡೆಸುತ್ತಿರುವ ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಕೇಜ್ರಿವಾಲ್‌ಗೆ ನೀಡಲಾಗಿದ್ದ ಜಾಮೀನಿಗೆ ದೆಹಲಿ ಹೈಕೋರ್ಟ್ ತಡೆಯಾಜ್ಞೆ ನೀಡಿದ ಒಂದು ದಿನದ ಬಳಿಕ ಈ ಬೆಳವಣಿಗೆ ನಡೆದಿದೆ.

‘ಪ್ರಕರಣದಲ್ಲಿ ದೊಡ್ಡ ಪಿತೂರಿ ನಡೆದಿದ್ದು, ಅದನ್ನು ಬಹಿರಂಗಪಡಿಸಲು ಕೇಜ್ರಿವಾಲ್ ಅವರನ್ನು ವಿಚಾರಣೆಗೆ ಒಳಪಡಿಸುವ ಅಗತ್ಯವಿದೆ. ಹೀಗಾಗಿ ಅವರನ್ನು ಐದು ದಿನ ತನ್ನ ಕಸ್ಟಡಿಗೆ ವಹಿಸುವಂತೆ’ ಸಿಬಿಐ ಕೋರಿತ್ತು.

‘ಕೇಜ್ರಿವಾಲ್ ದುರುದ್ದೇಶದಿಂದ ಅನಗತ್ಯ ಆರೋಪಗಳನ್ನು ಮಾಡುತ್ತಿದ್ದಾರೆ. ಚುನಾವಣೆಗೂ ಮುನ್ನ ನಾವು ಈ ಪ್ರಕ್ರಿಯೆಗಳನ್ನು ನಡೆಸಬಹುದಿತ್ತು. ಆದರೆ ಆ ರೀತಿ ಮಾಡಿಲ್ಲ. ನಾವು, ನಮ್ಮ ಕೆಲಸವನ್ನು ಮಾಡುತ್ತಿದ್ದೇವೆ’ ಎಂದೂ ಸಿಬಿಐ ಪರ ವಕೀಲರು ಹೇಳಿದರು.

‘ಕೇಜ್ರಿವಾಲ್‌ರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುವ ಅಗತ್ಯವಿದೆ. ಅವರು ಸಹ ಆರೋಪಿಯಾದ ವಿಜಯ್ ನಾಯರ್ ತನ್ನ ಅಡಿಯಲ್ಲಿ ಕೆಲಸ ಮಾಡುತ್ತಿದ್ದರು ಎಂಬುದನ್ನು ಗುರುತಿಸಿಲ್ಲ. ಸಚಿವರಾದ ಆತಿಶಿ ಮತ್ತು ಸೌರಭ್ ಭಾರದ್ವಾಜ್ ಅವರ ಅಡಿಯಲ್ಲಿ ನಾಯರ್ ಕೆಲಸ ಮಾಡುತ್ತಿದ್ದರು ಎಂದು ಅವರು ಹೇಳಿದ್ದಾರೆ. ಅಲ್ಲದೆ ಅವರು ಸಂಪೂರ್ಣ ಜವಾಬ್ದಾರಿಯನ್ನು ಮನೀಶ್ ಸಿಸೋಡಿಯಾ ಅವರ ಮೇಲೆ ಹಾಕಿದ್ದಾರೆ. ಈ ಬಗ್ಗೆ ಅವರನ್ನು ವಿಚಾರಣೆಗೆ ಒಳಪಡಿಸಬೇಕಿದ್ದು, ದಾಖಲೆಗಳನ್ನು ಪರಿಶೀಲಿಸಬೇಕಿದೆ’ ಎಂದು ನ್ಯಾಯಾಲಯಕ್ಕೆ ಸಿಬಿಐ ತಿಳಿಸಿದೆ.

‘ದಕ್ಷಿಣದ ಲಾಬಿ’ ಗುಂಪು ಕೋವಿಡ್–19ರ ಅಲೆ ಉತ್ತುಂಗ ಮಟ್ಟದಲ್ಲಿದ್ದಾಗ ದೆಹಲಿಗೆ ಭೇಟಿ ನೀಡಿತ್ತು ಎಂದೂ ಸಿಬಿಐ ಹೇಳಿದೆ.

ಕೇಜ್ರಿವಾಲ್ ಅವರನ್ನು ಕಸ್ಟಡಿಗೆ ಕೋರಿ ಸಿಬಿಐ ಸಲ್ಲಿಸಿದ ಅರ್ಜಿಯು ಸಂಪೂರ್ಣವಾಗಿ ಅಸ್ಪಷ್ಟವಾಗಿದೆ ಎಂದು ಕೇಜ್ರಿವಾಲ್ ಪರ ವಕೀಲರು ವಿರೋಧ ವ್ಯಕ್ತಪಡಿಸಿದರು.

ತಿಹಾರ್ ಜೈಲಿನಲ್ಲಿ ಕೇಜ್ರಿವಾಲ್ ಅವರನ್ನು ಮಂಗಳವಾರ ಸಂಜೆ ವಿಚಾರಣೆಗೆ ಒಳಪಡಿಸಿದ ಬಗ್ಗೆ ನ್ಯಾಯಾಲಯದ ಆದೇಶ ಸೇರಿದಂತೆ, ವಿಚಾರಣೆಗೆ ಸಂಬಂಧಿಸಿದ ದಾಖಲೆಗಳನ್ನು ಒದಗಿಸಲು ಸಿಬಿಐಗೆ ಸೂಚಿಸುವಂತೆ ಕೇಜ್ರಿವಾಲ್ ಪರ ವಕೀಲರು ನ್ಯಾಯಾಲಯವನ್ನು ಕೋರಿದರು.

ನಾನು ನಿರಪರಾಧಿ: ಕೇಜ್ರಿವಾಲ್

ನ್ಯಾಯಾಲಯದಲ್ಲಿ ಹೇಳಿಕೆ ದಾಖಲಿಸಿದ ಅರವಿಂದ ಕೇಜ್ರಿವಾಲ್, ‘ನಾನು ಈ ಪ್ರಕರಣದಲ್ಲಿ ನಿರಪರಾಧಿ ಆಗಿದ್ದೇನೆ. ಅಲ್ಲದೆ ಮಾಜಿ ಉಪ ಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ಮತ್ತು ಎಎಪಿ ಸಹ ನಿರಪರಾಧಿ’ ಎಂದು ಹೇಳಿದರು.

‘ನಾನು ಸಂಪೂರ್ಣ ಆರೋಪವನ್ನು ಸಿಸೋಡಿಯಾ ಅವರ ಮೇಲೆ ಹೊರಿಸಿದ್ದೇನೆ ಎಂದು ಸಿಬಿಐ ಮೂಲಗಳನ್ನು ಉಲ್ಲೇಖಿಸಿ ಮಾಧ್ಯಮಗಳು ವರದಿ ಮಾಡುತ್ತಿವೆ. ಆದರೆ ನಾನು ಸಿಸೋಡಿಯಾ ಸೇರಿದಂತೆ ಯಾರನ್ನೂ ತಪ್ಪಿತಸ್ಥರು ಎಂದು ಯಾವುದೇ ಹೇಳಿಕೆ ನೀಡಿಲ್ಲ. ಈ ಪ್ರಕರಣದಲ್ಲಿ ಸಿಸೋಡಿಯಾ, ಎಎಪಿ ಮತ್ತು ನಾನು ನಿರಪರಾಧಿಗಳೇ ಆಗಿದ್ದೇವೆ’ ಎಂದು ಅವರು ಪ್ರತಿಪಾದಿಸಿದರು.

ಸಿಬಿಐ ದುರ್ಬಳಕೆ– ಎಎಪಿ ಆರೋಪ

‘ಸರ್ವಾಧಿಕಾರಿ ಧೋರಣೆಯು ಎಲ್ಲ ಮಿತಿಗಳನ್ನು ಮೀರಿದೆ. ಇದಕ್ಕೆ ತಕ್ಕ ಉತ್ತರ ನೀಡುತ್ತೇವೆ. ಕೇಜ್ರಿವಾಲ್ ಅವರಿಗೆ ಇಂದು ಸುಪ್ರೀಂ ಕೋರ್ಟ್‌ನಲ್ಲಿ ಜಾಮೀನು ಸಿಗುವ ಸಾಧ್ಯತೆಗಳಿದ್ದವು. ಇದರಿಂದ ಗಾಬರಿಗೊಂಡಿರುವ ಬಿಜೆಪಿಯು ಸಿಬಿಐ ಅನ್ನು ದುರ್ಬಳಕೆ ಮಾಡಿಕೊಂಡು ನಕಲಿ ಪ್ರಕರಣದಲ್ಲಿ ಅವರನ್ನು ಬಂಧಿಸಿದೆ. ಬಿಜೆಪಿಯ ಪ್ರತಿ ಷಡ್ಯಂತ್ರಕ್ಕೂ ಉತ್ತರ ಸಿಗುತ್ತದೆ. ಕೊನೆಗೆ ಸತ್ಯ ಗೆಲ್ಲುತ್ತದೆ’ ಎಂದು ಎಎಪಿ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದೆ.

ಎಎಪಿಯ ರಾಜ್ಯಸಭಾ ಸದಸ್ಯ ಸಂಜಯ್ ಸಿಂಗ್, ‘ಇಡೀ ದೇಶ ಬಿಜೆಪಿಯ ದೌರ್ಜನ್ಯವನ್ನು ಗಮನಿಸುತ್ತಿದೆ. ದೇಶದ ಜನರು ಇದರ ವಿರುದ್ಧ ನಿಲ್ಲುತ್ತಾರೆ’ ಎಂದು ‘ಎಕ್ಸ್’ನಲ್ಲಿ ಪ್ರತಿಕ್ರಿಯಿಸಿದ್ದಾರೆ.



ಮಕ್ಕಳ ಸಾಹಸ... ಪಶ್ಚಿಮ ಬಂಗಾಳದ ನಾದಿಯಾ ಜಿಲ್ಲೆಯಲ್ಲಿ ಬಿಸಿಲಿನ ಧಗೆಯಿಂದ ಬಸವಳಿದ ಮಕ್ಕಳು ನೀರಾಟದಲ್ಲಿ ತೊಡಗಿದರು –ಪಿಟಿಐ ಚಿತ್ರ

ವಸ್ತ್ರಸಂಹಿತೆ: ವಿದ್ಯಾರ್ಥಿನಿಯರ ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

ಮುಂಬೈ: ಹಿಜಾಬ್, ನಿಕಾಬ್, ಬುರ್ಖಾ, ಟೋಪಿ ಮತ್ತು ಸ್ಟೋಲ್ ಧರಿಸಲು ಮುಂಬೈನ ಕಾಲೇಜೊಂದು ನಿರ್ಬಂಧ ವಿಧಿಸಿರುವುದನ್ನು ಪ್ರಶ್ನಿಸಿ ಕೆಲವು ವಿದ್ಯಾರ್ಥಿನಿಯರು ಸಲ್ಲಿಸಿದ್ದ ಅರ್ಜಿಯನ್ನು ಬಾಂಬೆ ಹೈಕೋರ್ಟ್ ವಜಾಗೊಳಿಸಿದೆ.

ನ್ಯಾಯಮೂರ್ತಿಗಳಾದ ಎ.ಎಸ್. ಚಂದೂರ್ಕರ್ ಮತ್ತು ರಾಜೇಶ್ ಪಾಟೀಲ್ ಅವರು ಇದ್ದ ವಿಭಾಗೀಯ ಪೀಠವು ಅರ್ಜಿಯನ್ನು ವಜಾಗೊಳಿಸಿದೆ. ಕಾಲೇಜು ಆಡಳಿತ ಮಂಡಳಿಯ ತೀರ್ಮಾನದಲ್ಲಿ ತಾನು ಮಧ್ಯಪ್ರವೇಶಿಸಬೇಕಾದ ಅಗತ್ಯ ಇಲ್ಲ ಎಂದು ಹೇಳಿದೆ.

ಚೆಂಬೂರ್ ಟ್ರಾಂಬೆ ಎಜುಕೇಷನ್ ಸೊಸೈಟಿಯ ಎನ್.ಜಿ. ಆಚಾರ್ಯ ಮತ್ತು ಡಿ.ಕೆ. ಮರಾಠೆ ಕಾಲೇಜಿನ ಕೆಲವು ವಿದ್ಯಾರ್ಥಿನಿಯರು ಈ ಅರ್ಜಿ ಸಲ್ಲಿಸಿದ್ದರು. ‘ಕಾಲೇಜಿನ ಆಡಳಿತ ಮಂಡಳಿ ಕೈಗೊಂಡ ತೀರ್ಮಾನವು ಕಾನೂನಿಗೆ ಅನುಗುಣವಾಗಿಲ್ಲ’ ಎಂದು ಅರ್ಜಿಯಲ್ಲಿ ಹೇಳಲಾಗಿತ್ತು.

ಭಾರತೀಯ ಸಾಗರೋತ್ತರ ಕಾಂಗ್ರೆಸ್ ಅಧ್ಯಕ್ಷ


ಪಿತ್ರೊಡಾ ಮರುನೇಮಕ

ಪ್ರಜಾವಾಣಿ ವಾರ್ತೆ

ನವದೆಹಲಿ: ಸ್ಯಾಮ್ ಪಿತ್ರೊಡಾ ಅವರನ್ನು ಭಾರತೀಯ ಸಾಗರೋತ್ತರ ಕಾಂಗ್ರೆಸ್ ಅಧ್ಯಕ್ಷರನ್ನಾಗಿ ಬುಧವಾರ ಮರುನೇಮಕ ಮಾಡಲಾಗಿದೆ. ಈ ಹುದ್ದೆಯಲ್ಲೇ ಹಿಂದೆ ಇದ್ದ ಅವರು, ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಭಾರತದ ವೈವಿಧ್ಯತೆ ಬಗ್ಗೆ ನೀಡಿದ ಕೆಲವು ವಿವರಣೆಗಳು ಜನಾಂಗೀಯ ನಿಂದನೆಯವು ಎಂಬ ಆರೋಪಕ್ಕೆ ಗುರಿಯಾಗಿದ್ದವು. ನಂತರ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದರು.

‘ಕಾಂಗ್ರೆಸ್ಸಿನ ಅಧ್ಯಕ್ಷರು ಸ್ಯಾಮ್ ಪಿತ್ರೊಡಾ ಅವರನ್ನು ಭಾರತೀಯ ಸಾಗರೋತ್ತರ ಕಾಂಗ್ರೆಸ್ಸಿನ ಅಧ್ಯಕ್ಷರನ್ನಾಗಿ ತಕ್ಷಣದಿಂದ ಜಾರಿಗೆ ಬರುವಂತೆ ನೇಮಿಸಿದ್ದಾರೆ’ ಎಂದು ಪಕ್ಷದ ಸಂಘಟನಾ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಹೇಳಿದ್ದಾರೆ.

ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರ ಆಪ್ತ ವಲಯದಲ್ಲಿ ಪಿತ್ರೊಡಾ ಗುರುತಿಸಿಕೊಂಡಿದ್ದಾರೆ. ದೇಶದ ಈಶಾನ್ಯ ರಾಜ್ಯಗಳ ಜನರನ್ನು ಚೀನೀಯರಿಗೆ, ದಕ್ಷಿಣ ಭಾಗದ ಜನರನ್ನು ಆಫ್ರಿಕನ್ನರಿಗೆ, ಪಶ್ಚಿಮ ಭಾಗದ ಜನರನ್ನು ಅರಬ್ಬರಿಗೆ, ಉತ್ತರ ಭಾರತೀಯರನ್ನು ಶ್ವೇತ ವರ್ಣೀಯರಿಗೆ ಹೋಲಿಸಿದ್ದು ವಿವಾದಕ್ಕೆ ತಿರುಗಿತ್ತು. ನಂತರ ಅವರು ತಮ್ಮ ಸ್ಥಾನಕ್ಕೆ ಮೇ 8ರಂದು ರಾಜೀನಾಮೆ ಸಲ್ಲಿಸಿದ್ದರು.



ಸ್ಯಾಮ್ ಪಿತ್ರೊಡಾ

ಪಿತ್ರಾರ್ಜಿತ ಆಸ್ತಿ ತೆರಿಗೆ ಬಗ್ಗೆ ಅವರು ಆಡಿದ್ದ ಮಾತುಗಳನ್ನು ಬಿಜೆಪಿಯು ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಕಾಂಗ್ರೆಸ್ಸಿನ ಮೇಲೆ ವಾಗ್ದಾಳಿ ನಡೆಸಲು ಬಳಸಿಕೊಂಡಿತ್ತು. ಪಿತ್ರೊಡಾ ಮಾತುಗಳಿಂದ ಕಾಂಗ್ರೆಸ್ ಪಕ್ಷವು ಎರಡೂ ಸಂದರ್ಭಗಳಲ್ಲಿ ಅಂತರ ಕಾಯ್ದುಕೊಂಡಿತ್ತು.

ಅಲ್ಲದೆ, ಪಿತ್ರೊಡಾ ಅವರು ನೀಡಿರುವ ಹೋಲಿಕೆಗಳು ದುರದೃಷ್ಟಕರ ಹಾಗೂ ಒಪ್ಪಿಕೊಳ್ಳಲು ಆಗದವು ಎಂದು ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಹೇಳಿದ್ದರು.

ಸಂಕ್ಷಿಪ್ತ ಸುದ್ದಿ

ರ್‍ಯಾಗಿಂಗ್: ವಿದ್ಯಾರ್ಥಿ ಕಿಡ್ನಿಗೆ ಹಾನಿ

ಜೈಪುರ: ಹಿರಿಯ ವಿದ್ಯಾರ್ಥಿಗಳು ನಡೆಸಿದ ರ್‍ಯಾಗಿಂಗ್ ಭಾಗವಾಗಿ, 350 ಪುಶ್ ಅಪ್‌ಗಳನ್ನು ಮಾಡಿದ ಪರಿಣಾಮ ಮೊದಲ ವರ್ಷದ ವೈದ್ಯಕೀಯ ವಿದ್ಯಾರ್ಥಿಯೊಬ್ಬ ಡಯಾಲಿಸಿಸ್‌ಗೆ ಒಳಗಾದ ಆಘಾತಕಾರಿ ಪ್ರಕರಣ ರಾಜಸ್ಥಾನದ ಡುಂಗರಪುರದಲ್ಲಿ ನಡೆದಿದೆ.

ಈ ಸಂಬಂಧ ಸಲ್ಲಿಕೆಯಾದ ದೂರಿನ ಕುರಿತು ರ್‍ಯಾಗಿಂಗ್ ನಿಗ್ರಹ ಸಮಿತಿಯು ತನಿಖೆ ನಡೆಸಿದ್ದು, ಈ ರೀತಿಯ ಆಘಾತಕಾರಿ ಪ್ರಕರಣ ನಡೆದಿರುವುದು ನಿಜ ಎಂಬುದಾಗಿ ತಿಳಿಸಿದೆ ಎಂದು ಪೊಲೀಸರು ಹೇಳಿದ್ದಾರೆ. ಪ್ರಥಮ್ ವ್ಯಾಸ್ ಎಂಬ ವಿದ್ಯಾರ್ಥಿಯೇ ಡಯಾಲಿಸಿಸ್‌ಗೆ ಒಳಗಾದವರು.

ಈ ಘಟನೆಗೆ ಸಂಬಂಧಿಸಿ, ವಿದ್ಯಾರ್ಥಿಗಳಾದ ದೇವೇಂದ್ರ ಮೀನಾ, ಅಂಕಿತ್ ಯಾದವ್, ರವೀಂದ್ರ ಕಲ್ರಿಯಾ, ಸುರ್ಜೀತ್ ದಬ್ರಿಯಾ, ವಿಶ್ವವೇಂದ್ರ ಧಯಾಲ್, ಸಿದ್ಧಾರ್ಥ ಪರಿಹಾರ್ ಮತ್ತು ಅಮನ್ ರಗೇರಾ ಎಂಬುವವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಈ ಎಲ್ಲ ವಿದ್ಯಾರ್ಥಿಗಳನ್ನು ಕಾಲೇಜು ಆಡಳಿತ ಮಂಡಳಿ ಅಮಾನತುಗೊಳಿಸಿದೆ. ಮೇ 15ರಂದು ಪ್ರಥಮ್ ವ್ಯಾಸ್ ಹಾಗೂ ಇತರ ವಿದ್ಯಾರ್ಥಿಗಳಿಗೆ ರ್‍ಯಾಗಿಂಗ್ ಮಾಡಲಾಗಿದೆ. ಈ ವೇಳೆ, ಪ್ರಥಮ್ ಹಾಗೂ ಇತರರಿಂದ 350 ಪುಶ್ ಅಪ್‌ಗಳನ್ನು ಮಾಡಿಸಲಾಗಿದೆ. ಇದರಿಂದ ತೀವ್ರವಾಗಿ ಬಳಲಿದ್ದ ಪ್ರಥಮ್ ಅವರ ಮೂತ್ರಪಿಂಡ ಹಾಗೂ ಯಕೃತ್‌ಗೆ ತೀವ್ರ ಸ್ವರೂಪದ ಸೋಂಕು ಉಂಟಾಗಿದೆ.

ದಲಿತ ಯುವಕನಿಗೆ ಥಳಿತ; ಮೂವರ ಸೆರೆ

ಚತರಪುರ್ (ಮಧ್ಯಪ್ರದೇಶ): ದಲಿತ ಯುವಕನ ವಿವಸ್ತ್ರಗೊಳಿಸಿ, ಗಂಭೀರವಾಗಿ ಹಲ್ಲೆ ನಡೆಸಿದ ಪ್ರಕರಣವು ಮಧ್ಯ ಪ್ರದೇಶದ ಚತರಪುರ್‌ನಲ್ಲಿ ವರದಿಯಾಗಿದ್ದು, ಪ್ರಕರಣ ಸಂಬಂಧ ಮೂವರನ್ನು ಬಂಧಿಸಲಾಗಿದೆ.

ಮೂರರಿಂದ ನಾಲ್ಕು ದಿನಗಳ ಹಿಂದೆ ಘಟನೆ ನಡೆದಿದ್ದು, ಹಲ್ಲೆ ನಡೆಸಲು ಖಚಿತ ಕಾರಣ ಗೊತ್ತಾಗಿಲ್ಲ.

ಸಾಮಾಜಿಕ ಜಾಲತಾಣದಲ್ಲಿ ಈ ವಿಡಿಯೊ ಹರಿದಾಡಿತ್ತು. ತಲೆಯಲ್ಲಿ ತೀವ್ರವಾಗಿ ರಕ್ತಸ್ರಾವವಾಗುತ್ತಿದ್ದರೂ, ಸಂತ್ರಸನನ್ನು ಇಬ್ಬರು ಯುವಕರು ಬಲವಂತದಿಂದ ವಿವಸ್ತ್ರಗೊಳಿಸಿ, ಬೆಲ್ಟ್‌ನಿಂದ ಹಲ್ಲೆ ನಡೆಸಿ, ನಾಡ ಪಿಸ್ತೂಲ್ ಹಿಡಿದು ನಿಂತಿರುವುದು ವಿಡಿಯೊದಲ್ಲಿ ಕಂಡುಬಂದಿದೆ. ಮತ್ತೊಬ್ಬ ವ್ಯಕ್ತಿ ವಿಡಿಯೊ ಚಿತ್ರೀಕರಿಸಿದ್ದರು.

ಆರೋಪಿಗಳು ಸಂತ್ರಸ್ತನ ವಿರುದ್ಧ ಅವಾಚ್ಯವಾಗಿ ನಿಂದಿಸಿದ್ದು, ಪೊಲೀಸ್ ಪಡೆಯಲ್ಲಿರುವ ತನ್ನ ಸಂಬಂಧಿಯನ್ನು ಕರೆಯುವಂತೆ ತಿಳಿಸಿದ್ದಾರೆ. ನಂತರ ಸಂತ್ರಸ್ತನನ್ನು ಬೆತ್ತಲೆಯಾಗಿ ಓಡಿ ಹೋಗುವಂತೆ ತಿಳಿಸಿದ್ದು ವಿಡಿಯೊದಲ್ಲಿ ಸೆರೆಯಾಗಿದೆ.

‘ರಾತ್ರಿ ವೇಳೆ ಮನೆಗೆ ತೆರಳುತ್ತಿದ್ದ ಸಂತ್ರಸ್ತನನ್ನು ಕೊಟ್ವಾಲಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಆರೋಪಿಗಳು ಆತನನ್ನು ತಡೆದು ಕರೆದೊಯ್ದಿದ್ದಾರೆ’ ಎಂದು ಚತರಪುರ್ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆಗಂ ಜೈನ್ ತಿಳಿಸಿದರು.

‘ವಿಡಿಯೊದ ಮಾಹಿತಿ ತಿಳಿಯುತ್ತಿದ್ದಂತೆಯೇ, ಮೂವರು ಆರೋಪಿಗಳನ್ನು ಬಂಧಿಸಲಾಗಿದೆ. ಬಂಧಿತರು ಅಪರಾಧ ಹಿನ್ನಲೆಯುಳ್ಳವರಾಗಿದ್ದಾರೆ’ ಎಂದರು.

ತಮಿಳುನಾಡು: ಜಾತಿ ಗಣತಿ ಪರ ನಿರ್ಣಯ

ಚೆನ್ನೈ: ಜನಗಣತಿಯ ಪ್ರಕ್ರಿಯೆ ಆರಂಭಿಸುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಿರುವ ತಮಿಳುನಾಡು ಸರ್ಕಾರವು, ಬುಧವಾರ ವಿಧಾನಸಭೆಯಲ್ಲಿ ನಿರ್ಣಯ ಅಂಗೀಕರಿಸಿದೆ.

ಜಾತಿ ಕುರಿತ ದತ್ತಾಂಶ ಸಂಗ್ರಹಿಸುವುದು ಮತ್ತು ಅದರ ಆಧಾರದಲ್ಲಿ ಕಾನೂನು ರೂಪಿಸುವ ವಿಚಾರದಲ್ಲಿ ರಾಜ್ಯ ಸರ್ಕಾರಗಳಿಗೆ ಇರುವ ಮಿತಿ ಹಾಗೂ ಕಾನೂನು ತೊಡಕುಗಳನ್ನು ಗಮನದಲ್ಲಿಟ್ಟುಕೊಂಡು ನಿರ್ಣಯ ಅಂಗೀಕರಿಸಲಾಗಿದೆ ಎಂದು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಹೇಳಿದ್ದಾರೆ.

ಕೇರಳ: ಎನ್‌ಟಿಎ ಪರೀಕ್ಷಾ ಅಕ್ರಮ ಖಂಡಿಸಿ ನಿರ್ಣಯ

ತಿರುವನಂತಪುರ (ಪಿಟಿಐ): ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ನಡೆಸಿದ ‘ಯುಜಿ–ನೀಟ್’ ಮತ್ತು ‘ಯುಜಿಸಿ–ನೆಟ್’ ಪರೀಕ್ಷೆಗಳಲ್ಲಿನ ಅಕ್ರಮಗಳನ್ನು ಖಂಡಿಸಿ ಕೇರಳ ವಿಧಾನಸಭೆ ಬುಧವಾರ ಸರ್ವಾನುಮತದಿಂದ ನಿರ್ಣಯ ಅಂಗೀಕರಿಸಿತು.

ಈ ಪರೀಕ್ಷೆಗಳಿಂದ ಸಂಕಷ್ಟಕ್ಕೆ ಒಳಗಾಗಿರುವ ಅಭ್ಯರ್ಥಿಗಳ ಸಮಸ್ಯೆಗಳನ್ನು ಪರಿಹರಿಸಲು ಕೇಂದ್ರ ಸರ್ಕಾರವು ತುರ್ತಾಗಿ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ನಿರ್ಣಯದಲ್ಲಿ ಒತ್ತಾಯಿಸಲಾಗಿದೆ.

ಈ ಪರೀಕ್ಷಾ ಅಕ್ರಮಗಳು ಎನ್‌ಟಿಎ ವಿಶ್ವಾಸಾರ್ಹತೆ ಮತ್ತು ಸಾಮರ್ಥ್ಯವನ್ನು ಪ್ರಶ್ನಿಸುತ್ತವೆ ಎಂದು ಆಡಳಿತಾರೂಢ ಎಲ್‌ಡಿಎಫ್ ಮತ್ತು ವಿರೋಧ ಪಕ್ಷ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಸದಸ್ಯರು ಅಸಮಾಧಾನ ವ್ಯಕ್ತಪಡಿಸಿದರು.

‘ಚಂದ್ರನ ಅಂಗಳದಿಂದ ಮಾದರಿ ತರುವ ಗುರಿ’

ಪ್ರಜಾವಾಣಿ ವಾರ್ತೆ



ಸೋಮನಾಥ್

ನವದೆಹಲಿ: ಚಂದಿರನ ದಕ್ಷಿಣ ಧ್ರುವದಲ್ಲಿ ಗಗನನೌಕೆಯನ್ನು ಇಳಿಸುವಲ್ಲಿ ಯಶಸ್ಸು ಕಂಡಿರುವ ಇಸ್ರೊ, ಈಗ ಚಂದ್ರನ ಅಂಗಳಕ್ಕೆ ಮತ್ತೊಮ್ಮೆ ತೆರಳಿ, ಅಲ್ಲಿನ ಮಾದರಿಗಳನ್ನು ಮರಳಿ ಭೂಮಿಗೆ ತರುವ ಬಾಹ್ಯಾಕಾಶ ಕಾರ್ಯಕ್ರಮ ‘ಚಂದ್ರಯಾನ–4’ಕ್ಕೆ ಸಿದ್ಧತೆ ನಡೆಸಿದೆ.

ಈ ಬಾಹ್ಯಾಕಾಶ ಕಾರ್ಯಕ್ರಮದ ಭಾಗವಾಗಿ, ಅಂತರಿಕ್ಷದಲ್ಲಿ ಗಗನನೌಕೆಗಳು ಪರಸ್ಪರ ಸಂಧಿಸುವ ಪ್ರಯೋಗದ ಪ್ರಾತ್ಯಕ್ಷಿಕೆಯನ್ನು ವರ್ಷಾಂತ್ಯಕ್ಕೆ ನಡೆಸಲು ಉದ್ದೇಶಿಸಲಾಗಿದೆ ಎಂದು ಇಸ್ರೊ ಅಧ್ಯಕ್ಷ ಎಸ್.ಸೋಮನಾಥ್ ಬುಧವಾರ ಹೇಳಿದ್ದಾರೆ.

ಇಲ್ಲಿ ನಡೆದ ಭಾರತೀಯ ಬಾಹ್ಯಾಕಾಶ ಸಮಾವೇಶದಲ್ಲಿ ಮಾತನಾಡಿದರು.

‘ಸ್ಪೇಡ್‌ಎಕ್ಸ್’ (ಸ್ಪೇಸ್ ಡಾಕಿಂಗ್ ಎಕ್ಸ್‌ಪರಿಮೆಂಟ್) ಹೆಸರಿನ ಈ ಕಾರ್ಯಕ್ರಮವನ್ನು ನವೆಂಬರ್–ಡಿಸೆಂಬರ್ ವೇಳೆಗೆ ಕಾರ್ಯಗತಗೊಳಿಸಲಾಗುವುದು. 2027ರ ವೇಳೆಗೆ ‘ಚಂದ್ರಯಾನ–4’ ಗಗನನೌಕೆ ಉಡ್ಡಯನಕ್ಕೆ ಪೂರ್ವಭಾವಿಯಾಗಿ ಈ ಯೋಜನೆಯನ್ನು ಕೈಗೊಳ್ಳಲಾಗುವುದು ಎಂದು ಹೇಳಿದ್ದಾರೆ.

‘2047ರ ವೇಳೆಗೆ ತಮ್ಮದೇ ಆದ ಬಾಹ್ಯಾಕಾಶ ನಿಲ್ದಾಣ ಸ್ಥಾಪಿಸುವುದು ಬಾಹ್ಯಾಕಾಶ ಕಾರ್ಯಕ್ರಮದ ಆದ್ಯತೆಯಾಗಿದೆ. ಇಂತಹ ನಿಲ್ದಾಣ ಸ್ಥಾಪನೆಯು ಚಂದ್ರನೆಡೆಗೆ ತೆರಳುವುದು ಮತ್ತಷ್ಟು ಸುಲಭವಾಗಲಿದೆ. ಶುಕ್ರ ಮತ್ತು ಮಂಗಳ ಗ್ರಹಗಳತ್ತ ಗಗನನೌಕೆಯನ್ನು ಕಳುಹಿಸುವುದು ಈಗಿನ ಆದ್ಯತೆಯಲ್ಲ’ ಎಂದಿದ್ದಾರೆ.

‘ಚಂದ್ರಯಾನ–4’ಕ್ಕೆ ಅಗತ್ಯವಿರುವ ಬಹು ಉಡ್ಡಯನಕ್ಕೆ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ಐದು ಹಂತಗಳಲ್ಲಿ ಕಾರ್ಯಗತಗೊಳಿಸಲಾಗುತ್ತದೆ.

ಚಂದ್ರನ ಅಂಗಳದಲ್ಲಿ ಗಗನನೌಕೆಯ ‘ಸಾಫ್ಟ್ ಲ್ಯಾಂಡಿಂಗ್’, ಅಲ್ಲಿನ ಮಾದರಿಗಳ ಸಂಗ್ರಹ, ಅವುಗಳನ್ನು ಚಂದ್ರನ ಕಕ್ಷೆಗೆ ತರುವುದು, ಭೂಮಿಯತ್ತ ಗಗನನೌಕೆಯ ಪಯಣ ನಂತರ, ಸುರಕ್ಷಿತವಾಗಿ ಲ್ಯಾಂಡಿಂಗ್ ಆಗುವುದು ಈ ಐದು ಹಂತಗಳಾಗಿವೆ.

ಪ್ಯಾರಿಸ್ ಒಲಿಂಪಿಕ್ಸ್: ಹಾಕಿ ತಂಡ ಪ್ರಕಟ

ಭಾರತಕ್ಕೆ ಹರ್ಮನ್‌ಪ್ರೀತ್ ನಾಯಕ


ನವದೆಹಲಿ (ಪಿಟಿಐ): ಅನುಭವಿ ಫಾರ್ವರ್ಡ್ ಹರ್ಮನ್‌ಪ್ರೀತ್ ಸಿಂಗ್ ಅವರನ್ನು ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಭಾಗವಹಿಸಲಿರುವ 16 ಸದಸ್ಯರ ಭಾರತ ಪುರುಷರ ಹಾಕಿ ತಂಡಕ್ಕೆ ನಾಯಕರನ್ನಾಗಿ ಬುಧವಾರ ನೇಮಕ ಮಾಡಲಾಗಿದೆ. ಐದು ಮಂದಿ ಆಟಗಾರರು ಮೊದಲ ಬಾರಿ ಒಲಿಂಪಿಕ್ಸ್‌ನಲ್ಲಿ ಆಡುವ ಅವಕಾಶ ಪಡೆದಿದ್ದಾರೆ.

2020ರ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆದ್ದಿದ್ದ ಭಾರತ ತಂಡ ಈ ಬಾರಿ ‘ಬಿ’ ಗುಂಪಿನಲ್ಲಿದೆ. ಬೆಲ್ಜಿಯಂ, ಆಸ್ಟ್ರೇಲಿಯಾ, ಅರ್ಜೆಂಟೀನಾ, ನ್ಯೂಜಿಲೆಂಡ್ ಮತ್ತು ಐರ್ಲೆಂಡ್ ಗುಂಪಿನಲ್ಲಿರುವ ಇತರ ತಂಡಗಳು. ಗುಂಪಿನಲ್ಲಿ ಮೊದಲ ನಾಲ್ಕು ಸ್ಥಾನ ಪಡೆಯುವ ತಂಡಗಳು ಕ್ವಾರ್ಟರ್ ಫೈನಲ್‌ಗೆ ಅರ್ಹತೆ ಪಡೆಯುತ್ತವೆ.

ನೆದರ್ಲೆಂಡ್ಸ್, ಜರ್ಮನಿ, ಬ್ರಿಟನ್, ಸ್ಪೇನ್, ದಕ್ಷಿಣ ಆಫ್ರಿಕಾ ಮತ್ತು ಆತಿಥೇಯ ಫ್ರಾನ್ಸ್ ‘ಎ’ ಗುಂಪಿನಲ್ಲಿವೆ.

ಭಾರತ ತಂಡದ ಆಟಗಾರರು ಬೆಂಗಳೂರಿನ ಭಾರತ ಕ್ರೀಡಾ ಪ್ರಾಧಿಕಾರದ ಕೇಂದ್ರದಲ್ಲಿ ತರಬೇತಿ ಶಿಬಿರದಲ್ಲಿ ಒಲಿಂಪಿಕ್ಸ್‌ಗೆ ಸಿದ್ಧತೆಯಲ್ಲಿ ತೊಡಗಿದ್ದಾರೆ.

ಅನುಭವಿ ಗೋಲ್‌ಕೀಪರ್ ಪಿ.ಆರ್. ಶ್ರೀಜೇಶ್ ಮತ್ತು ಮಿಡ್‌ಫೀಲ್ಡರ್ ಮನ್‌ಪ್ರೀತ್ ಸಿಂಗ್ ಅವರಿಗೆ ಇದು ನಾಲ್ಕನೇ ಒಲಿಂಪಿಕ್ಸ್. ನಾಯಕ ಹರ್ಮನ್‌ಪ್ರೀತ್ ಅವರಿಗೆ ಮೂರನೇ ಒಲಿಂಪಿಕ್ಸ್.



ಹರ್ಮನ್‌ಪ್ರೀತ್ ಸಿಂಗ್

ಒಲಿಂಪಿಕ್ಸ್	ಭಾರತದ ಪಂದ್ಯಗಳು
ಜುಲೈ 27	ನ್ಯೂಜಿಲೆಂಡ್ ವಿರುದ್ಧ
ಜುಲೈ 29	ಅರ್ಜೆಂಟೀನಾ ವಿರುದ್ಧ
ಜುಲೈ 30	ಐರ್ಲೆಂಡ್ ವಿರುದ್ಧ
ಆಗಸ್ಟ್ 1	ಬೆಲ್ಜಿಯಂ ವಿರುದ್ಧ
ಆಗಸ್ಟ್ 2	ಆಸ್ಟ್ರೇಲಿಯಾ ವಿರುದ್ಧ

ಜರ್ಮನ್‌ಪ್ರೀತ್ ಸಿಂಗ್, ಸಂಜಯ್, ರಾಜ್ ಕುಮಾರ್ ಪಾಲ್, ಅಭಿಷೇಕ್ ಮತ್ತು ಸುಖಜೀತ್ ಸಿಂಗ್ ಇದೇ ಮೊದಲ ಬಾರಿ ಒಲಿಂಪಿಕ್ಸ್‌ನಲ್ಲಿ ಆಡುತ್ತಿದ್ದಾರೆ.

ಟೋಕಿಯೊ ಗೇಮ್ಸ್‌ನಲ್ಲಿ 41 ವರ್ಷಗಳ ನಂತರ ಭಾರತ ಕಂಚಿನ ಪದಕ ಗೆದ್ದಿತ್ತು. ಆ ತಂಡದಲ್ಲಿದ್ದ ರೂಪಿಂದರ್ ಪಾಲ್ ಸಿಂಗ್ ಮತ್ತು ಬಿರೇಂದ್ರ ಲಾಕ್ರಾ ಅವರು ನಿವೃತ್ತರಾಗಿದ್ದಾರೆ. ಸುರೇಂದರ್ ಕುಮಾರ್ ಅವರನ್ನು ತಂಡದಿಂದ ಕೈಬಿಡಲಾಗಿದೆ.

ಟೋಕಿಯೊದಲ್ಲಿ ಆಡಿದ್ದ ನೀಲಕಂಠ ಶರ್ಮಾ ಮತ್ತು ಗೋಲ್‌ಕೀಪರ್ ಕೃಷ್ಣ ಬಹಾದ್ದೂರ್ ಪಾಠಕ್ ಕೂಡ ಬದಲಿ ಆಟಗಾರರ ಪಟ್ಟಿಯಲ್ಲಿದ್ದಾರೆ. ಪಾಠಕ್ ಕಳೆದ ಒಲಿಂಪಿಕ್ಸ್‌ನಲ್ಲೂ ಬದಲಿ ಆಟಗಾರರಾಗಿದ್ದರು. ದಿಲ್‌ಪ್ರೀತ್ ಅವರಿಗೆ ಕೊಕ್ ನೀಡಲಾಗಿದೆ. ಭಾರತ ಒಲಿಂಪಿಕ್ಸ್‌ನಲ್ಲಿ ಒಟ್ಟು 12 ಪದಕಗಳನ್ನು ಗೆದ್ದುಕೊಂಡಿದೆ. ಇವುಗಳಲ್ಲಿ ಎಂಟು ಚಿನ್ನ, ಒಂದು ಬೆಳ್ಳಿ ಮತ್ತು ಮೂರು ಕಂಚಿನ ಪದಕಗಳನ್ನು ಒಳಗೊಂಡಿವೆ.

ತಂಡ ಹೀಗಿದೆ

ಗೋಲ್‌ಕೀಪರ್: ಪಿ.ಆರ್. ಶ್ರೀಜೇಶ್. **ಡಿಫೆಂಡರ್ಸ್:** ಜರ್ಮನ್‌ಪ್ರೀತ್ ಸಿಂಗ್, ಅಮಿತ್ ರೋಹಿದಾಸ್, ಹರ್ಮನ್‌ಪ್ರೀತ್ ಸಿಂಗ್, ಸುಮಿತ್, ಸಂಜಯ್. **ಮಿಡ್‌ಫೀಲ್ಡರ್ಸ್:** ರಾಜಕುಮಾರ್ ಪಾಲ್, ಶಂಶೇರ್ ಸಿಂಗ್, ಮನ್‌ಪ್ರೀತ್ ಸಿಂಗ್, ಹಾರ್ದಿಕ್ ಸಿಂಗ್, ವಿವೇಕ್ ಸಾಗರ್ ಪ್ರಸಾದ್. **ಫಾರ್ವರ್ಡ್ಸ್:** ಅಭಿಷೇಕ್, ಸುಖಜೀತ್ ಸಿಂಗ್, ಲಲಿತ್ ಕುಮಾರ್ ಉಪಾಧ್ಯಾಯ, ಮನ್‌ದೀಪ್ ಸಿಂಗ್, ಗುರ್ಜಂತ್ ಸಿಂಗ್.

ಬದಲಿ ಆಟಗಾರರು: ನೀಲಕಂಠ ಶರ್ಮಾ, ಜುಗರಾಜ್ ಸಿಂಗ್, ಕೃಷನ್ ಬಹದ್ದೂರ್ ಪಾಠಕ್.

ಪ್ಯಾರಿಸ್ ಒಲಿಂಪಿಕ್ಸ್‌ಗೆ ಕರ್ನಾಟಕದ ಶ್ರೀಹರಿ, ಧಿನಿಧಿ

ಪ್ರಜಾವಾಣಿ ವಾರ್ತೆ



ಶ್ರೀಹರಿ ನಟರಾಜ್



ಧಿನಿಧಿ ದೇಸಿಂಗು

ಬೆಂಗಳೂರು: ನಗರದ ಈಜುಪಟುಗಳಾದ ಧಿನಿಧಿ ದೇಸಿಂಗು ಮತ್ತು ಶ್ರೀಹರಿ ನಟರಾಜ್ ಅವರು ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಲು ಅರ್ಹತೆ ಗಳಿಸಿದ್ದಾರೆ.

ಯುನಿವರ್ಸಲಿಟಿ ಪ್ಲೇಸಸ್ ಕ್ವಾಲಿಫಿಕೇಷನ್ ಸಿಸ್ಟಮ್‌ನಲ್ಲಿ ಅವರು ಸ್ಥಾನ ಪಡೆದಿದ್ದಾರೆ ಎಂದು ಬುಧವಾರ ಫಿನಾ (ಅಂತರರಾಷ್ಟ್ರೀಯ ಈಜು ಫೆಡರೇಷನ್) ಪ್ರಕಟಿಸಿದೆ.

14 ವರ್ಷದ ಧಿನಿಧಿ ಅವರು ಮಹಿಳೆಯರ ವಿಭಾಗದಲ್ಲಿ ಆಯ್ಕೆಯಾದ ಕಿರಿಯ ಈಜುಪಟುವಾಗಿದ್ದಾರೆ.

ಅಗ್ರ ರ್‍ಯಾಂಕ್ ಗಳಿಸಿರುವ ದೇಶದ ಇಬ್ಬರು ಈಜುಪಟುಗಳನ್ನು ಒಲಿಂಪಿಕ್ಸ್‌ಗೆ ಆಯ್ಕೆ ಮಾಡುವ ಅವಕಾಶ ರಾಷ್ಟ್ರೀಯ ಈಜು ಫೆಡರೇಷನ್ ಗೆ ಇರುತ್ತದೆ. ಭಾರತ ಈಜು ಫೆಡರೇಷನ್ (ಎಸ್‌ಎಫ್‌ಐ) ಮಹಿಳೆಯರ ವಿಭಾಗದಲ್ಲಿ ಧಿನಿಧಿ (749 ಅಂಕ) ಮತ್ತು ಪುರುಷರ ವಿಭಾಗದಲ್ಲಿ ಶ್ರೀಹರಿ (849 ಅಂಕ) ಅವರ ಹೆಸರುಗಳನ್ನು ಆಯ್ಕೆ ಮಾಡಿದೆ.

‘ನನಗೆ ಅಪಾರ ಸಂತಸವಾಗಿದೆ. ನನ್ನ ಜೀವಮಾನದ ಅನುಭವ ಇದಾಗಲಿದೆ’ ಎಂದು ಧಿನಿಧಿ ಹೇಳಿದ್ದಾರೆ.

ಅವರು ಮಹಿಳೆಯರ 200 ಮೀ ಫ್ರೀಸ್ಟೈಲ್ (ವೈಯಕ್ತಿಕ ಶ್ರೇಷ್ಠ: 2ನಿ,04.24ಸೆ)

ಶ್ರೀಹರಿ ನಟರಾಜ್ ಅವರು 2020ರ ಟೋಕಿಯೊ ಒಲಿಂಪಿಕ್ ಕೂಟದಲ್ಲಿ ಸ್ಪರ್ಧಿಸಿದ್ದರು. ಆದರೆ ಆಗ ಅವರು ಒಲಿಂಪಿಕ್ ಕ್ವಾಲಿಫಿಕೇಷನ್ ಟೈಮಿಂಗ್ (ಒಕ್ಯೂಟಿ)ಯಲ್ಲಿ ಅರ್ಹತೆ ಗಳಿಸಿದ್ದರು. ಆದರೆ ಈ ಬಾರಿ ಅವರು ವಿಫಲರಾಗಿ, ಯುನಿವರ್ಸಲಿಟಿಯಲ್ಲಿ ಆಯ್ಕೆಯಾಗಿದ್ದಾರೆ.

ಶ್ರೀಹರಿ 100 ಮೀ ಬ್ಯಾಕ್‌ಸ್ಟ್ರೋಕ್ (ವೈಯಕ್ತಿಕ ಶ್ರೇಷ್ಠ ಸಮಯ: 53.77ಸೆಕೆಂಡು) ವಿಭಾಗದಲ್ಲಿ ಸ್ಪರ್ಧಿಸುವರು.

‘ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯುವ ಭರವಸೆ ಇತ್ತು. ಅದು ಈಡೇರಲಿರುವುದು ಸಂತಸ ತಂದಿದೆ‘ ಎಂದು 23 ವರ್ಷದ ಶ್ರೀಹರಿ ಹೇಳಿದರು.

ಇಂಗ್ಲೆಂಡ್ ವಿರುದ್ಧ ‘ಡ್ರಾ’ ಮಾಡಿದ ಸ್ಲೊವೇನಿಯಾ

ಯುರೋ ಕಪ್ 2024 ಜರ್ಮನಿ

ಕೊಲೋನ್ (ಜರ್ಮನಿ), (ಎಎಫ್‌ಪಿ): ಇಂಗ್ಲೆಂಡ್ ತಂಡ ಬುಧವಾರ ನಡೆದ ಯುರೊ 2024 ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ಸ್ಲೊವೇನಿಯಾ ವಿರುದ್ಧ ಗೋಲಿಲ್ಲದೇ ‘ಡ್ರಾ’ ಮಾಡಿಕೊಳ್ಳುವುದಕ್ಕೇ ಸಮಾಧಾನ ಪಡಬೇಕಾಯಿತು. ಈ ನಿರಾಶಾದಾಯಕ ಆಟದ ನಡುವೆಯೂ ‘ಸಿ’ ಗುಂಪಿನಲ್ಲಿ ಅಗ್ರಸ್ಥಾನದೊಡನೆ ನಾಕೌಟ್ ತಲುಪಿತು.

ಸ್ಲೊವೇನಿಯಾ ಕೂಡ 16ರ ಸುತ್ತಿಗೆ ಮುನ್ನಡೆಯಿತು. ಆದರೆ ಹಾರಿ ಕೇನ್ ನೇತೃತ್ವದ ಇಂಗ್ಲೆಂಡ್ ತಂಡ ತೋರಿದ ಆಟದಿಂದ ನಿರಾಶರಾದ ಅಭಿಮಾನಿಗಳು ಆಟಗಾರರ ವಿರುದ್ಧ ಕೂಗೆಬ್ಬಿಸಿದರಲ್ಲದೇ, ತಂಡದ ಮ್ಯಾನೇಜರ್ ಗರೆತ್ ಸೌತ್‌ಗೇಟ್ ಅವರತ್ತ ಬಿಯರ್ ಕಪ್‌ಗಳನ್ನು ಎಸೆದರು.

ತಾರಾವರ್ಚಸ್ಸಿನ ಫಾರ್ವಡ್ ಆಟಗಾರರಿದ್ದ ಇಂಗ್ಲೆಂಡ್ ದಾಳಿಯನ್ನು ಸ್ಲೊವೇನಿಯಾ ಯಶಸ್ವಿಯಾಗಿ ಮೆಟ್ಟಿನಿಂತಿತು. ತನ್ಮೂಲಕ ಸ್ಲೊವೇನಿಯಾ 9 ಪಂದ್ಯಗಳಿಂದ ಅಜೇಯವಾಗಿ ಉಳಿಯಿತು.

ಗೋಲಿಲ್ಲದೇ ‘ಡ್ರಾ’: ಮ್ಯೂನಿಚ್‌ನಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಸರ್ಬಿಯಾ ತಂಡ ಶತಪ್ರಯತ್ನ ನಡೆಸಿದರೂ, ಡೆನ್ಮಾರ್ಕ್ ವಿರುದ್ಧದ ಅದರ ಪಂದ್ಯ 0–0 ಡ್ರಾ ಆಯಿತು. ಸರ್ಬಿಯಾ ‘ಡ್ರಾ’ದಿಂದಾಗಿ ಟೂರ್ನಿಯಿಂದ ಹೊರಬಿತ್ತು.

‘ಇ’ ಗುಂಪಿನಲ್ಲಿ ಸ್ಲೊವಾಕಿಯಾ 1–1ರಿಂದ ರೊಮೇನಿಯಾ ಜೊತೆ ಡ್ರಾ ಸಾಧಿಸಿತು. ಮತ್ತೊಂದು ಪಂದ್ಯದಲ್ಲಿ ಉಕ್ರೇನ್ ಗೋಲುರಹಿತವಾಗಿ ಬೆಲ್ಜಿಯಂನೊಂದಿಗೆ ಡ್ರಾ ಮಾಡಿಕೊಂಡಿತು. ರೊಮೇನಿಯಾ, ಬೆಲ್ಜಿಯಂ ಮತ್ತು ಸ್ಲೊವಾಕಿಯಾ ತಂಡಗಳು 16ರ ಘಟ್ಟ ಪ್ರವೇಶಿಸಿದರೆ, ಉಕ್ರೇನ್ ತಂಡ ನಿರ್ಗಮಿಸಿತು.

ವಿಟಿಯು ಅಥ್ಲೆಟಿಕ್ ಕೂಟ ತಿಶನ್, ಶ್ರೇಯಾಗೆ ಅಗ್ರಸ್ಥಾನ

ಮೈಸೂರು: ಸುಳ್ಯದ ಕೆವಿಜಿಸಿ ಎಂಜಿನಿಯರಿಂಗ್ ಕಾಲೇಜಿನ ಎ.ಎಂ. ತಿಶನ್ ಹಾಗೂ ಮಂಗಳೂರಿನ ಶ್ರೀದೇವಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಎಂ. ಶ್ರೇಯಾ ಅವರು ಇಲ್ಲಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಬುಧವಾರ ಆರಂಭಗೊಂಡ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ವ್ಯಾಪ್ತಿಯ ಅಂತರ ಕಾಲೇಜುಗಳ 25ನೇ ರಾಜ್ಯಮಟ್ಟದ ಅಥ್ಲೆಟಿಕ್ ಕೂಟದ 10 ಕಿ.ಮೀ. ಓಟದ ಸ್ಪರ್ಧೆಯಲ್ಲಿ ಕ್ರಮವಾಗಿ ಪುರುಷ ಹಾಗೂ ಮಹಿಳೆಯರ ವಿಭಾಗದಲ್ಲಿ ಮೊದಲ ಸ್ಥಾನ ತಮ್ಮದಾಗಿಸಿಕೊಂಡರು.

ಪುರುಷರ ವಿಭಾಗದ ಓಟದಲ್ಲಿ ತಿಶನ್ 38 ನಿಮಿಷ, 28.64 ಸೆಕೆಂಡುಗಳಲ್ಲಿ ಗುರಿ ಕ್ರಮಿಸಿದರೆ, ಮಹಿಳೆಯರ ವಿಭಾಗದಲ್ಲಿ ಎಂ. ಶ್ರೇಯಾ 48 ನಿಮಿಷ, 39.79 ಸೆಕೆಂಡುಗಳಲ್ಲಿ ಗುರಿ ತಲುಪಿದರು. ಪುರುಷರ ಹೈಜಂಪ್‌ನಲ್ಲಿ ಗದಗದ ತೋಂಟದಾರ್ಯ ಎಂಜಿನಿಯರಿಂಗ್ ಕಾಲೇಜಿನ ಸುನಿಲ್ ಮೇಟಿ 1.75 ಮೀಟರ್ ಎತ್ತರ ಹಾಗೂ ಮಹಿಳೆಯರ ಹೈಜಂಪ್‌ನಲ್ಲಿ ಬೆಂಗಳೂರಿನ ಗ್ಲೋಬಲ್ ಅಕಾಡೆಮಿ ಆಫ್ ಟೆಕ್ನಾಲಜಿಯ ದೀಪ್ತಾ ಬಾಲರಾಜು 1.45 ಮೀಟರ್ ಎತ್ತರಕ್ಕೆ ಜಿಗಿಯುವ ಮೂಲಕ ಪದಕಕ್ಕೆ ಕೊರಳೊಡ್ಡಿದರು.

ಮಳೆಯ ಕಾರಣ ಮೊದಲ ದಿನ ಹೆಚ್ಚು ಸ್ಪರ್ಧೆಗಳು ನಡೆಯಲಿಲ್ಲ.

ದಿನದ ಫಲಿತಾಂಶ: ಪುರುಷರು: 10 ಕಿ.ಮೀ. ಓಟ: ಎ.ಎಂ. ತಿಶನ್ (ಕೆವಿಜಿಸಿಇ, ಸುಳ್ಯ. ಸಮಯ: 38 ನಿ, 28.64 ಸೆ.)–1, ಎ.ಆರ್. ಅಕ್ಷಯ್ (ಶ್ರೀನಿವಾಸ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಮಂಗಳೂರು)–2, ಲಿತೀಶ್ ಗೌಡ (ಬಿಎನ್‌ಎಂಐಟಿ, ಬೆಂಗಳೂರು)–3; ಹೈಜಂಪ್: ಸುನಿಲ್ ಮೇಟಿ (ತೋಂಟದಾರ್ಯ ಎಂಜಿನಿ ಯರಿಂಗ್ ಕಾಲೇಜು, ಗದಗ. ಎತ್ತರ: 1.75 ಮೀ.)–1, ಮೊಹಮ್ಮದ್ ಅವೇಜ್ (ಬಿಐಟಿ, ಬೆಂಗಳೂರು)–2, ಎಸ್. ಆದಿತ್ಯ (ದಯಾನಂದ ಸಾಗರ್ ಇನ್‌ಸ್ಟಿಟ್ಯೂಟ್, ಬೆಂಗಳೂರು)–3.

ಮಹಿಳೆಯರು: 10 ಕಿ.ಮೀ. ಓಟ: ಎಂ. ಶ್ರೇಯಾ (ಎಸ್‌ಡಿಐಟಿ, ಮಂಗಳೂರು. ಸಮಯ: 48 ನಿ, 39.79 ಸೆ.)–1, ಸಿ.ಎಸ್. ವಿದ್ಯಾ (ವಿವೇಕಾನಂದ ಎಂಜಿನಿಯರಿಂಗ್ ಕಾಲೇಜು, ಪುತ್ತೂರು)–2, ಸಿ. ಸಂಜನಾ (ಇಡಬ್ಲ್ಯುಸಿಇ, ಯಲಹಂಕ)–3; ಹೈಜಂಪ್: ದೀಪ್ತಾ ಬಾಲರಾಜು (ಜಿಎಟಿ, ಬೆಂಗಳೂರು. ಎತ್ತರ: 1.45 ಮೀ)–1, ಕೆ. ಪವಿತ್ರಾ ಭಟ್ (ಕೆನರಾ ಎಂಜಿನಿಯರಿಂಗ್ ಕಾಲೇಜು, ಮಂಗಳೂರು) –2, ಜೆ.ಎಸ್. ಪಲ್ಲವಿ (ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜು, ಮಂಗಳೂರು)–3.

ಇಂದಿನಿಂದ ರಾಷ್ಟ್ರೀಯ ಅಂತರ ರಾಜ್ಯ ಅಥ್ಲೆಟಿಕ್ಸ್

ಒಲಿಂಪಿಕ್ಸ್ ಅರ್ಹತೆ; ಕೊನೆಯ ಅವಕಾಶ

ಪಂಚಕುಲಾ, (ಪಿಟಿಐ): ಜಾವೆಲಿನ್ ತಾರೆ, ಒಲಿಂಪಿಕ್ ಚಾಂಪಿಯನ್ ನೀರಜ್ ಚೋಪ್ರಾ ಅವರನ್ನು ಬಿಟ್ಟು ದೇಶದ ಪ್ರಮುಖ ಅಥ್ಲೀಟುಗಳು, ಗುರುವಾರ ಇಲ್ಲಿ ಆರಂಭವಾಗುವ ರಾಷ್ಟ್ರೀಯ ಅಂತರ ರಾಜ್ಯ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸಲಿದ್ದಾರೆ. ಪ್ಯಾರಿಸ್ ಒಲಿಂಪಿಕ್ಸ್‌ಗೆ ನಿಗದಿಪಡಿಸಿರುವ ಅರ್ಹತಾ ಮಟ್ಟ ತಲುಪಲು ಅವರಿಗೆ ಈ ಕೂಟ ಸುವರ್ಣಾವಕಾಶ ಒದಗಿಸಿದೆ.

ಒಲಿಂಪಿಕ್ಸ್ ಟಿಕೆಟ್ ಪಡೆಯಲು ಅವರಿಗೆ ನಾಲ್ಕು ದಿನಗಳ (ಜೂನ್ 27–30) ಈ ಕೂಟ ಕೊನೆಯ ಅವಕಾಶ ಸಹ. ಒಲಿಂಪಿಕ್ಸ್‌ನ ಅಥ್ಲೆಟಿಕ್ ಸ್ಪರ್ಧೆಗಳು ಆಗಸ್ಟ್ 1ರಂದು ಆರಂಭವಾಗುತ್ತವೆ. ಒಲಿಂಪಿಕ್ಸ್‌ಗೆ ಅರ್ಹತಾ ಮಟ್ಟ ತಲುಪಲು ಅಥ್ಲೀಟುಗಳಿಗೆ ವಿಧಿಸಿರುವ ಗಡುವು ಜೂನ್ 30ರಂದೇ ಕೊನೆಗೊಳ್ಳಲಿದೆ.

ಜುಲೈ 7ರಂದು ಪ್ಯಾರಿಸ್ ಡೈಮಂಡ್ ಲೀಗ್‌ನಲ್ಲಿ ನೀರಜ್ ಚೋಪ್ರಾ ಭಾಗವಹಿಸಲಿದ್ದು, ಆ ಕೂಟಕ್ಕೆ ಸಿದ್ಧತೆ ನಡೆಸಲು ಕೆಲವೇ ದಿನಗಳು ಉಳಿದಿರುವ ಕಾರಣ ಚೋಪ್ರಾ ಈ ಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸುತ್ತಿಲ್ಲ.

ನೀರಜ್ ಚೋಪ್ರಾ ಅವರನ್ನು ಹೊರತುಪಡಿಸಿ, ಒಲಿಂಪಿಕ್ಸ್‌ಗೆ ಆಯ್ಕೆಯಾಗಲು ಇತರ ಎಲ್ಲಾ ಅಥ್ಲೀಟುಗಳಿಗೆ ರಾಷ್ಟ್ರೀಯ ಅಂತರರಾಜ್ಯ ಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸುವುದನ್ನು ಕಡ್ಡಾಯಗೊಳಿಸಲಾಗಿದೆ ಎಂದು ಭಾರತ ಅಥ್ಲೆಟಿಕ್ ಫೆಡರೇಷನ್ ಅಧ್ಯಕ್ಷ ಅದಿಲ್ ಸುಮರಿವಾಲಾ ಅವರು ಕಳೆದ ತಿಂಗಳೇ ಸ್ಪಷ್ಟವಾಗಿ ಹೇಳಿದ್ದರು.



ಕರ್ನಾಟಕದ ಡಿ.ಪಿ. ಮನು

ಅವಿನಾಶ್ ಸಾಬ್ಳೆ (ಪುರುಷರ 3000 ಮೀ. ಸ್ಟೀಪಲ್‌ಚೇಸ್), ಕಿಶೋರ್ ಜೇನಾ (ಜಾವೆಲಿನ್ ಥ್ರೊ), ರಾಮ್ ಬಾಬೂ (ಪುರುಷರ 20 ಕಿ.ಮೀ. ರೇಸ್ ನಡಿಗೆ) ಮತ್ತು ಪಾರುಲ್ ಚೌಧರಿ (ಮಹಿಳೆಯರ 3000 ಮೀ. ಸ್ಟೀಪಲ್‌ಚೇಸ್) ಅವರು ಈಗಾಗಲೇ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದಿದ್ದು, ಚೋಪ್ರಾ ಗೈರಿನಲ್ಲಿ ಈ ಕೂಟದಲ್ಲಿ ಆಕರ್ಷಣೆಯ ಕೇಂದ್ರವಾಗಿದ್ದಾರೆ.

ಜ್ಯೋತಿ ಯರ್ರಾಜಿ (ಮಹಿಳೆಯರ 100 ಮೀ. ಹರ್ಡಲ್ಸ್), ಅನ್ನುರಾಣಿ ಜಾವೆಲಿನ್ ಥ್ರೊ), ಡಿ.ಪಿ. ಮನು (ಜಾವೆಲಿನ್ ಥ್ರೊ), ತಜಿಂದರ್‌ಪಾಲ್ ಸಿಂಗ್ ತೂರ್ (ಷಾಟ್‌ಪಟ್), ಜೆಸ್ವಿನ್ ಅಲ್‌ಡ್ರಿನ್ (ಲಾಂಗ್‌ಜಂಪ್), ಪ್ರವೀಣ್ ಚಿತ್ರವೇಲ್, ಅಬ್ದುಲ್ಲ ಅಬೂಬಕ್ಕರ್ (ಇಬ್ಬರೂ ಟ್ರಿಪಲ್ ಜಂಪ್) ಅವರು ವಿಶ್ವ ರ್‍ಯಾಂಕಿಂಗ್ ಮೂಲಕ ಪ್ಯಾರಿಸ್ ಟಿಕೆಟ್ ಪಡೆಯಲು ಸಾಧ್ಯವಾಗಿದ್ದು, ಇಲ್ಲಿ ತಮ್ಮ ಸಾಮರ್ಥ್ಯ ಪಣಕ್ಕೆ ಒಡ್ಡಲಿದ್ದಾರೆ.

ತಮಗೆ ಪಾದದ ಸ್ವಲ್ಪ ನೋವಿದ್ದು, 3–4 ವಾರ ಥ್ರೊ ಮಾಡಬಾರದು ಎಂದು ವೈದ್ಯರು ಹೇಳಿರುವುದಾಗಿ ತೂರ್ ಪಿಟಿಐಗೆ ತಿಳಿಸಿದ್ದಾರೆ. ಆದರ ಅವರ ಹೆಸರು ಬುಧವಾರ ಪರಿಷ್ಕರಿಸಲಾದ ಅಥ್ಲೀಟುಗಳ ಪಟ್ಟಿಯಲ್ಲಿ ಒಳಗೊಂಡಿತ್ತು. ಕೆಲವೇ ದಿನಗಳ ಹಿಂದಿನವರೆಗೆ ಏಷ್ಯನ್ ದಾಖಲೆ ತೂರ್ ಹೆಸರಿನಲ್ಲಿತ್ತು.

ಒಲಿಂಪಿಕ್ಸ್‌ಗೆ ಅರ್ಹತೆ ಪಡೆದಿರುವ 20 ಕಿ.ಮೀ. ರೇಸ್ ವಾಕರ್ ಅಕ್ಷದೀಪ್ ಸಿಂಗ್, ಮಹಿಳಾ ವಿಭಾಗದ ಇದೇ ಓಟದ ಸ್ಪರ್ಧಿ ಪ್ರಿಯಾಂಕಾ ಗೋಸ್ವಾಮಿ ಅವರಿಬ್ಬರ ಹೆಸರೂ ಸ್ಪರ್ಧಿಗಳ ಪಟ್ಟಿಯಲ್ಲಿಲ್ಲ. ಆದರೆ ಇವರಿಬ್ಬರು ಈಗಾಗಲೇ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದಿದ್ದಾರೆ.

ಹಾಲಿ ಚಾಂಪಿಯನ್ ಇಂಗ್ಲೆಂಡ್ ತಂಡಕ್ಕೆ ರೋಹಿತ್ ಪಡೆ ಸವಾಲು ಇಂದು

ಮುಯ್ಯಿ ತೀರಿಸಿಕೊಳ್ಳುವುದೇ ಭಾರತ?


ಜೋಫ್ರಾ ಆರ್ಚರ್

ಜಾರ್ಜ್‌ಟೌನ್, ಗಯಾನಾ (ಪಿಟಿಐ): ಆಕ್ರಮಣಶೀಲ ಬ್ಯಾಟಿಂಗ್ ರೂಢಿಸಿಕೊಂಡಿರುವ ಭಾರತ ತಂಡವು ಹಾಲಿ ಚಾಂಪಿಯನ್ ಇಂಗ್ಲೆಂಡ್ ತಂಡದ ವಿರುದ್ಧ 'ಮುಯ್ಯಿ' ತೀರಿಸಿಕೊಳ್ಳುವ ಛಲದಲ್ಲಿದೆ.

ಇದರೊಂದಿಗೆ ನಾಕೌಟ್ ಹಂತದ ವೈಫಲ್ಯವನ್ನು ಮೆಟ್ಟಿ ನಿಲ್ಲುವ ತವಕದಲ್ಲಿದೆ. ಗುರುವಾರ ಇಲ್ಲಿ ನಡೆಯಲಿರುವ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಇಂಗ್ಲೆಂಡ್ ತಂಡವನ್ನು ರೋಹಿತ್ ಶರ್ಮಾ ನಾಯಕತ್ವದ ಭಾರತ ತಂಡವು ಎದುರಿಸಲಿದೆ.

2022ರ ಚುಟುಕು ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ಉಭಯ ತಂಡಗಳು ಮುಖಾಮುಖಿಯಾಗಿದ್ದವು. ಆ ಪಂದ್ಯದಲ್ಲಿ ಇಂಗ್ಲೆಂಡ್ ಜಯಿಸಿತ್ತು.

ಆದರೆ ಈ ಬಾರಿಯ ಟೂರ್ನಿಯಲ್ಲಿ ಅಮೋಘ ಲಯದಲ್ಲಿರುವ ಭಾರತ ತಂಡವು ಇದುವರೆಗೆ ಅಜೇಯವಾಗಿ ನಾಲ್ಕರ ಹಂತಕ್ಕೆ ಪ್ರವೇಶಿಸಿದೆ. ಸೂಪರ್ 8ರ ಕೊನೆಯ ಪಂದ್ಯದಲ್ಲಿ ಆಸ್ಟ್ರೇಲಿಯಾ ವಿರುದ್ಧ ರೋಹಿತ್ ಶರ್ಮಾ (92; 41ಎಸೆತ) ಅಬ್ಬರಿಸಿದ ರೀತಿಯಿಂದಾಗಿ ತಂಡದ ಬ್ಯಾಟಿಂಗ್ ವಿಭಾಗಕ್ಕೆ ನೂರಾನೆ ಬಲ ಬಂದಂತಾಗಿದೆ. ಇಲ್ಲಿಯ ಪ್ರಾವಿಡೆನ್ಸ್ ಕ್ರೀಡಾಂಗಣದಲ್ಲಿಯೂ ರೋಹಿತ್ ಅವರ ಬೀಸಾಟ ಮುಂದುವರಿಯುವ ನಿರೀಕ್ಷೆ ಇದೆ.

ಅವರೊಂದಿಗೆ ವಿರಾಟ್ ಕೊಹ್ಲಿ ಕೂಡ ತಮ್ಮ ಲಯಕ್ಕೆ ಮರಳಿದರೆ ಇನಿಂಗ್ಸ್‌ಗೆ ಅಮೋಘ ಆರಂಭ ದೊರಕುವುದು ಖಚಿತ. ಅವರು ಬಹುತೇಕ ಎಲ್ಲ ಪಂದ್ಯಗಳಲ್ಲಿಯೂ ಬ್ಯಾಟಿಂಗ್ ವೈಫಲ್ಯ ಅನುಭವಿಸಿದ್ದಾರೆ. ರೋಹಿತ್ ಮತ್ತು ವಿರಾಟ್ ಅವರಿಬ್ಬರಿಗೂ ಬಹುತೇಕ ಇದು ಕೊನೆಯ ವಿಶ್ವಕಪ್ ಟೂರ್ನಿಯಾಗುವ ಸಾಧ್ಯತೆ ಇದೆ. ಆದ್ದರಿಂದ ಗೆಲುವಿನ ಹೆಜ್ಜೆಗುರುತು ಉಳಿಸಿ ಹೋಗುವ ಛಲವೂ ಅವರಿಗೆ ಇದೆ.

ಮಧ್ಯಮ ಕ್ರಮಾಂಕದಲ್ಲಿ ಶಿವಂ ದುಬೆ ತಮ್ಮ ನೈಜ ಆಟವನ್ನು ತೋರುವಲ್ಲಿ ಪೂರ್ಣವಾಗಿ ಸಫಲರಾಗಿಲ್ಲ. ಉಳಿದಂತೆ ರಿಷಭ್ ಪಂತ್ ಹಾಗೂ ಹಾರ್ದಿಕ್ ಪಾಂಡ್ಯ ಅವರ ಮೇಲೆ ವಿಶ್ವಾಸವಿಡಬಹುದು. ಸೂರ್ಯಕುಮಾರ್ ಯಾದವ್ ಕೂಡ ಮಿಂಚಿದರೆ ದೊಡ್ಡ ಮೊತ್ತ ಪೇರಿಸಲು ಸಾಧ್ಯವಾಗಲಿದೆ.

ಇಲ್ಲಿಯ ಪಿಚ್ ಸ್ಪಿನ್ನರ್‌ಗಳಿಗೆ ಹೆಚ್ಚು ನೆರವಾಗುವ ಸಾಧ್ಯತೆ ಇದೆ. ಆದ್ದರಿಂದ ಮೂವರು ಸ್ಪಿನ್ನರ್‌ಗಳಾದ ಕುಲದೀಪ್ ಯಾದವ್, ರವೀಂದ್ರ ಜಡೇಜ ಮತ್ತು ಅಕ್ಷರ್ ಪಟೇಲ್ ಅವರನ್ನು ತಂಡದಲ್ಲಿ ಉಳಿಸಿಕೊಳ್ಳಬಹುದು.

ಜಸ್‌ಪ್ರೀತ್ ಬೂಮ್ರಾ ಮತ್ತು ಅರ್ಷದೀಪ್ ಸಿಂಗ್ ಅವರು ಅಮೋಘ ಲಯದಲ್ಲಿದ್ದು ಇಂಗ್ಲೆಂಡ್ ಬ್ಯಾಟರ್‌ಗಳಿಗೆ ಸವಾಲೊಡ್ಡಬಲ್ಲರು.

ಇಂಗ್ಲೆಂಡ್ ತಂಡದ ನಾಯಕ ಜೋಸ್ ಬಟ್ಲರ್, ಫಿಲ್ ಸಾಲ್ಟ್, ಜಾನಿ ಬೆಸ್ಟೊ ಹಾಗೂ ಹ್ಯಾರಿ ಬ್ರೂಕ್ ಅವರು ರನ್‌ಗಳ ಹೊಳೆ ಹರಿಸುವ ಸಮರ್ಥರು. ಆಲ್‌ರೌಂಡರ್ ಸ್ಯಾಮ್ ಕರನ್ ತಂಡಕ್ಕೆ ಆಸರೆಯಾಗುವ ಆಟಗಾರ.

ವೇಗಿಗಳಾದ ಜೋಫ್ರಾ ಆರ್ಚರ್ ಮತ್ತು ಕ್ರಿಸ್ ಜೋರ್ಡನ್ ಕಳೆದ ಪಂದ್ಯಗಳಲ್ಲಿ ತಮ್ಮ ಭುಜಬಲವನ್ನು ತೋರಿಸಿದ್ದಾರೆ. ಅನುಭವಿ ಮೋಯಿನ್ ಅಲಿ ಮತ್ತು ಆದಿಲ್ ರಶೀದ್ ಅವರು ಪಂದ್ಯಕ್ಕೆ 'ತಿರುವು' ನೀಡಬಲ್ಲ ಸ್ಪಿನ್ನರ್‌ಗಳು. ಬ್ಯಾಟಿಂಗ್‌ನಲ್ಲಿಯೂ ಮಹತ್ವದ ಕಾಣಿಕೆ ನೀಡುವ ಸಮರ್ಥರು.

ಭಾರತ (ಗುಂಪು ಹಂತ)
ಐರ್ಲೆಂಡ್ ವಿರುದ್ಧ 8 ವಿಕೆಟ್‌ಗಳ ಗೆಲುವು
ಪಾಕಿಸ್ತಾನ ವಿರುದ್ಧ 6 ರನ್‌ಗಳ ಜಯ
ಅಮೆರಿಕ ವಿರುದ್ಧ 7 ವಿಕೆಟ್‌ಗಳ ಗೆಲುವು
ಕೆನಡಾ ವಿರುದ್ಧ ಪಂದ್ಯ ಮಳೆಯಿಂದ ರದ್ದು
ಸೂಪರ್ ಎಂಟರ ಘಟ್ಟ
ಅಫ್ಗಾನಿಸ್ತಾನ ವಿರುದ್ಧ 47 ರನ್‌ಗಳ ಜಯ
ಬಾಂಗ್ಲಾದೇಶ ವಿರುದ್ಧ 50 ರನ್‌ಗಳ ಗೆಲುವು
ಆಸ್ಟ್ರೇಲಿಯಾ ವಿರುದ್ಧ 24 ರನ್‌ಗಳ ಜಯ

ಇಂಗ್ಲೆಂಡ್ (ಗುಂಪು ಹಂತ)
ಸ್ಕಾಟ್ಲೆಂಡ್ ವಿರುದ್ಧದ ಪಂದ್ಯ ಮಳೆಯಿಂದ ರದ್ದು
ಆಸ್ಟ್ರೇಲಿಯಾ ವಿರುದ್ಧ 36 ರನ್‌ಗಳ ಸೋಲು
ಓಮನ್ ಎದುರು 8 ವಿಕೆಟ್‌ಗಳ ಜಯ
ನಮೀಬಿಯಾ ವಿರುದ್ಧ 41 ರನ್‌ಗಳ ಗೆಲುವು (ಡಿಎಲ್‌ಎಸ್ ನಿಯಮ ಅನ್ವಯ)
ಸೂಪರ್ ಎಂಟರ ಘಟ್ಟ
ವೆಸ್ಟ್‌ಇಂಡೀಸ್ ವಿರುದ್ಧ 8 ವಿಕೆಟ್‌ಗಳ ಗೆಲುವು
ದಕ್ಷಿಣ ಆಫ್ರಿಕಾ ವಿರುದ್ಧ 7 ರನ್‌ಗಳ ಸೋಲು
ಅಮೆರಿಕ ಎದುರು 10 ವಿಕೆಟ್‌ಗಳ ಜಯ

ತಂಡಗಳು

ಭಾರತ: ರೋಹಿತ್ ಶರ್ಮಾ (ನಾಯಕ), ವಿರಾಟ್ ಕೊಹ್ಲಿ, ರಿಷಭ್ ಪಂತ್ (ವಿಕೆಟ್‌ಕೀಪರ್), ಸೂರ್ಯಕುಮಾರ್ ಯಾದವ್, ಹಾರ್ದಿಕ್ ಪಾಂಡ್ಯ, ಶಿವಂ ದುಬೆ, ರವೀಂದ್ರ ಜಡೇಜ, ಅಕ್ಷರ್ ಪಟೇಲ್, ಜಸ್‌ಪ್ರೀತ್ ಬೂಮ್ರಾ, ಕುಲದೀಪ್ ಯಾದವ್, ಅರ್ಷದೀಪ್ ಸಿಂಗ್.

ಇಂಗ್ಲೆಂಡ್: ಜೋಸ್ ಬಟ್ಲರ್ (ನಾಯಕ/ವಿಕೆಟ್‌ಕೀಪರ್), ಫಿಲ್ ಸಾಲ್ಟ್, ಜಾನಿ ಬೆಸ್ಟೊ, ಹ್ಯಾರಿ ಬ್ರೂಕ್, ಮೋಯಿನ್ ಅಲಿ, ಲಿಯಾಮ್ ಲಿವಿಂಗ್‌ಸ್ಟೋನ್, ಸ್ಯಾಮ್ ಕರನ್, ಕ್ರಿಸ್ ಜೋರ್ಡನ್, ಜೋಫ್ರಾ ಆರ್ಚರ್, ಆದಿಲ್ ರಶೀದ್, ರೀಸ್ ಟಾಪ್ಲಿ.

ಪಂದ್ಯ ಆರಂಭ: ರಾತ್ರಿ 8


ಜಸ್‌ಪ್ರೀತ್ ಬೂಮ್ರಾ

ಸೆಮಿಫೈನಲ್: ಯಾವುದೇ ತಂಡ ಗೆದ್ದರೂ ಇತಿಹಾಸ

ದಕ್ಷಿಣ ಆಫ್ರಿಕಾಕ್ಕೆ ಅಫ್ಗನ್ ಸವಾಲು


ಕ್ವಿಂಟನ್ ಡಿಕಾಕ್ —ಎಪಿ/ಪಿಟಿಐ ಚಿತ್ರ

ತರೂಬಾ (ಟ್ರಿನಿಡಾಡ್), (ಪಿಟಿಐ): ನಿರೀಕ್ಷೆ ಮೀರಿ ಸೆಮಿಫೈನಲ್‌ಗೆ ಲಗ್ಗೆಯಿಟ್ಟಿರುವ ಅಫ್ಗಾನಿಸ್ತಾನ ತಂಡವು, ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಮೊದಲ ಸೆಮಿಫೈನಲ್‌ನಲ್ಲಿ ಗುರುವಾರ ದಕ್ಷಿಣ ಆಫ್ರಿಕಾ ತಂಡವನ್ನು ಎದುರಿಸಲಿದೆ. ಆದರೆ, ಬ್ರಯಾನ್ ಲಾರಾ ಅಕಾಡೆಮಿ ಕ್ರೀಡಾಂಗಣದಲ್ಲಿ ನಡೆಯುವ ಈ ಬಹುನಿರೀಕ್ಷಿತ ಮುಖಾಮುಖಿಯಲ್ಲಿ ಯಾರೂ ಗೆದ್ದರೂ ಇತಿಹಾಸ ನಿರ್ಮಾಣವಾಗಲಿದೆ.

ಐತಿಹಾಸಿಕ ಸಾಧನೆಯತ್ತ ಸಾಗಲು ಅಫ್ಗಾನಿಸ್ತಾನ ತಂಡಕ್ಕೆ ಇದು ಅವಕಾಶವಾದರೆ, ಚೋಕರ್ಸ್ ಹಣೆಪಟ್ಟಿ ಕಳಚಿ ಮೊದಲ ಬಾರಿ ಪ್ರಶಸ್ತಿ ಸುತ್ತಿಗೆ ತಲುಪಲು ದಕ್ಷಿಣ ಆಫ್ರಿಕಾಕ್ಕೆ ದಾರಿಯಾಗಿದೆ. ಹೀಗಾಗಿ ಈ ಹಣಾಹಣಿ ಕುತೂಹಲಕ್ಕೆ ಕಾರಣವಾಗಿದೆ.

ದಕ್ಷಿಣ ಆಫ್ರಿಕಾದ ಅಜೇಯ ಓಟದೊಡನೆ ಸೆಮಿಫೈನಲ್‌ಗೆ ದಾಪುಗಾಲಿಟ್ಟಿದೆ. ಆದರೆ ಅಫ್ಗಾನಿಸ್ತಾನ ತಂಡದ 'ಯಶೋಗಾಥೆ'ಗೆ ಈ ವಿಶ್ವಕಪ್ ವೇದಿಕೆಯಾಗಿದೆ.

ಯುದ್ಧ, ಆಂತರಿಕ ದಂಗೆಯಿಂದ ಜರ್ಝರಿತವಾಗಿರುವ ದೇಶದ ಕ್ರಿಕೆಟ್ ತಂಡ ಈ ವಿಶ್ವಕಪ್‌ನಲ್ಲಿ ತೋರಿರುವ ಆಟ ಚೇತೋಹಾರಿಯಾಗಿದೆ. ಲೀಗ್ ಹಂತದಲ್ಲಿ ನ್ಯೂಜಿಲೆಂಡ್ ತಂಡವನ್ನು ಸುಲಭವಾಗಿ ಮಣಿಸಿದ್ದ ರಶೀದ್ ಖಾನ್ ಬಳಗ, ನಂತರ ಸೂಪರ್ ಎಂಟರ ಹಂತದ ನಿರ್ಣಾಯಕ ಪಂದ್ಯದಲ್ಲಿ ಪ್ರಬಲ ಆಸ್ಟ್ರೇಲಿಯಾ ತಂಡಕ್ಕೇ ದಂಗುಬಡಿಸಿತು. ಆಸ್ಟ್ರೇಲಿಯಾ ಈ ಹಿಂದೆಂದೂ ಅಫ್ಗನ್ ತಂಡಕ್ಕೆ ಮಣಿದಿರಲಿಲ್ಲ.

ತಂಡ ಒಬ್ಬರನ್ನೇ ಅವಲಂಬಿಸಿಲ್ಲ. ಸ್ಪಿನ್ನರ್ ರಶೀದ್ ಖಾನ್, ವೇಗದ ಬೌಲರ್‌ಗಳಾದ ಫಜಲ್‌ಹಕ್ ಫರೂಕಿ, ನವೀನ್ ಉಲ್ ಹಕ್ ಅವರು ವಿಕೆಟ್ ಪಡೆಯುವ ಬೌಲರ್‌ಗಳಾಗಿದ್ದಾರೆ. ಗುಲ್ಬದ್ದೀನ್ ನೈಬ್, ಆಸ್ಟ್ರೇಲಿಯಾ ವಿರುದ್ಧ ಗೆಲುವಿನ ರೂವಾರಿ ಆಗಿದ್ದರು. ಮೊಹಮ್ಮದ್ ನಬಿ ಅವರನ್ನೂ ಕಡೆಗಣಿಸುವಂತಿಲ್ಲ.

ಆರಂಭ ಆಟಗಾರ ರೆಹಮಾನುಲ್ಲಾ ಗುರ್ಬಾಜ್ 281 ರನ್ ಗಳಿಸಿ ಬ್ಯಾಟರ್‌ಗಳ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದ್ದಾರೆ. ಫರೂಕಿ 16 ವಿಕೆಟ್‌ಗಳೊಡನೆ ಬೌಲರ್‌ಗಳ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿದ್ದಾರೆ. ಇದು ಈ ತಂಡ ಸುಲಭವಾಗಿ ಬಗ್ಗದ ತಂಡ ಎಂಬುದನ್ನು ಸೂಚಿಸುವಂತಿದೆ.

ಆದರೆ ಮೊದಲ ಬಾರಿ ವಿಶ್ವಕಪ್ ಸೆಮಿಫೈನಲ್ ಆಡುತ್ತಿರುವ ಈ ತಂಡ, ಪ್ರಬಲ ದಕ್ಷಿಣ ಆಫ್ರಿಕಾ ವಿರುದ್ಧ ಆಡುವಾಗ ಮೈಮರೆಯುವಂತಿಲ್ಲ.

ಈ ಹಿಂದೆ ವಿಶ್ವದರ್ಜೆಯ ಆಟಗಾರರನ್ನು ಹೊಂದಿದ್ದರೂ, ದಕ್ಷಿಣ ಆಫ್ರಿಕಾ ತಂಡ ಟಿ20 ಅಥವಾ ಏಕದಿನ ವಿಶ್ವಕಪ್‌ಗಳಲ್ಲಿ ಎಂದೂ ಪ್ರಶಸ್ತಿ ಸುತ್ತಿಗೆ ತಲುಪಿಲ್ಲ. ಆ ಹಣೆಪಟ್ಟಿಯನ್ನು ಕಳಚಲು ಈಗ ಒಳ್ಳೆಯ ಅವಕಾಶವಿದೆ.

ಈ ಬಾರಿ ಕೆಲವು ರೋಚಕ ಪಂದ್ಯಗಳನ್ನೂ ಗೆಲ್ಲುವ ಮೂಲಕ ಏಡನ್ ಮರ್ಕರಂ ಬಳಗ ಸಕಾರಾತ್ಮಕ ಸಂಕೇತಗಳನ್ನು ರವಾನಿಸಿದೆ. ನೇಪಾಳ ವಿರುದ್ಧ ಒಂದು ರನ್, ಬಾಂಗ್ಲಾದೇಶ ವಿರುದ್ಧ ನಾಲ್ಕು ರನ್ ಮತ್ತು ವೆಸ್ಟ್ ಇಂಡೀಸ್ ವಿರುದ್ಧ ಮೂರು ವಿಕೆಟ್ ಜಯ ಇಲ್ಲಿ ಉಲ್ಲೇಖನೀಯ.

ಬ್ಯಾಟಿಂಗ್ ವಿಭಾಗದಲ್ಲಿ ಸುಧಾರಣೆ ಕಾಣಬೇಕಾಗಿದೆ. ಈಗ ಅಗ್ರ 10 ಆಟಗಾರರಲ್ಲಿ ಆ ತಂಡದಿಂದ ಕ್ವಿಂಟನ್ ಡಿಕಾಕ್ (7 ಪಂದ್ಯಗಳಿಂದ 199 ರನ್) ಮಾತ್ರ ಸ್ಥಾನ ಪಡೆದಿದ್ದಾರೆ.

ಪಂದ್ಯ ಆರಂಭ: ಬೆಳಿಗ್ಗೆ 6


ರೆಹಮಾನುಲ್ಲಾ ಗುರ್ಬಾಜ್ —ಎಎಫ್‌ಪಿ ಚಿತ್ರ

ಅಫ್ಗಾನಿಸ್ತಾನ (ಗುಂಪು ಹಂತ)
ಯುಗಾಂಡ ವಿರುದ್ಧ 125 ರನ್‌ಗಳ ಜಯಭೇರಿ
ನ್ಯೂಜಿಲೆಂಡ್ ಎದುರು 84 ರನ್‌ಗಳ ಗೆಲುವು
ಪಾಪುವಾ ನ್ಯೂಗಿನಿ ವಿರುದ್ಧ 7 ವಿಕೆಟ್‌ಗಳ ಜಯ
ವೆಸ್ಟ್‌ಇಂಡೀಸ್ ವಿರುದ್ಧ 104 ರನ್‌ಗಳ ಸೋಲು
ಸೂಪರ್ ಎಂಟರ ಘಟ್ಟ
ಭಾರತ ವಿರುದ್ಧ 47 ರನ್‌ಗಳ ಸೋಲು
ಆಸ್ಟ್ರೇಲಿಯಾ ಎದುರು 21 ರನ್‌ಗಳ ಗೆಲುವು
ಬಾಂಗ್ಲಾದೇಶ ವಿರುದ್ಧ 8 ರನ್‌ಗಳ ಜಯ (ಡಿಎಲ್‌ಎಸ್ ನಿಯಮ ಅನ್ವಯ)

ದಕ್ಷಿಣ ಆಫ್ರಿಕಾ (ಗುಂಪು ಹಂತ)
ಶ್ರೀಲಂಕಾ ಎದುರು 6 ವಿಕೆಟ್‌ಗಳ ಗೆಲುವು
ನೆದರ್ಲೆಂಡ್ಸ್ ವಿರುದ್ಧ 4 ವಿಕೆಟ್‌ಗಳ ಜಯ
ಬಾಂಗ್ಲಾದೇಶದ ಎದುರು 4 ರನ್‌ಗಳ ಜಯ
ನೇಪಾಳ ವಿರುದ್ಧ 1 ರನ್ ಗೆಲುವು
ಸೂಪರ್ ಎಂಟರ ಘಟ್ಟ
ಅಮೆರಿಕ ವಿರುದ್ಧ 18 ರನ್‌ಗಳ ಜಯ
ಇಂಗ್ಲೆಂಡ್ ಎದುರು 7 ರನ್‌ಗಳ ಗೆಲುವು
ವೆಸ್ಟ್ ಇಂಡೀಸ್ ವಿರುದ್ಧ 3 ವಿಕೆಟ್ ಗೆಲುವು (ಡಿಎಲ್‌ಎಸ್ ನಿಯಮ ಅನ್ವಯ)

ರ್‍ಯಾಂಕಿಂಗ್: ಅಗ್ರಸ್ಥಾನಕ್ಕೆ ಹೆಡ್

ದುಬೈ (ಪಿಟಿಐ): ಆಸ್ಟ್ರೇಲಿಯಾದ ಆರಂಭ ಆಟಗಾರ ಟ್ರಾವಿಸ್ ಹೆಡ್ ಅವರು ಭಾರತದ ಸೂರ್ಯಕುಮಾರ್ ಯಾದವ್ ಅವರನ್ನು ಹಿಂದೆಹಾಕಿ ಬುಧವಾರ ಪ್ರಕಟವಾದ ಐಸಿಸಿ ಟಿ20 ರ್‍ಯಾಂಕಿಂಗ್ ಪಟ್ಟಿಯ ಬ್ಯಾಟರ್‌ಗಳ ವಿಭಾಗದಲ್ಲಿ ಅಗ್ರಸ್ಥಾನಕ್ಕೇರಿದರು.

ಕಳೆದ ವರ್ಷದ ಡಿಸೆಂಬರ್‌ನಿಂದ ಸೂರ್ಯಕುಮಾರ್ ಅವರೇ ಈವರೆಗೆ ಅಗ್ರಸ್ಥಾನ ಕಾಪಾಡಿಕೊಂಡು ಬಂದಿದ್ದರು. ಆದರೆ ಟಿ20 ವಿಶ್ವಕಪ್‌ನಲ್ಲಿ ತೋರಿದ ಉತ್ತಮ ಸಾಧನೆಯ ಪರಿಣಾಮ ಹೆಡ್ ಅಗ್ರಕ್ರಮಾಂಕಕ್ಕೆ ಏರಿದ್ದಾರೆ. ಆಸ್ಟ್ರೇಲಿಯಾದ ಆಟಗಾರ ಅವರು ಸೂರ್ಯ (842 ಪಾಯಿಂಟ್ಸ್) ಅವರಿಗಿಂತ ಎರಡು ಪಾಯಿಂಟ್ ಮುಂದಿದ್ದಾರೆ.

ಹೆಡ್ ಈ ಟೂರ್ನಿಯಲ್ಲಿ ಭಾರತದ ವಿರುದ್ಧ ಸೂಪರ್ ಎಂಟರ ಪಂದ್ಯದಲ್ಲಿ ಗಳಿಸಿದ 76 ರನ್ ಸೇರಿದಂತೆ ಎರಡು ಅರ್ಧಶತಕಗಳೊಂದಿಗೆ 255 ರನ್ ಪೇರಿಸಿದ್ದಾರೆ. ಆದರೆ ಅವರ ತಂಡ ಹೊರಬಿದ್ದಿರುವ ಕಾರಣ, ಸೂರ್ಯ ಅವರು ಮತ್ತೆ ಅಗ್ರಸ್ಥಾನಕ್ಕೇರುವ ಅವಕಾಶ ಹೊಂದಿದ್ದಾರೆ.

ಕೌಂಟಿ: ಒಂದೇ ಓವರ್‌ನಲ್ಲಿ 43 ರನ್ ತೆತ್ತ ರಾಬಿನ್ಸನ್



ಬ್ರಿಗ್ಟನ್, ಇಂಗ್ಲೆಂಡ್ (ಪಿಟಿಐ): ಇಂಗ್ಲೆಂಡ್ ಕ್ರಿಕೆಟಿಗ ಓಲಿ ರಾಬಿನ್ಸನ್ ಅವರು ಪ್ರಥಮ ದರ್ಜೆ ಕ್ರಿಕೆಟ್ ಇತಿಹಾಸದಲ್ಲಿಯೇ ಅತ್ಯಂತ ದುಬಾರಿ ಓವರ್ ಬೌಲಿಂಗ್ ಮಾಡಿದ 'ದಾಖಲೆ' ಬರೆದರು.

ಇಂಗ್ಲಿಷ್ ಕೌಂಟಿ ಚಾಂಪಿಯನ್‌ಷಿಪ್ ಎರಡನೇ ಡಿವಿಷನ್ ಪಂದ್ಯದಲ್ಲಿ ಲೀಸ್ಟರ್‌ಶೈರ್ ಕ್ಲಬ್ ಎದುರಿನ ಪಂದ್ಯದಲ್ಲಿ ಸಸೆಕ್ಸ್ ತಂಡವನ್ನು ಪ್ರತಿನಿಧಿಸಿದ್ದ ರಾಬಿನ್ಸನ್ ಒಂದು ಓವರ್‌ನಲ್ಲಿ 43 ರನ್‌ಗಳನ್ನು ನೀಡಿದರು.

ಲೀಸ್ಟರ್‌ಶೈರ್ ತಂಡವು ತನ್ನ ಎರಡನೇ ಇನಿಂಗ್ಸ್‌ನಲ್ಲಿ 446 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿತ್ತು. 59ನೇ ಓವರ್‌ನಲ್ಲಿ ಬ್ಯಾಟಿಂಗ್ ಮಾಡುತ್ತಿದ್ದ ಲೂಯಿಸ್ ಕಿಂಬರ್ ಅವರು ಎರಡು ಸಿಕ್ಸರ್ (12 ರನ್) ಮತ್ತು ಆರು ಬೌಂಡರಿ (24 ರನ್) ಬಾರಿಸಿದರು. ಕೊನೆಯ ಎಸೆತದಲ್ಲಿ ಒಂದು ರನ್ ಪಡೆದರು. ರಾಬಿನ್ಸನ್ ಅವರು ಮೂರು ನೋಬಾಲ್ (6 ರನ್) ಕೂಡ ಹಾಕಿದ್ದರು. ಕೌಂಟಿ ಕ್ರಿಕೆಟ್‌ನಲ್ಲಿ ಒಂದು ನೋಬಾಲ್‌ಗೆ ಎರಡು ರನ್ ಪೆನಾಲ್ಟಿ ಹಾಕಲಾಗುತ್ತದೆ. ಇದರಿಂದಾಗಿ ಈ ಓವರ್‌ನಲ್ಲಿ ಒಟ್ಟು 43 ರನ್‌ಗಳು ಲೀಸ್ಟರ್‌ಶೈರ್ ತಂಡದ ಖಾತೆ ಸೇರಿದವು.

1998ರಲ್ಲಿ ಸರೆ ಮತ್ತು ಲ್ಯಾಂಕೆಶೈರ್ ನಡುವಣ ಪಂದ್ಯದಲ್ಲಿ ವೇಗಿ ಅಲೆಕ್ಸ್ ಟುಡೊರ್ ಅವರು ಒಂದೇ ಓವರ್‌ನಲ್ಲಿ 38 ರನ್ ಕೊಟ್ಟಿದ್ದು ಇದುವರೆಗಿನ ದಾಖಲೆಯಾಗಿತ್ತು. ಅದನ್ನು ರಾಬಿನ್ಸನ್ ಮುರಿದರು. ಈ ಪಂದ್ಯದಲ್ಲಿ ಸಸೆಕ್ಸ್ ತಂಡವು 18 ರನ್‌ಗಳಿಂದ ಜಯಿಸಿತು.

30 ವರ್ಷದ ರಾಬಿನ್ಸನ್ ಅವರು ಇಂಗ್ಲೆಂಡ್ ತಂಡದಲ್ಲಿ 20 ಟೆಸ್ಟ್ ಪಂದ್ಯಗಳನ್ನು ಆಡಿರುವ ಅನುಭವಿ ಆಟಗಾರನಾಗಿದ್ದಾರೆ.